
ಸೋಮವಾರ, ಸೆಪ್ಟೆಂಬರ್ 29, 2025 | ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಜೆಟ್‌ಸ್ಕಿ ಸವಾರಿ

ಹುಬ್ಬಳ್ಳಿಯ ಉಣಕಲ್ ಕೆರೆಯಲ್ಲಿ ಭಾನುವಾರ ಜಲಕ್ರೀಡೆ ಉದ್ಘಾಟನೆ ವೇಳೆ ಲೈಫ್‌ಗಾರ್ಡ್ ಜೊತೆಗೆ ಶಾಸಕ ಮಹೇಶ ಟೆಂಗಿನಕಾಯಿ ಜೆಟ್‌ಸ್ಕಿ ಸವಾರಿ ಮಾಡಿದರು



ಗೋವಿಗೆ ಅನುದಾನ

ಗೋವುಗಳ ರಕ್ಷಣೆಗೆ ರಾಜಸ್ಥಾನದ ಎಲ್ಲ ನೋಂದಾಯಿತ ಗೋಶಾಲೆಗಳಲ್ಲಿನ ಒಂದು ಗೋವಿಗೆ ₹50, ಕರುವಿಗೆ ₹25ರಂತೆ ಪ್ರತಿದಿನವೂ ಅನುದಾನ, ಎತ್ತುಗಳನ್ನು ಬಳಸುವ ರೈತರಿಗೆ ವಾರ್ಷಿಕ ₹30 ಸಾವಿರ ನೀಡಲು ಅಲ್ಲಿನ ಸರ್ಕಾರ ನಿರ್ಧರಿಸಿದೆ



ರೋಬೊ ಸರ್ಜರಿಗೆ ಸರ್ಕಾರಿ ಆಸ್ಪತ್ರೆ ಸಜ್ಜು

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಬಳಿಕ ಇನ್ನೂ ಮೂರು ಸಂಸ್ಥೆಗಳಿಗೆ ರೋಬೊ

• ಎಸ್.ರವಿಪ್ರಕಾಶ್

ಬೆಂಗಳೂರು: ಖಾಸಗಿ ಒಡೆತನದ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಳು ರೋಬೊಟಿಕ್ ಸರ್ಜರಿ ಮೂಲಕ ದಾಪುಗಾಲಿಡುತ್ತಿರುವ ಈ ಸಂದರ್ಭದಲ್ಲಿ ಸರ್ಕಾರಿ ವಲಯದ ಪ್ರಮುಖ ಆಸ್ಪತ್ರೆಗಳು ಅವುಗಳಿಗೆ ಪೈಪೋಟಿ ನೀಡಲು ಸಜ್ಜಾಗಿವೆ.

ಖಾಸಗಿ ಒಡೆತನದ ಆಸ್ಪತ್ರೆಗಳು ಉಳ್ಳವರ ಅಗತ್ಯವನ್ನು ಪೂರೈಸಿದರೆ, ಸರ್ಕಾರಿ ಆಸ್ಪತ್ರೆಗಳು ಬಡ ಮತ್ತು ಮಧ್ಯಮ ವರ್ಗದವರ ಅಗತ್ಯ ಪೂರೈಸಲಿವೆ. ಹೀಗಾಗಿ ರಾಜ್ಯದ ಪ್ರಮುಖ ಸರ್ಕಾರಿ ವೈದ್ಯಕೀಯ ಸಂಸ್ಥೆಗಳಲ್ಲಿ ರೋಗಿಗಳ ಶಸ್ತ್ರಚಿಕಿತ್ಸೆಗಾಗಿ ರೋಬೊಗಳನ್ನು ಖರೀದಿಸಲು ಸರ್ಕಾರ ಮುಂದಾಗಿದೆ.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಗೆ ಈಗಾಗಲೇ ರೋಬೊ ಖರೀದಿಸಲಾಗಿದೆ. ನೆಫ್ರೊ ಯೂರಾಲಜಿ ಸಂಸ್ಥೆ, ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೊಎಂಟ್ರಾಲಜಿ ಸೈನ್ಸಸ್ ಅಂಡ್ ಟ್ರಾನ್ಸ್‌ಪ್ಲಾಂಟ್ ಸಂಸ್ಥೆ ಮತ್ತು ಜಯದೇವ ಹೃದ್ರೋಗ ಸಂಸ್ಥೆಗಳಿಗೂ ರೋಬೊ ಖರೀದಿಸಲು ಸರ್ಕಾರ ನಿರ್ಧರಿಸಿದೆ.

'ನೆಫ್ರೊ ಯೂರಾಲಜಿ ಸಂಸ್ಥೆಗೆ ರೋಬೊ ಖರೀದಿಗೆ ಟೆಂಡರ್ ಕರೆಯಲಾಗಿದ್ದು, ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೊಎಂಟ್ರಾಲಜಿ ಸೈನ್ಸಸ್ ಆ್ಯಂಡ್ ಟ್ರಾನ್ಸ್‌ಪ್ಲಾಂಟ್ ಸಂಸ್ಥೆಗೆ ರೋಬೊ ಖರೀದಿಗೆ ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ. ಜಯದೇವ ಹೃದ್ರೋಗ ಸಂಸ್ಥೆಗೂ ಖರೀದಿಸಲಾಗುವುದು' ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ 'ಪ್ರಜಾವಾಣಿ'ಗೆ ತಿಳಿಸಿದರು.



ಸಂಸ್ಥೆಗೆ ಅತ್ಯಾಧುನಿಕ ತಂತ್ರಜ್ಞಾನದ ರೋಬೊ ಸಿಗುವುದರಿಂದ ಬಡರೋಗಿಗಳಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಮುಂದಿದ ವರ್ಷಗಳಲ್ಲಿ ಇದರ ಮೂಲಕ ಯಕೃತ್ ಕಸಿ ಮಾಡಬಹುದು
ಡಾ.ನಾಗೇಶ್ ಎಸ್.ಎನ್, ನಿರ್ದೇಶಕ, ಐಜಿಒಟಿ



ಖಾಸಗಿ ಆಸ್ಪತ್ರೆಗಳಲ್ಲಿ ಸಿಗುವ ಅತ್ಯಾಧುನಿಕ ತಂತ್ರಜ್ಞಾನ ಸರ್ಕಾರಿ ವೈದ್ಯಕೀಯ ಸಂಸ್ಥೆಗಳಲ್ಲೂ ಸಿಗಬೇಕು. ಇದರ ಪ್ರಯೋಜನ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಿಗಬೇಕು
ಡಾ.ಶರಣಪ್ರಕಾಶ್ ಪಾಟೀಲ, ವೈದ್ಯಕೀಯ ಶಿಕ್ಷಣ ಸಚಿವ

ರೋಬೊವನ್ನು ಸ್ತ್ರೀರೋಗಶಾಸ್ತ್ರ, ಮೂತ್ರರೋಗ ಶಾಸ್ತ್ರ, ಜನರಲ್ ಸರ್ಜರಿ,



ಗ್ಯಾಸ್ಟ್ರೊಎಂಟ್ರಾಲಜಿ ಸೈನ್ಸಸ್ ಆ್ಯಂಡ್ ಟ್ರಾನ್ಸ್‌ಪ್ಲಾಂಟ್ ಸಂಸ್ಥೆ

ಮೂಳೆ ಚಿಕಿತ್ಸೆ, ಹೃದಯ, ಯಕೃತ್, ನರಶಸ್ತ್ರ ಚಿಕಿತ್ಸೆಯಂತಹ ಹಲವು ವಿಶೇಷ ಮತ್ತು ಸಂಕೀರ್ಣ ಶಸ್ತ್ರಚಿಕಿತ್ಸೆಗಾಗಿ ಬಳಸಲಾಗುತ್ತದೆ. ಇದರಿಂದ ಸಂಕೀರ್ಣ ಕಾರ್ಯವಿಧಾನಗಳನ್ನು ಹೆಚ್ಚು ನಿಖರವಾಗಿ ಮತ್ತು ನಿಯಂತ್ರಿತವಾಗಿ ನಡೆಸಬಹುದಾಗಿದೆ. ಉದಾಹರಣೆಗೆ ಮಿದುಳು, ಎದೆ, ಹೊಟ್ಟೆ ಮತ್ತು ಅಸ್ಥಿ ಕುಹರದ ಕ್ಯಾನ್ಸರ್‌ಗಳಿಗೆ ಚಿಕಿತ್ಸೆಯನ್ನು ನಿಖರವಾಗಿ ನೀಡಬಹುದು. ಬೆನ್ನು ಹುರಿ, ಗರ್ಭಕಂಠ ಶಸ್ತ್ರಚಿಕಿತ್ಸೆಯಂತಹ ಅತಿ ನಾಜೂಕಿನ ಶಸ್ತ್ರ ಚಿಕಿತ್ಸೆಗಳನ್ನು ರೋಬೊ ಮೂಲಕ ಮಾಡಬಹುದು ಎಂದು ತಜ್ಞರು ವಿವರಿಸಿದ್ದಾರೆ.

ರೋಬೊ ಮೂಲಕ ನಡೆಸುವ ಸರ್ಜರಿಯಿಂದ ರಕ್ತಸ್ರಾವದ ಪ್ರಮಾಣ ಕಡಿಮೆ ಇರುತ್ತದೆ. ನೋವು ಕೂಡ ಅತ್ಯಲ್ಪವಾಗಿದ್ದು, ಬೇಗನೆ ಗುಣಮುಖರಾಗಬಹುದು. ಆಸ್ಪತ್ರೆಯಲ್ಲಿ ಇರಬೇಕಾದ ಅವಧಿಯೂ ಅಲ್ಪಕಾಲದ್ದು. ರೋಬೊ ಬಳಸಿ ಸರ್ಜರಿ ಮಾಡುವಾಗ ಶಸ್ತ್ರಚಿಕಿತ್ಸಕರು ಹೆಚ್ಚಿನ ವ್ಯಾಪ್ತಿಯ ಚಲನೆ ಮತ್ತು ಸ್ಥಿರತೆ ಸಾಧಿಸಬಹುದು. ಕೈನಡುಕದಿಂದ ಆಗುವ ಲೋಪಗಳಿಗೆ ಶಾಶ್ವತ ಮುಕ್ತಿ ಸಿಗಲಿದೆ. ರೋಬೊ ಹೈ–ಡೆಫಿನಿಷನ್ ಮತ್ತು ಹೆಚ್ಚು ಸ್ಪಷ್ಟವಾಗಿ ದೃಶ್ಯವನ್ನು ನೋಡಬಹುದಾದ ತ್ರಿಡಿ ಕ್ಯಾಮೆರಾಗಳನ್ನು ಹೊಂದಿರುವುದರಿಂದ ಶಸ್ತ್ರ ಚಿಕಿತ್ಸೆ ನಡೆಸಬೇಕಾದ ಜಾಗದ ನೋಟ ವಿಸ್ತೃತವಾಗಿರುತ್ತದೆ. ಎಲ್ಲವೂ ಸ್ವಯಂಚಾಲಿತವಾಗಿ ಆಗುವುದರಿಂದ ಮಾನವ ಹಸ್ತಕ್ಷೇಪ ತೀರಾ ಕಡಿಮೆ ಎಂಬುದು ತಜ್ಞರ ವಿವರಣೆ.

ಅಲ್ಲದೇ, ರೋಬೊ ಬಳಸಿ ದೇಹದ ಭಾಗವನ್ನು ಛೇದನ ಮಾಡಿದ ಬಳಿಕ ಉಳಿಯುವ ಗಾಯದ ಗುರುತು ಗೌಣವಾಗಿರುತ್ತದೆ. ತೆರೆದ ಶಸ್ತ್ರಚಿಕಿತ್ಸೆಗೆ ಹೋಲಿಸಿದಾಗ ಸೋಂಕು ತಗಲುವ ಅಪಾಯವೂ ಕಡಿಮೆ ಎನ್ನುತ್ತಾರೆ ಅವರು.

ಗ್ಯಾಸ್ಟ್ರೊಎಂಟ್ರಾಲಜಿ ಸಂಸ್ಥೆಗೆ ₹20 ಕೋಟಿ ರೋಬೊ

ಯಕೃತ್, ಕರುಳು ಮತ್ತು ಉದರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ದೇಶದ ಮೊದಲ ಗ್ಯಾಸ್ಟ್ರೊ ಎಂಟ್ರಾಲಜಿ ಆಸ್ಪತ್ರೆ ಬೆಂಗಳೂರಿನ 'ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೊಎಂಟ್ರಾಲಜಿ ಸೈನ್ಸಸ್ ಅಂಡ್ ಟ್ರಾನ್ಸ್‌ಪ್ಲಾಂಟ್ ಸಂಸ್ಥೆ'ಗೆ (ಐಜಿಒಟಿ) ₹20 ಕೋಟಿ ವೆಚ್ಚದಲ್ಲಿ ರೋಬೊ ಖರೀದಿಗೆ ಸರ್ಕಾರ ಒಪ್ಪಿಗೆ ನೀಡಿದೆ.

ಇದಕ್ಕೆ ರಾಜ್ಯ ಸರ್ಕಾರ ₹10 ಕೋಟಿ ನೀಡಲಿದ್ದು, ಐಜಿಒಟಿ ಆಂತರಿಕ ಸಂಪನ್ಮೂಲದಿಂದ ₹10 ಕೋಟಿ ಭರಿಸಬೇಕಾಗಿದೆ.

ಸಂಸ್ಥೆಯ ನಿರ್ದೇಶಕ ಡಾ.ನಾಗೇಶ್ ಎನ್.ಎಸ್ ಈ ಕುರಿತು 'ಪ್ರಜಾವಾಣಿ' ಜತೆ ಮಾತನಾಡಿ, ರೋಬೊ ಯಕೃತ್ ಮತ್ತು ಹೊಟ್ಟೆಗೆ ಸಂಬಂಧಿಸಿದ ಕ್ಯಾನ್ಸರ್ ಶಸ್ತ್ರ ಚಿಕಿತ್ಸೆಗೆ ಅನುಕೂಲವಾಗುತ್ತದೆ. ಈ ಆಸ್ಪತ್ರೆ ಆರಂಭವಾಗಿ 4 ವರ್ಷ ಆಗಿದ್ದು ಸುಮಾರು 2 ಲಕ್ಷ ರೋಗಿಗಳು ಬಂದು ಹೋಗಿದ್ದಾರೆ. ಗ್ಯಾಸ್ಟ್ರೊ ಎಂಟ್ರಾಲಜಿ ಕ್ಯಾನ್ಸರ್‌ಗೆ ಸಂಬಂಧಿಸಿದಂತೆ 2000 ಕ್ಕೂ ಹೆಚ್ಚು ಶಸ್ತ್ರ ಚಿಕಿತ್ಸೆ ಮತ್ತು ಕಿಮೋಥೆರಪಿ ನೀಡಿದ್ದೇವೆ' ಎಂದು ಅವರು ಹೇಳಿದರು.

ಸರ್ಕಾರದ ಷರತ್ತುಗಳು:
- ಸಂಸ್ಥೆಯ ಎಲ್ಲ ವೈದ್ಯರಿಗೂ ಈ ಉಪಕರಣದ ಬಗ್ಗೆ ತರಬೇತಿಯನ್ನು ಕಡ್ಡಾಯವಾಗಿ ನೀಡಬೇಕು.
- ರಾಜ್ಯ ಮತ್ತು ದೇಶದ ಇತರೆ ವೈದ್ಯರೂ ಕೂಡ ತರಬೇತಿ ಪಡೆಯುವಂತೆ ಮಾದರಿ ವ್ಯವಸ್ಥೆ ಅಳವಡಿಸಿಕೊಳ್ಳಬೇಕು
- ರೋಬೊ ಬಳಸಿ ಮಾಡುವ ಶಸ್ತ್ರಚಿಕಿತ್ಸೆಗಳಿಗೆ ಬಳಕೆ ಶುಲ್ಕವನ್ನು ಸಾಮಾನ್ಯ ಶಸ್ತ್ರಚಿಕಿತ್ಸೆಗಿಂತ ಹೆಚ್ಚಾಗಿ ನಿಗದಿಗೊಳಿಸಬೇಕು
- ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆ ಜತೆಗೆ ಖಾಸಗಿ ಆರೋಗ್ಯ ವಿಮೆಗಳನ್ನೂ ಅಳವಡಿಸಿಕೊಳ್ಳಬೇಕು

ಸುದ್ದಿ 2 ನಿಮಿಷ

ಸಮೀಕ್ಷೆ ಮಾಹಿತಿ ರಾಜಕೀಯಕ್ಕೆ ಬಳಕೆ: ಆರ್.ಅಶೋಕ

ಬೆಂಗಳೂರು: 'ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆ ವೇಳೆ ವೈಯಕ್ತಿಕ ಮಾಹಿತಿಗಳನ್ನು ಹಂಚಿಕೊಳ್ಳುವಾಗ ಎಚ್ಚರಿಕೆ ವಹಿಸಬೇಕು. ಈ ಮಾಹಿತಿಗಳನ್ನು ರಾಜಕೀಯಕ್ಕೆ ಬಳಸಿಕೊಳ್ಳುವ ಅಪಾಯವಿದ್ದು, ಹಲವು ಯೋಜನೆಗಳಿಗೆ ಕತ್ತರಿ ಹಾಕುವ ಸಾಧ್ಯತೆಯೂ ಇದೆ' ಎಂದು ವಿಧಾನಸಭೆ ವಿರೋಧಪಕ್ಷದ ಆರ್.ಅಶೋಕ ದೂರಿದ್ದಾರೆ.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, 'ಕಾಂಗ್ರೆಸ್ ಸರ್ಕಾರ ನಡೆಸುತ್ತಿರುವ ಈ ಜಾತಿ ಸಮೀಕ್ಷೆಯಲ್ಲಿ ಜನರು ವೈಯಕ್ತಿಕ ಮಾಹಿತಿಗಳನ್ನು ನೀಡಬೇಕು ಎಂದೇನಿಲ್ಲ. ಸೂಕ್ತ ಎನಿಸಿದ ಪ್ರಶ್ನೆಗಳಿಗೆ ಮಾತ್ರ ಉತ್ತರಿಸಬಹುದು' ಎಂದಿದ್ದಾರೆ.

ಪ್ರಶ್ನೆಗಳಿಗೆ ಉತ್ತರ ನೀಡುವುದು ಜನರಿಗೆ ಬಿಟ್ಟ ವಿಚಾರ. ಸರ್ಕಾರದ ಖಜಾನೆಯಲ್ಲಿ ಹಣವಿಲ್ಲದೆ, ರೇಷನ್ ಕಾರ್ಡ್ ರದ್ದು ಮಾಡುತ್ತಿದ್ದಾರೆ. ಹಲವು ಯೋಜನೆಗಳಿಗೆ ಕತ್ತರಿ ಹಾಕಲು ಮಾನದಂಡ ರೂಪಿಸಬೇಕಾಗುತ್ತದೆ. ಆದ್ದರಿಂದ ಸಮೀಕ್ಷೆ ನಡೆಸಲಾಗುತ್ತಿದೆ ಎಂದರು.

ಸಮೀಕ್ಷೆ ವೇಳೆ ಕೇಳುವ ಎಲ್ಲ ಪ್ರಶ್ನೆಗಳಿಗೂ ಉತ್ತರ ನೀಡಬೇಕಿಲ್ಲ ಎಂದು ಹೈಕೋರ್ಟ್ ಹೇಳಿದೆ. ಹೀಗಾಗಿ ಯಾವ ಪ್ರಶ್ನೆಗೆ ಎಷ್ಟು ಉತ್ತರ ಕೊಡಬೇಕೊ ಅಷ್ಟನ್ನು ಮಾತ್ರ ನೀಡಿದರೆ ಸಾಕು. ಇದು ಸಾಮಾಜಿಕ ಶೈಕ್ಷಣಿಕ ಸಮೀಕ್ಷೆ ಅಲ್ಲ. ಸಿದ್ದರಾಮಯ್ಯ ನಡೆಸುತ್ತಿರುವ ಜಾತಿ ಸಮೀಕ್ಷೆ ಎಂದು ಅಶೋಕ ಹೇಳಿದರು.

ಮುಂದಿನ ಬಜೆಟ್ ಸಿದ್ಧಪಡಿಸುವುದು ಸಿದ್ದರಾಮಯ್ಯ ಅವರಿಗೆ ಕಗ್ಗಂಟಾಗಿದೆ. ಅದಕ್ಕಾಗಿ ಹಣ ಉಳಿಸಬೇಕಾಗಿದೆ. ಹೀಗಾಗಿ ಇಲ್ಲದ ಕಸರತ್ತು ಮಾಡುತ್ತಿದ್ದಾರೆ ಎಂದು ಟೀಕಿಸಿದರು.



ಹಿಂದೂ ಧರ್ಮ ಎಂದೇ ಬರೆಯಿಸಿ: ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆಯ ಧರ್ಮದ ಕಾಲಂನಲ್ಲಿ ಎಲ್ಲರೂ ಹಿಂದೂ ಎಂದೇ ಉಲ್ಲೇಖ ಮಾಡಬೇಕು. ಹಿಂದೂ ಎಂದು ಉಲ್ಲೇಖ ಮಾಡುವುದು ನಮ್ಮೆಲ್ಲರ ಜವಾಬ್ದಾರಿಯೂ ಹೌದ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮನವಿ ಮಾಡಿದ್ದಾರೆ.

ಸಮೀಕ್ಷಕರಿಗೆ ಮಾಹಿತಿ ನೀಡಲ್ಲ; ಪ್ರಲ್ಹಾದ ಜೋಶಿ

ಹುಬ್ಬಳ್ಳಿ: 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಡಿ ವಿವರಣೆ ಕೇಳಲು ಸಮೀಕ್ಷೆದಾರರು ಬಂದರೆ, ನಾನು, ಕುಟುಂಬದವರು ಮಾಹಿತಿ ನೀಡುವುದಿಲ್ಲ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದರು.

'ಸಿದ್ದರಾಮಯ್ಯ ಅವರು ತಮ್ಮ ಆಡಳಿತ ವೈಫಲ್ಯ ಮುಚ್ಚಿಕೊಳ್ಳಲು ಮತ್ತು ಸೋನಿಯಾ ಗಾಂಧಿ ಕುಟುಂಬದವರ ಅನುಕಂಪ ಗಿಟ್ಟಿಸಲು ಸಮೀಕ್ಷೆಯ ಷಡ್ಯಂತ್ರ ನಡೆಸಿದ್ದಾರೆ' ಎಂದು ಅವರು ಭಾನುವಾರ ಸುದ್ದಿಗಾರರಿಗೆ ಮಾತನಾಡುತ್ತಾ ಆರೋಪಿಸಿದರು.

'ಎಷ್ಟು ಆದಾಯವಿದೆ? ಎಷ್ಟು ಆದಾಯ ತೆರಿಗೆ ತುಂಬುತ್ತೀರಿ? ಮನೆಯಲ್ಲಿ ವಿಧವೆಯರು ಇದ್ದಾರೆಯೇ, ಜಾತಿ ತಾರತಮ್ಯ ಆಗಿದೆಯೇ ಎಂಬ ಮಾಹಿತಿ ಎಲ್ಲವನ್ನೂ ಸಮೀಕ್ಷೆಯಲ್ಲಿ ಪಡೆದು ಸರ್ಕಾರ ಏನು ಮಾಡಲಿದೆ' ಎಂದು ಪ್ರಶ್ನಿಸಿದರು.

'ಮಾಹಿತಿ ಗೋಪ್ಯವಾಗಿರಬೇಕು. ಹಿಂದಿನ ಸಮೀಕ್ಷೆ ಮಾಹಿತಿ ಸೋರಿಕೆಯಾಗಿದೆ. ಕೆಲ ಜಾತಿ ಕೈಬಿಡಲಾಗಿದೆ ಎಂದಿದ್ದಾರೆ. ಮುಜಾವರ್ ಬ್ರಾಹ್ಮಣ, ಲಿಂಗಾಯತ ಮುಸ್ಲಿಂ ಎಂಬ ಜಾತಿಗಳನ್ನು ಇನ್ನೂ ಕೈಬಿಟ್ಟಿಲ್ಲ. ಜನರನ್ನು ತಪ್ಪು ದಾರಿಗೆ ಎಳೆಯಲಾಗುತ್ತಿದೆ' ಎಂದರು.

ಬಿಜೆಪಿ ಬಿಹಾರದಲ್ಲಿ ಮಹಿಳೆಯರಿಗೆ ಗ್ಯಾರಂಟಿ ಯೋಜನೆ ಘೋಷಿಸಿದ ಕುರಿತ ಪ್ರಶ್ನೆಗೆ, 'ಆದಾಯದ ಮಿತಿ ಅರಿತು ಘೋಷಿಸಲಾಗಿದೆ. ಇಲ್ಲಿನಂತೆ ಬೇಕಾಬಿಟ್ಟಿಯಾಗಿ ಅಲ್ಲ' ಎಂದರು.

ಚಿಟಿಕೆ ಸುದ್ದಿ

ಶರ್ಟ್: ಮುಗಿಬಿದ್ದ ಜನ– ಲಾಠಿ ಪ್ರಹಾರ



ಹಾಸನದ ಉದಯಗಿರಿಯ ಬಟ್ಟೆ ಅಂಗಡಿಯ ಎದುರು ಸೇರಿದ್ದ ಜನರನ್ನು ಪೊಲೀಸರು ಚದುರಿಸಿದರು

ಹಾಸನ: ಇಲ್ಲಿನ ಉದಯಗಿರಿ ಬಡಾವಣೆಯ ಅಂಗಡಿಯೊಂದರಲ್ಲಿ ₹1ಸಾವಿರಕ್ಕೆ 20 ಶರ್ಟ್ ಎಂಬ ಘೋಷಣೆ ಗಮನಿಸಿ ಅಪಾರ ಜನರು ಅಂಗಡಿ ಮುಂದೆ ಸೇರಿದ್ದರು. ನೂಕುನುಗ್ಗಲು ಉಂಟಾಗಿದ್ದು, ಪೊಲೀಸರು ಲಘು ಲಾಠಿ ಪ್ರಹಾರ ಮಾಡಿ ಚದುರಿಸಿದರು.

ಶರ್ಟ್ ಮಾರಾಟ ಕುರಿತು ಜಾಲತಾಣದಲ್ಲಿ ಹಾಕಿದ್ದ ಪೋಸ್ಟ್ ಸಾಕಷ್ಟು ಹರಿದಾಡಿತ್ತು. ಅದನ್ನು ನೋಡಿ ಸಾವಿರಾರು ಜನರು ಅಂಗಡಿಯತ್ತ ಬಂದಿದ್ದರು. ಬೆಳಿಗ್ಗೆಯಿಂದಲೇ ರಸ್ತೆಯಲ್ಲಿ ಜನಸಮೂಹ ಹೆಚ್ಚಾಗಿದ್ದು, ಖರೀದಿಗಾಗಿ ಜನರು ಸಾಲುಗಟ್ಟಿ ನಿಂತಿದ್ದರು.

ಜನಸಮೂಹವನ್ನು ನಿಯಂತ್ರಿಸಲು ಅಧಿಕಾರಿಗಳು ಪ್ರಯತ್ನಿಸಿದರು. ಜನರು ಹಿಂದೆ ಸರಿಯದಿದ್ದಾಗ ಲಘು ಲಾಠಿ ಪ್ರಹಾರ ಮಾಡಿದರು.

'ಜನರು ನಿರೀಕ್ಷೆಗೂ ಮೀರಿ ಬಂದಿದ್ದರು. ಗೊಂದಲವಾಗದಂತೆ ನೋಡಿಕೊಳ್ಳಲು ಲಾಠಿ ಬೀಸಬೇಕಾಯಿತು. ಯಾರೂ ಗಾಯಗೊಂಡಿಲ್ಲ' ಎಂದು ಪೊಲೀಸರು ತಿಳಿಸಿದರು.

ಸಮೀಕ್ಷೆಯಲ್ಲಿ ನಿರ್ಲಕ್ಷ್ಯ; ಇಬ್ಬರ ಅಮಾನತು

ಹುಬ್ಬಳ್ಳಿ: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ನಿರ್ಲಕ್ಷ್ಯ ವಹಿಸಿ, ಕರ್ತವ್ಯಲೋಪ ಎಸಗಿದ ಆರೋಪದ ಮೇಲೆ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಇಬ್ಬರು ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ.

'ತರಬೇತಿ ಪಡೆದರೂ ಸಿಬ್ಬಂದಿ ಸಮೀಕ್ಷೆಯಲ್ಲಿ ಭಾಗವಹಿಸದಿರುವುದು ಗೊತ್ತಾದ ಕಾರಣ ಅಮಾನತುಗೊಳಿಸಲಾಗಿದೆ' ಎಂದು ಪಾಲಿಕೆ ಆಯುಕ್ತ ರುದ್ರೇಶ ಘಾಳಿ ತಿಳಿಸಿದ್ದಾರೆ.

ಕೆಎಸ್‌ಆರ್‌ಟಿಸಿಗೆ 9 ರಾಷ್ಟ್ರೀಯ ಪ್ರಶಸ್ತಿ

ಬೆಂಗಳೂರು: ಭಾರತೀಯ ಸಾರ್ವಜನಿಕ ಸಂಪರ್ಕ ಮಂಡಳಿಯಿಂದ (ಪಿಆರ್‌ಸಿಐ) ಕೆಎಸ್‌ಆರ್‌ಟಿಸಿಗೆ 9 ವಿಭಾಗಗಳಲ್ಲಿ ರಾಷ್ಟ್ರ ಪ್ರಶಸ್ತಿ ನೀಡಲಾಗಿದೆ.

ಪಿಆರ್‌ಸಿಐಯ 15ನೇ ವಿಶ್ವ ಸಂವಹನ ಸಮ್ಮೇಳನ ಮತ್ತು ಎಕ್ಸಲೆನ್ಸ್ ಅವಾರ್ಡ್ಸ್ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಡಿಜಿಟಲ್ ಮೀಡಿಯಾ ಇನೋವೇಶನ್ ಮತ್ತು ಹೌಸ್ ಜರ್ನಲ್ ಪ್ರಿಂಟ್ (ಪ್ರಾದೇಶಿಕ) ವಿಭಾಗದಲ್ಲಿ ಚಿನ್ನದ ಪದಕ, ಹೆಲ್ತ್ ಕೇರ್ ಕಮ್ಯುನಿಕೇಶನ್ ಫಿಲ್ಮ್ ವಿಭಾಗದಲ್ಲಿ ಬೆಳ್ಳಿ ಪದಕ, ವಿಶಿಷ್ಟ ಮಾನವ ಸಂಪನ್ಮೂಲ ಕಾರ್ಯಕ್ರಮಕ್ಕಾಗಿ ಕಂಚಿನ ಪದಕ ಪಡೆಯಿತು.

ಗ್ರಾಹಕ ಸೇವಾ ಶ್ರೇಷ್ಠತೆ, ಬ್ರ್ಯಾಂಡಿಂಗ್, ವೆಬ್‌ಸೈಟ್ ಮತ್ತು ಮೈಕ್ರೊಸೈಟ್, ಕಾರ್ಪೊರೇಟ್ ಫಿಲ್ಮ್, ಮಾರ್ಕೆಟಿಂಗ್ ಕ್ಯಾಂಪೇನ್ ಮತ್ತು ಆಂತರಿಕ ಕಮ್ಯುನಿಕೇಶನ್ ಕ್ಯಾಂಪೇನ್ ವಿಭಾಗಗಳಲ್ಲಿ ಪ್ರಶಸ್ತಿ ಪಡೆಯಿತು.

ಕೆಎಸ್‌ಆರ್‌ಟಿಸಿ ತುಮಕೂರು ವಿಭಾಗೀಯ ನಿಯಂತ್ರಣಾಧಿಕಾರಿ ಚಂದ್ರಶೇಖರ್, ಚಿಕ್ಕಬಳ್ಳಾಪುರ ವಿಭಾಗೀಯ ನಿಯಂತ್ರಣಾಧಿಕಾರಿ ಬಸವರಾಜು ಪ್ರಶಸ್ತಿ ಸ್ವೀಕರಿಸಿದರು.

'ದೇವಾಂಗ ಜಾತಿ ಬರೆಸಲು ಅಂಜಿಕೆ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೇಕಾರಿಕೆ ಮೂಲಕ ಬದುಕು ಕಟ್ಟಿಕೊಂಡಿರುವ ದೇವಾಂಗ ಸಮುದಾಯದವರು ಅಳುಕದೇ ಶೈಕ್ಷಣಿಕ ಹಾಗೂ ಸಾಮಾಜಿಕ ಸಮೀಕ್ಷೆಯ ಜಾತಿ ಕಾಲಂನಲ್ಲಿ ದೇವಾಂಗ ಹಾಗೂ ಧರ್ಮ ಕಾಲಂನಲ್ಲಿ ಹಿಂದೂ ಎಂದೇ ಬರೆಯಿಸಿ' ಎಂದು ಹೈಕೋರ್ಟ್ ನ್ಯಾಯಮೂರ್ತಿ ವಿ.ಶ್ರೀಶಾನಂದ ಸಲಹೆ ನೀಡಿದರು.

ಕರ್ನಾಟಕ ರಾಜ್ಯ ದೇವಾಂಗ ನೌಕರರ ಸಂಘವು ರವೀಂದ್ರ ಕಲಾಕ್ಷೇತ್ರದಲ್ಲಿ ಭಾನುವಾರ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸಮುದಾಯಗಳ ಏಳಿಗೆ ದೃಷ್ಟಿಯಿಂದ ಕಾನೂನು ಪ್ರಕಾರ ಸರ್ಕಾರ ಸಮೀಕ್ಷೆ ನಡೆಸಲಿ. ಅದಕ್ಕೆ ನಮ್ಮ ತಕರಾರು ಇಲ್ಲ. ಸಮೀಕ್ಷೆಯಲ್ಲಿ ಎಲ್ಲಾ ಸಮುದಾಯಗಳು ಭಾಗಿಯಾಗಬೇಕು.



ರಾಜ್ಯ ದೇವಾಂಗ ನೌಕರರ ಸಂಘದ ವತಿಯಿಂದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು–ಪ್ರಜಾವಾಣಿ ಚಿತ್ರ

25 ಲಕ್ಷದಷ್ಟು ಜನಸಂಖ್ಯೆ ಇರುವ ದೇವಾಂಗ ಸಮುದಾಯದವರು ಯಾರಿಗೂ ಅಂಜಬೇಕಾಗಿಲ್ಲ. ಸರಿಯಾದ ಮಾಹಿತಿಯನ್ನು ಸಮೀಕ್ಷೆ ವೇಳೆ ಒದಗಿಸಬೇಕು' ಎಂದು ಅವರು ಹೇಳಿದರು.

'ಬಹಳಷ್ಟು ಜಾತಿಯವರಿಗೆ ನಮ್ಮ ಜಾತಿ ಹೆಸರು ಬರೆಯಿಸಲು ಕೀಳರಿಮೆ ಇದೆ. ಇದು ಭಾರತದ ದುಸ್ಥಿತಿ ಎಂದೂ ಕೂಡ ಹೇಳಬೇಕಾಗುತ್ತದೆ. ದೇವಲ ಮಹರ್ಷಿಯ ಕುಲವಿದು. ಈ ಹೆಮ್ಮೆಯೂ ಸಮುದಾಯಕ್ಕೆ ಇರಲೇಬೇಕು' ಎಂದರು.

ವಿಧಾನಪರಿಷತ್ ಸದಸ್ಯೆ ಉಮಾಶ್ರೀ ಮಾತನಾಡಿ, 'ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ಬಗ್ಗೆ ನಕಾರಾತ್ಮಕ ಮಾತುಗಳ ಬಗ್ಗೆ ಕಿವಿಗೊಡಬಾರದು. ಸಣ್ಣಪುಟ್ಟ ದೋಷಗಳು ಇದ್ದೇ ಇರುತ್ತವೆ, ಅವುಗಳನ್ನು ಸರಿಪಡಿಸಲಾಗುತ್ತದೆ. ಸಮುದಾಯವರು ಜಾತಿ ಕಾಲಂನಲ್ಲಿ ಕಡ್ಡಾಯವಾಗಿ ದೇವಾಂಗ ಎಂದು ನಮೂದಿಸಿದರೆ ನಿಖರ ಜನಸಂಖ್ಯೆ ತಿಳಿದು ಮುಂದೆ ಸೌಲಭ್ಯಗಳನ್ನು ಪಡೆಯಲು ಸಹಕಾರಿಯಾಗಲಿದೆ' ಎಂದು ಹೇಳಿದರು'.

ದೊಡ್ಡಬಳ್ಳಾಪುರದ ತಪಸೀಹಳ್ಳಿ ಪುಷ್ಪಾಂಡಜ ಮಹರ್ಷಿ ಆಶ್ರಮದ ದಿವ್ಯಜ್ಞಾನಾನಂದಗಿರಿ ಸ್ವಾಮೀಜಿ ಮಾತನಾಡಿ, 'ನೇಕಾರಿಕೆ ಮೂಲಕವೇ ಕಷ್ಟದ ಬದುಕು ಸಾಗಿಸುತ್ತಿರುವ ರಾಜ್ಯದಲ್ಲಿ ಮಗ್ಗ ನೇಯುವವರ ಪರಿಸ್ಥಿತಿ ಹೇಗಿದೆ ಎಂಬುದನ್ನು ನೋಡಬೇಕು. ಮಕ್ಕಳಿಗೆ ಶಿಕ್ಷಣ ಕೊಡಿಸಿದರೆ ಅದೇ ನಿಜವಾದ ಆಸ್ತಿ. ಸಮುದಾಯದ ಯುವಕರು ಬರೀ ಹಣ ಮಾಡುವುದನ್ನೇ ಮುಖ್ಯವಾಗಿಸಿಕೊಳ್ಳದೇ ಸಮಾಜದ ಪ್ರಗತಿಗೂ ಕೈ ಜೋಡಿಸಬೇಕು' ಎಂದು ಸಲಹೆ ನೀಡಿದರು.

ಮಾಜಿ ಶಾಸಕ ಎಂ.ಡಿ. ಲಕ್ಷ್ಮೀನಾರಾಯಣ, ದೇವಾಂಗ ಸಂಘದ ಅಧ್ಯಕ್ಷ ಜಿ.ರಮೇಶ್, ಕೈ ಮಗ್ಗ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ರವೀಂದ್ರ ಪಿ.ಕಲಬುರ್ಗಿ, ವಕೀಲ ಪಿ.ಪ್ರಸನ್ನ ಕುಮಾರ್, ನೌಕರರ ಸಂಘದ ಅಧ್ಯಕ್ಷ ಡಿ. ನಾಗೇಶ್ ಕುಮಾರ್ ಉಪಸ್ಥಿತರಿದ್ದರು.

ಲೇಖಕಿಯರ ಸಂಘ: ನಾಲ್ವರು ರಾಜೀನಾಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್.ಪುಷ್ಪ ಅವರ ಕಾರ್ಯವೈಖರಿ ಬಗ್ಗೆ ಅಸಮಾಧಾನ ಸ್ಫೋಟಗೊಂಡಿದ್ದು, ನಾಲ್ವರು ಪದಾಧಿಕಾರಿಗಳು ರಾಜೀನಾಮೆ ನೀಡಿದ್ದಾರೆ.

ಪುಷ್ಪ ಅವರು ಲೆಕ್ಕಪತ್ರಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಿಲ್ಲ ಹಾಗೂ ಹಣಕಾಸಿನ ವ್ಯವಹಾರದಲ್ಲಿ ಪಾರದರ್ಶಕತೆ ಕಾಯ್ದುಕೊಂಡಿಲ್ಲ ಎಂದು ಆರೋಪಿಸಿ, ಸಂಘದ ಕಾರ್ಯದರ್ಶಿ ಭಾರತಿ ಹೆಗಡೆ, ಸಹ ಕಾರ್ಯದರ್ಶಿ ಸುಮಾ ಸತೀಶ್, ಉಪಾಧ್ಯಕ್ಷೆ ಜಯಲಕ್ಷ್ಮಿ ಪಾಟೀಲ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯೆ ಸರ್ವಮಂಗಳ ಅವರು ರಾಜೀನಾಮೆ ಸಲ್ಲಿಸಿದ್ದಾರೆ.

'ಮಾರ್ಚ್ 22 ಮತ್ತು 23 ರಂದು ಬೆಂಗಳೂರಿನ ಕೊಂಡಜ್ಜಿ ಬಸಪ್ಪ ಸಭಾಭವನದಲ್ಲಿ ನಡೆದ ಕರ್ನಾಟಕ ಲೇಖಕಿಯರ ಸಮ್ಮೇಳನದ ಲೆಕ್ಕಪತ್ರಗಳ ಬಗ್ಗೆ, ಸಂಘದ ಅಧ್ಯಕ್ಷರಾದ ಪುಷ್ಪ ಅವರು ಸಮರ್ಪಕವಾದ ರೀತಿಯಲ್ಲಿ ವಿವರಣೆ ನೀಡುತ್ತಿಲ್ಲ. ಅಧ್ಯಕ್ಷರಿಂದ ಲೆಕ್ಕಪತ್ರಗಳ ಅಸಮರ್ಪಕ ನಿರ್ವಹಣೆ, ಹಣಕಾಸಿನ ಅಶಿಸ್ತು, ಪಾರದರ್ಶಕತೆ ಇಲ್ಲದಿರುವಿಕೆ,



ಈಗ ಕಾರ್ಯಕಾರಿ ಸಮಿತಿ ಅಧಿಕಾರದ ಅವಧಿ ಪೂರ್ಣಗೊಂಡಿದ್ದು, ಈ ವೇಳೆ ರಾಜೀನಾಮೆ ನೀಡಿರುವುದು ಪೂರ್ವ ಸಂಚಿನಂತೆ ಭಾಸವಾಗುತ್ತದೆ. ರಾಜೀನಾಮೆ ಅಂಗೀಕರಿಸಿಲ್ಲ
ಎಚ್.ಎಲ್. ಪುಷ್ಪ, ಅಧ್ಯಕ್ಷೆ, ಕರ್ನಾಟಕ ಲೇಖಕಿಯರ ಸಂಘ

ಸರ್ವಾಧಿಕಾರಿ ಧೋರಣೆಯಿಂದ ಬೇಸತ್ತು ರಾಜೀನಾಮೆ ನೀಡುತ್ತಿದ್ದೇವೆ. ಅಧ್ಯಕ್ಷರು ತೋರಿಸುತ್ತಿರುವ ಲೆಕ್ಕ ಪತ್ರಗಳಿಗೂ ನಮಗೂ ಯಾವುದೇ ಸಂಬಂಧ ಇಲ್ಲ' ಎಂದು ರಾಜೀನಾಮೆ ಪತ್ರದಲ್ಲಿ ನಾಲ್ವರು ತಿಳಿಸಿದ್ದಾರೆ.

'ಸಮ್ಮೇಳನದ ನಂತರ ದಾನಿಗಳು ಸಂಘಕ್ಕೆ ಒಂದಷ್ಟು ಹಣ ನೀಡಿದ್ದು, ಈ ಹಣವನ್ನು ಪ್ರಕಟಣೆಗಳಿಗೆ ಬಳಸಿಕೊಳ್ಳಲಾಗಿದೆ. ಹಣಕಾಸಿನ ವ್ಯವಹಾರ ಪಾರದರ್ಶಕವಾಗಿದ್ದು, ಸಮ್ಮೇಳನದ ಖರ್ಚು ವೆಚ್ಚಕ್ಕೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆ ಮಾಡಿಸಲಾಗಿದೆ' ಎಂದು ಎಚ್. ಎಲ್. ಪುಷ್ಪ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಬಿಜೆಪಿ 2 ತಂಡದ ಪ್ರವಾಸ ಇಂದು ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿತ್ತೂರು ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಭಾಗದ ಪ್ರವಾಹ ಪೀಡಿತ ಪ್ರದೇಶಕ್ಕೆ ಭೇಟಿ ನೀಡಲು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ವಿರೋಧಪಕ್ಷದ ನಾಯಕ ಆರ್. ಅಶೋಕ ಅವರ ನೇತೃತ್ವದಲ್ಲಿ ಎರಡು ತಂಡಗಳನ್ನು ರಚಿಸಲಾಗಿದೆ.

ವಿಜಯೇಂದ್ರ ನೇತೃತ್ವದ ತಂಡದಲ್ಲಿ ಛಲವಾದಿ ನಾರಾಯಣಸ್ವಾಮಿ, ಗೋವಿಂದ ಕಾರಜೋಳ, ಭಗವಂತ ಖೂಬಾ, ಬಿ.ಶ್ರೀರಾಮುಲು, ಡಾ.ಉಮೇಶ್ ಜಾಧವ್, ಭಾರತಿಶೆಟ್ಟಿ ಮತ್ತು ಎ.ಎಸ್.ಪಾಟೀಲ ನಡಹಳ್ಳಿ ಇದ್ದಾರೆ. ಈ ತಂಡ ರಾಯಚೂರು, ಯಾದಗಿರಿ, ಕಲಬುರ್ಗಿ ಮತ್ತು ಬೀದರ್‌ಗೆ ಭೇಟಿ ನೀಡಲಿದೆ. ಪಿ.ರಾಜೀವ್ ಇದರ ಸಂಯೋಜಕರು.

ಆರ್.ಅಶೋಕ ನೇತೃತ್ವದ ತಂಡದಲ್ಲಿ ಜಗದೀಶ ಶೆಟ್ಟರ್, ಸಿ.ಟಿ. ರವಿ, ಅರವಿಂದ ಬೆಲ್ಲದ, ರಮೇಶ ಜಿಗಜಿಣಗಿ, ಪಿ.ಸಿ.ಗದ್ದಿಗೌಡರ್, ಈರಣ್ಣ ಕಡಾಡಿ, ಶಶಿಕಲಾ ಜೊಲ್ಲೆ, ಸಿದ್ದು ಸವದಿ ಮತ್ತು ಅಭಯಪಾಟೀಲ ಇರಲಿದ್ದಾರೆ. ಈ ತಂಡವು ಬೆಳಗಾವಿ, ಬಾಗಲಕೋಟೆ, ಚಿಕ್ಕೋಡಿ ಮತ್ತು ವಿಜಯಪುರಗಳಿಗೆ ಭೇಟಿ ನೀಡಲಿದೆ.

ಸಮೀಕ್ಷೆಗೆ ಗೈರು: ರಾಯಚೂರಿನಲ್ಲಿ 6 ಅಂಗನವಾಡಿ ಕಾರ್ಯಕರ್ತೆಯರ ವಜಾ

9 ಶಿಕ್ಷಕರ ಅಮಾನತು, 57 ಮಂದಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಮೈಸೂರು: 'ಜಿಲ್ಲೆಯಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಸಮೀಕ್ಷೆ ಕಾರ್ಯಕ್ಕೆ ಹಾಜರಾಗದೇ, ಅಧಿಕಾರಿಗಳ ಕರೆ ಸ್ವೀಕರಿಸದೆ ನಿರ್ಲಕ್ಷ್ಯ ತೋರಿದ 8 ಸಹಶಿಕ್ಷಕರನ್ನು ಅಮಾನತುಗೊಳಿಸಲಾಗಿದೆ' ಎಂದು ಡಿಡಿಪಿಐ ಎಸ್.ಟಿ.ಜವರೇಗೌಡ ತಿಳಿಸಿದ್ದಾರೆ.

ಜಿಲ್ಲಾ ಪಂಚಾಯಿತಿ ಸಿಇಒ ಎಸ್. ಯುಕೇಶ್‌ಕುಮಾರ್ ಆದೇಶದ ಮೇರೆಗೆ ಕ್ರಮ ವಹಿಸಲಾಗಿದೆ' ಎಂದು ಅವರು ಮಾಹಿತಿ ನೀಡಿದ್ದಾರೆ.

ಕೊಪ್ಪಳ ವರದಿ: ಸಮೀಕ್ಷೆಗೆ ಬರದೇ ಕರ್ತವ್ಯಲೋಪ ಎಸಗಿದ್ದ ತಾಲ್ಲೂಕಿನ ಜೂಲಕುಂಟಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹಾಯಕ ಶಿಕ್ಷಕ ರಾಮಪ್ಪ ತಳವಾರ ಅವರನ್ನು ಅಮಾನತು ಪಡಿಸಲಾಗಿದೆ.

ರಾಮಪ್ಪ ತಳವಾರ ಸಮೀಕ್ಷೆ ಕೆಲಸ ಆರಂಭಿಸಿಲ್ಲ ಎಂಬುದು ಸೇರಿ ಕುಷ್ಟಗಿ ಸಿಆರ್‌ಪಿ ವರದಿ ಆಧರಿಸಿ ಕ್ರಮ ಜರುಗಿಸಲಾಗಿದೆ ಎಂದು ಜಿಲ್ಲಾಧಿಕಾರಿ ಆದೇಶದಲ್ಲಿ ತಿಳಿಸಿದ್ದಾರೆ.

ಸಮೀಕ್ಷೆಗೆ ಗೈರು: 57 ಸಿಬ್ಬಂದಿಗೆ ನೋಟಿಸ್

ಲಿಂಗಸುಗೂರು (ರಾಯಚೂರು ಜಿಲ್ಲೆ): ಸಮೀಕ್ಷೆಗೆ ನಿರಂತರವಾಗಿ ಗೈರಾದ 57 ಸಿಬ್ಬಂದಿಗೆ ತಾಲ್ಲೂಕು ಮಟ್ಟದ ಸಮನ್ವಯ ಸಮಿತಿ ಅಧ್ಯಕ್ಷ, ಉಪ ವಿಭಾಗಾಧಿಕಾರಿ ಬಸವಣೆಪ್ಪ ಕಲಶೆಟ್ಟಿ ಕಾರಣ ಕೇಳಿ ನೋಟಿಸ್ ಜಾರಿ ಮಾಡಿದ್ದಾರೆ.

'ತಾಲ್ಲೂಕಿನಲ್ಲಿ ಸಮೀಕ್ಷೆಗೆ ನಿಯೋಜನೆಗೊಂಡ ಸಿಬ್ಬಂದಿ ಪೈಕಿ 57 ಮಂದಿ ಸತತವಾಗಿ ಗೈರಾಗಿದ್ದಾರೆ. ಹಾಜರಾಗಲು ಸೂಚಿಸಿದರೂ ಬಂದಿಲ್ಲ. ನಿರ್ಲಕ್ಷ್ಯದಿಂದಾಗಿ ಸಮೀಕ್ಷಾ ಕಾರ್ಯ ಕುಂಠಿತವಾಗಿದೆ. 24 ಗಂಟೆಯೊಳಗೆ ಸಮಜಾಯಿಷಿ ನೀಡಿ' ಎಂದು ಸೂಚಿಸಿದ್ದಾರೆ.

ಕಾರ್ಯಕರ್ತೆಯರ ವಜಾ

ರಾಯಚೂರು ವರದಿ: ಸಮೀಕ್ಷೆಗೆ ನಿಯೋಜಿಸಿದ್ದ ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಆರು ಅಂಗನವಾಡಿ ಕಾರ್ಯಕರ್ತೆಯನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ.


ಅಂಜಳ–2 ಕೇಂದ್ರದ ಗುಂಡಮ್ಮ, ನಗರಗುಂಡ–2ರ ರಂಗಮ್ಮ, ಅಶೋಕ–ನೇತಾಜಿ ಓಣಿಯ ಮುತ್ತಮ್ಮ, ಮಟ್ಟೇರ್ ದೊಡ್ಡಿಯ ಚಾಂದಬಿ, ದೇವದುರ್ಗದ ನೇತಾಜಿ ಓಣಿಯ ವಿಜಯಲಕ್ಷ್ಮಿ ಹಾಗೂ ಬಾಪೂಜಿ ಓಣಿಯ ರೇಣುಕಾ ಅವರನ್ನು ಅಮಾನತುಗೊಳಿಸಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ನವೀನ್ ಕುಮಾರ್ ಯು. ಆದೇಶ ಹೊರಡಿದ್ದಾರೆ.

'ನಾಲ್ಕು ದಿನವಾದರೂ ಸಮೀಕ್ಷೆಯಲ್ಲಿ ಪ್ರಗತಿ ಕಾಣಿಸಿಲ್ಲ. ಗಣತಿ ಕಾರ್ಯಕ್ಕೆ ಹೋಗದಂತೆ ಬೇರೆ ಕಾರ್ಯಕರ್ತೆಯರಿಗೂ ಪ್ರಚೋದಿಸಿದ್ದಾರೆ. ಕಾರ್ಯಕ್ಕೂ ಹಾಜರಾಗಿಲ್ಲ' ಎಂದು ಎಂದು ಆದೇಶದಲ್ಲಿ ಕಾರಣ ಉಲ್ಲೇಖಿಸಲಾಗಿದೆ.

ಐದೇ ದಿನದಲ್ಲಿ ಸಮೀಕ್ಷೆ ಮುಗಿಸಿದ ಶಿಕ್ಷಕ

• ಬಿ.ಎಂ.ಶಿರಸಂಗಿ

ಸವದತ್ತಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಹಂಚಿನಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಕನ್ನಡ ಶಾಲೆಯ ಶಿಕ್ಷಕ ಎಸ್.ರುದ್ರಪ್ಪ ಅವರು ತಮಗೆ ವಹಿಸಲಾದ 112 ಮನೆಗಳಲ್ಲಿ ಸಮೀಕ್ಷೆ ಕಾರ್ಯವನ್ನು ಐದೇ ದಿನಗಳಲ್ಲಿ ಪೂರ್ಣಗೊಳಿಸಿದ್ದಾರೆ.



ಎಸ್.ರುದ್ರಪ್ಪ

ರುದ್ರಪ್ಪ ಮೂಲತಃ ಮಂಡ್ಯ ಜಿಲ್ಲೆ ಪಾಂಡವಪುರದವರು. ಆರಂಭದ ದಿನಗಳಿಂದಲೂ ನೆಟ್‌ವರ್ಕ್ ಮತ್ತು ಲಾಗಿನ್ ಸಮಸ್ಯೆ, ರೂಟ್‌ಮ್ಯಾಪ್ ಗೊಂದಲ ಹೀಗೆ ಹಲವು ವಿವಿಧ ತೊಂದರೆಗಳು ಕಾಡಿದರೂ ರುದ್ರಪ್ಪ ಯಶಸ್ವಿಯಾಗಿ ಎಲ್ಲವನ್ನೂ ನಿಭಾಯಿಸಿದರು.

'ಶಾಲೆಯಲ್ಲೇ ವಾಸ್ತವ್ಯ ಮಾಡಿದೆ. ಬೆಳಿಗ್ಗೆ 6 ರಿಂದ ಸಮೀಕ್ಷೆ ಆರಂಭಿಸಿ ರಾತ್ರಿ 9.30ರವೆಗೆ ಮಾಡಿದೆ. ಸಂಬಂಧ ಪಟ್ಟ ದಾಖಲೆಗಳನ್ನು ಮೊದಲೇ ಸಂಗ್ರಹಿಸಿ, ಮನೆಯ ಮುಖ್ಯಸ್ಥರನ್ನು ಪರಿಗಣಿಸಿ ಮಾಹಿತಿ ಕಲೆ ಹಾಕಿದೆ. ಮೊದಲ 40 ಪ್ರಶ್ನೆಗಳ ಉತ್ತರವನ್ನು ಅಪ್‌ಲೋಡ್ ಮಾಡಿ, ಆಸ್ತಿ ವಿವರ ಸಾಮಾನ್ಯವಿರುವ ಕಾರಣ ಸೇರ್ಪಡೆ ಮಾಡಲು ಸಮಸ್ಯೆಯಾಗಲಿಲ್ಲ' ಎಂದು ರುದ್ರಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

'ಮನೆಯ ಮುಖ್ಯಸ್ಥರಿಗೆ ಕೇಳಿದ ಪ್ರಶ್ನೆಗಳೇ ಸಾಮಾನ್ಯವಾಗಿ ಎಲ್ಲರಿಗೂ ಬರುವ ಕಾರಣ ವಿಂಗಡಿಸಿ ಪ್ರಶ್ನೆ ಕೇಳಿ, ಕುಳಿತಲ್ಲಿಯೇ ಎಲ್ಲವನ್ನೂ ಆಲಿಸಿ ಸರಳಗೊಳಿಸಬಹುದು. ಕೊನೆಯ 20 ಪ್ರಶ್ನೆಗಳನ್ನು ಮನೆಯಲ್ಲಿನ ಉಳಿದವರಿಗೆ ಕೇಳಬಹುದು' ಎಂದು ಹೇಳಿದರು.

ಸವದತ್ತಿ ತಾಲ್ಲೂಕಿನಲ್ಲಿ ಅತಿ ವೇಗವಾಗಿ ಸಮೀಕ್ಷೆ ಮುಗಿಸಿದ ಶಿಕ್ಷಕ ರುದ್ರಪ್ಪ ಇತರರಿಗೂ ಮಾರ್ಗದರ್ಶನ ಮಾಡುತ್ತಿದ್ದಾರೆ. ತಾಲ್ಲೂಕು ಆಡಳಿತದಿಂದ ಸನ್ಮಾನಿಸಲಾಗುವುದು ಎಂ.ಎನ್. ಹೆಗ್ಗನ್ನವರ, ತಹಶೀಲ್ದಾರ

5ರಂದು ವಾರ್ಷಿಕ ಸಭೆ • ಫೋಟೊ, ವಿಡಿಯೊ, ಜೋರು ಮಾತಿಗೆ ನಿರ್ಬಂಧ

ಕಸಾಪ ಸಭೆ: ನಿಯಮಗಳು ಅನ್ವಯ..

• ಬಸವರಾಜ ಹವಾಲ್ದಾರ

ಬಾಗಲಕೋಟೆ: ವಾರ್ಷಿಕ ಸಭೆಯಲ್ಲಿ ಆಡಿಯೊ, ವಿಡಿಯೊ ಚಿತ್ರೀಕರಣ ಮಾಡಿಕೊಳ್ಳುವಂತಿಲ್ಲ. ಚಿತ್ರ ತೆಗೆದುಕೊಳ್ಳುವಂತಿಲ್ಲ. ಏರುಧ್ವನಿಯಲ್ಲಿ ಮಾತನಾಡಬಾರದು.

ಇದು ಕನ್ನಡ ಸಾಹಿತ್ಯ ಪರಿಷತ್ ಕೇಂದ್ರ ಘಟಕ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಕಲ್ಲಳ್ಳಿಯ ಸತ್ಯಕಾಮ ಪ್ರತಿಷ್ಠಾನದ ಸುಮ್ಮನೆ ಸಭಾಂಗಣದಲ್ಲಿ ಅಕ್ಟೋಬರ್ 5ರಂದು ನಡೆಸುವ 'ವಾರ್ಷಿಕ ಸಾಮಾನ್ಯ ಸಭೆ'ಯಲ್ಲಿ ಭಾಗವಹಿಸುವ ಸದಸ್ಯರಿಗೆ ವಿಧಿಸಲಾಗಿರುವ ಸೂಚನೆಗಳು.

'ಕಡ್ಡಾಯವಾಗಿ ಪರಿಷತ್ತಿನ ಗುರುತಿನ ಚೀಟಿ ಅಥವಾ ಯಾವುದಾದರೂ ಒಂದು ಗುರುತಿನ ಚೀಟಿ ತರಬೇಕು. ಭೌತಿಕವಾಗಿ ಹಾಜರಾಗಲು ಆಗದವರು 'ಜೂಮ್' ಮೂಲಕ ಆನ್‌ಲೈನ್‌ನಲ್ಲಿ ಸಭೆಗೆ ಹಾಜರಾಗಬಹುದು' ಎಂದು ಸಭೆಯ ತಿಳಿವಳಿಕೆ ಪತ್ರದಲ್ಲಿ ತಿಳಿಸಲಾಗಿದೆ.



ಗ್ರಾಮೀಣ ಭಾಗದಲ್ಲಿ ಕನ್ನಡದ ಬಗ್ಗೆ ಆಸಕ್ತಿ ಮೂಡಿಸಲು ಇಲ್ಲಿ ಸಭೆ ಆಯೋಜಿಸಿದ್ದೇವೆ. ಕೆಲವರು ದ್ವೇಷ, ಕುತಂತ್ರ ಮಾಡುತ್ತಿದ್ದಾರೆ. ಅದಕ್ಕೆ ಬಗ್ಗುವುದಿಲ್ಲ
ಮಹೇಶ ಜೋಶಿ
ಅಧ್ಯಕ್ಷ, ಕೇಂದ್ರ ಸಮಿತಿ, ಕಸಾಪ, ಬೆಂಗಳೂರು



ಜಾಣಗೆರೆ ವೆಂಕಟರಾಮಯ್ಯ, ವಸುಂಧರಾ ಭೂಪತಿ ಅವರನ್ನು ಅಮಾನತು ಮಾಡಲಾಗಿದೆ. ಅವರು ಒಂದು ವೇಳೆ ಬಂದರೆ ಕುತ್ತಿಗೆ ಹಿಡಿದು ಹೊರದುಬ್ಬುತ್ತೇವೆ
ಶಿವಾನಂದ ಶೆಲ್ಲಿಕೇರಿ
ಜಿಲ್ಲಾ ಅಧ್ಯಕ್ಷ, ಕಸಾಪ, ಬಾಗಲಕೋಟೆ

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ಮಲ್ಲಾಡಿಹಳ್ಳಿಯಲ್ಲಿ ನಡೆದ ವಾರ್ಷಿಕ, ವಿಶೇಷ ಸಾಮಾನ್ಯ ಸಭೆ ನಡವಳಿಯ ದೃಢೀಕರಣ, 2023–24ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಮಂಡನೆ, 2024–25ನೇ ಸಾಲಿನ ಪರಿಷತ್ತಿನ ಕಾರ್ಯಚಟುವಟಿಕೆಗಳು, ಕ್ರಿಯಾಯೋಜನೆ ಹಾಗೂ ವಾರ್ಷಿಕ ಬಜೆಟ್‌ಗೆ ಅನುಮೋದನೆ ಪಡೆಯಲಾಗುವುದು.

2024–25ನೇ ಸಾಲಿನ ಲೆಕ್ಕಪರಿಶೋಧಕರ ನೇಮಕಾತಿ, ಅವರ ಸಂಭಾವನೆ ನಿಗದಿ, ಸದಸ್ಯರು ನಿಯಮಾನುಸಾರ ಕಳುಹಿಸಿರುವ ಇತರೆ ಸೂಚನೆ, ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮದಡಿ ನಡೆದಿರುವ ವಿಚಾರಣೆಗೆ ನೀಡಬೇಕಾದ ಮಾಹಿತಿ ದಾಖಲೆ, ಕಸಾಪ ವಿರುದ್ಧ ಬಂದಿರುವ ದೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧಿಕಾರಿಗಳ ಸಮಿತಿ ರಚಿಸಿರುವ ಬಗ್ಗೆ ಚರ್ಚೆ ನಡೆಸಲು ನಿರ್ಧರಿಸಲಾಗಿದೆ ಎಂದು ತಿಳಿಸಲಾಗಿದೆ.

ಬಳ್ಳಾರಿ ಜಿಲ್ಲೆ ಸಂಡೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ವಾರ್ಷಿಕ ಸಭೆ ನಡೆಸಲು ಕೇಂದ್ರ ಘಟಕದ ಅಧ್ಯಕ್ಷ ಮಹೇಶ ಜೋಶಿ ಮುಂದಾಗಿದ್ದರು. ಆಕ್ಷೇಪ ವ್ಯಕ್ತವಾದ ನಂತರ ಸಹಕಾರ ಸಂಘಗಳ ಉಪನಿಬಂಧಕರು ಸಭೆ ರದ್ದು ಪಡಿಸಿದ್ದರು.

ಅಗತ್ಯ ಸೌಲಭ್ಯಗಳಿಲ್ಲದ ಸ್ಥಳದಲ್ಲಿ ಸಭೆ ನಡೆಸಬಾರದು ಎಂದು ಹಲವಾರು ಸಾಹಿತಿಗಳು ಆಕ್ಷೇಪ ವ್ಯಕ್ತಪಡಿಸಿದ್ದರು. ಈಗ ಸಭೆ ಆಯೋಜಿಸಿರುವ ಸ್ಥಳವೂ ಒಂದೆರಡು ಸಾವಿರ ಜನ ಕೂರಲು ಅವಕಾಶವಿದೆ.

ಕಸಾಪವು 4 ಲಕ್ಷಕ್ಕೂ ಅಧಿಕ ಸದಸ್ಯರನ್ನು ಹೊಂದಿದೆ.

ಬಾಲಕಿ ರಕ್ಷಣೆ • ಮಹಿಳೆ ಸೇರಿ ಇಬ್ಬರ ಬಂಧನ

ಲೈಂಗಿಕತೆಗೆ ಬಾಲಕಿ ಪೂರೈಕೆ; ಜಾಲ ಪತ್ತೆ

ಪ್ರಜಾವಾಣಿ ವಾರ್ತೆ

ಮೈಸೂರು: ಅನೈತಿಕ ಚಟುವಟಿಕೆಗೆ ಬಾಲಕಿ ದೂಡುತ್ತಿದ್ದ ಜಾಲವನ್ನು ಪೊಲೀಸರು ಪತ್ತೆ ಹಚ್ಚಿದ್ದಾರೆ. ಪ್ರಕರಣವೊಂದರಲ್ಲಿ ₹20 ಲಕ್ಷ ಬೇಡಿಕೆ ಇಟ್ಟಿದ್ದ ಮಹಿಳೆಯೂ ಸೇರಿದಂತೆ ಇಬ್ಬರು ಆರೋಪಿಗಳನ್ನು ಇಲ್ಲಿನ ವಿಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಒಡನಾಡಿ ಸೇವಾ ಸಂಸ್ಥೆ ಜೊತೆಗೂಡಿ ಕಾರ್ಯಾಚರಣೆ ನಡೆಸಿದ ಪೊಲೀಸರು, ಬೆಂಗಳೂರಿನ ಶೋಭಾ, ತುಳಸಿಕುಮಾರ್ ಎಂಬುವರನ್ನು ವಶಕ್ಕೆ ಪಡೆದು, ಬಾಲಕಿಯನ್ನು ರಕ್ಷಿಸಿದ್ದಾರೆ.

'ಋತುಮತಿಯಾದ 12–13 ವರ್ಷದ ಬಾಲಕಿ ಜೊತೆ ಲೈಂಗಿಕ ಸಂಪರ್ಕ ಬೆಳೆಸಿದರೆ, ಕಳೆದುಹೋದ ಪುರುಷತ್ವ ಬರುತ್ತದೆ' ಎಂಬ ಮೂಢನಂಬಿಕೆ ಹೊಂದಿದ್ದ ಶ್ರೀಮಂತ ವೃದ್ಧರು, ಪುರುಷರು, ವಯಸ್ಕರಿಗೆ ಬಾಲಕಿಯನ್ನು ಒಪ್ಪಿಸುವ ಜಾಲದಲ್ಲಿ ಈ ಇಬ್ಬರೂ ಆರೋಪಿಗಳು ಸಕ್ರಿಯರಾಗಿದ್ದರು' ಎಂಬುದು ತನಿಖೆಯಿಂದ ಹೊರಬಿದ್ದಿದೆ.

'ಗ್ರಾಹಕರಿಗೆ ವಾಟ್ಸ್‌ಆ್ಯಪ್ ವಿಡಿಯೊ ಕರೆ ಮಾಡಿ, ಬಾಲಕಿಯನ್ನು ಮಹಿಳೆಯು ಜಾಲದ ಮಧ್ಯವರ್ತಿಯೊಬ್ಬರಿಗೆ ತೋರಿಸುತ್ತಿದ್ದಳು. ಈ ವಿಷಯವು ಸಂಸ್ಥೆಯ ಮಾಹಿತಿದಾರರೊಬ್ಬರಿಗೆ ತಿಳಿಯಿತು. ಆರೋಪಿಯನ್ನು ಪತ್ತೆ ಮಾಡಿ, ಅದಕ್ಕಾಗಿ ನಕಲಿ ಉದ್ಯಮಿ ವೇಷದಲ್ಲಿ ವಿಜಯನಗರ ಠಾಣೆ ಪೊಲೀಸರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ಜಂಟಿ ಕಾರ್ಯಾಚರಣೆ ನಡೆಸಲಾಯಿತು' ಎಂದು ಒಡನಾಡಿ ಸೇವಾ ಸಂಸ್ಥೆಯ ಸ್ಟ್ಯಾನ್ಲಿ ತಿಳಿಸಿದರು.

'ಬೆಂಗಳೂರು, ಮೈಸೂರು ಹಾಗೂ ತಾಲ್ಲೂಕು ಮಟ್ಟದಲ್ಲಿನ ಸ್ಲಂಗಳು, ಶ್ರಮಿಕರು, ಬಡವರು, ವಲಸಿಗರು, ಏಕ ಪೋಷಕರಿರುವ ಕುಟುಂಬಗಳ ಬಾಲಕಿಯರನ್ನು ಹುಡುಕುವ ಕೃತ್ಯವನ್ನು ಜಾಲವು ಮಾಡುತ್ತಿತ್ತು. ಬಾಲಕಿ ಋತುಮತಿಯಾದಾಗ ಪಾಲಕರು ನಡೆಸುವ ಆರತಿ ಕಾರ್ಯಕ್ರಮವನ್ನು ಜಾಲವು ಗಮನಿಸುತ್ತಿತ್ತು' ಎಂದು ಮಾಹಿತಿ ನೀಡಿದರು.



ಬಾಲಕಿಗೆ ಆ್ಯಪಲ್ ಐಫೋನ್ ಕೊಡಿಸಿದ್ದರಲ್ಲದೇ, ಅವಳಿಗೆ ಹೊಸ ಉಡುಪುಗಳನ್ನು ನೀಡಿ ಆಕೆಯ ಮುಗ್ಧತೆಯನ್ನೇ ಬಂಡವಾಳ ಮಾಡಿಕೊಂಡಿದ್ದರು
ಸ್ಟ್ಯಾನ್ಲಿ, ಒಡನಾಡಿ ಸಂಸ್ಥೆ

'ಈ ಪ್ರಕರಣದಲ್ಲೂ ಬಾಲಕಿಯ ತಂದೆ ತಾಯಿ ಎಂದೂ, ನಾವು ದತ್ತು ತೆಗೆದುಕೊಂಡಿದ್ದೇವೆ ಎಂದೂ ಶಾಲಾ ಸಮವಸ್ತ್ರದಲ್ಲಿ ಗ್ರಾಹಕರಿಗೆ ತೋರಿಸಿದ್ದರು. ₹20 ಲಕ್ಷದಿಂದ ₹25 ಲಕ್ಷದವರೆಗೆ ಬೇಡಿಕೆ ಇಟ್ಟಿದ್ದರು' ಎಂದರು.

'ಈ ಬಗ್ಗೆ ಪ್ರಕರಣ ದಾಖಲಾಗಿದ್ದು, ಬಾಲಕಿಯನ್ನು ರಕ್ಷಿಸಿ ಬಾಲಮಂದಿರದಲ್ಲಿ ಇರಿಸಲಾಗಿದೆ. ತನಿಖೆ ನಡೆಯುತ್ತಿದೆ' ಎಂದು ವಿಜಯನಗರ ಪೊಲೀಸರು ತಿಳಿಸಿದ್ದಾರೆ.

prajavani.net prajavani www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಶ್ವಾನ ಪ್ರೀತಿ
ಮೈಸೂರಿನಲ್ಲಿ ದಸರಾ ಪ್ರಯುಕ್ತ ಪಶು ವೈದ್ಯ ಹಾಗೂ ಪಾಲನಾ ಇಲಾಖೆ ಆಯೋಜಿಸಿದ್ದ ಶ್ವಾನ ಪ್ರದರ್ಶನದಲ್ಲಿ ಯುವತಿಯೊಬ್ಬರು ಶ್ವಾನದೊಂದಿಗೆ ನಗೆ ಬೀರಿದರು



ಬೆಳ್ಳಿ ಬೆಲೆ ಇನ್ನಷ್ಟು ಜಿಗಿತ?
ಬೆಳ್ಳಿ ಬೆಲೆಯು ಅಲ್ಪಾವಧಿಯಲ್ಲಿ ಪ್ರತಿ ಕೆ.ಜಿ.ಗೆ ₹1,70,000ದವರೆಗೆ ತಲುಪುವ ಸಾಧ್ಯತೆ ಇದೆ ಎಂದು ಮಾರುಕಟ್ಟೆ ತಜ್ಞರು ಅಂದಾಜು ಮಾಡಿದ್ದಾರೆ.



ಕಾಂಗ್ರೆಸ್‌ನ ದಾಖಲೆಗಳ ಡಿಜಿಟಲೀಕರಣ 12 | ಭೈರಪ್ಪ, ಜುಬಿನ್ ಸ್ಮರಿಸಿದ ಮೋದಿ 8

ನೇಮಕ: ಪ್ರಮಾಣಪತ್ರ ಅಡ್ಡಿ

ಒಳ ಮೀಸಲು: ಎಸ್‌ಸಿ ಪ್ರವರ್ಗವಾರು ಪತ್ರ ವಿತರಣೆಗೆ ಕ್ರಮ ತೆಗೆದುಕೊಳ್ಳದ ಇಲಾಖೆ

• ರಾಜೇಶ್ ರೈ ಚಟ್ಲ

ಬೆಂಗಳೂರು: ಪರಿಶಿಷ್ಟ ಜಾತಿಯೊಳಗೆ ಒಳ ಮೀಸಲಾತಿ ಕಲ್ಪಿಸಲು ರಾಜ್ಯ ಸರ್ಕಾರ ಆದೇಶ ಹೊರಡಿಸಿ, ತಿಂಗಳು ಕಳೆದರೂ ಜಾತಿ ಪ್ರಮಾಣ ಪತ್ರ ವಿತರಿಸಲು ಕ್ರಮ ಕೈಗೊಂಡಿಲ್ಲ. ಇದರಿಂದಾಗಿ, ವಿವಿಧ ಹುದ್ದೆಗಳ ನೇಮಕಾತಿ ದಿನದಿಂದ ದಿನಕ್ಕೆ ವಿಳಂಬವಾಗುತ್ತಲೇ ಇದೆ.

101 ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ನೀಡುವುದಕ್ಕಾಗಿ ಪ್ರವರ್ಗ ಎ, ಬಿ, ಮತ್ತು ಸಿ ಎಂದು ವರ್ಗೀಕರಣ ಮಾಡಲಾಗಿದೆ. ಹೀಗೆ ಮಾಡುವ ಮುನ್ನ ಪರಿಶಿಷ್ಟ ಜಾತಿಯವರ ಜಾತಿ ಪ್ರಮಾಣಪತ್ರದಲ್ಲಿ, ಅವರು ಪ್ರತಿನಿಧಿಸುತ್ತಿದ್ದ ಜಾತಿಯನ್ನಷ್ಟೇ ಉಲ್ಲೇಖಿಸಲಾಗುತ್ತಿತ್ತು. ಈಗ ಒಳ ಮೀಸಲಾತಿಗಾಗಿ ಮೂರು ಪ್ರವರ್ಗಗಳನ್ನು ಸೃಷ್ಟಿಸಲಾಗಿದೆ. ನಿರ್ದಿಷ್ಟ ಜಾತಿಗೆ ಸೇರಿದವರು, ಪರಿಶಿಷ್ಟ ಜಾತಿಗಳ ಪಟ್ಟಿಯ ಯಾವ ಪ್ರವರ್ಗಕ್ಕೆ ಸೇರುತ್ತಾರೆ ಎಂಬುದನ್ನು ಪ್ರಮಾಣ ಪತ್ರದಲ್ಲಿ ಸ್ಪಷ್ಟವಾಗಿ ನಮೂದಿಸಬೇಕಿದೆ. ಈ ಕೆಲಸವನ್ನು ಸಮಾಜ ಕಲ್ಯಾಣ ಇಲಾಖೆಯು ಮಾಡಬೇಕಿದೆ. ಈವರೆಗೂ ಆ ಕೆಲಸ ಆರಂಭವಾಗಿಲ್ಲ.

> **ಪ್ರವರ್ಗವಾರು ಜಾತಿ ಪ್ರಮಾಣಪತ್ರ ವಿತರಣೆ ಆರಂಭವಾಗದೆ ಈ ಜಾತಿಗೆ ಸೇರಿದ ಅಭ್ಯರ್ಥಿಗಳು ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಸಾಧ್ಯವಿಲ್ಲ. ಈ ಬಗ್ಗೆ ಪತ್ರ ಬರೆಯಲಾಗಿದೆ**
> **ಎಚ್‌. ಪ್ರಸನ್ನ**
> ಕಾರ್ಯನಿರ್ವಾಹಕ ನಿರ್ದೇಶಕ, ಕೆಇಎ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ), ಕರ್ನಾಟಕ ಲೋಕಸೇವಾ ಆಯೋಗದಂತಹ (ಕೆಪಿಎಸ್‌ಸಿ) ನೇಮಕಾತಿ ಪ್ರಾಧಿಕಾರಗಳು ನೇಮಕಾತಿ ಪ್ರಕ್ರಿಯೆಗೆ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸುತ್ತವೆ. ಅರ್ಜಿ ಸಲ್ಲಿಕೆ ವೇಳೆ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ತಮ್ಮ ಜಾತಿ ಮತ್ತು ಅದರ ಪ್ರವರ್ಗವನ್ನು (ಎ ಅಥವಾ ಬಿ ಅಥವಾ ಸಿ) ಆಯ್ಕೆ ಮಾಡಿಕೊಳ್ಳಬೇಕು. ಪ್ರವರ್ಗವಾರು ಜಾತಿ ಪ್ರಮಾಣಪತ್ರ ವಿತರಿಸದೇ ಇರುವ ಕಾರಣಕ್ಕೆ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಸಾಧ್ಯವೇ ಆಗುವುದಿಲ್ಲ.

ಜಾತಿ ಪ್ರಮಾಣಪತ್ರಗಳಲ್ಲಿ ಆರ್‌ಡಿ (ಕಂದಾಯ ಇಲಾಖೆ) ಸಂಖ್ಯೆ ಇರುತ್ತದೆ. ಅರ್ಜಿ ಸಲ್ಲಿಕೆ ವೇಳೆ ನಮೂದಿಸಲಾಗುವ ಈ ಸಂಖ್ಯೆಯ ಆಧಾರದಲ್ಲಿ, ಜಾತಿ ಪ್ರಮಾಣ ಪತ್ರಗಳ ನೈಜತೆ ಪರಿಶೀಲಿಸಲಾಗುತ್ತದೆ. ಅಭ್ಯರ್ಥಿಗಳು ಈಗ ನಮೂದಿಸುವ ಸಂಖ್ಯೆ, ಪ್ರವರ್ಗವಾರು ಜಾತಿ ಪ್ರಮಾಣಪತ್ರದಲ್ಲಿ ಬದಲಾದರೆ ಒಳ ಮೀಸಲಾತಿ ಅನ್ವಯಕ್ಕೆ ತೊಡಕಾಗುತ್ತದೆ. ಈ ಕಾರಣಕ್ಕೆ ನೇಮಕಾತಿ ಅಧಿಸೂಚನೆ ಹೊರಡಿಸಲು, ನೇಮಕಾತಿ ಪ್ರಾಧಿಕಾರಗಳು ಹಿಂದೇಟು ಹಾಕುತ್ತಿವೆ.

‘ಪ್ರಜಾವಾಣಿ’ ಜತೆ ಮಾತನಾಡಿದ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್‌. ಪ್ರಸನ್ನ, ‘ಒಳ ಮೀಸಲಾತಿ ಹಂಚಿಕೆ ಮತ್ತು ರೋಸ್ಟರ್ ನಿಗದಿಯ ನಂತರ, ಪದವಿಪೂರ್ವ ಕಾಲೇಜುಗಳಲ್ಲಿನ 247 ಪ್ರಾಂಶುಪಾಲರು ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿನ 315 (ಸಹಾಯಕ ಲೆಕ್ಕಿಗ ಮತ್ತು ನಿರ್ವಾಹಕ) ಹುದ್ದೆಗಳು ಸೇರಿ ವಿವಿಧ ಇಲಾಖೆಗಳ ಒಟ್ಟು 994 ಹುದ್ದೆಗಳಿಗೆ ನೇಮಕಾತಿ ಅಧಿಸೂಚನೆ ಹೊರಡಿಸಿ ಅರ್ಜಿ ಆಹ್ವಾನಿಸಲು ಸಿದ್ಧರಾಗಿದ್ದೇವೆ. ಪ್ರವರ್ಗವಾರು ಜಾತಿ ಪ್ರಮಾಣಪತ್ರ ವಿತರಿಸದೇ ಇದ್ದರೆ, ಈ ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಲು ಸಾಧ್ಯವಿಲ್ಲ’ ಎಂದರು.

6

ನೇಮಕಾತಿಗಾಗಿ ಕಾದಿರುವ ಹುದ್ದೆಗಳು

ಇಲಾಖೆ	ಹುದ್ದೆಗಳು
ಬಿಡಿಎ (ಎಫ್‌ಡಿಎ, ಎಸ್‌ಡಿಎ)	25
ಕೆಎಸ್‌ಡಿಎಲ್ (13 ವಿವಿಧ ಹುದ್ದೆ)	38
ಕೆಕೆಆರ್‌ಟಿಸಿ (ಸಹಾಯಕ ಲೆಕ್ಕಿಗ, ನಿರ್ವಾಹಕರು)	315
ಎನ್‌ಡಬ್ಲ್ಯುಕೆಆರ್‌ಟಿಸಿ (ಏಳು ವಿವಿಧ ಹುದ್ದೆ)	52
ರಾಜೀವ್ ಗಾಂಧಿ ಆರೋಗ್ಯ ವಿವಿ (ಐದು ವಿವಿಧ ಹುದ್ದೆ)	44
ಕೃಷಿ ಮಾರಾಟ (ಆರು ವಿವಿಧ ಹುದ್ದೆ)	180
ತಾಂತ್ರಿಕ ಶಿಕ್ಷಣ (ಎಫ್‌ಡಿಎ, ಎಸ್‌ಡಿಎ)	93
ಶಾಲಾ ಶಿಕ್ಷಣ (ಪದವಿಪೂರ್ವ ಪ್ರಾಂಶುಪಾಲರು)	247
ಒಟ್ಟು	994

‘ಬೀದರ್‌ಗೆ ವಿಶೇಷ ಪ್ಯಾಕೇಜ್ ಕೊಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತೀವ್ರ ಮಳೆಯಿಂದ ಪ್ರವಾಹ ಸ್ಥಿತಿ ಎದುರಿಸುತ್ತಿರುವ ಬೀದರ್‌ಗೆ ವಿಶೇಷ ಪ್ಯಾಕೇಜ್ ಘೋಷಿಸಬೇಕು’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಸಿದ್ದರಾಮಯ್ಯ ಅವರನ್ನು ಭಾನುವಾರ ಭೇಟಿ ಮಾಡಿದ ಖಂಡ್ರೆ ಅವರು, ‘ಜಿಲ್ಲೆಯಲ್ಲಿ 4.31 ಲಕ್ಷ ಹೆಕ್ಟೇರ್‌ನಷ್ಟು ಪ್ರದೇಶದಲ್ಲಿ ಬಿತ್ತನೆ ನಡೆದಿತ್ತು. ಆಗಸ್ಟ್‌ನಲ್ಲಿ ಮಳೆಯಿಂದಾಗಿ ಶೇ 25ರಷ್ಟು ಬಿತ್ತನೆ ಪ್ರದೇಶ ಹಾಳಾಗಿತ್ತು. ಸೆಪ್ಟೆಂಬರ್‌ನಲ್ಲಿ ಹಾನಿ ಪ್ರಮಾಣ ಇನ್ನಷ್ಟು ಏರಿದೆ. ಕಟಾವಿಗೆ ಬಂದಿದ್ದ ಉದ್ದು, ಹೆಸರು, ತೊಗರಿ ಬೆಳೆಗಳು ನಾಶವಾಗಿದೆ’ ಎಂದು ವಿವರಿಸಿದ್ದಾರೆ.

ಭಾರತಕ್ಕೆ ರೋಚಕ ಜಯದ ‘ತಿಲಕ’

ಸೂರ್ಯ ಪಡೆಗೆ ಏಷ್ಯಾ ಕಪ್ ಟಿ20 ಕ್ರಿಕೆಟ್ ಕಿರೀಟ

69* ರನ್
53 ಎಸೆತ
3 ಬೌಂಡರಿ
4 ಸಿಕ್ಸರ್



ತಿಲಕ್ ವರ್ಮಾ

ಪ್ರಜಾವಾಣಿ ವಾರ್ತೆ

ದುಬೈ: ದಿಟ್ಟ ಬ್ಯಾಟಿಂಗ್ ಮಾಡಿದ ತಿಲಕ್ ವರ್ಮಾ ಭಾರತ ತಂಡದ ಮಡಿಲಿಗೆ ಏಷ್ಯಾ ಕಪ್ ಕಾಣಿಕೆ ನೀಡಿದರು.

ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಫೈನಲ್‌ನಲ್ಲಿ ಪಾಕಿಸ್ತಾನ ಎದುರು 5 ವಿಕೆಟ್‌ಗಳ ರೋಚಕ ಜಯ ಸಾಧಿಸಿದ ಭಾರತ ಪ್ರಶಸ್ತಿಗೆ ಮುತ್ತಿಕ್ಕಿತ್ತು. ಟಾಸ್ ಗೆದ್ದ ಭಾರತ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಸ್ಪಿನ್ನರ್ ಕುಲದೀಪ್ ಯಾದವ್ (30ಕ್ಕೆ4) ಮೋಡಿಗೆ ಪಾಕ್ ತಂಡವು 19.1 ಓವರ್‌ಗಳಲ್ಲಿ 146 ರನ್ ಗಳಿಸಿ ಆಲೌಟ್ ಆಯಿತು. ಗುರಿ ಬೆನ್ನಟ್ಟಿದ ಭಾರತ ತಂಡ ಆರಂಭದಲ್ಲಿಯೇ ಆಘಾತ ಅನುಭವಿಸಿತು. ಆದರೆ ತಿಲಕ್ ವರ್ಮಾ (ಅಜೇಯ 69) ತಂಡವನ್ನು ಗೆಲುವಿನತ್ತ ಮುನ್ನಡೆಸಿದರು. ತಂಡವು 19.4 ಓವರ್‌ಗಳಲ್ಲಿ 5ಕ್ಕೆ150 ರನ್ ಗಳಿಸಿತು.

ಏಷ್ಯಾ ಕಪ್ ಟೂರ್ನಿಯ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಉಭಯ ತಂಡಗಳು ಫೈನಲ್‌ನಲ್ಲಿ ಮುಖಾಮುಖಿಯಾಗಿದ್ದವು. ಇದೇ ಟೂರ್ನಿಯ ಗುಂಪು ಹಂತ ಮತ್ತು ಸೂಪರ್ ಫೋರ್ ಹಂತದಲ್ಲಿಯೂ ಭಾರತ ತಂಡವು ಪಾಕ್ ಎದುರು ಜಯಿಸಿತ್ತು.



ಸುದ್ದಿ 13

ಚಿನಕುರುಳಿ ಪ್ರಕಾಶ್ ಶೆಟ್ಟಿ



ಸಿಬಿಐ ತನಿಖೆಗೆ ಟಿವಿಕೆ ಮನವಿ

ಕರೂರು ಕಾಲ್ತುಳಿತ

ಚೆನ್ನೈ (ಪಿಟಿಐ/ಎಎಫ್‌ಪಿ): ಕರೂರಿನಲ್ಲಿ ನಡೆದ ಕಾಲ್ತುಳಿತ ದುರಂತಕ್ಕೆ ಸಂಬಂಧಿಸಿದ ತನಿಖೆಯ ಹೊಣೆಯನ್ನು ಸಿಬಿಐ ಅಥವಾ ವಿಶೇಷ ತನಿಖಾ ದಳಕ್ಕೆ ವಹಿಸುವಂತೆ ಕೋರಿ ‘ತಮಿಳಗ ವೆಟ್ರಿ ಕಳಗಂ’ (ಟಿವಿಕೆ) ಪಕ್ಷ ಮದ್ರಾಸ್ ಹೈಕೋರ್ಟ್ ಮೆಟ್ಟಿಲೇರಿದೆ.

ಟಿವಿಕೆ ಪರ ವಕೀಲರ ತಂಡವು ನ್ಯಾಯಮೂರ್ತಿ ಎಂ.ದಂಡಪಾಣಿ ಅವರ ನಿವಾಸಕ್ಕೆ ತೆರಳಿ ಈ ಕುರಿತು ಮನವಿ ಸಲ್ಲಿಸಿದೆ. ಅಲ್ಲದೆ 40 ಮಂದಿ ಮೃತಪಟ್ಟ ಈ ಘಟನೆಗೆ ಸಂಬಂಧಿಸಿದಂತೆ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳುವಂತೆಯೂ ಕೋರಿದೆ.

‘ಮದ್ರಾಸ್ ಹೈಕೋರ್ಟ್‌ನ ಮದುರೈ ಪೀಠದಲ್ಲಿ ಅರ್ಜಿ ಸಲ್ಲಿಸುವಂತೆ ನ್ಯಾಯಮೂರ್ತಿಗಳು ತಿಳಿಸಿದ್ದಾರೆ. ನ್ಯಾಯಾಲಯವು ಸೋಮವಾರ ಮಧ್ಯಾಹ್ನ 2.15ಕ್ಕೆ ಅರ್ಜಿಯ ವಿಚಾರಣೆ ನಡೆಸಲಿದೆ’ ಎಂದು ಟಿವಿಕೆ ಕಾರ್ಯಕರ್ತರೊಬ್ಬರು ಮಾಹಿತಿ ನೀಡಿದ್ದಾರೆ.

ಈ ಬೆಳವಣಿಗೆಗಳ ನಡುವೆಯೇ ನ್ಯಾಯಮೂರ್ತಿ ಅರುಣಾ ಜಗದೀಶನ್ ಆಯೋಗ ದುರಂತದ ಕುರಿತು ಭಾನುವಾರದಿಂದಲೇ ತನಿಖೆ ಆರಂಭಿಸಿದೆ.

ಮೂವರ ವಿರುದ್ಧ ಪ್ರಕರಣ: ಈ ದುರಂತಕ್ಕೆ ಸಂಬಂಧಿಸಿದಂತೆ ಪೊಲೀಸರು ಟಿವಿಕೆ ಮುಖ್ಯಸ್ಥ, ನಟ ವಿಜಯ್ ಅವರ ಮೂವರು ಆಪ್ತರ ವಿರುದ್ಧ ಪ್ರಕರಣಗಳನ್ನು ದಾಖಲಿಸಿದ್ದಾರೆ. ಉದ್ದೇಶಪೂರ್ವಕವಲ್ಲದ ನರಹತ್ಯೆ ಮತ್ತು ನಿರ್ಲಕ್ಷ್ಯದ ಆರೋಪಗಳನ್ನು ಈ ಮೂವರ ಮೇಲೆ ಹೊರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಜಯ್ ಅವರ ಆಪ್ತರಾದ ಮತ್ತು ಟಿವಿಕೆಯ ಹಿರಿಯ ಸದಸ್ಯರಾದ ಬುಸ್ಸಿ ಆನಂದ್, ಜಿ.ಆರ್.ನಿರ್ಮಲ್ ಕುಮಾರ್, ಪಿ.ವಿ.ಮಥಿಯಳಗನ್ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ. ತನಿಖೆಯಿಂದ ಎಲ್ಲವೂ ಬಹಿರಂಗವಾಗಲಿದೆ ಎಂದು ಅವರು ಹೇಳಿದ್ದಾರೆ.

ಇನ್ನಷ್ಟು ಸುದ್ದಿಗಳು 7

ಕಲಿಕಾ ಪರವಾನಗಿ ತಾತ್ಕಾಲಿಕವಾಗಿ ಬಂದ್ • ಕಾಯುತ್ತಿರುವ ಕಲಿಕೆದಾರರು

ಎಲ್‌ಎಲ್‌ಆರ್‌ಗೆ ಸ್ಮಾರ್ಟ್ ‘ಲಾಕ್’

• ಬಾಲಕೃಷ್ಣ ಪಿ.ಎಚ್‌.

ಬೆಂಗಳೂರು: ಕಲಿಕಾ ಪರವಾನಗಿ ಪರೀಕ್ಷೆಗಳಲ್ಲಿ ನಡೆಯುವ ವಂಚನೆಯನ್ನು ತಡೆಗಟ್ಟಲು ಕೇಂದ್ರ ಭೂ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ‘ಸ್ಮಾರ್ಟ್ ಲಾಕ್’ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಿದೆ. ಅದು ಪ್ರಾಯೋಗಿಕ ಹಂತದಲ್ಲಿ ಇರುವುದರಿಂದ ರಾಜ್ಯದಲ್ಲಿ ಕಲಿಕಾ ಪರವಾನಗಿ (ಎಲ್‌ಎಲ್‌ಆರ್) ಸಿಗುತ್ತಿಲ್ಲ.

ಕಲಿಕಾ ಪರವಾನಗಿ ಆನಂತರ ಚಾಲನಾ ಪರವಾನಗಿಯನ್ನು ಸರಿಯಾದ ಪರೀಕ್ಷೆ ನಡೆಸದೇ ನೀಡಲಾಗುತ್ತಿದೆ ಎಂಬ ದೂರುಗಳು ಬಂದಿದ್ದವು. ಅದಕ್ಕಾಗಿ ‘ಪರಿವಾಹನ್ ಸೇವಾ ಪೋರ್ಟಲ್’ಗೆ ಸಂಯೋಜಿಸಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ಹೊಂದಿರುವ ಸಾಫ್ಟ್‌ವೇರ್ ಅನ್ನು ಅಭಿವೃದ್ಧಿಪಡಿಸಲಾಗಿದೆ.

ಕಲಿಕೆ ಮತ್ತು ಚಾಲನಾ ಪರವಾನಗಿಗಳಿಗೆ ಸಂಬಂಧಿಸಿದ ಎಲ್ಲ ಪ್ರಕ್ರಿಯೆಗಳು ಈಗ ಆನ್‌ಲೈನ್ ಮೂಲಕವೇ ನಡೆಯುತ್ತಿರುವುದರಿಂದ ಮನೆಯಲ್ಲಿಯೇ ಕುಳಿತು ಅರ್ಜಿ ಸಲ್ಲಿಸುತ್ತಾರೆ. ಎಲ್ಲ ಮಾಹಿತಿಗಳನ್ನು ಅಲ್ಲೇ ನೀಡುತ್ತಾರೆ ಎಂದು ಸಾರಿಗೆ ಇಲಾಖೆ ಅಧಿಕಾರಿಗಳು ಹೇಳಿದರು.

7

ಸಿಬ್ಬಂದಿಗೆ ಮಾಹಿತಿ ಇಲ್ಲ

ಹೊಸತಾಗಿ ವಾಹನ ಚಾಲನೆ ಕಲಿಯುವವರು ಎಲ್‌ಎಲ್‌ಆರ್‌ಗಾಗಿ ಪ್ರಾದೇಶಿಕ ಸಾರಿಗೆ ಕಚೇರಿಗಳಿಗೆ ಅಲೆದಾಡುತ್ತಿದ್ದಾರೆ. ಕಚೇರಿಯಲ್ಲಿರುವ ಸಿಬ್ಬಂದಿಗೆ ಈ ಬಗ್ಗೆ ಅಧಿಕಾರಿಗಳು ಸರಿಯಾಗಿ ಮಾಹಿತಿ ನೀಡದೇ ಇರುವುದರಿಂದ ‘ಸರ್ವರ್ ಬ್ಯುಸಿ’ ಎಂದು ಸಾರ್ವಜನಿಕರನ್ನು ಸಿಬ್ಬಂದಿ ವಾಪಸ್ ಕಳುಹಿಸುತ್ತಿದ್ದಾರೆ.

‘ನಾನು ನಾಲ್ಕು ವಾರಗಳಿಂದ ಎಲ್‌ಎಲ್‌ಆರ್‌ಗಾಗಿ ಅರ್ಜಿ ಸಲ್ಲಿಸಲು ಪ್ರಯತ್ನಿಸುತ್ತಿದ್ದೇನೆ. ಆನ್‌ಲೈನ್‌ನಲ್ಲೂ ಆಗುತ್ತಿಲ್ಲ. ಕಚೇರಿಗೆ ಹೋದರೆ ಸರ್ವರ್ ಬ್ಯುಸಿ ಇದೆ ಎಂದು ಹೇಳುತ್ತಿದ್ದರು. ಸರ್ವರ್ ಸಮಸ್ಯೆಯಲ್ಲ. ಹೊಸ ಸಾಫ್ಟ್‌ವೇರ್ ಅಪ್‌ಡೇಟ್ ಮಾಡುತ್ತಿದ್ದಾರೆ ಎಂಬುದು ಇವತ್ತೇ ಗೊತ್ತಾಗಿರೋದು. ಮೊದಲೇ ಗೊತ್ತಾಗಿದ್ದರೆ ಸುಮ್ಮನೆ ಅಲೆಯುವುದಾದರೂ ತಪ್ಪುತ್ತಿತ್ತು’ ಎಂದು ಸುಬ್ರಹ್ಮಣ್ಯನಗರದ ವಿವೇಕಾನಂದ ದೂರಿದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗುವ ಸಾಧ್ಯತೆ

ವಿವಿಧೆಡೆ ನಾಳೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಹೆಬ್ಬೂರು ಎಐಯುಎಸ್ಎಸ್–66 ಕೆ.ವಿ. ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಕೈಗೊಳ್ಳುವುದರಿಂದ ಸೆಪ್ಟೆಂಬರ್ 30ರಂದು (ಮಂಗಳವಾರ) ಬೆಳಿಗ್ಗೆ 11ರಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಎಲ್ಲೆಲ್ಲಿ?: ಹೆಬ್ಬೂರು ಬಂಡೆ, ಸಮೃದ್ಧಿ ಎನ್‌ಕ್ಲೇವ್, ಗ್ರೇಸ್ ಗಾರ್ಡನ್, ಕ್ರಿಸ್ತು ಜಯಂತಿ ಕಾಲೇಜು, ಕೆ. ನಾರಾಯಣಪುರ, ಬಿಳಿಶಿವಾಲೆ, ಆಶಾ ಟೌನ್‌ಶಿಪ್, ಮಾರುತಿ ಟೌನ್‌ಶಿಪ್, ನಾಗರಗಿರಿ ಟೌನ್‌ಶಿಪ್, ಬಿಡಿಎಸ್ ಗಾರ್ಡನ್, ಕೊತ್ತನೂರು, ಪಟೇಲ್ ರಾಮಯ್ಯ ಲೇಔಟ್, ಸಿಎಸ್‌ಐ ಗೇಟ್, ಬೈರತಿ ಕ್ರಾಸ್, ಬೈರತಿ ಗ್ರಾಮ, ಗದ್ದಲಹಳ್ಳಿ, ಬ್ರೈಂಗ್ ಗಾರ್ಡನ್, ಮಂತ್ರಿ ಅಪಾರ್ಟ್‌ಮೆಂಟ್, ಹಿರೇಮಠ ಲೇಔಟ್, ಟ್ರಿನಿಟಿ ಫಾರ್ಚೂನ್, ಮೈಕಲ್ ಸ್ಕೂಲ್, ಬಿಎಚ್‌ಕೆ ಇಂಡಸ್ಟ್ರೀಸ್, ಜಾನಕಿರಾಮ್ ಲೇಔಟ್, ವಡ್ಡರಪಾಳ್ಯ, ದೊಡ್ಡಗುಬ್ಬಿ ಕ್ರಾಸ್, ಕುವೆಂಪು ಲೇಔಟ್, ಸಂಗಮ್ ಎನ್‌ಕ್ಲೇವ್, ಬೈರತಿ ಬಂಡೆ, ನಕ್ಷತ್ರ ಲೇಔಟ್, ತಿಮ್ಮೇಗೌಡ ಲೇಔಟ್, ಪ್ರಕಾಶ್ ಗಾರ್ಡನ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಸರ್ಕಾರಿ ಆಸ್ಪತ್ರೆ ಉಪಕರಣ ಖಾಸಗಿಗೆ

ಘೋಷಾ ಆಸ್ಪತ್ರೆ: ವೈದ್ಯಕೀಯ ಶಿಕ್ಷಣ ಇಲಾಖೆ ನಡೆಸಿದ ತನಿಖೆಯಿಂದ ದೃಢ

• ವರುಣ ಹೆಗಡೆ

ಅಂಕಿ ಅಂಶಗಳು

120 ಘೋಷಾ ಆಸ್ಪತ್ರೆ ಹೊಂದಿರುವ ಹಾಸಿಗೆಗಳು

150-200 ಹೊರರೋಗಿ ವಿಭಾಗಕ್ಕೆ ಪ್ರತಿನಿತ್ಯ ಭೇಟಿ ನೀಡುವವರು

ಬೆಂಗಳೂರು: ಇಲ್ಲಿನ ಸರ್ಕಾರಿ ಎಚ್.ಎಸ್.ಐ.ಎಸ್. ಘೋಷಾ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗದ ಮುಖ್ಯಸ್ಥರ ಜತೆಗೆ ಶುಶ್ರೂಷಾಧಿಕಾರಿಯೊಬ್ಬರು ಶಾಮೀಲಾಗಿ ವೈದ್ಯಕೀಯ ಉಪಕರಣಗಳನ್ನು ಖಾಸಗಿ ಆಸ್ಪತ್ರೆಗಳಿಗೆ ಸರಬರಾಜು ಮಾಡುವುದು, ಅಲ್ಲಿನ ರೋಗಿಗಳಿಂದ ಯುಪಿಐ ಆಧಾರಿತ ಆ್ಯಪ್‌ಗಳ ಮೂಲಕ ಹಣ ವರ್ಗಾವಣೆ ನಡೆಸುತ್ತಿರುವುದು ವೈದ್ಯಕೀಯ ಶಿಕ್ಷಣ ಇಲಾಖೆ ನಡೆಸಿದ ತನಿಖೆಯಿಂದ ದೃಢಪಟ್ಟಿದೆ.

ಈ ಆಸ್ಪತ್ರೆಯು ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯಡಿ ಕಾರ್ಯನಿರ್ವಹಿಸುತ್ತಿದೆ. ಇದು ತಾಯಿ-ಮಕ್ಕಳ ಆಸ್ಪತ್ರೆಯಾಗಿದ್ದು, ಪ್ರತಿನಿತ್ಯ ನೂರಾರು ತಾಯಂದಿರು ಭೇಟಿ ನೀಡುತ್ತಾರೆ. ಪ್ರತಿ ವರ್ಷ ಸಾವಿರಾರು ಸಂಖ್ಯೆಯಲ್ಲಿ ಹೆರಿಗೆಗಳನ್ನು ಇಲ್ಲಿ ನಡೆಸಲಾಗುತ್ತಿದೆ. ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗದ ಮುಖ್ಯಸ್ಥೆ ಡಾ. ದೀಪಿಕಾ ಅವರ ವಿರುದ್ಧ ಆಸ್ಪತ್ರೆ ಸಿಬ್ಬಂದಿ ಈ ಹಿಂದೆ ಇಲಾಖೆಗೆ ಲಿಖಿತ ದೂರು ನೀಡಿದ್ದರು. ಇಲಾಖೆ ರಚಿಸಿದ್ದ ಸಮಿತಿ ಕೈಗೊಂಡ ತನಿಖೆಯಲ್ಲಿ ಹಣಕಾಸಿನ ಅವ್ಯವಹಾರ ಸೇರಿ ವಿವಿಧ ಆರೋಪಗಳು ದೃಢಪಟ್ಟಿದ್ದು, ಇಲಾಖೆಯ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮೊಹಸಿನ್ ಅವರು ಇದೇ 26ರಂದು ಡಾ. ದೀಪಿಕಾ ಅವರನ್ನು ಅಮಾನತು ಮಾಡಿದ್ದಾರೆ.

ತಾಯಂದಿರ ಆರೋಗ್ಯಕ್ಕೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಅನುಷ್ಠಾನ ಮಾಡದಿರುವುದು, ಸಿಸೇರಿಯನ್ ಬಗ್ಗೆ 'ಆಡಿಟ್' ನಡೆಸದಿರುವುದು, ಅಕ್ರಮವಾಗಿ ಗರ್ಭಪಾತ ನಡೆಸುವಿಕೆ, ಗರ್ಭಾಶಯದ ಅನಗತ್ಯ ಶಸ್ತ್ರಚಿಕಿತ್ಸೆ, ವೈದ್ಯಕೀಯ ನಿರ್ಲಕ್ಷ್ಯ, ಭ್ರಷ್ಟಾಚಾರ, ಸಹ ಪ್ರಸೂತಿ ತಜ್ಞರು ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಕಿರುಕುಳ ಆಸ್ಪತ್ರೆಯ ಸಿಬ್ಬಂದಿ ದೂರು ನೀಡಿದ್ದರು. ಈ ದೂರಿನ ಆಧಾರದ ಮೇಲೆ ಆಗಸ್ಟ್ 8ರಂದು ತನಿಖಾ ಸಮಿತಿ ರಚಿಸಲಾಗಿತ್ತು. ಈ ಸಮಿತಿಯು ಇದೇ 18ರಂದು ವರದಿ ನೀಡಿದೆ. ಈ ವರದಿ ಆಧಾರದ ಮೇಲೆ ಇಲಾಖೆ ಕ್ರಮ ಕೈಗೊಂಡಿದೆ.

ಶುಶ್ರೂಷಾಧಿಕಾರಿ ಭಾಗಿ: ಡಾ.ದೀಪಿಕಾ ಅವರೊಂದಿಗೆ ಆಸ್ಪತ್ರೆಯ ಶುಶ್ರೂಷಾಧಿಕಾರಿ ಸುಮಲತಾ ಅವರು ಶಾಮೀಲಾಗಿರುವ ಬಗ್ಗೆ ತನಿಖಾ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಅವರು ಗುತ್ತಿಗೆ ಆಧಾರದಲ್ಲಿ ನೇಮಕ ಗೊಂಡಿದ್ದಾರೆ. ರೋಗಿಗಳಿಂದ ಹಣ ಪಡೆದು, ಫೋನ್ ಪೇ, ಗೂಗಲ್ ಪೇ ಮೂಲಕ ದೀಪಿಕಾ ಅವರಿಗೆ ಹಣ ವರ್ಗಾವಣೆ ನಡೆಸಿದ್ದಾರೆ ಎನ್ನುವುದು ದೃಢಪಟ್ಟಿದೆ ಎಂದು ತನಿಖಾ ಸಮಿತಿಯ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಅನನುಭವಿಗಳು, ಹೆರಿಗೆ ಪ್ರಕರಣಗಳನ್ನು ನಿರ್ವಹಣೆ ಮಾಡಿರುವ ಬಗ್ಗೆಯೂ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಗುತ್ತಿಗೆ ಆಧಾರದಲ್ಲಿ ನೇಮಕಗೊಂಡಿದ್ದ ಆಸ್ಪತ್ರೆಯ ಹಿರಿಯ ಸ್ಥಾನಿಕ ವೈದ್ಯಾಧಿಕಾರಿ ಡಾ.ಪ್ರಿಯಾಂಕಾ ಅವರು, ಈ ಹಿಂದೆ ಖಾಸಗಿ ವೈದ್ಯಕೀಯ ಕಾಲೇಜಿನಲ್ಲಿ ಡಾ. ದೀಪಿಕಾ ಅವರ ವಿದ್ಯಾರ್ಥಿಯಾಗಿದ್ದರು. ಅವರು ಪ್ರಸೂತಿ ಚಿಕಿತ್ಸೆಯ ಮಾರ್ಗಸೂಚಿ ಮತ್ತು ಇತರೆ ಶಿಷ್ಟಾಚಾರಗಳ ಬಗ್ಗೆ ಪರಿಜ್ಞಾನವಿಲ್ಲದವರಾಗಿರುತ್ತಾರೆ ಎಂದು ತಿಳಿಸಲಾಗಿದೆ.

ಬಾಣಂತಿ ಸಾವಿಗೆ ಕಾರಣ?



ಗುತ್ತಿಗೆ ಆಧಾರದಲ್ಲಿ ನೇಮಕಗೊಂಡಿರುವ ಸ್ಥಾನಿಕ ವೈದ್ಯಾಧಿಕಾರಿ ಡಾ.ರಮ್ಯಾ ಅವರು ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗದಲ್ಲಿ ಅಪ್ಪಾಗಿ ಅನುಭವ ಹೊಂದಿಲ್ಲವೆಂದು ವರದಿಯಲ್ಲಿ ತಿಳಿಸಲಾಗಿದೆ. ಪ್ರಸೂತಿಗೆ ಸಂಬಂಧಿಸಿದ ಮಾರ್ಗಸೂಚಿ ಪಾಲಿಸದಿರುವುದು ಕಂಡುಬಂದಿದ್ದು, ಅವರು 29 ವರ್ಷದ ರೋಗಿಗೆ ಗರ್ಭಕೋಶ ತೆಗೆದು ಹಾಕಿರುವ ಪ್ರಕರಣದಲ್ಲಿ ಭಾಗಿಯಾಗಿರುತ್ತಾರೆ. ಆಗಸ್ಟ್ 20ರಂದು ವರದಿಯಾದ ಬಾಣಂತಿಯ ಸಾವಿಗೆ ಕಾರಣವಾಗಿರುತ್ತಾರೆ ಎಂದು ವರದಿಯಲ್ಲಿ ಹೇಳಲಾಗಿದೆ.

3ಂಗಳಿಗೆ 400 ಹೆರಿಗೆ

ಶಿವಾಜಿನಗರದಲ್ಲಿರುವ ಈ ಆಸ್ಪತ್ರೆಯಲ್ಲಿ ಪ್ರತಿ ತಿಂಗಳು 350ರಿಂದ 400 ಹೆರಿಗೆಗಳು ನಡೆಯುತ್ತವೆ. 'ಇಲ್ಲಿಗೆ ಬರುವವರು ಬಹುತೇಕರು ಬಡ-ಮಧ್ಯಮ ವರ್ಗದವರಾಗಿದ್ದಾರೆ. ಆಸ್ಪತ್ರೆಯು ಒಟ್ಟು ಹಾಸಿಗೆಗಳಲ್ಲಿ 80 ಹಾಸಿಗೆಗಳನ್ನು ತಾಯಂದಿರ ಚಿಕಿತ್ಸೆಗೆ ಮೀಸಲಿಡಲಾಗಿದೆ.



ಶಿವಾಜಿನಗರದಲ್ಲಿರುವ ಎಚ್.ಎಸ್.ಐ.ಎಸ್ ಘೋಷಾ ಸರ್ಕಾರಿ ಆಸ್ಪತ್ರೆ



ನವರಾತ್ರಿ ವೈಭವದಲ್ಲಿ ವಿವಿಧ ಕ್ಷೇತ್ರಗಳ ಸಾಧಕಿಯರನ್ನು ಸನ್ಮಾನಿಸಲಾಯಿತು

'ಪಾಲಿಕೆ ಚುನಾವಣೆ: ಮಹಿಳೆಯರಿಗೆ ಪ್ರಾತಿನಿಧ್ಯ'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: 'ನಗರ ಪಾಲಿಕೆಗಳ ಚುನಾವಣೆಯಲ್ಲಿ ಶೇಕಡ 50ರಷ್ಟು ಮಹಿಳೆಯರನ್ನು ಕಾಂಗ್ರೆಸ್ ಪಕ್ಷ ಕಣಕ್ಕಿಳಿಸಲಿದೆ' ಎಂದು ಮಾಜಿ ಸಂಸದ ಡಿ.ಕೆ.ಸುರೇಶ್ ತಿಳಿಸಿದರು.

ನಾಗರಬಾವಿಯಲ್ಲಿ ಹಮ್ಮಿಕೊಂಡಿದ್ದ ನವರಾತ್ರಿ ವೈಭವ 2025 ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಹೆಣ್ಣು ಮಕ್ಕಳು ರಾಜಕೀಯ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಉತ್ತಮ ಸೇವೆ ಮಾಡಲು ಮುಂದಾಗಬೇಕು ಎನ್ನುವ ಕಾರಣದಿಂದ ಅವಕಾಶವನ್ನು ನೀಡಲಾಗುವುದು' ಎಂದು ಹೇಳಿದರು.

ಕಾರ್ಯಕ್ರಮ ಆಯೋಜಕರಾದ ಎಚ್.ಕುಸುಮಾ ಮಾತನಾಡಿ, 'ಎಷ್ಟೇ ನೋವುಗಳಿದ್ದರೂ ಸಂಸಾರವನ್ನು ತೂಗಿಸಿಕೊಂಡು ಹೋಗುತ್ತಿರುವ ತಾಯಂದಿರ ಪಾತ್ರ ದೊಡ್ಡದು. ನಾನಾ ಕ್ಷೇತ್ರದ ನೂರಾರು ತಾಯಂದಿರನ್ನು ಒಂದೆಡೆ ಸೇರಿಸಿ ಅವರನ್ನು ಸತ್ಕರಿಸುವ ಮೂಲಕ ನಾಡ ದೇವತೆ ಹೆಸರಿನಲ್ಲಿ ನವರಾತ್ರಿ ವೈಭವ ಆಚರಿಸಲಾಗುತ್ತಿದೆ' ಎಂದರು.

ವಿಜ್ಞಾನ, ವೈದ್ಯಕೀಯ, ಶಿಕ್ಷಣ, ಸಾಮಾಜಿಕ, ಎಂಜಿನಿಯರಿಂಗ್, ಕಾರ್ಯಾಂಗ, ನ್ಯಾಯಾಂಗ, ಸಂಗೀತ, ಸಾಹಿತ್ಯ, ಕಲೆ, ಹೋಟೆಲ್ ಉದ್ಯಮ, ಪರಿಸರ, ನೈರ್ಮಲ್ಯ ಸೇರಿ ನಾನಾ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವ 100ಕ್ಕೂ ಹೆಚ್ಚು ಸಾಧಕಿಯರನ್ನು ಸನ್ಮಾನಿಸಲಾಯಿತು.

ಎಚ್.ಮೋನಿಕಾ, ಬೈರಮ್ಮ ಅವರು 5000ಕ್ಕೂ ಹೆಚ್ಚು ಹೆಣ್ಣು ಮಕ್ಕಳಿಗೆ ಬಾಗಿನ ನೀಡಿದರು. ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹನುಮಂತರಾಯಪ್ಪ ಹಾಜರಿದ್ದರು.

ಸುದ್ದಿ 2 ನಿಮಿಷ

ಲೋಕ ಕಲ್ಯಾಣಕ್ಕೆ ಶರಣ ಸಂಸ್ಕೃತಿ: ಸೋಮಶೇಖರ

ಬೆಂಗಳೂರು: 'ಶರಣ ಸಂಸ್ಕೃತಿಯು ಸಮಾಜದಲ್ಲಿನ ಮೌಢ್ಯ, ಅಂಧತ್ವ, ಅಸಮಾನತೆ, ಅಸ್ಪೃಶ್ಯತೆ ಹೋಗಲಾಡಿಸುವ ಜತೆಗೆ ಲೋಕ ಕಲ್ಯಾಣಕ್ಕಾಗಿ 12ನೇ ಶತಮಾನದಲ್ಲಿ ಸ್ಥಾಪಿತಗೊಂಡಿತು. ಈ ಸಂಸ್ಕೃತಿ ಸಮಾಜದಲ್ಲಿ ಸಾಮಾಜಿಕ ಕ್ರಾಂತಿಯನ್ನುಂಟು ಮಾಡಿದೆ' ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ. ಸೋಮಶೇಖರ ಹೇಳಿದರು.

ಗೀತ ಸಂಗೀತ ಅಕಾಡೆಮಿ ಹಾಗೂ ಕಲ್ಪತರು ಸಾಹಿತ್ಯ ಕಲಾ ಟ್ರಸ್ಟ್ ಜಂಟಿಯಾಗಿ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಶರಣೋತ್ಸವ ಸಮಾರಂಭವನ್ನು ಅವರು ಉದ್ಘಾಟಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮುಖ್ಯಮಂತ್ರಿ ಅವರ ವೈದ್ಯಕೀಯ ಸಲಹೆಗಾರ ಡಾ.ಎಚ್. ರವಿ ಕುಮಾರ್, 'ಕಾಯಕ, ದಾಸೋಹ, ಶಿಕ್ಷಣ, ಮಹಿಳಾ ಸಮಾನತೆಯಂತಹ ಹಲವು ಕ್ರಾಂತಿಕಾರಿ ಆಂದೋಲನ ಹಮ್ಮಿಕೊಂಡು, ದಯೆಯೇ ಧರ್ಮದ ಮೂಲ ಎಂದು ಸಾರಿದ ಶ್ರೇಷ್ಠ ಸಂಸ್ಕೃತಿ ನಮ್ಮ ಶರಣ ಸಂಸ್ಕೃತಿ' ಎಂದು ಹೇಳಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ ಮಹದೇವ ಬಸರಕೋಡ ಅವರು ಶರಣ ಸಾಹಿತ್ಯ ಕುರಿತು ಉಪನ್ಯಾಸ ನೀಡಿದರು. ಇದೇ ವೇಳೆ ಪ್ರವಚನಕಾರ್ತಿ ಹಸೀನಾ ಖಾದ್ರಿ, ಮೇಘಮೈತ್ರಿ ಸಂಸ್ಥೆಯ ರಮೇಶ ಕಮತಗಿ, ಆರಕ್ಷಕ ಬರಹಗಾರ ಮೌಲಾಲಿ ಆಲಗೂರ, ರಂಗಭೂಮಿ ನಿರ್ದೇಶಕ ಶಂಕರ್ ಮಟ್ಟಿ ಅವರಿಗೆ 'ಬಸವ ಕಾಯಕ ಸಿರಿ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಎಂ.ವಿ. ಷಡಕ್ಷರಿ ಅವರ ರಚನೆಯಲ್ಲಿ ಮೂಡಿಬಂದ 'ಡಾ.ಶಿವಕುಮಾರ ಸ್ವಾಮಿಗಳ ಆದಿ ಅಂತ್ಯವನರಿತ ಸಂತ ಸಿದ್ದಗಂಗಾ ಶ್ರೀ' ಭಕ್ತಿ ಗೀತೆಗಳ ಧ್ವನಿ ಸುರಳಿ ಬಿಡುಗಡೆ ಮಾಡಲಾಯಿತು.

ಹುಟ್ಟೂರ ಕೆರೆಯಲ್ಲಿ ಭೈರಪ್ಪ ಚಿತಾಭಸ್ಮ ವಿಸರ್ಜನೆ



ನುಗ್ಗೇಹಳ್ಳಿ (ಹಾಸನ ಜಿಲ್ಲೆ): ಸಾಹಿತಿ ಎಸ್.ಎಲ್. ಭೈರಪ್ಪ ಅವರ ಚಿತಾಭಸ್ಮವನ್ನು, ಅವರ ಆಸೆಯಂತೆ ಹುಟ್ಟೂರಿನ ಸಂತೇಶಿವರ ಕೆರೆಯಲ್ಲಿ ಪುತ್ರರಾದ ರವಿಶಂಕರ್ ಹಾಗೂ ಉದಯಶಂಕರ್ ಭಾನುವಾರ ವಿಸರ್ಜಿಸಿದರು.

ಶನಿವಾರ ಕಾವೇರಿ ನದಿಯಲ್ಲಿ ಸಂಪ್ರದಾಯದಂತೆ ಅಸ್ಥಿ ವಿಸರ್ಜನೆ ಮಾಡಿದ್ದ ಪುತ್ರರು, ಭೈರಪ್ಪನವರ ಕನಸಿನ ಯೋಜನೆಯಿಂದ ತುಂಬಿರುವ ಗ್ರಾಮದ ಕೆರೆಯಲ್ಲಿ ಗ್ರಾಮಸ್ಥರೊಂದಿಗೆ ಸೇರಿ ತೆಪ್ಪದಲ್ಲಿ ತೆರಳಿ ಅಸ್ಥಿ ವಿಸರ್ಜನೆ ನೆರವೇರಿಸಿದರು.

ಪುರೋಹಿತರಾದ ಪ್ರಭಾಕರ್ ಜೋಯಿಸ್, ಅನಂತರಾಮ ಜೋಯಿಸ್, ವೇಣುಗೋಪಾಲ್, ಎಸ್.ಡಿ. ನಾಗರಾಜ್ ರಾವ್ ಬ್ರಾಹ್ಮಣ ಸಂಪ್ರದಾಯದಂತೆ ಚಿತಾಭಸ್ಮಕ್ಕೆ ಪೂಜೆ ಸಲ್ಲಿಸಿದರು. ನಂತರ ಮಂತ್ರ, ವೇದ ಘೋಷ, ಶಾಂತಿ ಮಂತ್ರಗಳನ್ನು ಪಠಿಸಲಾಯಿತು.

ಚಿತಾಭಸ್ಮ ತಂದ ಉದಯಶಂಕರ್ ಅವರನ್ನು ಗ್ರಾಮಸ್ಥರು, ಪ್ರವೇಶದ್ವಾರದಲ್ಲೇ ಬರಮಾಡಿಕೊಂಡರು.

ಐದೇ ದಿನದಲ್ಲಿ ಸಮೀಕ್ಷೆ ಮುಗಿಸಿದ ಶಿಕ್ಷಕ

ಪ್ರಜಾವಾಣಿ ವಾರ್ತೆ

ಹೊಳಲ್ಕೆರೆ (ಚಿತ್ರದುರ್ಗ): ತಾಲ್ಲೂಕಿನ ತಿರುಮಲಾಪುರ ಶಾಲೆಯ ಶಿಕ್ಷಕ ಎನ್.ಸಿ.ಬಸವಕುಮಾರ್ ಐದೇ ದಿನದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯ ಮುಗಿಸಿದ್ದು, ಇದನ್ನು ಪೂರ್ಣಗೊಳಿಸಿದ ತಾಲ್ಲೂಕಿನ ಮೊದಲ ಸಮೀಕ್ಷಕ ಎನಿಸಿದ್ದಾರೆ.

ತಹಶೀಲ್ದಾರ್ ವಿಜಯ ಕುಮಾರ್ ಅವರು ಇವರನ್ನು ಭಾನುವಾರ ಸನ್ಮಾನಿಸಿದರು.

'ಬದ್ಧತೆ ಇದ್ದರೆ ಎಂತಹ ಕೆಲಸವನ್ನಾದರೂ ಸಮರ್ಥವಾಗಿ ನಿಭಾಯಿಸಬಹುದು. ಬಸವ ಕುಮಾರ್ ಕರ್ತವ್ಯ ಪ್ರಜ್ಞೆ ಮಾದರಿಯಾಗಲಿ' ಎಂದು ವಿಜಯಕುಮಾರ್ ಹೇಳಿದರು.

'ಮೊದಲ ಎರಡು ದಿನ ಆ್ಯಪ್ ಸರಿಯಾಗಿ ಕೆಲಸ ಮಾಡುತ್ತಿರಲಿಲ್ಲ. ನಂತರದ 5 ದಿನಗಳಲ್ಲಿ ನನಗೆ ನಿಗದಿ ಮಾಡಿದ್ದ 83 ಕುಟುಂಬಗಳ ಸಮೀಕ್ಷಾ ಕಾರ್ಯ ಮುಗಿಸಿದ್ದೇನೆ. ಬೆಳಿಗ್ಗೆ 8ರಿಂದಲೇ ಆರಂಭಿಸಿ ರಾತ್ರಿಯವರೆಗೆ ಕೆಲಸ ಮಾಡಿದ್ದರಿಂದ ಇದು ಸಾಧ್ಯವಾಯಿತು' ಎಂದು ಬಸವಕುಮಾರ್ ತಿಳಿಸಿದರು.

ಬಿಸಿಎಂ ಕಲ್ಯಾಣಾಧಿಕಾರಿ ಪ್ರದೀಪ್ ಕುಮಾರ್, ಬಿಆರ್‌ಸಿ ಸುರೇಂದ್ರ ನಾಥ್, ಪದವೀಧರ ಶಿಕ್ಷಕರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಎ.ಜಯಪ್ಪ, ಚಿತ್ರಹಳ್ಳಿ ದೇವರಾಜು, ಸಮೀಕ್ಷಾ ಮೇಲ್ವಿಚಾರಕಿ ರೂಪಾ, ಪುನಿತ್ ಕುಮಾರ್, ರಾಜಪ್ಪ ಇದ್ದರು.



ಹೊಳಲ್ಕೆರೆಯಲ್ಲಿ ಶಿಕ್ಷಕ ಎನ್.ಸಿ.ಬಸವಕುಮಾರ್ ಅವರನ್ನು ತಹಶೀಲ್ದಾರ್ ವಿಜಯಕುಮಾರ್ ಸನ್ಮಾನಿಸಿದರು

'ನಮ್ಮ ಕಾರ್ಯಾಲಯ ತೆರೆದ ಬಾಗಿಲು'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಬಿ.ಎಲ್. ಸಂತೋಷ್ ಹೇಳಿಕೆ
- 'ಮಾಸದ ಮಾಧುರ್ಯ' ಕಾರ್ಯಕ್ರಮ ಆರಂಭ

ಬೆಂಗಳೂರು: ಜಗನ್ನಾಥ ಭವನ ಸಾರ್ವಜನಿಕ ಚಟುವಟಿಕೆಗಳಿಗೆ ಬಳಕೆ ಆಗಬೇಕೆಂಬ ಉದ್ದೇಶದಿಂದ 'ಮಾಸದ ಮಾಧುರ್ಯ' ಕಾರ್ಯಕ್ರಮ ಆರಂಭಿಸಲಾಗಿದೆ ಎಂದು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ತಿಳಿಸಿದ್ದಾರೆ.

ತೆಲುಗು ವಿಜ್ಞಾನ ಸಮಿತಿಯ ಶ್ರೀಕೃಷ್ಣದೇವರಾಯ ಸಭಾಂಗಣದಲ್ಲಿ ಭಾನುವಾರ ಸಂಜೆ ನಡೆದ ಜಗನ್ನಾಥ ಬಳಗ ಮತ್ತು ಬಿಜೆಪಿ ಸಾಂಸ್ಕೃತಿಕ ಪ್ರಕೋಷ್ಠದ 'ಮಾಸದ ಮಾಧುರ್ಯ 100' ಸಂಭ್ರಮಾಚರಣೆ ಸಮಾರೋಪ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಭವನ ಇರುವ ಜಾಗ ದೈವಿಕ ಶಕ್ತಿಗಳಿರುವ ಪ್ರದೇಶ. ಉತ್ತಮ ಫುಡ್ ಕಾರ್ನರ್‌ಗಳೂ ಇಲ್ಲಿವೆ. ನಮ್ಮ ಸುತ್ತಲಿನ ಜನರು ನಮ್ಮ ಜೊತೆಗೂಡಿಸಲು ಇದು ಪೂರಕವಾಗಿದೆ. ಈ ಕಾರ್ಯಕ್ರಮ ಸದಭಿರುಚಿಯನ್ನು ಹುಟ್ಟು ಹಾಕಿದೆ' ಎಂದು ಸಂತೋಷ್ ಹೇಳಿದರು.

'ಜನ ಸಾಮಾನ್ಯರು ಪೊಲೀಸರನ್ನು ನಾವು ದೂರ ಇಟ್ಟಿಲ್ಲ. ಜಾತ್ರೆಗಳು ನಡೆದಾಗ ನಮ್ಮ ಕಾರ್ಯಾಲಯ ತೆರೆದ ಬಾಗಿಲು. ಬೇರೆ ರಾಜ್ಯದ ಕಾರ್ಯಾಲಯಗಳಿಗೆ ಹೋಲಿಸಿದರೆ ಜಗನ್ನಾಥ ಭವನ ಸಣ್ಣದಾದರೂ ಅಲ್ಲಿನ ಕಲೆ, ಸಾಂಸ್ಕೃತಿಕ ಚಟುವಟಿಕೆಗಳ ಕಾರಣಕ್ಕೆ ಆತ್ಮೀಯ ವಾತಾವರಣ ಇದೆ' ಎಂದು ಹೇಳಿದರು.

ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್, ಶಾಸಕ ಡಾ. ಸಿ.ಎನ್. ಅಶ್ವಥನಾರಾಯಣ, ವಿಧಾನಪರಿಷತ್ ಮುಖ್ಯ ಸಚೇತಕ ಎನ್. ರವಿಕುಮಾರ್, ರಾಜ್ಯ ಉಪಾಧ್ಯಕ್ಷೆ ಮಾಳವಿಕಾ ಅವಿನಾಶ್ ಪಾಲ್ಗೊಂಡಿದ್ದರು.

'ಸಾಹಿತ್ಯ ಗೊತ್ತಿಲ್ಲದಿದ್ದರೆ ಪ್ರಾಣಿಗೆ ಸಮಾನ'

'ರಾಜಕೀಯ ಜಂಜಾಟದಿಂದ ಹೊರಬರಲು ಕಲೆ, ಸಂಸ್ಕೃತಿ, ಸಂಗೀತದ ಅಭಿರುಚಿ ಬೆಳೆಸಿಕೊಂಡರೆ ನಾವು ಉತ್ಸಾಹ, ಲವಲವಿಕೆಯಿಂದ ಕೆಲಸ ಮಾಡಲು ಸಾಧ್ಯ. ಸಾಹಿತ್ಯ, ಸಂಗೀತ, ಕಲೆ ಗೊತ್ತಿಲ್ಲದೇ ಇದ್ದರೆ ಪ್ರಾಣಿಗೆ ಸಮಾನ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಜಗನ್ನಾಥ ಬಳಗ ಮತ್ತು ಸಾಂಸ್ಕೃತಿಕ ಪ್ರಕೋಷ್ಠದ ವತಿಯಿಂದ ಹಮ್ಮಿಕೊಂಡಿದ್ದ ಮಾಸದ ಮಾಧುರ್ಯ 100 ಸಂಭ್ರಮ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಮಾಸದ ಮಾಧುರ್ಯದ ಮೂಲಕ ಜಗನ್ನಾಥ ಭವನವು ಕೇವಲ ರಾಜಕೀಯ ಚಟುವಟಿಕೆಗಳಿಗೆ ಸೀಮಿತವಾಗದೇ ಕಲೆ, ಸಂಸ್ಕೃತಿ, ಪರಂಪರೆ ಉಳಿಸಿ ಬೆಳೆಸುವ ಕೇಂದ್ರವಾಗಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ 100ನೇ ವರ್ಷದ ಸಂಭ್ರಮಾಚರಣೆ ಸಂದರ್ಭದಲ್ಲಿ 'ಮಾಸದ ಮಾಧುರ್ಯ' 100ರ ಸಂಭ್ರಮ ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ನಾನು ರಾಜ್ಯ ಘಟಕದ ಅಧ್ಯಕ್ಷನಾಗಿ ಜವಾಬ್ದಾರಿ ಹೊತ್ತಿರುವುದು ನನ್ನ ಭಾಗ್ಯ ಎಂದು ಭಾವಿಸುತ್ತೇನೆ' ಎಂದರು.



ಉಲ್ಲಾಸ್ ಸ್ಕೂಲ್ ಆಫ್ ಸಿನಿಮಾಸ್ ಹಮ್ಮಿಕೊಂಡಿದ್ದ ಬೆಂಗಳೂರು ಅಂತರರಾಷ್ಟ್ರೀಯ ಮಕ್ಕಳ ಚಲನಚಿತ್ರೋತ್ಸವದಲ್ಲಿ 'ಜೀನಿಯಸ್ ಮುತ್ತ' ಚಿತ್ರಕ್ಕೆ ನಾಗಿಣಿ ಭರಣ ಅವರಿಗೆ ಉತ್ತಮ ನಿರ್ದೇಶನ ಪ್ರಶಸ್ತಿ ಪ್ರದಾನ ಮಾಡಲಾಯಿತು. ವಾಸುಕಿ ಆಚಾರ್ಯ ಹಾಗೂ ಶುಭಾ ವಾಸುಕಿ ದಂಪತಿ ಪುತ್ರ ಅಂತರಿಕ್ಷನ ಸ್ಮರಣಾರ್ಥ ಈ ಪ್ರಶಸ್ತಿ ಸ್ಥಾಪಿಸಿದ್ದಾರೆ



ಮಿಲ್ಲರ್ ಮ್ಯೂಸಿಯಂ ಆಫ್ ಅನಾಮಾರ್ಫಿಕ್ ಆರ್ಟ್ ಗ್ಯಾಲರಿಯಲ್ಲಿ ಕಲೆಗಳನ್ನು ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವ್ ಸಿಂಘ್ ವೀಕ್ಷಿಸಿದರು

ಅನಾಮಾರ್ಫಿಕ್ ಆರ್ಟ್ ಮ್ಯೂಸಿಯಂ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಿಲ್ಲರ್ ಮ್ಯೂಸಿಯಂ ಆಫ್ ಅನಾಮಾರ್ಫಿಕ್ ಆರ್ಟ್ ಭಾನುವಾರ ಕುಕ್ ಟೌನ್‌ನಲ್ಲಿ ಆರಂಭವಾಯಿತು.

ಮಿಲ್ಲರ್ ಮ್ಯೂಸಿಯಂ ಆಫ್ ಅನಾಮಾರ್ಫಿಕ್ ಆರ್ಟ್‌ನ ಸಂಸ್ಥಾಪಕಿ ಮತ್ತು ನಿರ್ದೇಶಕಿ ಚೆರಿಲ್ ಅನಿತಾ ಮಿಲ್ಲರ್ ಮಾತನಾಡಿ, 'ಅನಾಮಾರ್ಫಿಕ್ ಕಲೆಯೆಂಬುದು ಬದಲಾಗುತ್ತಿರುವ ದೃಷ್ಟಿಕೋನಗಳಿಗೆ ಸಂಬಂಧಿಸಿದ್ದಾಗಿದೆ. ಒಂದು ಕೋನದಿಂದ ವಿರೂಪಗೊಂಡಂತೆ ಕಾಣುವ ಕಲಾಕೃತಿಗಳು ಇನ್ನೊಂದು ಕೋನದಿಂದ ನೋಡಿದಾಗ ಸೌಂದರ್ಯಯುತವಾಗಿ ಕಾಣುತ್ತವೆ. ನನ್ನ ತಾಯಿ ಶೆರೀನ್ ಮಿಲ್ಲರ್ ಅವರು ತನ್ನದೇ ಆದ ಪರಿಕಲ್ಪನೆಯಲ್ಲಿ ಇದನ್ನು ಪರಿಚಯಿಸಿದ್ದರು' ಎಂದು ವಿವರಿಸಿದರು.

ಆಧುನಿಕ ಕಲೆಯ ರಾಷ್ಟ್ರೀಯ ಗ್ಯಾಲರಿಯ ಸಬ್ ಕ್ಯುರೇಟರ್ ದರ್ಶನ್ ಕುಮಾರ್ ವೈ.ಯು., ಕಲಾ ಇತಿಹಾಸಕಾರ ಆರ್.ಎಚ್.ಕುಲಕರ್ಣಿ ಭಾಗವಹಿಸಿದ್ದರು.

ಗಣಿತ, ವಿಜ್ಞಾನ ಮತ್ತು ಕಲಾತ್ಮಕತೆಯ ವಿಶಿಷ್ಟ ಮಿಶ್ರಣವಾದ ಅನಾಮಾರ್ಫಿಕ್ ಕಲೆಯ ಮೂಲಕ ಸೃಜನಶೀಲತೆಯನ್ನು ಪಸರಿಸುವ ಉದ್ದೇಶವನ್ನು ಈ ವಸ್ತುಸಂಗ್ರಹಾಲಯ ಹೊಂದಿದೆ. ಅನಾಮಾರ್ಫಿಕ್ ವರ್ಣಚಿತ್ರಗಳು, ಸರಿಯಲ್ ಶಿಲ್ಪಗಳು, ಕಲ್ಲಿದ್ದಲಿನ ಕೃತಿಗಳು ಮತ್ತು ಡಿಜಿಟಲ್ ಕಲೆಗಳನ್ನು ಇಲ್ಲಿ ಪ್ರದರ್ಶಿಸಲಾಗಿದೆ ಎಂದು ಅನಿತಾ ಮಿಲ್ಲರ್ ತಿಳಿಸಿದರು.

ಹೆದ್ದಾರಿಯಲ್ಲಿ ಕುಸಿದ ಸ್ಕೈವಾಕ್

ಪ್ರಜಾವಾಣಿ ವಾರ್ತೆ

ಕೋಲಾರ: ನಗರ ಹೊರವಲಯದ ಬೆಂಗಳೂರು-ತಿರುಪತಿ ರಾಷ್ಟ್ರೀಯ ಹೆದ್ದಾರಿ-75ರಲ್ಲಿ ಶನಿವಾರ ರಾತ್ರಿ ಟ್ರಕ್ ಡಿಕ್ಕಿ ಹೊಡೆದ ಪರಿಣಾಮ ಸ್ಕೈವಾಕ್ ಕುಸಿದು ಬಿದ್ದಿದೆ. ಇದರಿಂದಾಗಿ ಸುಮಾರು 3 ಕಿ.ಮೀ ವರೆಗೆ ಸಂಚಾರ ದಟ್ಟಣೆ ಉಂಟಾಗಿತ್ತು. ಭಾನುವಾರ ಬೆಳಿಗ್ಗೆಯೂ ದಟ್ಟಣೆ ಕಂಡುಬಂತು.


ಬೆಂಗಳೂರಿನಿಂದ ಅಕ್ಕಿ ಚೀಲ ತುಂಬಿಕೊಂಡು ಬರುತ್ತಿದ್ದ ಟ್ರಕ್, ಕೊಂಡರಾಜನಹಳ್ಳಿ ಆಂಜನೇಯ ದೇಗುಲ ಬಳಿ ರಾತ್ರಿ 11ರ ಸುಮಾರಿಗೆ ಡಿಕ್ಕಿ ಹೊಡೆದಿದ್ದು, ಆ ರಭಸಕ್ಕೆ ಸ್ಕೈವಾಕ್ ಮಧ್ಯಕ್ಕೆ ತುಂಡಾಗಿದೆ.

ಸ್ಕೈವಾಕ್‌ನ ಅರ್ಧ ಭಾಗ ಲಾರಿಯ ಮೇಲೆ ಬಿದ್ದಿದ್ದು, ಮತ್ತೊಂದು ಭಾಗವು ಪಕ್ಕದ ರಸ್ತೆಯಲ್ಲಿ ಬಿದ್ದಿದೆ. ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಈ ದೃಶ್ಯ ಸೆರೆಯಾಗಿದೆ. ಎರಡು ಲಾರಿ ಹಾಗೂ ಒಂದು ಕಾರು ಜಖಂಗೊಂಡಿವೆ.

ಸಂಚಾರ ದಟ್ಟಣೆ ಉಂಟಾಗುತ್ತಿದ್ದಂತೆ ಪೊಲೀಸರು ಸ್ಥಳಕ್ಕೆ ಬಂದು ಕ್ರೇನ್‌ಗಳನ್ನು ಬಳಸಿ ನಾಲ್ಕೈದು ಗಂಟೆ ತೆರವು ಕಾರ್ಯಾಚರಣೆ ನಡೆಸಿದರು. ಮುರಿದು ಬಿದ್ದಿದ್ದ ಸ್ಕೈವಾಕ್‌ಗಳನ್ನು ರಸ್ತೆ ಪಕ್ಕದಲ್ಲಿ ಇರಿಸಿದರು. ತಮಿಳುನಾಡು ಹಾಗೂ ಆಂಧ್ರಪ್ರದೇಶ, ಇತ್ತ ಬೆಂಗಳೂರು ಕಡೆಗೆ ತೆರಳುವ ಪ್ರಯಾಣಿಕರು, ವಾಹನ ಚಾಲಕರು ಸಂಚಾರ ದಟ್ಟಣೆಗೆ ಸಿಲುಕಿ ಸುಮಾರು ಎರಡು ಗಂಟೆ ಪರದಾಡಿದರು.

ಅಕ್ಕಿ ಚೀಲಗಳನ್ನು ಬೇರೆ ವಾಹನದಲ್ಲಿ ತುಂಬಿದ ಬಳಿಕ ಟ್ರಕ್‌ಅನ್ನು ತೆರವುಗೊಳಿಸಲಾಯಿತು.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256

'ಡಾಂಬರ್ ಹಾಕುವ ಹೊಸ ವಿಧಾನ'



ಡಾಂಬರ್ ಹಾಕುವಾಗ ರಸ್ತೆಯಲ್ಲಿ ವಾಹನ ನಿಲ್ಲಿಸಿದ್ದರೆ ಅದನ್ನು ತೆರವುಗೊಳಿಸಿ, ಡಾಂಬರ್ ಹಾಕುವುದು ನಿಯಮ. ಆದರೆ, ಆರ್.ಟಿ. ನಗರದ ಪೊಲೀಸ್ ಠಾಣೆ ಸಮೀಪದ ರಸ್ತೆಯಲ್ಲಿ ವ್ಯಕ್ತಿಯೊಬ್ಬರು ಹಲವು ದಿನಗಳಿಂದ ವಾಹನ ನಿಲುಗಡೆ ಮಾಡಿದ್ದಾರೆ. ಇದರಿಂದ ರಸ್ತೆಯಲ್ಲಿ ಸಂಚಾರ ದಟ್ಟಣೆ ಆಗುತ್ತಿದೆ. ಜೊತೆಗೆ ಇತ್ತೀಚೆಗೆ ಜಿಬಿಎ ಸಿಬ್ಬಂದಿ ಈ ರಸ್ತೆಗೆ ಡಾಂಬರ್ ಹಾಕುವ ಸಂದರ್ಭದಲ್ಲಿ ಈ ಕಾರನ್ನು ತೆರವುಗೊಳಿಸದೇ ಆ ಜಾಗವನ್ನು ಬಿಟ್ಟು ಡಾಂಬರ್ ಹಾಕಿರುವುದು ಎಷ್ಟು ಸರಿ?

ಸುರೇಶ್, ಆರ್.ಟಿ.ನಗರ

'ರಸ್ತೆ ಗುಂಡಿ ಮುಚ್ಚಿ'

ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಮಲ್ಲತ್ತಹಳ್ಳಿಯ ಮುಖ್ಯ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ವಾಹನ ಸಂಚಾರಕ್ಕೆ ಸಮಸ್ಯೆ ಆಗಿದೆ. ಈ ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವ ಕಾರಣ ಸಂಚಾರ ದಟ್ಟಣೆ ಆಗುತ್ತಿದೆ. ಜೊತೆಗೆ ಅಪಘಾತಗಳು ಸಂಭವಿಸುತ್ತವೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಕೂಡಲೇ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಎಂ. ಲಿಂಗರಾಜುಗೌಡ, ಮಲ್ಲತಹಳ್ಳಿ





'ರಸ್ತೆಯಲ್ಲಿ ಹರಿಯುವ ತ್ಯಾಜ್ಯ ನೀರು'

ಬಳೆಪೇಟೆಯ ಮುಖ್ಯ ರಸ್ತೆಯಲ್ಲಿ ಎರಡು ವಾರದಿಂದ ತ್ಯಾಜ್ಯ ನೀರು ಹರಿಯುತ್ತಿದೆ. ಇದು ಸ್ಥಳೀಯ ನಾಗರಿಕರಿಗೆ ಹಾಗೂ ವ್ಯಾಪಾರಿಗಳಿಗೆ ಸಮಸ್ಯೆ ಆಗಿದೆ. ಇದು ಸ್ಥಳೀಯರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಮುಖ್ಯ ರಸ್ತೆಯಲ್ಲಿಯೇ ತ್ಯಾಜ್ಯ ನೀರು ಹರಿಯುವುದರಿಂದ ವಾಹನ ಸಂಚಾರಕ್ಕೂ ತೊಂದರೆ ಆಗಿದ್ದು, ಸಂಚಾರ ದಟ್ಟಣೆ ಆಗುತ್ತಿದೆ. ಇದನ್ನು ಸರಿಪಡಿಸುವಂತೆ ಬೆಂಗಳೂರು ಜಲಮಂಡಳಿ ಹಾಗೂ ಪಾಲಿಕೆಗೆ ದೂರು ನೀಡಿದರೂ ಸ್ಪಂದಿಸುತ್ತಿಲ್ಲ.

ಶಿವಪ್ರಸಾದ್ ಎಸ್., ಬಳೆಪೇಟೆ



'ರಸ್ತೆಯಲ್ಲಿ ಕಸದ ರಾಶಿ'

ಜೆ.ಜೆ.ಆರ್. ನಗರದ ವಾರ್ಡ್ ಸಂಖ್ಯೆ 136ರ ಮುಖ್ಯ ರಸ್ತೆಯಲ್ಲಿ ಕಸದ ರಾಶಿ ಬಿದ್ದಿದ್ದು, ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದೆ. ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಜೊತೆಗೆ ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ರಸ್ತೆಯಲ್ಲಿ ಕಸದ ರಾಶಿ ಬಿದ್ದಿರುವ ಕಾರಣ ವಾಹನ ಸಂಚಾರಕ್ಕೂ ಅಡೆತಡೆ ಆಗಿದೆ. ಬೀಡಾಡಿ ದನಗಳು ಹಾಗೂ ನಾಯಿಗಳು ರಸ್ತೆಯ ಮಧ್ಯ ಭಾಗಕ್ಕೆ ಕಸ ತಂದು ಎಸೆಯುತ್ತಿವೆ. ಆದ್ದರಿಂದ ಪಾಲಿಕೆ ಅಧಿಕಾರಿಗಳು ಕೂಡಲೇ ಇಲ್ಲಿ ಬಿದ್ದಿರುವ ಕಸದ ರಾಶಿಯನ್ನು ತೆರವುಗೊಳಿಸಿ, ನಗರದ ಸ್ವಚ್ಛತೆಗೆ ಆದ್ಯತೆ ನೀಡಬೇಕು.

ಚಲಪತಿ, ಜೆ.ಜೆ.ಆರ್.ನಗರ

ಎಂಟು ಮಂದಿ ಸೆರೆ: ₹1 ಕೋಟಿ ಜಪ್ತಿ

ಅಪಹರಿಸಿ ಹಣ ದೋಚಿದ್ದ ಪ್ರಕರಣ 20 ನಿಮಿಷದಲ್ಲಿ ಭೇದಿಸಿದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಿ ದಂಪತಿ ಮತ್ತು ಅಡಿಕೆ ವ್ಯಾಪಾರಿಯನ್ನು ಅಪಹರಿಸಿ ₹1.01 ಕೋಟಿ ನಗದು ದೋಚಿದ್ದ ದರೋಡೆಕೋರರನ್ನು ಘಟನೆ ನಡೆದ ಕೆಲವೇ ಸಮಯದಲ್ಲಿ ಬಂಧಿಸುವಲ್ಲಿ ಹುಳಿಮಾವು ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ನರಸಿಂಹ (30), ಜೀವನ್ (28), ಕುಮಾರ್ (33), ವೆಂಕಟರಾಜು (32), ಕಿಶೋರ್ (37), ನಮನ್ (19), ರವಿಕಿರಣ್ (30), ಚಂದ್ರು (34) ಬಂಧಿತರು.

ಆರೋಪಿಗಳು ಜಿಗಣಿ, ಬೇಗೂರು ಮತ್ತು ಚಂದಾಪುರ ನಿವಾಸಿಗಳಾಗಿದ್ದಾರೆ. ಭದ್ರತಾ ಸಿಬ್ಬಂದಿ ಕೆಲಸದ ಜತೆಗೆ ಸ್ವಿಗ್ಗಿ ಡೆಲಿವರಿ ಬಾಯ್‌ಗಳಾಗಿದ್ದಾರೆ. ಆರೋಪಿಗಳಾದ ವೆಂಕಟರಾಜು ಮತ್ತು ಕಿಶೋರ್ ವಿರುದ್ಧ ಗ್ರಾಮಾಂತರ ಭಾಗದ ಠಾಣೆಯೊಂದರಲ್ಲಿ ಕೊಲೆ, ದರೋಡೆ ಪ್ರಕರಣ ದಾಖಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಆರೋಪಿಗಳು ತುಮಕೂರು ಜಿಲ್ಲೆಯ ಹೇಮಂತ್ ಮತ್ತು ಅಕ್ಷಯನಗರ ನಿವಾಸಿ ಮೋಟರಾಮು ದಂಪತಿಯನ್ನು ಅಪಹರಿಸಿ, ನಗದು ದರೋಡೆ ಮಾಡಿದ್ದರು.

ತುಮಕೂರಿನ ಅಡಿಕೆ ವ್ಯಾಪಾರಿ ಮೋಹನ್ ಅವರು ಆನೇಕಲ್ ಭಾಗದಲ್ಲಿ ಆಸ್ತಿಯೊಂದನ್ನು ₹1.75 ಕೋಟಿಗೆ ವ್ಯಕ್ತಿಯೊಬ್ಬರಿಗೆ ಮಾರಾಟ ಮಾಡಿದ್ದರು. ಈ ಪೈಕಿ ₹1.01 ಕೋಟಿ ನಗದು ಪಡೆದುಕೊಂಡು ಬರುವಂತೆ ತನ್ನ ಚಿಕ್ಕಪ್ಪನ ಮಗ ಹೇಮಂತ್‌ಗೆ ಸೂಚಿಸಿದ್ದರು. ಅದರಂತೆ ಸೆಪ್ಟೆಂಬರ್ 27ರ ರಾತ್ರಿ 10.15ರ ಸುಮಾರಿಗೆ ಹುಳಿಮಾವು ಅಕ್ಷಯನಗರದ ಬಳಿ ಕಾರಿನಲ್ಲಿ ಬಂದಿದ್ದಾರೆ. ಅದೇ ವೇಳೆ ಹಣ ಕೊಡಲು ಮೋಟರಾಮು ದಂಪತಿ ಮತ್ತೊಂದು ಕಾರಿನಲ್ಲಿ ಬಂದಿದ್ದು, ನಂತರ ಹೇಮಂತ್, ಹಣದ ಸಮೇತ ಮೋಟರಾಮು ಅವರ ಕಾರಿನಲ್ಲಿ ಕುಳಿತುಕೊಂಡಿದ್ದಾರೆ.

ಅದೇ ವೇಳೆ ಅಲ್ಲೇ ಇದ್ದ ಆರೋಪಿಗಳ ಪೈಕಿ ಇಬ್ಬರು, ಅವರ ಚಲವಲನಗಳ ಮೇಲೆ ಅನುಮಾನಗೊಂಡು ಪ್ರಶ್ನಿಸಿದ್ದಾರೆ. ‘ನೀವು ಯಾರು? ಕಾರಿನಿಂದ ಕೆಳಗೆ ಇಳಿಯಿರಿ? ತಪಾಸಣೆ ಮಾಡಬೇಕು’ ಎಂದು ವಿಡಿಯೊ ಮಾಡಲು ಮುಂದಾಗಿದ್ದಾರೆ. ಅದನ್ನು ಪ್ರಶ್ನಿಸಿದ ಹೇಮಂತ್ ಮತ್ತು ಮೋಟರಾಮು ದಂಪತಿ ಮೇಲೆ ಹಲ್ಲೆ ನಡೆಸಿ ಹಣ ಕಸಿದುಕೊಳ್ಳಲು ಮುಂದಾಗಿದ್ದರು. ಇದರಿಂದ ಗಾಬರಿಗೊಂಡ ಮೂವರು ಕಾರಿನ ಡೋರ್ ಲಾಕ್ ಮಾಡಿಕೊಂಡು ತಪ್ಪಿಸಿಕೊಳ್ಳಲು ಮುಂದಾಗಿದ್ದಾರೆ.

ಆದರೆ, ಆರೋಪಿಗಳು ಬೈಕ್‌ನಲ್ಲಿ ಹಿಂಬಾಲಿಸಿಕೊಂಡು ಬಂದು ಕಾರಿಗೆ ಡಿಕ್ಕಿ ಹೊಡೆದು, ಅಡ್ಡಗಟ್ಟಿದ್ದಾರೆ. ಬಳಿಕ ಮೂವರನ್ನು ಕಾರಿನಿಂದ ಇಳಿಸಿ, ಹಣ ಮತ್ತು ಮೊಬೈಲ್ ಕಿತ್ತುಕೊಂಡು ಅಲ್ಲೇ ಇದ್ದ ಖಾಲಿ ಶೆಡ್‌ನಲ್ಲಿ ಕೂಡಿ ಹಾಕಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಬಂಧಿತ ಆರೋಪಿಗಳು

₹20 ಲಕ್ಷಕ್ಕೆ ಬ್ಲ್ಯಾಕ್ ಮೇಲ್

ಹೇಮಂತ್, ಮೋಟರಾಮು ದಂಪತಿಯನ್ನು ಶೆಡ್‌ನಲ್ಲಿ ಕೂಡಿಹಾಕಲು ಪ್ರಯತ್ನಿಸುತ್ತಿದ್ದಾಗ, ಇತರೆ ಆರು ಮಂದಿ ಆರೋಪಿಗಳು ಸ್ಥಳಕ್ಕೆ ಬಂದು, ‘₹20 ಲಕ್ಷ ನೀಡಿದರೆ ಬಿಟ್ಟು ಬಿಡುತ್ತೇವೆ. ಇಲ್ಲವಾದರೆ ಹವಾಲಾ ದಂಧೆ ಮಾಡುತ್ತಿದ್ದಾರೆ ಎಂದು ಪೊಲೀಸರಿಗೆ ತಿಳಿಸುತ್ತೇವೆ’ ಎಂದು ಬ್ಲ್ಯಾಕ್ ಮೇಲ್ ಮಾಡಿದ್ದಾರೆ.

ದುಷ್ಕರ್ಮಿಗಳು ಬೈಕ್‌ನಿಂದ ಕಾರನ್ನು ಹಿಂಬಾಲಿಸುತ್ತಿದ್ದಾರೆ ಎಂಬ ಮಾಹಿತಿಯನ್ನು ಸ್ಥಳೀಯರೊಬ್ಬರು ಪೊಲೀಸರಿಗೆ ನೀಡಿದ್ದರು. ಅದೇ ವೇಳೆ ಎಲೆಕ್ಟ್ರಾನಿಕ್ ಸಿಟಿ ಉಪ ವಿಭಾಗದ ಎಸಿಪಿ ಕೆ.ಎಂ.ಸತೀಶ್ ಮತ್ತು ಹುಳಿಮಾವು ಠಾಣೆಯ ಪಿಐ ಬಿ.ಜಿ.ಕುಮಾರಸ್ವಾಮಿ ಠಾಣೆ ವ್ಯಾಪ್ತಿಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸುತ್ತಿದ್ದರು.

ಘಟನಾ ಸ್ಥಳದ ಅನತಿ ದೂರವಾದ ಡಿಎಲ್‌ಎ ವೃತ್ತದ ಬಳಿ ನಾಕಾಬಂದಿ ಹಾಕಿ ರಾತ್ರಿ ಗಸ್ತು ನಡೆಸುತ್ತಿದ್ದರು. 15 ನಿಮಿಷದಿಂದ 20 ನಿಮಿಷದಲ್ಲಿಯೇ ಕ್ಷಿಪ್ರ ಕಾರ್ಯಾಚರಣೆ ನಡೆಸಿ ಹೆಚ್ಚಿನ ಸಿಬ್ಬಂದಿ ಜತೆ ಸ್ಥಳಕ್ಕೆ ತೆರಳಿ ಆರೋಪಿಗಳನ್ನು ಬಂಧಿಸಿ ನಗದು, ಕಾರು ಮತ್ತು ಬೈಕ್‌ಗಳನ್ನು ಜಪ್ತಿ ಮಾಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹುಳಿಮಾವು ಪೊಲೀಸರ ಕಾರ್ಯವನ್ನು ಶ್ಲಾಘಿಸಿ, ಕಮಿಷನರ್ ₹20 ಸಾವಿರ ಬಹುಮಾನ ಘೋಷಿಸಿದ್ದಾರೆ.

ಮರಕ್ಕೆ ಕಾರು ಡಿಕ್ಕಿ: ಪ್ರಯಾಣಿಕ ಸಾವು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಹುಳಿಮಾವು ಬಳಿಯ ಎಲೇನಹಳ್ಳಿ ಮುಖ್ಯ ರಸ್ತೆಯಲ್ಲಿ ಶನಿವಾರ ರಾತ್ರಿ ಸಂಭವಿಸಿದ ಕಾರು ಅಪಘಾತದಲ್ಲಿ ಪ್ರಯಾಣಿಕರೊಬ್ಬರು ಮೃತಪಟ್ಟಿದ್ದಾರೆ.

ಬೇಗೂರು ನಿವಾಸಿಯಾಗಿದ್ದ ಶ್ರೀನಿವಾಸ್ ಅವರು ಸ್ನೇಹಿತ ದೀಪಕ್ ಜತೆ ಕಾರಿನಲ್ಲಿ ಮನೆಗೆ ಬರುತ್ತಿದ್ದಾಗ ಅಪಘಾತ ಸಂಭವಿಸಿದೆ.

ಶ್ರೀನಿವಾಸ್ ಆಟೊ ಚಾಲಕರಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಚಾಲನೆ ಮಾಡುತ್ತಿದ್ದ ದೀಪಕ್ ಅವರ ನಿಯಂತ್ರಣ ತಪ್ಪಿ ಕಾರು ರಸ್ತೆ ಬದಿಯ ಮರಕ್ಕೆ ಡಿಕ್ಕಿ ಹೊಡೆದಿದೆ. ಅವರ ಪಕ್ಕದ ಸೀಟಿನಲ್ಲಿ ಕುಳಿತಿದ್ದ ಶ್ರೀನಿವಾಸ್, ತೀವ್ರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ದೀಪಕ್ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.



ಬಿಎನ್‌ಆರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ನಾಲ್ಕನೇ ಶಾಖೆಯನ್ನು ಭಾನುವಾರ ಮಾರತ್‌ಹಳ್ಳಿಯಲ್ಲಿ ಸಪ್ತಮಿ ಗೌಡ ಉದ್ಘಾಟಿಸಿದರು

ಬಿಎನ್‌ಆರ್ ಗೋಲ್ಡ್, ಡೈಮಂಡ್ಸ್ ಶೋ ರೂಂ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎನ್‌ಆರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ನಾಲ್ಕನೇ ಶಾಖೆ ಮಾರತ್‌ಹಳ್ಳಿಯಲ್ಲಿ ಭಾನುವಾರ ಆರಂಭಗೊಂಡಿತು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮತ್ತು ನಟಿ ಸಪ್ತಮಿ ಗೌಡ ಅವರು ಈ ನೂತನ ಶೋ ರೂಂ ಅನ್ನು ಉದ್ಘಾಟಿಸಿದರು.

‘ಬಿಎನ್‌ಆರ್ ಜ್ಯುವೆಲ್ಲರಿ ವಿಶಿಷ್ಟ ವಿನ್ಯಾಸಗಳು, ಉತ್ತಮ ಗುಣಮಟ್ಟ ಮತ್ತು ವಿಶ್ವಾಸಾರ್ಹ ಸೇವೆಗಳೊಂದಿಗೆ ವಜ್ರ ಪ್ರಿಯರ ಕನಸುಗಳನ್ನು ನನಸಾಗಿಸುವುದನ್ನು ಮುಂದುವರಿಸಬೇಕು ಮತ್ತು ಆ ಮೂಲಕ ಗ್ರಾಹಕರ ವಿಶ್ವಾಸವನ್ನು ಗಳಿಸಬೇಕು’ ಎಂದು ಹಾರೈಸಿದರು.

‘ಗ್ರಾಹಕರಿಗೆ ಪ್ರಾಮಾಣಿಕ ಸೇವೆ, ವಿಶ್ವಾಸಾರ್ಹ ಗುಣಮಟ್ಟ ಮತ್ತು ಆಕರ್ಷಕ ಬೆಲೆಯನ್ನು ಒದಗಿಸುವುದು ನಮ್ಮ ಬದ್ಧತೆಯಾಗಿದೆ’ ಎಂದು ಬಿಎನ್‌ಆರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ವ್ಯವಸ್ಥಾಪಕ ನಿರ್ದೇಶಕ ರೋಹಿತ್ ಚರಣ್ ರೆಡ್ಡಿ ಮತ್ತು ಅಧ್ಯಕ್ಷ ನಾಗಿ ರೆಡ್ಡಿ ತಿಳಿಸಿದರು.

ರಾಜ್ಯಸಭೆ ಮಾಜಿ ಸದಸ್ಯ ಕುಪೇಂದ್ರ ರೆಡ್ಡಿ, ವಿಧಾನ ಪರಿಷತ್ ಸದಸ್ಯ ಗೋಪಿನಾಥ್ ರೆಡ್ಡಿ, ಮಾಜಿ ಸಚಿವ ಅರವಿಂದ ಲಿಂಬಾವಳಿ, ಮಾಜಿ ಸಚಿವ ಎಚ್. ನಾಗೇಶ್, ಬಿಜೆಪಿಯ ಮಾಜಿ ರಾಷ್ಟ್ರೀಯ ಕಾರ್ಯದರ್ಶಿ ಮೋಹನ್ ರೆಡ್ಡಿ, ಬಿಜೆಪಿ ಮುಖಂಡರಾದ ರಮೇಶ್ ರೆಡ್ಡಿ, ವೆಂಕಟಸ್ವಾಮಿ ರೆಡ್ಡಿ, ಲೋಕನಾಥ ರೆಡ್ಡಿ, ಮಂಜುನಾಥ್, ಕಾಂಗ್ರೆಸ್ ಮುಖಂಡರಾದ ಬಸವರಾಜು ಉಪಸ್ಥಿತರಿದ್ದರು.

12 ಮಂದಿ ವಿರುದ್ಧ ಎಫ್‌ಐಆರ್

ಸರ್ಕಾರಿ ಶಾಲಾ ಶಿಕ್ಷಕಿಗೆ ಜಾಲತಾಣದಲ್ಲಿ ಅಶ್ಲೀಲ ಸಂದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲಾ ಶಿಕ್ಷಕಿಗೆ ಸಾಮಾಜಿಕ ಜಾಲತಾಣದಲ್ಲಿ ಅಶ್ಲೀಲವಾಗಿ ನಿಂದಿಸಿ, ಅತ್ಯಾಚಾರದ ಬೆದರಿಕೆ ಪೋಸ್ಟ್ ಹಾಕಿದ ಆರೋಪದ ಮೇಲೆ 12 ವ್ಯಕ್ತಿಗಳ ಮೇಲೆ ಗೋವಿಂದರಾಜನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಸಂಬಂಧ ಸಂತ್ರಸ್ತ ಶಿಕ್ಷಕಿಯ ಪತಿ ನೀಡಿರುವ ದೂರು ಆಧರಿಸಿ, ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆ ಕೈಗೊಂಡಿದ್ದಾರೆ.

‘ಶಾಲಾ ಶಿಕ್ಷಕಿಯಾಗಿರುವ ಪತ್ನಿಗೆ ಆರೋಪಿಗಳು ಜಾಲತಾಣದಲ್ಲಿ ಅಶ್ಲೀಲ ಪೋಸ್ಟ್‌ಗಳನ್ನು ಹಾಕಿ, ಮಾನಸಿಕವಾಗಿ ಹಿಂಸಿಸುತ್ತಿದ್ದಾರೆ. ಅಲ್ಲದೆ, ಪತ್ನಿಗೆ ಅತ್ಯಾಚಾರದ ಬೆದರಿಕೆ ಹಾಕಿದ್ದಾರೆ. ಹೀಗಾಗಿ, ಪತ್ನಿಯು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕರ್ತವ್ಯಕ್ಕೆ ಹೋಗಲು ಭಯಪಡುವ ಪರಿಸ್ಥಿತಿ ಸೃಷ್ಟಿಯಾಗಿದೆ. ಅಶ್ಲೀಲ ಪೋಸ್ಟ್‌ಗಳಿಂದ ಪತ್ನಿಯ ಭದ್ರತೆ ಮತ್ತು ಖಾಸಗಿತನಕ್ಕೆ ಧಕ್ಕೆಯಾಗಿದ್ದು, ಆರೋಪಿಗಳ ವಿರುದ್ಧ ಕ್ರಮ ಜರುಗಿಸಬೇಕು’ ಎಂದು ದೂರುದಾರರು ಪೊಲೀಸರಿಗೆ ಮನವಿ ಮಾಡಿದ್ದಾರೆ.

‘ಖದರ್ ಕನ್ನಡಿಗ’ ಎಂಬ ಫೇಸ್‌ಬುಕ್ ಪೇಜ್‌ನಲ್ಲಿ ಅಶ್ಲೀಲವಾಗಿ ಪೋಸ್ಟ್ ಹಾಕಲಾಗಿದೆ. ಅನುಮತಿ ಇಲ್ಲದೆ ಮಗುವಿನ ಫೋಟೋವನ್ನು ಪೋಸ್ಟ್ ಮಾಡಿದ್ದಾರೆ. ‘ಖದರ್ ಕನ್ನಡಿಗ’ ಫೇಸ್‌ಬುಕ್ ಪೇಜ್ ಮಾತ್ರವಲ್ಲದೇ ನವೀನ್ ನವೀನ್, ಹರೀಶ್ ನಾಯ್ಕ್, ಕೆಂಚ ತೂಗುದೀಪ, ಭೀಮ್ಸ್ ಬೋಸಾಯಮ್, ಮಾಕ್ಸ್‌ವೇಲ್ ಗೌತಮ್, ರವಿ ದರ್ಶನ್, ಪ್ರವೀಣ್ ಶೆಟ್ಟಿ, ಇಡ್ಲಿ ಸೋಮ, ರಮೇಶ್ ನಾಗಪ್ಪ, ಶಿವು ತೂಗುದೀಪ ಎಂಬ ಖಾತೆಗಳಿಂದ ಅಶ್ಲೀಲ ಸಂದೇಶ ಕಳುಹಿಸಲಾಗಿದೆ. ಪತ್ನಿಯ ಭದ್ರತೆ ಹಾಗೂ ಖಾಸಗಿತನಕ್ಕೆ ಧಕ್ಕೆ ಬಂದಿದ್ದು, ಕಿಡಿಗೇಡಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಿ ಕುಟುಂಬಕ್ಕೆ ರಕ್ಷಣೆ ನೀಡಬೇಕು’ ಎಂದು ಮನವಿ ಮಾಡಿದ್ದಾರೆ. ಈ ವಿಚಾರಕ್ಕೆ ಸಂಬಂಧಿಸಿದ ಲಿಂಕ್ ವಿವರವನ್ನೂ ದೂರಿನಲ್ಲಿ ಉಲ್ಲೇಖಿಸಿದ್ದಾರೆ.



ಅತಿಥಿ ಉಪನ್ಯಾಸಕರನ್ನು ನೇಮಿಸಬೇಕು ಎಂದು ಆಗ್ರಹಿಸಿ ಎಐಡಿಎಸ್‌ಒ ನೇತೃತ್ವದಲ್ಲಿ ಶನಿವಾರ ಪ್ರತಿಭಟನೆ ನಡೆಯಿತು

ಅತಿಥಿ ಉಪನ್ಯಾಸಕರ ನೇಮಕಾತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಲೇಜುಗಳಿಗೆ ಅತಿಥಿ ಉಪನ್ಯಾಸಕರನ್ನು ಕೂಡಲೇ ನೇಮಿಸಬೇಕು ಎಂದು ಆಗ್ರಹಿಸಿ ಎಐಡಿಎಸ್‌ಒ ನೇತೃತ್ವದಲ್ಲಿ ಶನಿವಾರ ಪ್ರತಿಭಟನೆ ನಡೆಯಿತು. ವಿವಿಧ ಪದವಿ ಕಾಲೇಜುಗಳ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಪ್ರತಿಭಟನೆಯಲ್ಲಿ ಪಾಲ್ಗೊಂಡರು.

‘ಕಾಲೇಜುಗಳಲ್ಲಿ ಪ್ರಾಧ್ಯಾಪಕರಿಲ್ಲದೇ ತರಗತಿಗಳು ನಡೆಯುತ್ತಿಲ್ಲ. ಅತಿಥಿ ಉಪನ್ಯಾಸಕರನ್ನೂ ನೇಮಿಸಿಕೊಳ್ಳುತ್ತಿಲ್ಲ. ಆದರೆ, ಸೆಮಿಸ್ಟರ್ ಪರೀಕ್ಷಾ ವೇಳಾಪಟ್ಟಿ ಮತ್ತು ಪರೀಕ್ಷಾ ಶುಲ್ಕದ ಸುತ್ತೋಲೆಗಳನ್ನು ವಿಶ್ವವಿದ್ಯಾಲಯಗಳು ಹೊರಡಿಸಿವೆ’ ಎಂದು ಪ್ರತಿಭಟನಕಾರರು ಆರೋಪಿಸಿದರು.

ತರಗತಿ ನಡೆಸದೆ ಪರೀಕ್ಷೆ ಬೇಡ ಎಂಬ ಘೋಷ ವಾಕ್ಯದೊಂದಿಗೆ ರಾಜ್ಯದಾದ್ಯಂತ ಸಂಘರ್ಷ ನಡೆಸಲು ಪ್ರತಿಭಟನಕಾರರು ತೀರ್ಮಾನಿಸಿದರು.

ಬೆಂಗಳೂರಿನ ಸರ್ಕಾರಿ ಆರ್.ಸಿ ಕಾಲೇಜು, ಮಲ್ಲೇಶ್ವರ ಸರ್ಕಾರಿ ಪದವಿ ಕಾಲೇಜು, ಪೀಣ್ಯ ಸರ್ಕಾರಿ ಪದವಿ ಕಾಲೇಜು, ವಿಜಯನಗರ ಸರ್ಕಾರಿ ಪದವಿ ಕಾಲೇಜು ಸಹಿತ ವಿವಿಧ ಕಾಲೇಜಿನ ವಿದ್ಯಾರ್ಥಿಗಳು, ಎಐಡಿಎಸ್‌ಒ ಜಿಲ್ಲಾ ಸಮಿತಿ ಅಧ್ಯಕ್ಷೆ ಅಪೂರ್ವ ಸಿ.ಎಂ ಭಾಗವಹಿಸಿದ್ದರು.

ಪುಂಡರ ಹಾವಳಿಗೆ ಬೀಳದ ಕಡಿವಾಣ • ಮೇಲ್ಸೇತುವೆ, ವರ್ತುಲ ರಸ್ತೆಗಳಲ್ಲಿ ಹೆಚ್ಚು ಪ್ರಕರಣ

ವ್ಹೀಲಿ: 37 ಸ್ಥಳಗಳ ಮೇಲೆ ಹದ್ದಿನ ಕಣ್ಣು

• ಆದಿತ್ಯ ಕೆ.ಎ.

ಬೆಂಗಳೂರು: ಸಂಚಾರ ವಿಭಾಗದ ಪೊಲೀಸರ ಬಿಗಿಯಾದ ಕ್ರಮಗಳ ನಡುವೆಯೂ ಯುವಕರು ನಗರದ ಅಲ್ಲಲ್ಲಿ ವ್ಹೀಲಿ ನಡೆಸುತ್ತಿದ್ದು, ಈ ಹಾವಳಿಗೆ ಇನ್ನೂ ಕಡಿವಾಣ ಬಿದ್ದಿಲ್ಲ. ತಡರಾತ್ರಿ ಹಾಗೂ ನಸುಕಿನ ವೇಳೆ ಯುವಕರು ವ್ಹೀಲಿ ನಡೆಸುವ ಮೂಲಕ ಸಾರ್ವಜನಿಕರ ಜೀವಕ್ಕೆ ಆಪತ್ತು ತರುತ್ತಿದ್ದಾರೆ. ಅಲ್ಲದೇ ಸ್ವಯಂ ಅಪಘಾತಕ್ಕೀಡಾಗಿ ತಮ್ಮ ಜೀವಕ್ಕೂ ಸಂಚಕಾರ ತಂದುಕೊಳ್ಳುತ್ತಿದ್ದಾರೆ.

ಇಲ್ಲಿನ ವಿವಿಧ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ 37 ಸ್ಥಳಗಳಲ್ಲಿ (ಹೊರ ವರ್ತುಲ ರಸ್ತೆ, ಮೇಲ್ಸೇತುವೆ ಹಾಗೂ ಬಡಾವಣೆ ರಸ್ತೆ) ಪುಂಡರು ವ್ಹೀಲಿ ನಡೆಸುತ್ತಿದ್ದಾರೆ ಎಂಬುದನ್ನು ಗುರುತಿಸಲಾಗಿದ್ದು, ಆ ರಸ್ತೆಗಳಲ್ಲಿ ಸಂಚಾರ ಪೊಲೀಸರು ಹದ್ದಿನ ಕಣ್ಣಿಟ್ಟಿದ್ದಾರೆ. ವ್ಹೀಲಿಗೆ ಕಡಿವಾಣ ಹಾಕಲು ಪ್ರಯತ್ನಿಸುತ್ತಿದ್ದಾರೆ. ಕಟ್ಟುನಿಟ್ಟಿನ ಕ್ರಮದ ನಡುವೆಯೂ ಯುವಕರು ಪೊಲೀಸರ ಕಣ್ತಪ್ಪಿಸಿ ವ್ಹೀಲಿ ನಡೆಸುತ್ತಿದ್ದಾರೆ.

ರಾತ್ರಿ ವೇಳೆ ಮದ್ಯ ಸೇವಿಸಿ, ಡ್ರಗ್ಸ್ ತೆಗೆದುಕೊಂಡು ಅಪಾಯಕಾರಿ ವ್ಹೀಲಿ ನಡೆಸಲಾಗುತ್ತಿದೆ. ಸ್ವಯಂ ಅಪಘಾತದಿಂದ ಸಾವು–ನೋವು ಸಹ ಸಂಭವಿಸುತ್ತಿದೆ. ಮೇಲ್ಸೇತುವೆ, ಹೊರವರ್ತುಲ ರಸ್ತೆಯಲ್ಲಿ ವ್ಹೀಲಿ ಹಾವಳಿ ಜೋರಾಗಿದೆ.

ವ್ಹೀಲಿ ನಡೆಸುವ ಹೊರ ವರ್ತುಲ ರಸ್ತೆ ಹಾಗೂ ಮೇಲ್ಸೇತುವೆಯಲ್ಲಿ ರಾತ್ರಿ ವೇಳೆ ಕಾರ್ಯಾಚರಣೆ ನಡೆಸುವಂತೆ ಗೃಹ ಸಚಿವ ಜಿ.ಪರಮೇಶ್ವರ ಅವರು ಇತ್ತೀಚೆಗೆ ಸೂಚಿಸಿದ್ದರು. ಕಳೆದ ಒಂದು ತಿಂಗಳಿಂದ ಸಂಚಾರ ಪೊಲೀಸರು ರಾತ್ರಿ ಗಸ್ತು ತೀವ್ರಗೊಳಿಸಿದ್ದಾರೆ.

ವ್ಹೀಲಿ ತಡೆಗೆ ಕಾರ್ಯಪಡೆ ರಚಿಸುವುದಾಗಿಯೂ ರಾಜ್ಯ ಸರ್ಕಾರ ಘೋಷಿಸಿದ್ದು ಅದರ ರೂಪುರೇಷೆ ಸಿದ್ಧವಾಗುತ್ತಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಕಳವು ಮಾಡಿದ್ದ ವಾಹನಗಳ ಬಳಕೆ: ‘ವ್ಹೀಲಿ ನಡೆಸಲು ಕಳ್ಳತನ ಮಾಡಿದ್ದ ದ್ವಿಚಕ್ರ ವಾಹನಗಳನ್ನು ಯುವಕರು ಬಳಕೆ ಮಾಡುತ್ತಿದ್ದಾರೆ. ಇನ್ನೂ ಕೆಲವರು ವಾಹನದ ನೋಂದಣಿ ಫಲಕವನ್ನು ಮರೆಮಾಚಿ ಹಾಗೂ ನಕಲಿ ಸಂಖ್ಯೆ ಅಳವಡಿಸಿಕೊಂಡು ವ್ಹೀಲಿ ನಡೆಸುತ್ತಿರುವುದು ಕಂಡುಬಂದಿದೆ’ ಎಂದು ಮೂಲಗಳು ಹೇಳಿವೆ.

‘ಕಳೆದ ಮೂರುವರೆ ವರ್ಷಗಳಲ್ಲಿ ವ್ಹೀಲಿ ನಡೆಸುತ್ತಿದ್ದವರನ್ನು ಪತ್ತೆಹಚ್ಚಿ ಒಟ್ಟು 1,260 ವಾಹನ ನೋಂದಣಿ ಪ್ರಮಾಣ ಪತ್ರ (ಆರ್.ಸಿ) ಹಾಗೂ ಚಾಲನಾ ಪರವಾನಗಿ (ಡಿ.ಎಲ್) ರದ್ದು ಪಡಿಸುವಂತೆ ಸಾರಿಗೆ ಇಲಾಖೆಗೆ ಶಿಫಾರಸು ಮಾಡಲಾಗಿತ್ತು. ಅದರಲ್ಲಿ, 800ಕ್ಕೂ ಹೆಚ್ಚು ಆರ್‌ಸಿ ಹಾಗೂ ಡಿಎಲ್ ಅಮಾನತು ಮಾಡಲಾಗಿದೆ’ ಎಂದು ಮೂಲಗಳು ಹೇಳಿವೆ.


ಪೋಷಕರ ವಿರುದ್ಧವೂ ಕ್ರಮ: ವ್ಹೀಲಿ ನಡೆಸುತ್ತಿದ್ದವರು ಒಂದು ವೇಳೆ ಬಾಲಕರಾಗಿದ್ದರೆ ಪೋಷಕರ ವಿರುದ್ಧ ಮೋಟಾರು ವಾಹನ ಕಾಯ್ದೆ (ಐಎಂವಿ) ಅಡಿ ಪ್ರಕರಣ ದಾಖಲು ಮಾಡಿಕೊಳ್ಳಲಾಗುತ್ತಿದೆ. ಅಲ್ಲದೇ ವಾಹನಗಳನ್ನೂ ವಶಕ್ಕೆ ಪಡೆದುಕೊಂಡು ಒಂದು ವರ್ಷದ ಮಟ್ಟಿಗೆ ಆರ್.ಸಿ ರದ್ದು ಪಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ವ್ಹೀಲಿ ನಡೆಸಿದ ಬಾಲಕರಿಗೆ 25 ವರ್ಷ ದಾಟುವವರೆಗೂ ಚಾಲನಾ ಪರವಾನಗಿ ನೀಡದಂತೆಯೂ ಸಂಬಂಧಪಟ್ಟ ಆರ್‌ಟಿಒ ಕಚೇರಿಗೆ ವರದಿ ಸಲ್ಲಿಸಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ರಸ್ತೆಬದಿಯಲ್ಲಿ ನಿಂತಿದ್ದವರಿಗೂ ದಿಗಿಲು: ಒಂದೇ ಚಕ್ರದಲ್ಲಿ ಬೈಕ್ ಚಾಲನೆ ಮಾಡುತ್ತಾ ರಸ್ತೆಬದಿಯಲ್ಲಿ ನಿಂತವರ ಹಾಗೂ ವಾಹನ ಚಾಲಕರಿಗೆ ದಿಗಿಲು ಹುಟ್ಟಿಸಲಾಗುತ್ತಿದೆ.

ವ್ಹೀಲಿ ನಡೆಸುವ ಪುಂಡರಿಂದಾಗಿ ಅಮಾಯಕರು ಜೀವ ಕಳೆದುಕೊಳ್ಳುವ ಪರಿಸ್ಥಿತಿ ಇದೆ.

ಸಾಮಾಜಿಕ ಜಾಲತಾಣಗಳಲ್ಲಿ ವ್ಹೀಲಿ ವಿರುದ್ಧ ಜಾಗೃತಿ ಮೂಡಿಸಲಾಗುತ್ತಿದೆ. ಶಾಲಾ–ಕಾಲೇಜಿಗೂ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ವ್ಹೀಲಿಯಿಂದಾಗುವ ಅನಾಹುತಗಳ ಬಗ್ಗೆಯೂ ಎಚ್ಚರಿಕೆ ನೀಡಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ಹೇಳಿದರು.



ಸಂಚಾರ ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ ಈ ವರ್ಷ 1.74 ಲಕ್ಷ ಪ್ರಕರಣ ದಾಖಲು ಮಾಡಲಾಗಿದ್ದು, ಕಾರ್ಯಾಚರಣೆ ಮುಂದುವರಿಯಲಿದೆ
ಕಾರ್ತಿಕ್ ರೆಡ್ಡಿ, ಜಂಟಿ ಪೊಲೀಸ್ ಕಮಿಷನರ್, ಸಂಚಾರ ವಿಭಾಗ



ನಗರದ ರಸ್ತೆಯೊಂದರಲ್ಲಿ ಯುವಕ ವ್ಹೀಲಿ ನಡೆಸಿದ್ದು ಹೀಗೆ

ಆರೋಪಿಗಳು ವ್ಹೀಲಿ ನಡೆಸುತ್ತಿರುವ ಪ್ರಮುಖ ರಸ್ತೆ ಹಾಗೂ ಪ್ರದೇಶಗಳು

ರಸ್ತೆ, ಮೇಲ್ಸೇತುವೆ	ಸಂಚಾರ ಠಾಣಾ ವ್ಯಾಪ್ತಿ
ಮೇಡಹಳ್ಳಿಯ ಒಎಂ ರಸ್ತೆ ಹಾಗೂ ಆರ್‌ಎಂ ನಗರದ ಹೊರ ವರ್ತುಲ ರಸ್ತೆ	ಕೆ.ಆರ್. ಪುರ
ವರ್ತೂರು ರಸ್ತೆ (ವಿಮಾನಪುರ), ಐಟಿಪಿಎಲ್ ರಸ್ತೆ	ಎಚ್‌ಎಎಲ್ ಏರ್‌ಪೋರ್ಟ್
ಐಟಿಪಿಎಲ್ ರಸ್ತೆ	ವೈಟ್‌ಫೀಲ್ಡ್
ಮಹದೇವಪುರ ರಿಂಗ್ ರಸ್ತೆ	ಮಹದೇವಪುರ
ನೈಸ್ ರಸ್ತೆ, ಹಮ್ಮಿಗೆಪುರ, ಕೊಮ್ಮಘಟ್ಟ	ಕೆಂಗೇರಿ
ನಾಯಂಡಹಳ್ಳಿ	ಬ್ಯಾಟರಾಯನಪುರ
ವೆಸ್ಟ್ ಆಫ್ ಕಾರ್ಡ್ ರಸ್ತೆಯ ಮೇಲ್ಸೇತುವೆ	ಮಾಗಡಿ ರಸ್ತೆ
ಕಮಲಾನಗರದ ಒಂದನೇ ಮುಖ್ಯರಸ್ತೆ	ವಿಜಯನಗರ
ಸುಮನಹಳ್ಳಿಯ ಹೊರವರ್ತುಲ ರಸ್ತೆ	ಕಾಮಾಕ್ಷಿಪಾಳ್ಯ
ನಾಗರಬಾವಿ ರಿಂಗ್ ರಸ್ತೆ, ವಿಶ್ವೇಶ್ವರಯ್ಯ ಲೇಔಟ್ 100 ಅಡಿ ರಸ್ತೆ	ಜ್ಞಾನಭಾರತಿ
ಹೊಸೂರು ಮುಖ್ಯರಸ್ತೆ	ಎಚ್‌ಎಸ್‌ಆರ್ ಲೇಔಟ್ ಹಾಗೂ ಎಲೆಕ್ಟ್ರಾನಿಕ್ ಸಿಟಿ
ಸರ್ಜಾಪುರ ರಸ್ತೆ	ಬೆಳ್ಳಂದೂರು
ಬನ್ನೇರುಘಟ್ಟ ರಸ್ತೆ	ಜೆ.ಪಿ. ನಗರ
ಚನ್ನಮ್ಮ ಮೇಲ್ಸೇತುವೆ	ಬನಶಂಕರಿ
ಅಂಜಾನಪುರ 80 ಅಡಿ ರಸ್ತೆ	ತಲಘಟ್ಟಪುರ
ವಾಣಿವಿಲಾಸ ರಸ್ತೆ	ಬಸವನಗುಡಿ
ಮದರ್ ತೆರೇಸಾ ರಸ್ತೆ	ಅಶೋಕನಗರ
ರಾಮಯ್ಯ 80 ಅಡಿ ರಸ್ತೆ	ಸದಾಶಿವನಗರ
ರಿಂಗ್ ರಸ್ತೆ	ರಾಜಾಜಿನಗರ
ತುಮಕೂರು ರಸ್ತೆ	ಪೀಣ್ಯ
ಜೆಪಿ ಪಾರ್ಕ್ ರಸ್ತೆ	ಯಶವಂತಪುರ
ಬೆಂಗಳೂರು–ಬಳ್ಳಾರಿ ರಸ್ತೆ	ಯಲಹಂಕ, ಚಿಕ್ಕಜಾಲ, ಹೆಬ್ಬಾಳ, ದೇವನಹಳ್ಳಿ
ನಾಗವಾರ ರಸ್ತೆ	ಹೆಣ್ಣೂರು
ಕೃಪಾ ನಿಧಿ ಕಾಲೇಜು ರಸ್ತೆ, ಸರ್ಜಾಪುರ ರಸ್ತೆ	ಆಡುಗೋಡಿ
ಹೊಸೂರು ರಸ್ತೆ, ಗಾರೇಬಾವಿಪಾಳ್ಯ ಜಂಕ್ಷನ್‌ನಿಂದ ಬೊಮ್ಮನಹಳ್ಳಿ ಜಂಕ್ಷನ್ ವರೆಗೆ	ಮಡಿವಾಳ
ಜಯದೇವ ಜಂಕ್ಷನ್, ಈಸ್ಟ್ ಎಂಡ್ ಮುಖ್ಯರಸ್ತೆ	ಮೈಕೋಲೇಔಟ್
ಹೊಸೂರು ರಸ್ತೆ, ಸಿಂಗಸಂದ್ರ ಬಸ್ ನಿಲ್ದಾಣ, ಹುಳಿಮಾವು ಲೇಕ್ ರಸ್ತೆ	ಹುಳಿಮಾವು
ಸೇಂಟ್ ಜಾನ್ಸ್ ರಸ್ತೆ	ಫ್ರೇಜರ್ ಟೌನ್
ಓಲ್ಡ್ ಏರ್‌ಪೋರ್ಟ್ ರಸ್ತೆ	ಹಲಸೂರು
ಕಬ್ಬನ್ ರಸ್ತೆ	ಶಿವಾಜಿನಗರ
ಸುರಂಜನ್ ದಾಸ್ ರಸ್ತೆ	ಜೆ.ಬಿ.ನಗರ
ಹೊರ ವರ್ತುಲ ರಸ್ತೆ	ಬಾಣಸವಾಡಿ
ನಾಗವಾರ ರಸ್ತೆ, ಹೆಣ್ಣೂರು ಜಂಕ್ಷನ್	ಕೆ.ಜಿ.ಹಳ್ಳಿ

ನಿವೃತ್ತ ನೌಕರ ಸೇರಿ ಮೂವರ ಬಂಧನ, ಮತ್ತೊಬ್ಬ ನಾಪತ್ತೆ

ನಕಲಿ ದಾಖಲೆ: ಬಿಡಿಎ ನಿವೇಶನ ಕಬಳಿಕೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ನಕಲಿ ದಾಖಲೆಗಳನ್ನು ಸೃಷ್ಟಿಸಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ನಿವೇಶನಗಳನ್ನು ನೋಂದಣಿ ಮಾಡಿಸಿಕೊಂಡು ವಂಚಿಸುತ್ತಿದ್ದ ಮೂವರು ಆರೋಪಿಗಳನ್ನು ಶೇಷಾದ್ರಿಪುರಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಗುಬ್ಬಲಾಳ ಕ್ರಾಸ್ ಬಳಿಯ ಎಂ.ಕೆ.ಎಸ್.ಲೇಔಟ್‌ನ ನಿವಾಸಿ ಕೆ.ಚಿಕ್ಕರಾಯಿ (68), ವಸಂತನಗರದ ಬಿ.ಮಂಜುನಾಥ್ (48) ಮತ್ತು ನಾಗರಬಾವಿಯ ಮುರಳೀಧರ್ (60) ಬಂಧಿತರು. ಮತ್ತೊಬ್ಬ ಆರೋಪಿ ದೇವೇಂದ್ರ ಎಂಬಾತ ತಲೆಮರೆಸಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.


ಬಿಡಿಎ ನಿವೃತ್ತ ವಿಶೇಷ ಸಹಾಯಕ ಚಿಕ್ಕರಾಯಿ ಅವರು ಇತರೆ ಆರೋಪಿಗಳ ಜತೆ ಸೇರಿ ಈ ಕೃತ್ಯವೆಸಗಿದ್ದರು. ಆರೋಪಿಗಳು ಎಲ್.ಬೈಲಪ್ಪ ಅವರಿಗೆ ಹಂಚಿಕೆಯಾಗಿದ್ದ ಬಿಡಿಎ ನಿವೇಶನದ ನಕಲಿ ದಾಖಲೆಪತ್ರಗಳನ್ನು ಸೃಷ್ಟಿಸಿ, ನೋಂದಣಿ ಮಾಡಿಸಿಕೊಂಡಿದ್ದರು.

ಬೈಲಪ್ಪ ಅವರಿಗೆ 2006ರಲ್ಲಿ ಅರ್ಕಾವತಿ ಬಡಾವಣೆಯ 2ನೇ ಬ್ಲಾಕ್‌ನಲ್ಲಿ 40 ಅಡಿX60 ಅಡಿ ಅಳತೆಯ ನಿವೇಶನ ಹಂಚಿಕೆ ಆಗಿತ್ತು. ಈ ಸಂಬಂಧ ಗುತ್ತಿಗೆ ಮತ್ತು ಮಾರಾಟ ಒಪ್ಪಂದ ಪತ್ರ ಸಹ ನೋಂದಾಯಿಸಲಾಗಿತ್ತು. 2018ರಲ್ಲಿ ಬೈಲಪ್ಪ ಅವರಿಗೆ ಅರ್ಕಾವತಿ ಬಡಾವಣೆ ನಿವೇಶನಕ್ಕೆ ಬದಲಿಯಾಗಿ ನಾಡಪ್ರಭು ಕೆಂಪೇಗೌಡ ಬಡಾವಣೆಯ 3ನೇ ಬ್ಲಾಕ್‌ನಲ್ಲಿ ನಿವೇಶನ ಮಂಜೂರಾಗಿತ್ತು. 2019ರ ಸೆಪ್ಟೆಂಬರ್‌ನಲ್ಲಿ ಬೈಲಪ್ಪ ಮೃತಪಟ್ಟರು. ನಿವೇಶನದ ಹಕ್ಕು ವರ್ಗಾವಣೆ ಕೋರಿ ಅವರ ಪತ್ನಿ ಲಕ್ಷ್ಮೀದೇವಮ್ಮ ಅವರು ಬಿಡಿಎಗೆ ಅರ್ಜಿ ಸಲ್ಲಿಸಿದ್ದರು. ಅಧಿಕಾರಿಗಳು ಆ ನಿವೇಶನದ ದಾಖಲೆ ಪರಿಶೀಲಿಸಿದಾಗ, ಬೈಲಪ್ಪ ಎಂಬುವವರ ಹೆಸರಿಗೆ ನಿವೇಶನ ನೋಂದಣಿ ಆಗಿರುವುದು ಗೊತ್ತಾಗಿತ್ತು ಎಂದು ತಿಳಿಸಿದ್ದಾರೆ.

ಎಲ್.ಬೈಲಪ್ಪ ಅವರು ಮೃತಪಟ್ಟಿದ್ದ ವಿಷಯ ತಿಳಿದಿದ್ದ ಚಿಕ್ಕರಾಯಿ, ಅವರ ಹೆಸರಿನಲ್ಲಿ ನಕಲಿ ವ್ಯಕ್ತಿ ಮತ್ತು ದಾಖಲೆಗಳನ್ನು ಸೃಷ್ಟಿಸಿದ್ದ. ಅಸಲಿ ಎಲ್.ಬೈಲಪ್ಪರ ಬದಲಿಗೆ ನಕಲಿ ಬೈಲಪ್ಪನ ಹೆಸರಿನಲ್ಲಿ ಅರ್ಕಾವತಿ ಬಡಾವಣೆಯ ನಿವೇಶನ ರದ್ದು ಹಾಗೂ ಕೆಂಪೇಗೌಡ ಬಡಾವಣೆಯ ನಿವೇಶನದ ಶುದ್ಧ ಕ್ರಯಪತ್ರ ಮಾಡಿಸಿದ್ದ. ಈ ಕೃತ್ಯಕ್ಕೆ ಮಂಜುನಾಥ್, ದಲ್ಲಾಳಿ ಮುರಳೀಧರ್ ಹಾಗೂ ದೇವೇಂದ್ರ ಕೈ ಜೋಡಿಸಿದ್ದರು. ವಂಚನೆ ಸಂಬಂಧ ಬಿಡಿಎ ವಿಚಕ್ಷಣ ದಳದ ಅಧಿಕಾರಿಗಳು ನೀಡಿದ ದೂರು ಆಧರಿಸಿ ತನಿಖೆ ನಡೆಸಿದಾಗ ಆರೋಪಿಗಳ ಕೃತ್ಯ ಬಯಲಾಯಿತು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.



ಚಿಕ್ಕರಾಯಿ



ಮುರಳೀಧರ್



ಮಂಜುನಾಥ್

ಡಿಜಿಟಲ್ ಅರೆಸ್ಟ್: ₹8.80 ಲಕ್ಷ ವಂಚನೆ

‘ಡಿಜಿಟಲ್ ಅರೆಸ್ಟ್’ ಹೆಸರಿನಲ್ಲಿ ನಗರದ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ವಿಜ್ಞಾನಿಯೊಬ್ಬರನ್ನು ಬೆದರಿಸಿದ ವಂಚಕರು ₹8.80 ಲಕ್ಷ ದೋಚಿರುವ ಘಟನೆ ನಡೆದಿದೆ.

ಈ ಕುರಿತು ನ್ಯೂ ಹೌಸಿಂಗ್ ಕಾಲೊನಿ ನಿವಾಸಿ, 49 ವರ್ಷದ ಮಹಿಳಾ ವಿಜ್ಞಾನಿ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿರುವ ಕೇಂದ್ರ ವಿಭಾಗದ ಸೈಬರ್ ಠಾಣೆ ಪೊಲೀಸರು, ತನಿಖೆ ಕೈಗೊಂಡಿದ್ದಾರೆ.

ಸೆಪ್ಟೆಂಬರ್ 16ರಂದು ಸಿಬಿಐ ಅಧಿಕಾರಿ ಸೋಗಿನಲ್ಲಿ ವಿಜ್ಞಾನಿಗೆ ಕರೆ ಮಾಡಿದ ಅಪರಿಚಿತ ವ್ಯಕ್ತಿ, ‘ನಿಮ್ಮ ಹೆಸರಿನಲ್ಲಿರುವ ಸಿಮ್ ಕಾರ್ಡ್ ಬೇರೆಯವರು ಬಳಸುತ್ತಿದ್ದು, ಮಾನವ ಕಳ್ಳಸಾಗಣೆ ಸೇರಿ 17 ಪ್ರಕರಣಗಳು ದಾಖಲಾಗಿವೆ’ ಎಂದು ಬೆದರಿಸಿದ್ದಾನೆ. ಆದರೆ ವಿಜ್ಞಾನಿ, ‘ಯಾವುದೇ ಅಕ್ರಮ ಕೆಲಸದಲ್ಲಿ ನಾನು ತೊಡಗಿಲ್ಲ’ ಎಂದಿದ್ದಾರೆ.

ಕೆಲ ಹೊತ್ತಿನ ಬಳಿಕ ಮತ್ತೊಬ್ಬ ವ್ಯಕ್ತಿ ವಿಡಿಯೊ ಕರೆ ಮಾಡಿ, ‘ಪ್ರಕರಣದ ಕುರಿತು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸುತ್ತಿದೆ. ತನಿಖೆಗೆ ಸಹಕರಿಸದಿದ್ದರೆ ಬಂಧಿಸಲಾಗುವುದು. ಹೇಳಿದಂತೆ ಕೇಳಿದರೆ ಸಹಾಯ ಮಾಡುತ್ತೇನೆ. ತನಿಖೆ ಪೂರ್ಣವಾಗುವ ತನಕ ಯಾರಿಗೂ ವಿಷಯ ತಿಳಿಸಬಾರದು’ ಎಂದು ಹೇಳಿದ್ದಾನೆ.

‘ಸಿಬಿಐ ಅಧಿಕಾರಿ ಮಾತನಾಡುತ್ತಿದ್ದಾರೆ ಎಂದು ಆತಂಕಗೊಂಡ ವಿಜ್ಞಾನಿ, ವಂಚಕರು ನೀಡಿದ ಬ್ಯಾಂಕ್ ಖಾತೆಗೆ ₹8.80 ಲಕ್ಷ ವರ್ಗಾಯಿಸಿದ್ದರು. ಮತ್ತಷ್ಟು ಹಣಕ್ಕೆ ಬೇಡಿಕೆಯಿಟ್ಟಾಗ ಅನುಮಾನಗೊಂಡು, ಈ ವಿಚಾರವನ್ನು ಕುಟುಂಬಸ್ಥರ ನಡುವೆ ಚರ್ಚಿಸಿದ್ದಾರೆ. ಆಗ ಸೈಬರ್ ವಂಚಕರ ಕೃತ್ಯ ಎಂಬುದು ಗೊತ್ತಾಗಿ ದೂರು ನೀಡಿದರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಮನುಷ್ಯತ್ವದೆಡೆಗೆ ಸಮುದಾಯ’ ಕಲಾಕೃತಿ ಪ್ರದರ್ಶನ

ಬೆಂಗಳೂರು: ಸಮುದಾಯ ಕರ್ನಾಟಕ ಸಂಘಟನೆಯು ‘ಸಮುದಾಯ 50’ರ ಸಂಭ್ರಮದ ಪ್ರಯುಕ್ತ ‘ಮನುಷ್ಯತ್ವದೆಡೆಗೆ ಸಮುದಾಯ 50’ ಶೀರ್ಷಿಕೆಯಡಿ ಕರ್ನಾಟಕ ಚಿತ್ರಕಲಾ ಪರಿಷತ್ತಿನ ದೇವರಾಜ ಅರಸು ಸಭಾಂಗಣದಲ್ಲಿ ಹಮ್ಮಿಕೊಂಡಿರುವ ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಶನಿವಾರ ಚಾಲನೆ ದೊರೆಯಿತು.

ಕರ್ನಾಟಕ ಲಲಿತಕಲಾ ಅಕಾಡೆಮಿ ಮಾಜಿ ಅಧ್ಯಕ್ಷೆ ಎಂ.ಜೆ. ಕಮಲಾಕ್ಷಿ ಉದ್ಘಾಟಿಸಿದರು. ‘ಸಮುದಾಯ 50’ರ ಭಾಗವಾಗಿ ಇದೇ ಆಗಸ್ಟ್‌ನಲ್ಲಿ ಹಮ್ಮಿಕೊಂಡಿದ್ದ ಕಲಾ ಶಿಬಿರದಲ್ಲಿ ರಚಿಸಲಾದ 31 ಕಲಾವಿದರ 31 ಕಲಾಕೃತಿಗಳನ್ನು ಸೋಮವಾರದವರೆಗೆ ನಡೆಯುವ ಪ್ರದರ್ಶನ ಹಾಗೂ ಮಾರಾಟಕ್ಕೆ ಇರಿಸಲಾಗಿದೆ.

ಅಕ್ರೆಲಿಕ್ ಕಲಾಕೃತಿಗಳು ನೋಡುಗರ ಕಣ್ಮನ ಸೆಳೆಯುತ್ತಿದ್ದು, ದಬ್ಬಾಳಿಕೆ, ದೌರ್ಜನ್ಯ ಬಿಂಬಿಸುವ ಕಲಾಕೃತಿಗಳ ಜತೆಗೆ ಸೌಹಾರ್ದ, ಸಂವಿಧಾನದ ಆಶಯ ಸಾರುವ ವರ್ಣಚಿತ್ರಗಳಿವೆ. 2 ಅಡಿ x2.5 ಅಡಿ ಅಳತೆಯ ಕಲಾಕೃತಿಗಳು ಪ್ರದರ್ಶನದಲ್ಲಿದ್ದು, ಅವುಗಳಿಗೆ ತಲಾ ₹10 ಸಾವಿರ ನಿಗದಿಪಡಿಸಲಾಗಿದೆ.

‘ಮಾನವ ಸಂವೇದನೆಯೆಂಬುದು ಜಾತಿ, ಮತ, ಲಿಂಗ, ವಯಸ್ಸುಗಳನ್ನು ಮೀರಿದ ಸಂವೇದನೆ. ದೌರ್ಜನ್ಯ, ಅನ್ಯಾಯ, ಅವಮಾನ, ಆಘಾತ ಯಾರಿಗೇ ಸಂಭವಿಸಿದರೂ ಮನುಷ್ಯತ್ವ ಇರುವವರು ನೊಂದು ಕೊಳ್ಳುತ್ತಾರೆ. ಬಂಧನ, ಹಿಂಸೆ, ಹಸಿವು ಇರದ ಸೌಹಾರ್ದ ಸಹೋದರತೆಯ ವಾತಾವರಣ ಬಯಸುವುದು ಮನುಷ್ಯರ ಗುಣ’ ಎಂದು ‘ಸಮುದಾಯ 50’ರ ಸ್ವಾಗತ ಸಮಿತಿ ಕಾರ್ಯಾಧ್ಯಕ್ಷರೂ ಆದ ಸಾಹಿತಿ ಬಂಜಗೆರೆ ಜಯಪ್ರಕಾಶ್ ಅವರು ಹೇಳಿದರು.

ಪ್ರಧಾನ ಕಾರ್ಯದರ್ಶಿ ಗುಂಡಣ್ಣ ಚಿಕ್ಕಮಗಳೂರು, ‘ಸಮುದಾಯ 50ರ ಭಾಗವಾಗಿ ವರ್ಷ ಪೂರ್ತಿ ರಾಜ್ಯದ ವಿವಿಧೆಡೆ ಕಾರ್ಯಕ್ರಮ ಹಮ್ಮಿಕೊಳ್ಳಲು ಯೋಜನೆ ರೂಪಿಸಲಾಗಿದೆ’ ಎಂದರು.

ಗೌರಿಬಿದನೂರು: 59 ಹಸುಗಳ ರಕ್ಷಣೆ

ಗೌರಿಬಿದನೂರು: ನಗರದ ನಾಗಪ್ಪ ಬ್ಲಾಕ್ ಬಳಿ ಅಕ್ರಮವಾಗಿ ಎರಡು ಕಂಟೈನರ್‌ಗಳಲ್ಲಿ ಸಾಗಿಸುತ್ತಿದ್ದ 59 ಹಸುಗಳನ್ನು ನಗರ ಠಾಣೆ ಪೊಲೀಸರು ಭಾನುವಾರ ಮುಂಜಾನೆ ರಕ್ಷಣೆ ಮಾಡಿದ್ದಾರೆ.

ಖಚಿತ ಮಾಹಿತಿ ಮೇರೆಗೆ ನಗರ ಠಾಣೆ ಪೊಲೀಸರು ಕಾರ್ಯಾಚರಣೆ ನಡೆಸಿ ಹೈದರಾಬಾದ್‌ನಿಂದ ಕೇರಳದ ಕಸಾಯಿಖಾನೆಗೆ ಸಾಗಿಸುತ್ತಿದ್ದ ಹಸುಗಳನ್ನು ರಕ್ಷಣೆ ಮಾಡಿದ್ದಾರೆ.

ಒಂದು ವಾಹನದಲ್ಲಿ 40 ಹಸು, ಮತ್ತೊಂದು ವಾಹನದಲ್ಲಿ 19 ಹಸುಗಳನ್ನು ಸಾಗಿಸಲಾಗುತ್ತಿತ್ತು.

ವಿದ್ಯಾರ್ಥಿ ವೇತನ ಕೈಪಿಡಿ

ಪರಿವರ್ತನ್ ಇಸಿಎಸ್‌ಎಸ್ ಯೋಜನೆ

ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ 'ಪರಿವರ್ತನ್ ಇಸಿಎಸ್‌ಎಸ್ ಯೋಜನೆ'ಯಡಿ ನೆರವು ನೀಡಲಾಗುತ್ತದೆ.
ಅರ್ಹತೆ: 1ರಿಂದ 12ನೇ ತರಗತಿ, ಡಿಪ್ಲೊಮಾ, ಐಟಿಐ, ಪಾಲಿಟೆಕ್ನಿಕ್, ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.
ಆರ್ಥಿಕ ಸಹಾಯ: ₹ 75 ಸಾವಿರದವರೆಗೆ.
ಅರ್ಜಿ ಸಲ್ಲಿಸಲು ಕೊನೆ ದಿನ: 30-10-2025
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್
ಮಾಹಿತಿಗೆ: Short Url: www.b4s.in/praja/HDFC57



ಹೋಂವರ್ಕ್ ಈಗ ಹೊರೆಯಲ್ಲ

10 ನಿಮಿಷದ ನಿಯಮ!

ಅಮೆರಿಕದ 'ರಾಷ್ಟ್ರೀಯ ಪೋಷಕರು–ಶಿಕ್ಷಕರ ಸಂಸ್ಥೆ' (ಪಿಟಿಎ) ಮತ್ತು ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ '10 ನಿಮಿಷದ ನಿಯಮ'ದಂತೆ, ಒಬ್ಬ ವಿದ್ಯಾರ್ಥಿಯು ಒಂದು ದಿನದಲ್ಲಿ ತನ್ನ ತರಗತಿಗೆ ತಕ್ಕಂತೆ 10 ನಿಮಿಷ ಮಾತ್ರ ಹೋಂವರ್ಕ್ ಮಾಡಬೇಕು. ಅಂದರೆ, ಒಂದನೇ ತರಗತಿ ವಿದ್ಯಾರ್ಥಿಯು 10 ನಿಮಿಷ ಮಾಡಿದರೆ, 12ನೇ ತರಗತಿ ವಿದ್ಯಾರ್ಥಿ 120 ನಿಮಿಷದವರೆಗೆ ಮಾಡಬೇಕು. ಆದರೆ, ಭಾರತದಲ್ಲಿ ಹೆಚ್ಚು ಹೋಂವರ್ಕ್ ಕೊಡುವ ಪದ್ಧತಿ ಇದ್ದು, ಕೆಲವು ಮಕ್ಕಳು ದಿನಕ್ಕೆ 3–4 ಗಂಟೆಗಳಷ್ಟು ಅದರಲ್ಲಿ ತೊಡಗಿರುತ್ತಾರೆ.

> ಸೃಜನಶೀಲತೆಯ ಹೆಸರಿನಲ್ಲಿ ಸ್ಕ್ರ್ಯಾಪ್ ಬುಕ್‌ಗಳನ್ನು ಮಾಡುವ ಬದಲು ನನ್ನ ಮಗುವಿಗೆ ಮಣ್ಣಿನಲ್ಲಿ ಆಟವಾಡುವುದು, ನೆರೆಯ ಮಕ್ಕಳೊಂದಿಗೆ ಸೇರುವುದು ಮತ್ತು ಜನರೊಂದಿಗೆ ಸಂವಹನ ನಡೆಸುವಂತಹ ಹೋಂವರ್ಕ್ ನೀಡುತ್ತಿರುವುದರಿಂದ ನನಗೆ ಸಂತೋಷವಾಗಿದೆ. ಮಕ್ಕಳು ಟಿ.ವಿ., ಮೊಬೈಲ್ ಪರದೆಗಳಿಗೆ ಅಂಟಿಕೊಂಡಿರುವ ಪ್ರಸ್ತುತ ಸ್ಥಿತಿಯಲ್ಲಿ, ದಶಕಗಳ ಹಿಂದೆ ನಮ್ಮ ದಿನಚರಿಯ ಅತ್ಯಂತ ಸ್ವಾಭಾವಿಕ ಭಾಗವಾಗಿದ್ದ ಈ ರೀತಿಯ ಹೋಂವರ್ಕ್ ಮಕ್ಕಳಿಗೆ ಬೇಕಾಗಿದೆ.
>
> **ತುಷಾರ್ ಮೆಹ್ತಾ,**
> ಪೋಷಕ, ಸಾಫ್ಟ್‌ವೇರ್ ಡೆವಲಪರ್

ಒಂದು ಕಾಲದಲ್ಲಿ ಶಾಲಾ ಮಕ್ಕಳ ಹೋಂವರ್ಕ್ ಎಂದರೆ, ಗಣಿತದ ಲೆಕ್ಕಗಳನ್ನು ಮತ್ತೆ ಮತ್ತೆ ಬಿಡಿಸುವುದು, ಪ್ರಬಂಧ ಬರೆಯುವಂತಹ ಚಟುವಟಿಕೆಗಳೇ ಹೆಚ್ಚಾಗಿರುತ್ತಿದ್ದವು. ಕಾಲಾನುಕ್ರಮದಲ್ಲಿ ಹೋಂವರ್ಕ್‌ನ ಪರಿಕಲ್ಪನೆ ಬದಲಾಗಿದ್ದು, ಹೆಚ್ಚು ವೈವಿಧ್ಯಮಯ ಹಾಗೂ ಕಲಿಕಾಸ್ನೇಹಿ ಪದ್ಧತಿಗಳು ರೂಢಿಗೆ ಬಂದಿವೆ. ಶಿಕ್ಷಣ ನೀತಿಯಲ್ಲಿ ಮಹತ್ವದ ಬದಲಾವಣೆಗಳು ಆಗಿರುವುದನ್ನು ಇದು ಸೂಚಿಸುತ್ತದೆ.

ದೇಶದಾದ್ಯಂತ ತರಗತಿಗಳು ಹೊಸ ಕಲಿಕಾ ಮಾದರಿಗಳನ್ನು ಅಳವಡಿಸಿಕೊಳ್ಳುತ್ತಾ ಸಾಗಿರುವಂತೆಯೇ ಹೋಂವರ್ಕ್‌ನ ಸ್ವರೂಪವೂ ಸದ್ದಿಲ್ಲದೇ ಬದಲಾಗುತ್ತಿದೆ. ಡಿಜಿಟಲ್ ಸಾಧನಗಳು ಮತ್ತು ಸೃಜನಾತ್ಮಕತೆ, ವಿಮರ್ಶಾತ್ಮಕ ಚಿಂತನೆಯೇ ಪ್ರಧಾನವಾದ ಬೋಧನಾ ವಿಧಾನಗಳಿಂದ ಇಂದು ಮರುರೂಪ ಪಡೆದಿದೆ ಎನ್ನುತ್ತಿದ್ದಾರೆ ಶಿಕ್ಷಕರು.

'ಹಿಂದೆ, ಹೋಂವರ್ಕ್ ಎಂದರೆ ವಾಕ್ಯಗಳನ್ನು ಕಾಪಿ ಮಾಡುವುದು, ಮಗ್ಗಿ ಉರು ಹೊಡೆಯುವುದಾಗಿತ್ತು. ಇಂದು ಹೆಚ್ಚಿನ ಶಾಲೆಗಳು ಪ್ರಾಜೆಕ್ಟ್ ಆಧಾರಿತ, ವಿಷಯ ನಿರೂಪಣೆ ಮತ್ತು ಸಮುದಾಯ ಆಧಾರಿತ ಚಟುವಟಿಕೆಗಳಿಗೆ ಆದ್ಯತೆ ನೀಡುತ್ತಿವೆ' ಎನ್ನುತ್ತಾರೆ ಶಾಲೆಯೊಂದರ ಅಧ್ಯಕ್ಷ ಮತ್ತು ದೆಹಲಿ ರಾಜ್ಯ ಸಾರ್ವಜನಿಕ ಶಾಲಾ ನಿರ್ವಹಣಾ ಸಂಸ್ಥೆಯ ಅಧ್ಯಕ್ಷ ಆರ್.ಸಿ.ಜೈನ್.

ಮಕ್ಕಳಿಗೆ ಹೊರೆ ಎನಿಸುವಷ್ಟು ಹೋಂವರ್ಕ್ ನೀಡುವ ಬಗ್ಗೆ ಬಹಳ ಹಿಂದಿನಿಂದಲೂ ಆತಂಕ ವ್ಯಕ್ತವಾಗುತ್ತಲೇ ಇದೆ. ಶಿಕ್ಷಣ ಸ್ಥಿತಿಗತಿ ವಾರ್ಷಿಕ ವರದಿ–2018 (ಎಎಸ್ಇಆರ್), ನಗರ ಪ್ರದೇಶಗಳ ಶೇ 74ರಷ್ಟು ವಿದ್ಯಾರ್ಥಿಗಳಿಗೆ ಹೋಂವರ್ಕ್ ನೀಡಲಾಗುತ್ತಿದೆ ಎಂದು ಹೇಳಿದೆ. ಆದರೂ ಕಲಿಕಾ ನ್ಯೂನತೆಗಳು ಕಂಡುಬಂದಿದ್ದು, ಇದು 'ಭಾರಿ ಪ್ರಮಾಣ'ದಲ್ಲಿ ನೀಡಲಾಗುವ ಹೋಂವರ್ಕ್‌ನ ಉಪಯುಕ್ತತೆ ಬಗ್ಗೆ ಹಲವು ಪ್ರಶ್ನೆಗಳನ್ನು ಮೂಡಿಸಿದೆ.

ವಿದ್ಯಾರ್ಥಿಗಳ ಮೇಲಿನ ಶೈಕ್ಷಣಿಕ ಹೊರೆಯನ್ನು ಕಡಿಮೆ ಮಾಡುವುದು ಮತ್ತು ಚಟುವಟಿಕೆ ಆಧಾರಿತ ಕಲಿಕೆಯನ್ನು ಉತ್ತೇಜಿಸುವ ದಿಸೆಯಲ್ಲಿ ಹೋಂವರ್ಕ್‌ನ ಪರಿಕಲ್ಪನೆ ಬದಲಾಗುತ್ತಿದೆ. ಇದಕ್ಕೆ ರಾಷ್ಟ್ರೀಯ ಶಿಕ್ಷಣ ನೀತಿ–2020 (ಎನ್‌ಇಪಿ) ಭಾಗಶಃ ಪ್ರೇರಣೆಯಾಗಿದೆ ಎನ್ನುವುದು ಶಿಕ್ಷಣತಜ್ಞರ ಅಭಿಪ್ರಾಯ. ಎನ್‌ಇಪಿ ಜಾರಿಯಾದ ನಂತರ ಕೇಂದ್ರ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ (ಸಿಬಿಎಸ್‌ಇ) ಮತ್ತು ಹಲವು ರಾಜ್ಯಗಳ ಶಿಕ್ಷಣ ಮಂಡಳಿಗಳು ವಿದ್ಯಾರ್ಥಿಗಳಿಗೆ ಆಹ್ಲಾದಕರ ಎನಿಸುವ, ಪ್ರಾಯೋಗಿಕವಾದ ಕಾರ್ಯಗಳನ್ನು ನಿಯೋಜಿಸುವ ಬಗ್ಗೆ ಶಿಕ್ಷಕರಿಗೆ ಸುತ್ತೋಲೆಗಳನ್ನು ಹೊರಡಿಸಿವೆ.

'ವಿದ್ಯಾರ್ಥಿಗಳು ಏಕೆ ಮತ್ತು ಹೇಗೆ ಎಂಬ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳುವಂತಹ ಹೋಂವರ್ಕ್ ಇಂದು ಅಗತ್ಯವಿದೆ. ಕಂಠಪಾಠ ಮಾಡುವ ಪದ್ಧತಿಯು ಸಂಕೀರ್ಣವೂ ಅಗತ್ಯವೂ ಆದ ವಿಷಯಗಳ ಕಲಿಕೆಗೆ ತೊಡಕನ್ನು ಉಂಟುಮಾಡುತ್ತದೆ. ಪಠ್ಯಪುಸ್ತಕಗಳನ್ನಷ್ಟೇ ಓದುವ ಬದಲು ಪ್ರಯೋಗಗಳು, ಪ್ರಾಜೆಕ್ಟ್‌ಗಳು ಮತ್ತು ಹೊಸ ಸವಾಲುಗಳನ್ನು ಎದುರಿಸುವ ಮೂಲಕ ಕಲಿಯಲು ಪ್ರೋತ್ಸಾಹಿಸಲಾಗುತ್ತದೆ' ಎಂದು ಸಿಬಿಎಸ್‌ಇ ಅಧಿಕಾರಿಯೊಬ್ಬರು ವಿವರಿಸಿದರು.

ಡಿಜಿಟಲ್ ತರಗತಿಗಳು ಹೆಚ್ಚಾಗುವುದರೊಂದಿಗೆ, ವಿದ್ಯಾರ್ಥಿಗಳಿಗೆ ವಿಡಿಯೊ ರೂಪಿಸಲು, ಸ್ಲೈಡ್ ಶೋ ತಯಾರಿಸಲು ಅಥವಾ ಅಸೈನ್‌ಮೆಂಟ್ ಪೂರ್ಣಗೊಳಿಸುವುದಕ್ಕಾಗಿ ಆನ್‌ಲೈನ್‌ನಲ್ಲಿ ಹುಡುಕಾಟ ನಡೆಸಲು ಸೂಚಿಸಲಾಗುತ್ತದೆ. ಕೆಲವು ಶಾಲೆಗಳಲ್ಲಿ ಹೋಂವರ್ಕ್ ಎಂಬುದು ಪಠ್ಯಪುಸ್ತಕಗಳ ವ್ಯಾಪ್ತಿಯನ್ನು ಮೀರಿ ಮುಂದೆ ಸಾಗಿದ್ದು, ಕುಟುಂಬದ ಸದಸ್ಯರನ್ನು ಸಂದರ್ಶಿಸುವುದು, ಕೈತೋಟ ನಿರ್ವಹಿಸುವುದು ಅಥವಾ ಸ್ಥಳೀಯ ಸಂಪ್ರದಾಯಗಳನ್ನು ದಾಖಲಿಸುವಂತಹ ಚಟುವಟಿಕೆಗಳಿಗೆ ವಿಸ್ತರಿಸಿದೆ. ಮಕ್ಕಳು ಉರು ಹೊಡೆಯುವುದರಿಂದ ಮುಕ್ತರಾಗುವುದನ್ನು ಬಹುತೇಕ ಪೋಷಕರು ಸ್ವಾಗತಿಸಿದ್ದಾರೆ. ಕೆಲವರು ಮಾತ್ರ ಪ್ರಾಜೆಕ್ಟ್ ಆಧಾರಿತವಾದ, ಹೆಚ್ಚು ಕೆಲಸ–ಕೌಶಲ ಬೇಡುವ ಹೋಂವರ್ಕ್ ನೀಡುವುದು ಪೋಷಕರ ಮೇಲಿನ ಅವಲಂಬನೆಯನ್ನು ಹೆಚ್ಚಿಸುತ್ತದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

'ಮಕ್ಕಳು ಹೋಂವರ್ಕ್ ಹೆಸರಿನಲ್ಲಿ ನಕಲು ಮಾಡುವುದರಲ್ಲೇ ಗಂಟೆಗಟ್ಟಲೆ ಕಳೆಯುತ್ತಿಲ್ಲ ಎಂದು ನಮಗೆ ಸಂತೋಷವಾಗಿದೆ. ಆದರೆ ಸೃಜನಶೀಲತೆಯ ಹೆಸರಿನಲ್ಲಿ ಪೋಷಕರೇ ಹೋಂವರ್ಕ್ ಮಾಡುವಂತೆ ಆಗಬಾರದು. ಪೋಷಕರ ಅಲ್ಪ ನೆರವನ್ನಷ್ಟೇ ಬೇಡುವ ರೀತಿಯಲ್ಲಿ ಅದು ಇರಬೇಕು' ಎಂದು ಪೋಷಕರಾದ ದೆಹಲಿಯ ದಿವಾಂಶಿ ಶ್ರೇಯ್ ಹೇಳುತ್ತಾರೆ.

'ತರಗತಿಯ ಕಲಿಕೆ ಮತ್ತು ಸ್ವಯಂ ಅಧ್ಯಯನದ ನಡುವಿನ ಸೇತುವೆ ಹೋಂವರ್ಕ್. ಆದರೆ, ಅದು ಮಕ್ಕಳನ್ನು ಹೈರಾಣ ಮಾಡುವಂತೆ ಇರಬಾರದು' ಎನ್ನುತ್ತಾರೆ ಶಿಕ್ಷಣ ತಜ್ಞೆ ಮೀತಾ ಸೇನ್‌ಗುಪ್ತಾ. ❖

ಬ್ಯಾಂಕಿಂಗ್ ಪರಿಶ್ರಮಕ್ಕೆ ತಕ್ಕ ಫಲ

• ಎಸ್.ಟಿ.ರಾಮಚಂದ್ರ

ದೇಶದ ಆರ್ಥಿಕತೆಯ ಮೂಲ ಎಂದೇ ಹೇಳಬಹುದಾದ ಬ್ಯಾಂಕುಗಳು ಪ್ರತಿವರ್ಷ ಸಾವಿರಾರು ಹೊಸ ಹುದ್ದೆಗಳನ್ನು ಘೋಷಿಸುತ್ತಿವೆ. ಇದನ್ನು ಒಂದು ರೀತಿಯ 'ಉದ್ಯೋಗ ಸುಗ್ಗಿ' ಎಂದು ಕರೆಯಬಹುದು. ಈ ದಿಸೆಯಲ್ಲಿ, ಬ್ಯಾಂಕಿಂಗ್ ಉದ್ಯೋಗಗಳ ಪ್ರಸ್ತುತ ಸ್ಥಿತಿ, ಅವುಗಳ ಮಹತ್ವ, ಸವಾಲುಗಳು, ಸಿದ್ಧತಾ ವಿಧಾನಗಳು ಮತ್ತು ಭವಿಷ್ಯದ ಬೆಳವಣಿಗೆಗಳ ಕುರಿತು ಅರಿಯುವುದು ಇದಕ್ಕೆ ಪೂರಕವಾಗಿರುತ್ತದೆ.

ಬ್ಯಾಂಕುಗಳು ಬರೀ ಹಣಕಾಸು ವ್ಯವಹಾರ ನಡೆಸುವ ಕೇಂದ್ರಗಳಲ್ಲ, ಅವು ಸಮಾಜದ ಪ್ರತಿ ಹಂತವನ್ನೂ ತಲುಪುತ್ತವೆ. ಗ್ರಾಮೀಣಾಭಿವೃದ್ಧಿ, ಮಹಿಳಾ ಸಬಲೀಕರಣ, ಕೃಷಿ ಸಾಲ ವಿತರಣೆ, ಸ್ಟಾರ್ಟ್–ಅಪ್ ಬೆಂಬಲ ಎಲ್ಲವೂ ಬ್ಯಾಂಕಿಂಗ್ ಕ್ಷೇತ್ರದೊಂದಿಗೆ ಸಂಪರ್ಕ ಹೊಂದಿವೆ. ಇತ್ತೀಚಿನ ವರ್ಷಗಳಲ್ಲಿ 'ಡಿಜಿಟಲ್ ಇಂಡಿಯಾ' ಮತ್ತು 'ಜನಧನ್ ಯೋಜನೆ'ಗಳಂತಹ ಕಾರ್ಯಕ್ರಮಗಳಿಂದ ಬ್ಯಾಂಕಿಂಗ್ ಸೇವೆಗಳು ಸಾಮಾನ್ಯ ಜನರ ಮನೆ ಬಾಗಿಲಿಗೆ ತಲುಪಿವೆ. ಇದರಿಂದಾಗಿ, ಕೌಶಲ ಹೊಂದಿರುವ ಮಾನವ ಸಂಪನ್ಮೂಲಕ್ಕೆ ನಿರಂತರ ಬೇಡಿಕೆ ಸೃಷ್ಟಿಯಾಗಿದೆ. ಪ್ರತಿ ಶಾಖೆಯಲ್ಲೂ ನಡೆಯುವ ಸಾಲ ಮಂಜೂರಾತಿ, ಹೂಡಿಕೆ ನಿರ್ವಹಣೆ ಅಥವಾ ಆನ್‌ಲೈನ್ ಪಾವತಿಯಂತಹ ಎಲ್ಲ ಸೇವೆಗಳಿಗೂ ನುರಿತ ಅಧಿಕಾರಿಗಳು ಮತ್ತು ಕ್ಲರ್ಕ್‌ಗಳ ಅವಶ್ಯಕತೆ ಇರುತ್ತದೆ.

ಬ್ಯಾಂಕಿಂಗ್ ಉದ್ಯೋಗಗಳನ್ನು ಮುಖ್ಯವಾಗಿ ನಾಲ್ಕು ವರ್ಗಗಳಲ್ಲಿ ವಿಂಗಡಿಸಬಹುದು. ಅವುಗಳೆಂದರೆ: ಪ್ರೊಬೇಷನರಿ ಅಧಿಕಾರಿ (ಪಿಒ), ಕ್ಲರ್ಕ್ ಹುದ್ದೆ, ಸ್ಪೆಷಲಿಸ್ಟ್ ಆಫೀಸರ್ ಹುದ್ದೆ ಹಾಗೂ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಲ್ಲಿನ (ಆರ್‌ಆರ್‌ಬಿ) ಉದ್ಯೋಗ. ಬ್ಯಾಂಕುಗಳಲ್ಲಿ ಹಿಂದಿನ 10 ವರ್ಷಗಳಲ್ಲಿ ಪ್ರತಿವರ್ಷ ಸರಾಸರಿ 35,000ಕ್ಕೂ ಹೆಚ್ಚು ಹುದ್ದೆಗಳು ಭರ್ತಿಯಾಗಿವೆ. ಆದರೆ ಈ ವರ್ಷ 60,000ಕ್ಕೂ ಹೆಚ್ಚು ಹುದ್ದೆಗಳು ಭರ್ತಿಯಾಗುವ ನಿರೀಕ್ಷೆ ಇದೆ. ಐಬಿಪಿಎಸ್ ಮೂಲಕ ಬಹುತೇಕ ಎಲ್ಲ ಸರ್ಕಾರಿ ಬ್ಯಾಂಕುಗಳು ಪ್ರತಿವರ್ಷ ನೇಮಕಾತಿ ನಡೆಸುತ್ತವೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಸಾವಿರಾರು ಹುದ್ದೆಗಳನ್ನು ಸ್ವತಂತ್ರವಾಗಿ ಪ್ರಕಟಿಸುತ್ತದೆ. ಆರ್‌ಆರ್‌ಬಿಗಳಲ್ಲಿ ವರ್ಷಕ್ಕೆ 10,000ಕ್ಕೂ ಹೆಚ್ಚು ಹುದ್ದೆಗಳು ಖಾಲಿಯಾಗುತ್ತಿವೆ.

ಸ್ಪರ್ಧಾತ್ಮಕ ಪರೀಕ್ಷೆಗಳ ಸ್ವರೂಪ: ಬ್ಯಾಂಕಿಂಗ್ ಹುದ್ದೆಗಳಿಗೆ ಪ್ರವೇಶ ಪಡೆಯಲು ಸ್ಪರ್ಧಾತ್ಮಕ ಪರೀಕ್ಷೆಗಳೇ ಮುಖ್ಯ ದಾರಿ. ಇದರಲ್ಲಿ ಸಾಮಾನ್ಯವಾಗಿ ಪೂರ್ವಭಾವಿ ಪರೀಕ್ಷೆ (ಪ್ರಿಲಿಮ್ಸ್) ಮತ್ತು ಮುಖ್ಯ ಪರೀಕ್ಷೆ (ಮೇನ್ಸ್) ಎಂಬ ಎರಡು ಹಂತಗಳಿರುತ್ತವೆ. ಪೂರ್ವಭಾವಿ ಪರೀಕ್ಷೆಯಲ್ಲಿ ಸಮಯ ನಿರ್ವಹಣೆ ಹಾಗೂ ಮುಖ್ಯ ಪರೀಕ್ಷೆಯಲ್ಲಿ ಆಳವಾದ ಜ್ಞಾನ ಮತ್ತು ವಿಶ್ಲೇಷಣಾ ಸಾಮರ್ಥ್ಯದ ಪರೀಕ್ಷೆ ನಡೆಯುತ್ತದೆ.

ಅಭ್ಯರ್ಥಿಗಳು ತಮ್ಮ ಸಾಮರ್ಥ್ಯವನ್ನು ಅರಿತು, ನಿರಂತರ ಅಭ್ಯಾಸ ಮಾಡಿದರೆ ಬ್ಯಾಂಕಿಂಗ್ ಉದ್ಯೋಗ ಪಡೆಯುವುದು ಕಷ್ಟವಲ್ಲ. ಮುಂದಿನ ದಶಕದಲ್ಲಿ ಬ್ಯಾಂಕಿಂಗ್ ಕ್ಷೇತ್ರವು ಇನ್ನೂ ಹೆಚ್ಚಿನ ಉದ್ಯೋಗ ಅವಕಾಶಗಳನ್ನು ಸೃಷ್ಟಿಸುವ ನಿರೀಕ್ಷೆಯಿದೆ. ಪರಿಶ್ರಮ ಮತ್ತು ದೃಢಸಂಕಲ್ಪದಿಂದ ಯುವಜನ ಈ ಅವಕಾಶವನ್ನು ಬಳಸಿಕೊಳ್ಳಬೇಕು. ಈ ಮೂಲಕ ವೈಯಕ್ತಿಕ ಭವಿಷ್ಯವನ್ನು ಭದ್ರಗೊಳಿಸಿಕೊಳ್ಳುವುದಷ್ಟೇ ಅಲ್ಲ, ದೇಶದ ಆರ್ಥಿಕತೆಯ ಕಟ್ಟಡಕ್ಕೂ ಬಲ ತುಂಬುವ ಕೆಲಸ ಆಗಬೇಕಾಗಿದೆ.

ಲೇಖಕ: ನಿವೃತ್ತ ಪ್ರಧಾನ ವ್ಯವಸ್ಥಾಪಕ, ಕೆನರಾ ಬ್ಯಾಂಕ್

ಯೋಜಿಸಿದರೆ ಯಶಸ್ಸು

ಬ್ಯಾಂಕಿಂಗ್ ಪರೀಕ್ಷೆಗಳು ಕಠಿಣ ಎಂದು ಭಾಸವಾದರೂ ಕೆಳಗಿನಂತೆ ಸರಿಯಾಗಿ ಯೋಜಿಸಿ ಅಭ್ಯಾಸ ಮಾಡಿದರೆ ಯಶಸ್ಸು ಸಾಧಿಸಬಹುದು:

- ಮಾದರಿ ಪರೀಕ್ಷೆಗಳ ಅಭ್ಯಾಸ ಮಾಡಿ
- ಆರ್ಥಿಕ ಕ್ಷೇತ್ರದ ಸಮಾಚಾರವನ್ನು ಹತ್ತಿರದಿಂದ ಗಮನಿಸಿ
- ಸಮಯ ನಿರ್ವಹಣೆ ಕೌಶಲ ಬೆಳೆಸಿಕೊಳ್ಳಿ
- ಆನ್‌ಲೈನ್ ಹಾಗೂ ಆಫ್‌ಲೈನ್ ಕೋಚಿಂಗ್ ಕೇಂದ್ರಗಳ ಮಾರ್ಗದರ್ಶನ ಪಡೆಯಿರಿ
- ಸ್ವಯಂ ಶಿಸ್ತು ಮತ್ತು ಧೈರ್ಯ ಇರಲಿ

ಸ್ಟೂಡೆಂಟ್ ಕಾರ್ನರ್

ಲಸಿಕೆಗೆ ವಿ.ವಿ. ನೆರವು

ಲಖನೌ: ನೂರಕ್ಕೂ ಹೆಚ್ಚು ಹೆಣ್ಣುಮಕ್ಕಳಿಗೆ ಇಲ್ಲಿನ ರಾಜಭವನದಲ್ಲಿ ಇತ್ತೀಚೆಗೆ ಎಚ್‌ಪಿವಿ (ಹ್ಯೂಮನ್ ಪ್ಯಾಪಿಲ್ಲೋಮ ವೈರಸ್) ಲಸಿಕೆಯನ್ನು ಉಚಿತವಾಗಿ ನೀಡಲಾಯಿತು.

ಹದಿಹರೆಯದ ಹೆಣ್ಣುಮಕ್ಕಳನ್ನು ಗರ್ಭಕಂಠದ ಕ್ಯಾನ್ಸರ್‌ನಿಂದ ಪಾರು ಮಾಡುವ ಉದ್ದೇಶವನ್ನು ಈ ಯೋಜನೆ ಹೊಂದಿದೆ.

'ಗರ್ಭಕಂಠದ ಕ್ಯಾನ್ಸರ್ ಪ್ರಕರಣಗಳು ಹೆಚ್ಚುತ್ತಿದ್ದು, ಬಡ ಕುಟುಂಬಗಳಿಗೆ ಎಚ್‌ಪಿವಿ ಲಸಿಕೆ ಕೊಡಿಸುವ ಸಾಮರ್ಥ್ಯ ಇರುವುದಿಲ್ಲ. ಹೀಗಾಗಿ, ವಿಶ್ವವಿದ್ಯಾಲಯಗಳ ನೆರವಿನೊಂದಿಗೆ ರಾಜಭವನವು ವಿಶೇಷ ಯೋಜನೆ ಹಮ್ಮಿಕೊಂಡಿದೆ. 50 ಸಾವಿರಕ್ಕೂ ಹೆಚ್ಚು ಹೆಣ್ಣುಮಕ್ಕಳಿಗೆ ಈಗಾಗಲೇ ಉಚಿತವಾಗಿ ಲಸಿಕೆ ನೀಡಲಾಗಿದೆ' ಎಂದು ರಾಜ್ಯಪಾಲೆ ಆನಂದಿಬೆನ್ ಪಟೇಲ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಬೀದಿಗಳಲ್ಲಿ ಭಿಕ್ಷೆ ಬೇಡುತ್ತಿದ್ದ 80 ಮಕ್ಕಳನ್ನು ಶಾಲೆಗೆ ಸೇರಿಸಿ ಕೌಶಲ ತರಬೇತಿ ನೀಡುವ ಮೂಲಕ, ಅವರನ್ನು ಶಿಕ್ಷಣದ ಮುಖ್ಯವಾಹಿನಿಗೆ ತರಲು ಸಹ ರಾಜಭವನ ಕ್ರಮ ಕೈಗೊಂಡಿದೆ ಎಂದು ಅವರು ತಿಳಿಸಿದ್ದಾರೆ.

ಅವಮಾನಕರ ಶಿಕ್ಷೆ ಸ್ವಯಂಪ್ರೇರಿತ ತನಿಖೆ

ಚಂಡೀಗಢ: ಹೋಂವರ್ಕ್ ಮಾಡದ 5ನೇ ತರಗತಿಯ ಬಾಲಕಿಗೆ ಶಾಲೆಯೊಂದು ಅವಮಾನಕರವಾದ ರೀತಿಯಲ್ಲಿ ಶಿಕ್ಷೆ ನೀಡಿದೆ ಎನ್ನಲಾದ ಪ್ರಕರಣದ ಸ್ವಯಂಪ್ರೇರಿತ ತನಿಖೆಗೆ ಹರಿಯಾಣದ ಮಾನವ ಹಕ್ಕುಗಳ ಆಯೋಗ ಮುಂದಾಗಿದೆ.

ಸೋನಿಪತ್ ಜಿಲ್ಲೆಯ ಗ್ರಾಮವೊಂದರಲ್ಲಿ ಈ ಕೃತ್ಯ ನಡೆದಿದೆ. 11 ವರ್ಷದ ಬಾಲಕಿಗೆ ಬಸ್ಕಿ ಹೊಡೆಯುವ, ತರಗತಿ ಕೋಣೆ ಮತ್ತು ಶಾಲಾ ಆವರಣವನ್ನು ಸ್ವಚ್ಛಗೊಳಿಸುವ ಶಿಕ್ಷೆ ನೀಡಲಾಗಿದೆ. ಅಷ್ಟೇ ಅಲ್ಲದೆ, ಯುಕೆಜಿ ಮಕ್ಕಳಿಂದ ಆಕೆಗೆ 'ಶೇಮ್ ಶೇಮ್' ಎಂದು ಕೂಗಿಸಲಾಗಿದೆ. ಇನ್ನು ಮುಂದೆ ಹೋಂವರ್ಕ್ ಮಾಡದೇ ಬಂದರೆ ಅವಳ ತಲೆ ಬೋಳಿಸುವುದಾಗಿ ಮುಖ್ಯೋಪಾಧ್ಯಾಯರು ಬೆದರಿಕೆಯನ್ನು ಸಹ ಒಡ್ಡಿದ್ದಾರೆ. ಇದರಿಂದ ಮಾನಸಿಕ ಆಘಾತಕ್ಕೆ ಒಳಗಾಗಿರುವ ಬಾಲಕಿ ಶಾಲೆಗೆ ಗೈರುಹಾಜರಾಗಿದ್ದಾಳೆ ಮತ್ತು ಆಕೆಗೆ ಮನೋವೈದ್ಯರಿಂದ ಚಿಕಿತ್ಸೆ ಕೊಡಿಸಲಾಗಿದೆ ಎಂದು ಮಾಧ್ಯಮ ವರದಿಗಳು ತಿಳಿಸಿವೆ.

ಶಾಲೆಯು ಕಲಿಕೆ, ಪ್ರೋತ್ಸಾಹ ಮತ್ತು ವ್ಯಕ್ತಿತ್ವ ಬೆಳವಣಿಗೆಗೆ ಪೂರಕವಾಗಿ ಇರಬೇಕೇ ವಿನಾ ಹೆದರಿಕೆ, ಅವಮಾನ ಅಥವಾ ಆಘಾತಕ್ಕೆ ಕಾರಣವಾಗುವಂತಹ ಶಿಕ್ಷೆ ನೀಡುವ ಸ್ಥಳವಾಗಿರಬಾರದು ಎಂದು ಆಯೋಗದ ಮುಖ್ಯಸ್ಥ, ನ್ಯಾಯಮೂರ್ತಿ ಲಲಿತ್ ಬಾತ್ರಾ ಮತ್ತು ಸದಸ್ಯರು ಹೇಳಿಕೆಯಲ್ಲಿ ತಿಳಿಸಿದ್ದಾರೆ. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಸಮಾಜವಿಜ್ಞಾನ

ಅಧ್ಯಾಯ – 3 ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

5) ಜಮೀನ್ದಾರಿ ಪದ್ಧತಿಯಿಂದ ಭೂಮಾಲೀಕನಿಗೆ ಯಾವ ಕಾರಣಕ್ಕಾಗಿ ಹೆಚ್ಚಿನ ಲಾಭವಾಯಿತು?

ಉತ್ತರ:– ಜಮೀನ್ದಾರಿ ಪದ್ಧತಿಯಿಂದ ಭೂಮಾಲೀಕನಿಗೆ ಹೆಚ್ಚಿನ ಲಾಭವಾಯಿತು ಏಕೆಂದರೆ ಸರಕಾರಕ್ಕೆ ಸಲ್ಲಿಸಬೇಕಾದ ಹಣದ ಮೊತ್ತಕ್ಕಿಂತ ಹೆಚ್ಚಿಗೆ ವಸೂಲು ಮಾಡಿದ ಹಣವನ್ನು ಅವನೇ ಇಟ್ಟುಕೊಳ್ಳಬಹುದಾಗಿತ್ತು.

6) ಜಮೀನ್ದಾರಿ ಪದ್ದತಿ ಜಾರಿಯಾದ ಪ್ರದೇಶಗಳಲ್ಲಿ ಬರಗಾಲ (ಅನಾವೃಷ್ಟಿ) ಅಥವಾ ವಿಪರೀತ ಮಳೆ ಅತಿವೃಷ್ಟಿಯ ಸಂದರ್ಭದಲ್ಲಿ ರೈತನಿಗೆ ಯಾವ ತರಹದ ತೊಂದರೆ ಆಗುತಿತ್ತು?

ಉತ್ತರ:– ಬರಗಾಲ (ಅನಾವೃಷ್ಟಿ) ಅಥವಾ ವಿಪರೀತ ಮಳೆ ಅತಿವೃಷ್ಟಿಯ ಕಾರಣದಿಂದ ಕಂದಾಯವನ್ನು ವಸೂಲಿ ಮಾಡಲು ಸಾಧ್ಯವಾಗದೆ ಸರಕಾರಕ್ಕೆ ಸಲ್ಲಿಸಬೇಕಾದ ಹಣದ ಮೊತ್ತವನ್ನು ಸಲ್ಲಿಸಲಾಗದಿದ್ದರೆ, ಬ್ರಿಟಿಷ್ ಸರಕಾರವೂ ಭೂಮಿಯ ಒಡೆತನವನ್ನು ಅವನಿಂದ ಕಸಿದುಕೊಳ್ಳುತ್ತಿತ್ತು. ಈ ಪದ್ಧತಿಯಿಂದ ಬ್ರಿಟಿಷರಿಗೆ ಮತ್ತು ಜಮೀನ್ದಾರರಿಗೆ ಲಾಭವಾಯಿತೇ ವಿನಾ ರೈತರಿಗಾಗಲಿಲ್ಲ.

7) ಜಮೀನ್ದಾರಿ ಪದ್ದತಿಜಾರಿಯಾದ ಪ್ರದೇಶಗಳಲ್ಲಿ ರೈತರು, ರೈತ ಕೂಲಿಕಾರ್ಮಿಕರ ಸ್ಥಿತಿಗತಿ ಹೇಗಿತ್ತು?

ಉತ್ತರ:– ರೈತರು, ರೈತ ಕೂಲಿ ಕಾರ್ಮಿಕರು ಜಮೀನ್ದಾರರ ಭೂಮಿಯಲ್ಲಿ ಕೆಲಸ ಮಾಡಲು ನಿರಂತರ ಅವಕಾಶಗಳೂ ಸಿಗದೆ ಬಹುಮುಖಿ ಶೋಷಣೆಗೆ ಒಳಗಾದರು ಅತಂತ್ರ ಸ್ಥಿತಿಯಲ್ಲೇ ಬದುಕನ್ನು ಕಳೆಯತೊಡಗಿದರು.

8) ಜಮೀನ್ದಾರಿ ಪದ್ದತಿ ಕಾಲ ಕ್ರಮೇಣ ಎಲ್ಲೆಲ್ಲಿ ವಿಸ್ತರಣೆಗೆ ಒಳಗಾಯಿತು?

ಉತ್ತರ:– ಈ ಪದ್ಧತಿಯು ಕ್ರಮೇಣ ಓಡಿಶಾ, ಆಂಧ್ರ ಮತ್ತು ವಾರಣಾಸಿ ಪ್ರಾಂತ್ಯಗಳಿಗೆ ವಿಸ್ತರಣೆಯಾಯಿತು.

9) ಬ್ರಿಟಿಷ್ ಭೂಕಂದಾಯ ನೀತಿ ಬಗ್ಗೆ ಚಾರ್ಲ್ಸ್ ಮೆಟಕಾಫ್ ಏನೆಂದು ಹೇಳಿದ್ದಾನೆ?

ಉತ್ತರ:– ಬ್ರಿಟಿಷ್ ಭೂಕಂದಾಯ ನೀತಿಗಳಿಂದ "ಭಾರತದ ರೈತರು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸತ್ತರು". ಎಂದು ಚಾರ್ಲ್ಸ್ ಮೆಟಕಾಫ್ ಹೇಳಿದ್ದಾನೆ.

10) ಮಹಲ್ವಾರಿ ಪದ್ಧತಿ ಪದ್ದತಿ ಬಗ್ಗೆ ವಿವರವಾಗಿ ವಿವರಿಸಿ

ಉತ್ತರ:– ಉತ್ತರ ಪ್ರದೇಶ, ಮಧ್ಯಪ್ರದೇಶದ ಅನೇಕ ಭಾಗಗಳಲ್ಲಿ, ಪಂಜಾಬ್ ಮತ್ತು ದೆಹಲಿ ಪ್ರಾಂತ್ಯಗಳಲ್ಲಿ ಮಹಲ್ಲುಗಳೇ ಸಾಮೂಹಿಕ ಒಪ್ಪಂದಗಳನ್ನು ಮಾಡಿಕೊಂಡು, ಸರಕಾರಕ್ಕೆ ತೆರಿಗೆಯನ್ನು ಸಲ್ಲಿಸುವ ಪದ್ಧತಿಯನ್ನು ಜಾರಿಗೆ ತರಲಾಯಿತು. ಈ ಪದ್ಧತಿಯನ್ನು ಆರ್. ಎಂ. ಬರ್ಡ್ ಮತ್ತು ಜೇಮ್ಸ್ ಥಾಮ್ಸನ್ ಪ್ರಯೋಗಿಸಿದರು. 'ಮಹಲ್' ಎಂದರೆ ತಾಲ್ಲೂಕು ಎಂದರ್ಥ. ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಈ ಪದ್ಧತಿಯ ಅನುಷ್ಠಾನದಲ್ಲಿ ವ್ಯತ್ಯಾಸಗಳಿದ್ದವು. ದೊಡ್ಡ ಮತ್ತು ಸಣ್ಣ ಪ್ರಮಾಣದ ಜಮೀನ್ದಾರರು ಈ ಪದ್ಧತಿಯ ಭಾಗವಾಗಿದ್ದರು. ಕಂಪನಿಯ ಸರ್ಕಾರದ ಅಧಿಕಾರಿಗಳು ಜಮೀನಿನಲ್ಲಿ ಆಗುವ ಉತ್ಪಾದನೆಗಿಂತಲೂ ಹೆಚ್ಚಿನ ಮೊತ್ತದ ವಾರ್ಷಿಕ ಪಾವತಿಗಳನ್ನು ನಿರ್ಧರಿಸಿದ್ದರಿಂದ ಅನೇಕ ಜಮೀನ್ದಾರರು ತಮ್ಮ ಭೂಮಾಲಿಕತ್ವವನ್ನು ಕಳೆದುಕೊಂಡರು. ಅವರನ್ನೇ ನೆಚ್ಚಿ ಬದುಕುತ್ತಿದ್ದ ಸಣ್ಣ ಕೃಷಿಕರು, ಕೃಷಿ ಕೂಲಿಕಾರರು ನಿರ್ಗತಿಕರಾದರು.

11) ರೈತವಾರಿ ಪದ್ಧತಿಯನ್ನು ವಿವರಿಸಿ ಬರೆಯಿರಿ

ಉತ್ತರ: ರೈತವಾರಿ ಪದ್ಧತಿಯನ್ನು ಮೊದಲಿಗೆ ಒಂದು ಪ್ರಯೋಗವಾಗಿ ಬಾರಮಹಲ್ ಪ್ರಾಂತ್ಯದಲ್ಲಿ 1792ರಲ್ಲಿ ಅಲೆಕ್ಸಾಂಡರ್ ರೀಡ್ ಎನ್ನುವವನು ಜಾರಿಗೊಳಿಸಿದನು. ಈ ಪದ್ಧತಿಯನ್ನು ಥಾಮಸ್ ಮನ್ರೊ ಮದರಾಸು ಮತ್ತು ಮೈಸೂರು ಪ್ರಾಂತ್ಯಗಳಲ್ಲಿ 1801ರ ನಂತರ ಜಾರಿಗೊಳಿಸಿದನು. ಈ ಕಾಲಘಟ್ಟದಲ್ಲಿಯೇ ಈ ಪ್ರಾಂತ್ಯಗಳ ಬಹುತೇಕ ಭಾಗಗಳು ಕಂಪನಿಯ ಆಡಳಿತಕ್ಕೆ ಒಳಪಟ್ಟಿದ್ದು ಮುಖ್ಯ ಕಾರಣವಾಗಿತ್ತು. ಈ ಪದ್ಧತಿಯ ಪ್ರಕಾರ ಸರಕಾರ ಮತ್ತು ರೈತನ ನಡುವೆ ನೇರ ಸಂಪರ್ಕವನ್ನು ಕಲ್ಪಿಸಲಾಯಿತು. ಭೂಮಿ ಉಳುಮೆ ಮಾಡುತ್ತಿದ್ದವನನ್ನು ಅದರ ಮಾಲೀಕನೆಂದು ಸರ್ಕಾರ ಮಾನ್ಯ ಮಾಡಿತು. ಅವನೇ ನೇರವಾಗಿ ತಾನು ಕೃಷಿ ಭೂಮಿಯಲ್ಲಿ ಪಡೆದ ಉತ್ಪನ್ನದ ಶೇಕಡ 50ರಷ್ಟು ಭಾಗವನ್ನು ಕಂದಾಯದ ರೂಪದಲ್ಲಿ ಸರ್ಕಾರಕ್ಕೆ ಸಲ್ಲಿಸಬೇಕಾಯಿತು. ಕಂದಾಯವನ್ನು 30 ವರ್ಷಗಳ ಅವಧಿಗೆ ಎಂದು ನಿರ್ಧರಿಸಲಾಯಿತು. ನಂತರ ಅದನ್ನು ಪರಾಮರ್ಶೆಗೂ ಒಳಪಡಿಸಬಹುದಾಗಿತ್ತು. ಸಣ್ಣ ರೈತರಿಗೆ ತಮ್ಮ ಅಧೀನದಲ್ಲಿದ್ದ ಭೂಮಿ ಮೇಲಿನ ಹಕ್ಕನ್ನು ನೀಡಿತ್ತಾದರೂ, ಭೂಕಂದಾಯವನ್ನು ಈ ಪದ್ಧತಿಯು ಹೆಚ್ಚಿನ ವಾರ್ಷಿಕ ಮೊತ್ತಕ್ಕೆ ನಿಗದಿಪಡಿಸಿದ್ದರಿಂದ ರೈತರು ಸಂಕಷ್ಟಗಳಿಗೆ ಒಳಗಾದರು. ಕಂದಾಯ ವಸೂಲು ಮಾಡುವ ಅಧಿಕಾರಿಗಳು ನಿರ್ದಾಕ್ಷಣ್ಯವಾಗಿ ಕ್ರಮ ಜರುಗಿಸುತ್ತಿದ್ದರು. ಬೆಳೆಗಳು ಸರಿಯಾಗಿ ಫಸಲು ನೀಡದ ಸಂದರ್ಭದಲ್ಲಿ ರೈತರು ಹಣದ ಲೇವಾದೇವಿಗಾರರಿಂದ (Money Lender) ಸಾಲ ಮಾಡಿಕೊಂಡರು, ಮರು ಪಾವತಿಸಲಾಗದೆ ಅವರಿಗಿದ್ದ ಸಣ್ಣ ಪುಟ್ಟ ಜಮೀನನ್ನು ಮಾರಾಟ ಮಾಡುವಂತಾಯಿತು. ರೈತರ ಒಳಿತಿಗಾಗಿ ರೈತವಾರಿ ಪದ್ಧತಿಯನ್ನು ಜಾರಿಗೊಳಿಸಲಾಗಿದೆ ಎಂದು ಬ್ರಿಟಿಷ್ ಸರ್ಕಾರ ಹೇಳಿದರೂ, ಗರಿಷ್ಠ ಪ್ರಮಾಣದ ರೈತರು ಸಾಲದ ಸುಳಿಗೆ ಸಿಲುಕಿದ್ದು ಈ ಪದ್ಧತಿಯಿಂದಲೇ ಎನ್ನುವುದು ವಿಪರ್ಯಾಸ

12) ಬ್ರಿಟಿಷರ ಕಂದಾಯ ನೀತಿಯ ಪರಿಣಾಮಗಳು ಯಾವುವು?

ಉತ್ತರ:– ಬ್ರಿಟಿಷರ ಕಂದಾಯ ನೀತಿಯ ಪರಿಣಾಮಗಳು:

1. ನಿಜವಾದ ರೈತರನ್ನು ಶೋಷಿಸುವ ಹೊಸ ಸಾಮಾಜಿಕ ವರ್ಗವಾದ ಜಮೀನ್ದಾರಿ ಸಮುದಾಯ ಸೃಷ್ಟಿಯಾಯಿತು.
2. ಜಮೀನ್ದಾರರ ಶೋಷಣೆಗೆ ಒಳಗಾದ ರೈತರು ವಿವಿಧ ಬಗೆಯ ಸಂಕಷ್ಟಗಳಿಗೆ ಒಳಗಾದರು. ಕ್ರಮೇಣ ನಿರ್ಗತಿಕರಾದರು.
3. ಭೂಮಿ ಮಾರಾಟದ ವಸ್ತುವಾಯಿತು. ಇದನ್ನು ಪರಭಾರೆ (Mortgage) ಮಾಡಿ ಹಣವನ್ನು ಸಾಲವಾಗಿ ಪಡೆಯಬಹುದಾಗಿತ್ತು.
4. ಅನೇಕ ಜಮೀನ್ದಾರರೂ ಕೂಡ ಕಂದಾಯವನ್ನು ಸಲ್ಲಿಸುವ ಸಲುವಾಗಿ ತಮ್ಮ ಜಮೀನನ್ನು ಪರಭಾರೆ ಮಾಡಿದರು.
5. ಕೃಷಿ ಕ್ಷೇತ್ರವು ವಾಣಿಜ್ಯೀಕರಣಗೊಂಡು, ಇಂಗ್ಲೆಂಡಿನಲ್ಲಾದ ಕೈಗಾರಿಕೀಕರಣದಿಂದ ಅಲ್ಲಿನ ಕೈಗಾರಿಕೆಗಳಿಗೆ ಬೇಡಿದ ಕಚ್ಚಾವಸ್ತುಗಳನ್ನೇ ಬೆಳೆಯಬೇಕಾಯಿತು.
6. ಹಣದ ಲೇವಾದೇವಿಗಾರರು ಬಲಿಷ್ಠರಾಗ ತೊಡಗಿದರು

13) ಬ್ರಿಟಿಷರ ಕಾಲದಲ್ಲಿದ್ದ ಭಾರತದಲ್ಲಿ ಶಿಕ್ಷಣ ಈ ಬಗ್ಗೆ ವಿವರಿಸಿ

ಉತ್ತರ:– ಆಧುನಿಕ ಶಿಕ್ಷಣದ ಆರಂಭ ಭಾರತೀಯರ ಸಾಂಪ್ರದಾಯಿಕ ಶಿಕ್ಷಣವು ನಿರಂತರವಾಗಿ ಚಾಲ್ತಿಯಲ್ಲಿತ್ತು. ಮಧ್ಯಕಾಲೀನ ಸಂದರ್ಭದಲ್ಲಿ ಮುಸ್ಲಿಂ ರಾಜ್ಯ ವ್ಯವಸ್ಥೆ ನೆಲೆಗೊಂಡ ನಂತರ ಶಿಕ್ಷಣವನ್ನು ನೀಡುವುದರಲ್ಲಿ ಪಾರಂಪರಿಕ ವಿಧಾನದ ಜೊತೆಗೆ ಕೆಲವು ಬದಲಾವಣೆಗಳು ಉಂಟಾದವು. ಮುಂದೆ ಈ ಕ್ರಮದಲ್ಲಿ ಬದಲಾವಣೆ ಉಂಟಾದದ್ದು 18ನೇ ಶತಮಾನದ ಹೊಸ ಬ್ರಿಟಿಷ್ ಆಡಳಿತದ ಕಾಲಘಟ್ಟದಲ್ಲಿ. ಭಾರತದಲ್ಲಿದ್ದ ಐರೋಪ್ಯ ಮತ್ತು ಆಂಗ್ಲೋ–ಇಂಡಿಯನ್ ಸಮುದಾಯಗಳ ಮಕ್ಕಳಿಗೆ ಹೊಸ ಶಾಲೆಗಳು ಪ್ರಾರಂಭವಾದವು. ಆದರೆ ಈ ಶಿಕ್ಷಣ ಕ್ರಮವು ವಿಸ್ತರಣೆ ಆಗದಿದ್ದುದರಿಂದ ಸ್ಥಳೀಯ ಮಕ್ಕಳಿಗೆ ಯಾವುದೇ ಪ್ರಯೋಜನವಾಗಲಿಲ್ಲ. ಆಧುನಿಕ ಶಿಕ್ಷಣದ ಪ್ರಸಾರಕ್ಕೆ ಉತ್ತೇಜನ ಕೊಟ್ಟ ಮೊದಲ ಬ್ರಿಟಿಷ್ ಅಧಿಕಾರಿಯೆಂದರೆ ವಾರನ್ ಹೇಸ್ಟಿಂಗ್ಸ್. 1781ರಲ್ಲಿ ಅವನು 'ಕಲ್ಕತ್ತಾ ಮದರಸಾ'ವನ್ನು ಪ್ರಾರಂಭಿಸಿದನು. ಜೊನಾಥನ್ ಡಂಕನ್ ಎಂಬ ಮತ್ತೊಬ್ಬ ಬ್ರಿಟಿಷ್ ವ್ಯಕ್ತಿಯು 1792ರಲ್ಲಿ ಬನಾರಸ್ಸಿನಲ್ಲಿ ಸಂಸ್ಕೃತ ಕಾಲೇಜನ್ನು ಪ್ರಾರಂಭಿಸಿದನು. ಬ್ರಿಟಿಷ್ ಶಿಕ್ಷಣದ ವ್ಯಾಪಕ ವಿಸ್ತರಣೆಗೆ ಮೊದಲು ಒತ್ತಾಯಿಸಿದವನು ಚಾರ್ಲ್ಸ್ ಗ್ರಾಂಟ್. 1828ರಲ್ಲಿ ವಿಲಿಯಂ ಬೆಂಟಿಂಕನು ಗವರ್ನರ್ ಜನರಲ್ ಆಗಿ ನೇಮಕಗೊಂಡ ನಂತರ ಬ್ರಿಟಿಷ್ ಶಿಕ್ಷಣದ ವಿಸ್ತರಣೆಗೆ ಮತ್ತಷ್ಟು ವಿಶೇಷ ಪ್ರೋತ್ಸಾಹ ದೊರೆಯಿತು.

(ಮುಂದುವರಿಯುವುದು)

MATHS

DIFFERENTIABILITY

10. Differentiate w.r.t. x:
iii) sin{sin(log 3x)}

$$\text{Soln}:-\ \frac{d}{dx}\sin\{\sin(\log 3x)\}$$
$$=\cos\{\sin(\log 3x)\}.\frac{d}{dx}\sin(\log 3x)$$
$$\Rightarrow \cos\{\sin(\log 3x)\}.\cos(\log 3x)\frac{d}{dx}\log(3x)$$
$$=\cos\{\sin(\log 3x)\}.\cos(\log 3x)\frac{1}{3x}.\frac{d}{dx}(3x)$$
$$=\cos\{\sin(\log 3x)\}.\cos(\log 3x)\left(\frac{1}{3x}\right).(3)$$
$$=\frac{1}{x}\cos\{\sin(\log 3x)\}\cos(\log 3x).$$

Answer the following:-

1. If $y=\sqrt{\dfrac{1+e^x}{1-e^x}}$,

show that $\dfrac{dx}{dy}=\dfrac{e^x}{(1-e^x)\sqrt{1-e^{2x}}}$

$$\text{oln}:-\ \frac{d}{dx}y=\frac{d}{dx}\left(\frac{1+e^x}{1-e^x}\right)^{1/2}$$
$$=\frac{1}{2}\left(\frac{1+e^x}{1-e^x}\right)^{-1/2}.\frac{d}{dx}\frac{1+e^x}{1-e^x}$$
$$\Rightarrow \frac{1}{2}\sqrt{\frac{1+e^x}{1-e^x}}.\left\{\frac{(1-e^x)\frac{d}{dx}(1+e^x)-(1+e^x)\frac{d}{dx}1-e^x}{(1-e^x)^2}\right\}$$
$$=\frac{1}{2}\sqrt{\frac{1+e^x}{1-e^x}}.\left\{\frac{(1-e^x)(0-e^x)-(1+e^x)(1-e^x)}{(1-e^x)^2}\right\}$$
$$=\frac{1}{2}\sqrt{\frac{1+e^x}{1-e^x}}.\frac{e^x-e^{2x}+e^x+e^{2x}}{(1-e^x)^2}$$
$$=\frac{(2e^x)}{2\sqrt{1+e^x}\,(1-e^x)^{3/2}}=\frac{e^x}{\sqrt{1+e^x}\,(1-e^x)^{3/2}}$$
$$=\frac{e^x}{\sqrt{1+e^x}\sqrt{1-e^x}\,(1-e^x)}=\frac{e^x}{\sqrt{1-e^x}\sqrt{1-e^{2x}}\,(1-e^x)}$$

2. If $y=\sqrt{\dfrac{1-x}{1+x}}$,

Prove that $=(1-x^2)\dfrac{dy}{dx}+y=0.$

$$\text{Soln}:-\ \frac{d}{dx}y=\frac{d}{dx}\sqrt{\frac{1-x}{1+x}}=\frac{d}{dx}\left(\frac{1-x}{1+x}\right)^{1/2}$$
$$=\frac{1}{2}\left(\frac{1-x}{1+x}\right)^{-1/2}.\frac{d}{dx}\left(\frac{1-x}{1+x}\right)$$
$$=\left(\frac{1}{2}\right)\left(\sqrt{\frac{1+x}{1-x}}\right)\left\{\frac{(1+x)\frac{d}{dx}(1-x)-(1-x)\frac{d}{dx}(1+x)}{(1+x)^2}\right\}$$
$$=\left(\frac{1}{2}\right)\left(\sqrt{\frac{1+x}{1-x}}\right)\left\{\frac{(1+x)(0-1)-(1-x)(0+1)}{(1+x)^2}\right\}$$
$$=\frac{1}{2}\sqrt{\frac{1+x}{1-x}}\left\{\frac{-1-x-1+x}{(1+x)^2}\right\}$$
$$=\frac{1}{2}\sqrt{\frac{1+x}{1-x}}\left\{\frac{-2}{(1-x)^2}\right\}$$
$$=\left\{\frac{-1}{(1+x)^2}\right\}\sqrt{\frac{1+x}{1-x}} \qquad \text{.............(1)}$$
$$\therefore\ \text{LHS}=(1-x)^2\frac{dy}{dx}+y$$
$$\Rightarrow (1-x)^2\left\{\frac{-1}{(1+x)^2}\right\}\frac{\sqrt{1+x}}{\sqrt{1-x}}+\frac{\sqrt{1-x}}{\sqrt{1+x}}$$

[Using (1) and value of y]

$$\Rightarrow \frac{-(1-x)(1+x)\sqrt{1+x}}{\sqrt{1-x}\,(1+x)^2}+\frac{\sqrt{1-x}}{\sqrt{1+x}}$$
$$\Rightarrow \frac{-\sqrt{1-x}}{\sqrt{1+x}}+\frac{\sqrt{1-x}}{\sqrt{1+x}}$$
$$\Rightarrow 0=\text{RHS}$$

3. If $y=\dfrac{\log(x+\sqrt{x^2+1})}{\sqrt{x^2+1}}$**, prove that** $(x^2+1)\dfrac{dy}{dx}+xy=1.$

$$\text{Soln}:-\text{Given, } y=\frac{\log(x+\sqrt{x^2+1})}{\sqrt{x^2+1}}$$
$$\Rightarrow y.\sqrt{x^2+1}=\log(x+\sqrt{x^2+1})$$

Differentiate w.r.t. x both sides

$$y.\frac{d}{dx}(x^2+1)^{1/2}+\sqrt{x^2+1}\frac{d}{dx}$$
$$=\frac{d}{dx}\log(x+\sqrt{x^2+1})$$

(Contd.....)


ಬೀದರ್‌ನ ಹುಲಸೂರ ಸಮೀಪದ ಕೊಂಗಳಿ, ಇತರೆ ಗ್ರಾಮಗಳಲ್ಲಿ ಜಮೀನು ಜಲಾವೃತವಾಗಿದೆ ಚಿತ್ರ: ಗುರುಪ್ರಸಾದ ಮೆಂಟೆ


ಕಲಬುರಗಿ ಜಿಲ್ಲೆ ಜೇವರ್ಗಿ ತಾಲ್ಲೂಕಿನ ಮಂದರವಾಡ ಗ್ರಾಮ ಪೂರ್ಣ ಜಲಾವೃತವಾಗಿದೆ. ಚಿತ್ರ: ತಾಜುದ್ದೀನ್ ಆಜಾದ್

ಪ್ರವಾಹ: ಕಲ್ಯಾಣ ಕರ್ನಾಟಕ ತತ್ತರ

ಕಲಬುರಗಿ, ಬೀದರ್, ಯಾದಗಿರಿ ಜಿಲ್ಲೆಗಳಲ್ಲಿ ಸಂಕಷ್ಟ
117 ಗ್ರಾಮಗಳಲ್ಲಿ ಒಟ್ಟು 8014 ಜನರ ಸ್ಥಳಾಂತರ

ಪ್ರಜಾವಾಣಿ ವಾರ್ತೆ

ಕಲಬುರಗಿ: ಮಹಾರಾಷ್ಟ್ರದ ವಿವಿಧ ಜಲಾಶಯಗಳಿಂದ ಕಲಬುರಗಿ ವ್ಯಾಪ್ತಿಯಲ್ಲಿ ಭೀಮಾ ಹಾಗೂ ಬೀದರ್ ವ್ಯಾಪ್ತಿಯಲ್ಲಿ ಮಾಂಜ್ರಾ ನದಿಗೆ ಹರಿದು ಬರುತ್ತಿರುವ ಅಪಾರ ಪ್ರಮಾಣದ ನೀರು ಕಲಬುರಗಿ, ಬೀದರ್, ಯಾದಗಿರಿ ಜಿಲ್ಲೆಯ ಹಲವು ಗ್ರಾಮಗಳನ್ನು ದ್ವೀಪವನ್ನಾಗಿಸಿದೆ.

ಭಾನುವಾರ ಸಂಜೆ ವೇಳೆಗೆ ಪ್ರವಾಹದಲ್ಲಿ ಸಿಲುಕಿದ್ದ ಕಲಬುರಗಿ ಜಿಲ್ಲೆಯ 6664, ಯಾದಗಿರಿ ಜಿಲ್ಲೆಯ 1350 ಜನ ಸೇರಿ 8020 ಜನರನ್ನು ಕಾಳಜಿ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿದೆ.

ಕಲ್ಯಾಣ -ಉತ್ತರ ಕರ್ನಾಟಕದ ಜಿಲ್ಲೆಗಳನ್ನು ಸಂಪರ್ಕಿಸುವ ಕಲಬುರಗಿ ಜಿಲ್ಲೆಯ ಜೇವರ್ಗಿ ಸಮೀಪದ ಕಟ್ಟಿ ಸಂಗಾವಿ ಹಾಗೂ ಖಾನಿ ಗ್ರಾಮಗಳ ಸಮೀಪದ ರಾಷ್ಟ್ರೀಯ ಹೆದ್ದಾರಿ-50ರಲ್ಲಿನ ಸೇತುವೆ ಮುಳುಗಿದ್ದು, ಎರಡನೇ ದಿನವೂ ವಾಹನಗಳ ಸಂಚಾರ ಸ್ಥಗಿತಗೊಂಡಿತ್ತು.

ಸಾರಿಗೆ ಬಸ್‌ಗಳು ಹಾಗೂ ಖಾಸಗಿ ವಾಹನಗಳು ಇನ್ನೊಂದು ಮಾರ್ಗದಲ್ಲಿ ಸಂಚರಿಸಿದವು. ಭಾರಿ ವಾಹನಗಳ ಸಂಚಾರಕ್ಕೆ ಅನುಮತಿ ಸಿಗದೇ ರಸ್ತೆಯ ಪಕ್ಕದಲ್ಲಿ ಸಾಲುಗಟ್ಟಿವೆ.

ಜೇವರ್ಗಿ ತಾಲ್ಲೂಕಿನ ಮಂದರವಾಡ, ಕೋಬಾಳ, ಕೋನ ಹಿಪ್ಪರಗಾ, ಕೂಡಿ ದರ್ಗಾ, ಕಲಬುರಗಿ ತಾಲ್ಲೂಕಿನ ಸರಡಗಿ, ಫಿರೋಜಾಬಾದ್, ಹಾಗರಗುಂಡಗಿ, ಅಫಜಲಪುರದ ಹಲವು ಗ್ರಾಮಗಳು, ಚಿತ್ತಾಪುರ ತಾಲ್ಲೂಕಿನ ಕಡಬೂರು ಗ್ರಾಮವು ಸಂಪೂರ್ಣ ಜಲಾವೃತವಾಗಿದೆ. ಎನ್‌ಡಿಆರ್‌ಎಫ್ ತಂಡವನ್ನು ವಾಡಿ ಸಮೀಪದಲ್ಲಿ ನಿಯೋಜಿಸಲಾಗಿದೆ.

ಭೀಮಾ ನದಿ ನೀರು ಸೇರಿ ಕೃಷ್ಣಾ ನದಿ ರಾಯಚೂರು ಜಿಲ್ಲೆಯಲ್ಲಿ ಕೃಷ್ಣಾ ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ಗುರ್ಜಾಪುರ ಬ್ರಿಜ್ ಕಂ ಬ್ಯಾರೇಜ್ ಮುಳುಗಡೆಯಾಗಿದೆ. ಯಾದಗಿರಿ ಜಿಲ್ಲೆಯ ಸೈದಾಪುರ ಸೇರಿ ಸುತ್ತಮುತ್ತಲಿನ ಪ್ರದೇಶಗಳ ನಡುವಿನ ಸಂಪರ್ಕ ಬಂದ್ ಆಗಿದೆ.

ಯಾದಗಿರಿ ಜಿಲ್ಲೆಯಲ್ಲಿ ಪ್ರವಾಹ ಪರಿಸ್ಥಿತಿ ಮುಂದುವರೆದಿದ್ದು, ನದಿ ಪಾತ್ರದ ರೋಜಾ ಎಸ್., ಶಿವನೂರ, ನಾಯ್ಕಲ್, ಮಾಚನೂರ ಗ್ರಾಮಗಳಿಂದ 445 ಕುಟುಂಬ ಸ್ಥಳಾಂತರಿಸಲಾಗಿದೆ.

ನರಾಷ್ಟ್ರೀಯ ಹೆದ್ದಾರಿ-150ರಲ್ಲಿ ಸೇತುವೆ ಮುಳುಗಿದೆ. ನಾಯ್ಕಲ್ ಸಮೀಪ ಯಾದಗಿರಿ- ಶಹಾಪುರ ರಸ್ತೆಯಲ್ಲಿ ನೀರು ನಿಂತಿದೆ. 12ಕ್ಕೂ ಹೆಚ್ಚು ಗ್ರಾಮಗಳ ಸಂಪರ್ಕ ಕಡಿತವಾಗಿದೆ.

ಭೀಮೆಯ ನೀರು ಯಾದಗಿರಿ ನಗರಕ್ಕೂ ವ್ಯಾಪಿಸಿದ್ದು ವೀರಭದ್ರೇಶ್ವರ ನಗರ, ವಿಶ್ವಾರಾಧ್ಯ ನಗರ, ಜಿಲ್ಲಾ ಕ್ರೀಡಾಂಗಣದ ಹಿಂಬದಿ ಸೇರಿ ರೈಲು ಹಳಿವರೆಗೂ ಆವರಿಸಿಕೊಂಡಿದೆ.

ಬೀದರ್ ಜಿಲ್ಲೆಯಲ್ಲಿ ಮಾಂಜ್ರಾ ನದಿ ಉಕ್ಕಿ ಹರಿದಿದ್ದು, ಹುಲಸೂರ ತಾಲ್ಲೂಕಿನ ಸಾಯಗಾಂವ್-ವಲಂಡಿ ರಸ್ತೆ ಜಲಾವೃತವಾಗಿದ್ದು, 20 ಹಳ್ಳಿಗಳ ಸಂಪರ್ಕ ಕಡಿತಗೊಂಡಿದೆ.

ತಾಲ್ಲೂಕಿನ ಕೊಂಗಳಿ ಗ್ರಾಮ ದ್ವೀಪವಾಗಿ ಬದಲಾಗಿದೆ. ತಾಲ್ಲೂಕಿನ ಶ್ರೀಮಾಳಿ-ಯಲ್ಲಮವಾಡಿ ಸಂಪರ್ಕ ಕೂಡ ಕಡಿತಗೊಂಡಿದೆ.

ಕಮಲನಗರ ತಾಲ್ಲೂಕಿನ ಸಂಗಮ-ಠಾಣಾ ಕುಶನೂರ, ಸಂಗಮ-ಖೇಡ್ ಸಂಪರ್ಕ ಸೇತುವೆ ಜಲಾವೃತಗೊಂಡಿದೆ. ಭಾಲ್ಕಿ ತಾಲ್ಲೂಕಿನ ದಾಡಗಿ ಸೇತುವೆ ಮೇಲಿಂದ ನೀರು ಹರಿಯುತ್ತಿರುವುದರಿಂದ ಭಾಲ್ಕಿ-ಹುಮನಾಬಾದ್-ಬಸವಕಲ್ಯಾಣ ಮಾರ್ಗ ಬಂದ್ ಆಗಿದೆ.

ಇಬ್ಬರು ಸಾವು

ಕಲಬುರಗಿ: ಮಳೆ ಸಂಬಂಧಿ ಅವಘಡಗಳಿಂದಾಗಿ ಕಲಬುರಗಿ ಹಾಗೂ ರಾಯಚೂರು ಜಿಲ್ಲೆಯಲ್ಲಿ ಇಬ್ಬರು ಮಹಿಳೆಯರು ಮೃತಪಟ್ಟಿದ್ದಾರೆ.

ಕಲಬುರಗಿ ಜಿಲ್ಲೆಯ ಕುಸನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ನೃಪತುಂಗ ಕಾಲೊನಿಯ ಬುಳ್ಳಾ ಬಡಾವಣೆಯಲ್ಲಿ ಪ್ರವಾಹಕ್ಕೆ ಸಿಲುಕಿ ಭೀಮಬಾಯಿ ದತ್ತಪ್ಪ ಭಜಂತ್ರಿ (45) ಎಂಬುವವರು ಮೃತಪಟ್ಟಿದ್ದಾರೆ. ಭೀಮಬಾಯಿ ಆಳಂದ ತಾಲ್ಲೂಕಿನ ಯಳಸಂಗಿ ಗ್ರಾಮದವರು.

ಜಿಟಿಜಿಟಿ ಮಳೆಯಿಂದಾಗಿ ಶನಿವಾರ ರಾಯಚೂರು ನಗರದ ಗಂಜ್ ವೃತ್ತದ ಬಳಿಯ ಹಳೆ ಮನೆಯ ಚಾವಣಿ ಕುಸಿದು ಈಶಮ್ಮ (60) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಗ್ನಿಶಾಮಕ ಸಿಬ್ಬಂದಿ ಇಬ್ಬರ ರಕ್ಷಣೆ ಮಾಡಿದ್ದಾರೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.34	5,661	6,404
ಹಾರಂಗಿ	2,859	2,857.56	3,900	1,600
ಕಬಿನಿ	2,284.00	2,281.95	2,028	1,350
ಹೇಮಾವತಿ	2,922	2,918.50	6,168	6,335
ಲಿಂಗನಮಕ್ಕಿ	1,819	1,815.90	5,926	5,808
ಸೂಪಾ (ಮೀ)	564	559.59	2,022	1,097
ಮಾಣಿ	595	594.06	1,119	661
ತುಂಗಭದ್ರಾ	1,633	1,626.06	10,314	10,212
ಮಲಪ್ರಭಾ	2,079.5	2,079.50	4,552	5,494
ಘಟಪ್ರಭಾ	2175	2,175	5,039	4,720
ಭದ್ರಾ *	186	184.7	2,556	4,350
ಆಲಮಟ್ಟಿ (ಮೀ)	519.6	519.57	99,000	1,20,000
ನಾರಾಯಣಪುರ (ಮೀ)	492.25	491.91	1,00,000	1,24,000

* ನೆಲಮಟ್ಟದಿಂದ

ಪ್ರವಾಹ: ರಕ್ಷಣಾ ಕಾರ್ಯಕ್ಕೆ ಸಿ.ಎಂ ಸೂಚನೆ

ಬೆಂಗಳೂರು: 'ಕೃಷ್ಣಾ ಮತ್ತು ಭೀಮಾ ನದಿಗಳ ಪ್ರವಾಹದಿಂದ ನೆರೆಪೀಡಿತವಾಗಿರುವ ಕಲಬುರಗಿ, ಬೀದರ್, ಯಾದಗಿರಿ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ತಕ್ಷಣವೇ ರಕ್ಷಣಾ ಕಾರ್ಯಾಚರಣೆ ಆರಂಭಿಸಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚಿಸಿದ್ದಾರೆ.

ಮಳೆ ಮತ್ತು ಮಹಾರಾಷ್ಟ್ರದ ಉಜನಿ ಹಾಗೂ ನೀರ ಜಲಾಶಯಗಳಿಂದ ಹೆಚ್ಚಿನ ಪ್ರಮಾಣದ ನೀರು ಹೊರಬಿಟ್ಟಿರುವುದರಿಂದು ಈ ಜಿಲ್ಲೆಗಳಲ್ಲಿ ಪ್ರವಾಹ ಸ್ಥಿತಿ ತಲೆದೋರಿದೆ. ಕಂದಾಯ ಸಚಿವ ಕೃಷ್ಣ ಬೈರೇಗೌಡ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮತ್ತು ಜಿಲ್ಲಾಧಿಕಾರಿಗಳಿಂದ ಮುಖ್ಯಮಂತ್ರಿ ಭಾನುವಾರ ಪರಿಸ್ಥಿತಿಯ ಮಾಹಿತಿ ಪಡೆದುಕೊಂಡರು.



'ಜಿಲ್ಲಾಧಿಕಾರಿಗಳು ಮತ್ತು ಗ್ರಾಮ ಪಂಚಾಯತಿ ಪಿಡಿಒಗಳು ಪ್ರವಾಹದ ಸ್ಥಳಕ್ಕೆ ಖುದ್ದು ಭೇಟಿ ನೀಡಿ, ಮಾಹಿತಿ ತೆಗೆದುಕೊಳ್ಳಬೇಕು. ರಕ್ಷಣಾ ಮತ್ತು ಪರಿಹಾರ ಕಾರ್ಯ ಕೈಗೊಳ್ಳಬೇಕು. ಇದರಲ್ಲಿ ಯಾವುದೇ ವಿಳಂಬ ಆಗಬಾರದು' ಎಂದು ಸಿದ್ದರಾಮಯ್ಯ ಸೂಚಿಸಿದ್ದಾರೆ.

'ಪ್ರವಾಹದಲ್ಲಿ ಸಿಲುಕಿರುವವರು, ನಡುಗಡ್ಡೆಗಳಲ್ಲಿ ಸಿಲುಕಿರುವವರನ್ನು ತಕ್ಷಣವೇ ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಬೇಕು. ಆಹಾರ ಕೇಂದ್ರಗಳನ್ನು ಆರಂಭಿಸಿ, ಅಗತ್ಯ ಸವಲತ್ತುಗಳನ್ನು ಒದಗಿಸಿ. ಜಾನುವಾರಗಳ ರಕ್ಷಣೆ, ಮೇವಿಗೆ ವ್ಯವಸ್ಥೆ ಮಾಡಬೇಕು' ಎಂದು ತಿಳಿಸಿದ್ದಾರೆ.

'ಗ್ರಾಮೀಣಾಭಿವೃದ್ಧಿ, ಜಲ ಸಂಪನ್ಮೂಲ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಜಿಲ್ಲಾ ಕಾರ್ಯದರ್ಶಿಗಳು ಸ್ಥಳಕ್ಕೆ ಭೇಟಿ ನೀಡಬೇಕು. ಕಂದಾಯ ಸಚಿವರು ರಕ್ಷಣಾ ಮತ್ತು ಪರಿಹಾರ ಕಾರ್ಯಗಳ ಮೇಲ್ವಿಚಾರಣೆ ನಡೆಸಬೇಕು' ಎಂದಿದ್ದಾರೆ.

ಕರಾವಳಿ, ಕೊಡಗಿನಲ್ಲೂ ಮಳೆ

ಕಾರವಾರ/ಬಾಗಲಕೋಟೆ: ಉತ್ತರ ಕನ್ನಡ ಜಿಲ್ಲೆ ಕರಾವಳಿ ಭಾಗದಲ್ಲಿ ವ್ಯಾಪಕ ಹಾಗೂ ಮಲೆನಾಡು ಭಾಗದಲ್ಲಿ ಸಾಧಾರಣ ಮಳೆಯಾಗಿದೆ. ಭಾನುವಾರ ನಸುಕಿನಲ್ಲಿ ಕಾರವಾರ, ಭಟ್ಕಳ, ಹೊನ್ನಾವರ ಸೇರಿ ಹಲವೆಡೆ ಮಳೆ ಆಗಿದೆ. ಅರಬ್ಬಿ ಸಮುದ್ರದಲ್ಲಿ ವೇಗದ ಗಾಳಿ ಬೀಸುತ್ತಿದ್ದ ಪರಿಣಾಮ ಹಲವು ಮೀನುಗಾರಿಕೆ ದೋಣಿಗಳು ಬಂದರಿಗೆ ಮರಳಿದವು.

ಘಟಪ್ರಭಾ ನದಿ ಹರಿವಿನಲ್ಲಿ ಹೆಚ್ಚಳವಾಗಿದೆ. ಬಾಗಲಕೋಟೆ ಜಿಲ್ಲೆಯಲ್ಲಿ ಡವಳೇಶ್ವರ, ಮಿರ್ಜಿ, ಚನ್ನಾಳ, ಉತ್ತೂರು-ಜ್ಯಾಲಿಬೇರ, ಮುಧೋಳ, ಜೀರಗಾಳ ಬ್ಯಾರೇಜ್‌ಗಳು ಮುಳುಗಡೆಯಾಗಿವೆ. ವಾಹನಗಳ ಸಂಚಾರ ಸ್ಥಗಿತಗೊಳಿಸಲಾಗಿದೆ.

ಮಡಿಕೇರಿಯಲ್ಲಿ ಬಿರುಸು: ಭಾನುವಾರ ಮಡಿಕೇರಿ ನಗರದಲ್ಲಿ ಬಿರುಸಿನ ಮಳೆಯಾಗಿದೆ. ಮಳೆ, ಶೀತ ಗಾಳಿ ಜನಜೀವನ ಅಸ್ತವ್ಯಸ್ತಗೊಳಿಸಿದೆ. ಸಂಪಾಜೆ ಮತ್ತು ಶಾಂತಳ್ಳಿಯಲ್ಲಿ ತಲಾ 5.8 ಸೆಂ.ಮೀ ಮಳೆಯಾಗಿದೆ. ಶ್ರೀಮಂಗಲ, ಭಾಗಮಂಡಲ, ಪೊನ್ನಂಪೇಟೆಯಲ್ಲಿ ಉತ್ತಮ ಮಳೆಯಾಗಿದೆ.

ಸುದ್ದಿ 2 ನಿಮಿಷ

'ಕಲೆಗಳ ಸಂಗಡ ಮಾತುಕತೆ' ಅ.1ರಿಂದ

ಸಾಗರ (ಶಿವಮೊಗ್ಗ): ನೀನಾಸಂ ಸಂಸ್ಥೆಯು ಹೆಗ್ಗೋಡುವಿನಲ್ಲಿ ಅ.1ರಿಂದ 5ರವರೆಗೆ 'ಕಲೆಗಳ ಸಂಗಡ ಮಾತುಕತೆ' ಕಾರ್ಯಕ್ರಮ ಏರ್ಪಡಿಸಿದ್ದು ರಂಗಭೂಮಿ, ಸಾಹಿತ್ಯ, ಸಿನಿಮಾ, ಚಿತ್ರಕಲೆ ಕಲಾಪಠ್ಯಗಳ ಪ್ರಸ್ತುತಿ ಮತ್ತು ಆ ಕುರಿತ ಚರ್ಚೆ ನಡೆಯಲಿದೆ.

ಆರಂಭಿಕ ಗೋಷ್ಠಿಗೆ ಹರೀಶ್ ತ್ರಿವೇದಿ ಚಾಲನೆ ನೀಡುವರು. ಕೃಷ್ಣಮೂರ್ತಿ ಹನೂರು, ರಾಜೇಂದ್ರ ಚೆನ್ನಿ, ಜೆ.ಯು.ಮೋಹನ್, ಚುಕ್ಕಿ ನಂಜುಂಡಸ್ವಾಮಿ, ಹೇಮಲತಾ ಜೈನ್, ಗಜಾನನ ಶರ್ಮ, ಶಿವಾನಂದ ಕಳವೆ, ಅಕ್ಷರ ಕೆ.ವಿ., ಶ್ರೀರಾಮ ಭಟ್, ನಿತ್ಯಾನಂದ ಶೆಟ್ಟಿ, ಜಿ.ಎಸ್. ಜಯದೇವ, ಸುಮನಸ ಕೌಜಲಗಿ, ವಿಕ್ರಮ್ ವಿಸಾಜಿ ಇತರರು ಪಾಲ್ಗೊಳ್ಳಲಿದ್ದಾರೆ. ನಿತ್ಯ ಸಂಜೆ 7ಕ್ಕೆ ನಾಟಕ ಪ್ರದರ್ಶನವಿದೆ ಎಂದು ಹೇಳಿಕೆ ತಿಳಿಸಿದೆ.

371 ಜೆ ಸೌಲಭ್ಯದ ಅರಿವಿಗೆ ಕಾರ್ಯಾಗಾರ ಅಗತ್ಯ



ಬೆಂಗಳೂರು: ಕಲ್ಯಾಣ ಕರ್ನಾಟಕ ಭಾಗದ ಜನರು 371 'ಜೆ' ಅನ್ವಯ ಶೈಕ್ಷಣಿಕ ಸೌಲಭ್ಯಗಳನ್ನು ಅರ್ಹರು ಪಡೆಯುತ್ತಿದ್ದಾರೆ. ಆದರೆ, ಉದ್ಯೋಗದ ಸೌಲಭ್ಯ ಬಳಸಿಕೊಳ್ಳುವಲ್ಲಿ ಹಿಂದೆ ಬಿದ್ದಿದ್ದಾರೆ. ಈ ಬಗ್ಗೆ ಜಾಗೃತಿ ಮೂಡಿಸಲು ಕಾರ್ಯಾಗಾರ ನಡೆಸಬೇಕಾದ ಅಗತ್ಯವಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷ ಶಿವಶಂಕರಪ್ಪ ಎಸ್. ಸಾಹುಕಾರ್ ಸಲಹೆ ನೀಡಿದರು.

ಕಲ್ಯಾಣ ಕರ್ನಾಟಕ ನಿವಾಸಿಗಳ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸಂಘ ಹಮ್ಮಿಕೊಂಡಿದ್ದ ಸ್ನೇಹ ಸಮ್ಮಿಲನ, ಪ್ರತಿಭಾ ಪುರಸ್ಕಾರ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅನೇಕ ಹುದ್ದೆಗಳು ಖಾಲಿ ಇವೆ. ಉದ್ಯೋಗವನ್ನು ಒದಗಿಸಲು ಸರ್ಕಾರವು ಪ್ರಯತ್ನಿಸುತ್ತಿದೆ. ಆದರೆ, ರಾಜಕೀಯವಾಗಿ ಇನ್ನೂ ಹೆಚ್ಚಿನ ಇಚ್ಛಾಶಕ್ತಿ ಅಗತ್ಯವಿದೆ. ಉದ್ಯೋಗ ಪಡೆಯಲು ಅರ್ಜಿ ಸಲ್ಲಿಸುವಾಗ ಸರಿಯಾದ ಮಾಹಿತಿ ನೀಡಬೇಕು. ಈ ಬಗ್ಗೆ ಮೊದಲು ಅರಿವು ಮೂಡಿಸಬೇಕು ಎಂದು ಹೇಳಿದರು.

ಸಂಘದ ಕಾರ್ಯಾಧ್ಯಕ್ಷ ಸಂಗಮೇಶ ಬಾದವಾಡಗಿ ಪ್ರಾಸ್ತಾವಿಕವಾಗಿ ಮಾತನಾಡಿ, 'ಕಲ್ಯಾಣ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ನೀಡಲು ಹೋರಾಟ ನಡೆಸಿದಂತೆ ಈಗ ವಿಶೇಷ ಸ್ಥಾನಮಾನದ (371 ಜೆ) ಮೀಸಲಾತಿ ಸೌಲಭ್ಯವನ್ನು ಪಡೆಯಲು ಹೋರಾಟ ನಡೆಸಬೇಕಾಗಿದೆ. ಅನೇಕ ಗೊಂದಲಗಳು ಉಂಟಾಗಿರುವುದರಿಂದ ಸರ್ಕಾರಿ ಉದ್ಯೋಗ ಪಡೆಯಲು ಸಾಧ್ಯವಾಗುತ್ತಿಲ್ಲ' ಎಂದು ತಿಳಿಸಿದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಡಾ. ಅಭಿಜಿತ್ ಪಾಟೀಲ, ಡಾ. ಸವಿತಾ ಸಿ., ಗುಡೂರು ಭೀಮಸೇನ, ಎ.ಹನುಮಂತ, ಚನ್ನಬಸಪ್ಪ ಬಳಿಗಾರ, ಹುಸೇನಸಾಬ್ ಕನಕಗಿರಿ, ಸುಭಾಷ ಬಣಗಾರ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

'ಬಾವಿ ಹಗ್ಗ ಮುಟ್ಟಲು ನಿರಾಕರಣೆ'

ಮಂಗಳೂರು: 'ಮೂಲ್ಕಿ ತಾಲ್ಲೂಕಿನ ಬಳ್ಕುಂಜೆಯಲ್ಲಿ ಈಗಲೂ ಅಸ್ಪೃಶ್ಯತೆ ಜೀವಂತವಾಗಿದೆ' ಎಂದು ಪರಿಶಿಷ್ಟ ಜಾತಿಯ ಮುಖಂಡರು ಅಧಿಕಾರಿಗಳ ಎದುರು ನೋವು ಹೇಳಿಕೊಂಡರು. ಭಾನುವಾರ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಆಯೋಜಿಸಿದ್ದ ಪರಿಶಿಷ್ಟ ಜಾತಿ, ಪಂಗಡಗಳ ಕುಂದುಕೊರತೆ ಆಲಿಕೆ ಮಾಸಿಕ ಸಭೆಯಲ್ಲಿ ಈ ವಿಷಯ ಪ್ರಸ್ತಾಪವಾಯಿತು.

ಮುಖಂಡ ಜಯ ಕಾಟಿಪಳ್ಳ, 'ಪ್ರಬಲ ಜಾತಿಗಳವರಿಗೆ ಸೇರಿದ ಬಾವಿಗಳಿಂದ ನೀರು ಸೇದಲು ಬಳಸುವ ಹಗ್ಗವನ್ನು ಪರಿಶಿಷ್ಟ ಸಮುದಾಯದವರು ಮುಟ್ಟಲೂ ಅವಕಾಶವಿಲ್ಲ' ಎಂದರು.

ಮುಂದಿನ ಸಭೆ ಒಳಗೆ ಬಳ್ಕುಂಜೆಯಲ್ಲಿ ಪ್ರತ್ಯೇಕ ಸಭೆ ನಡೆಸಿ, ಚರ್ಚಿಸಲಾಗುವುದು ಎಂದು ಡಿಸಿಪಿ (ಕಾನೂನು ಮತ್ತು ಸುವ್ಯವಸ್ಥೆ) ಮಿಥುನ್ ಎಚ್.ಎನ್ ಭರವಸೆ ನೀಡಿದರು.

ಜ್ಞಾನಶಕ್ತಿಯ ಆರಾಧನೆ

• ನಚಿಕೇತ್ ಹೆಗಡೆ

ಇಂದು ಸರಸ್ವತಿ ಪೂಜೆ



ನಾರಾಯಣನೊಮ್ಮೆ ಕ್ಷೀರಸಾಗರದೊಳಗೆ ಯೋಗನಿದ್ರೆಯಲ್ಲಿ ತಲ್ಲೀನನಾಗಿದ್ದ. ಆಗ ಆತನ ಕಿವಿಯಿಂದ ಮಧು-ಕೈಟಭ ರೆಂಬ ಇಬ್ಬರು ರಾಕ್ಷಸರು ಹೊರ ಬಂದರು. ಹಾಗೆ ಬಂದವರೇ ತಮ್ಮ ಪ್ರವೃತ್ತಿಗನುಗುಣವಾಗಿ ವಿಷ್ಣುವಿನ ನಾಭಿಕಮಲದಲ್ಲಿ ಕುಳಿತಿದ್ದ ಬ್ರಹ್ಮನನ್ನು ಕೊಲ್ಲಲು ಮುಂದಾದರು. ಈ ಅನಿರೀಕ್ಷಿತವಾಗಿ ಎರಗಿದ ಆಪತ್ತಿನಿಂದ ಬೆದರಿದ ಬ್ರಹ್ಮ ವಿಷ್ಣುವನ್ನು ಎಚ್ಚರಿಸಲೆಂದು ನಾನಾ ಬಗೆಯಲ್ಲಿ ಆತನನ್ನು ಸ್ತುತಿಸಿದ. ಆದರೆ ಹರಿಯ ನಿದ್ರೆ ಹರಿಯಲಿಲ್ಲ. ವ್ಯಾಕುಲನಾದ ಬ್ರಹ್ಮ ಇನ್ನೇನು ಹತಾಶನಾಗಿ ಕೈಚೆಲ್ಲಬೇಕೆಂದಿರುವಷ್ಟರಲ್ಲಿ ಆತನಲ್ಲಿ, 'ಈ ನಾರಾಯಣನು ಇಷ್ಟು ಗಾಢವಾದ ನಿದ್ರೆಯಲ್ಲಿ ಮುಳುಗಿರುವುದು ಅವನೊಳಗಿನ ಶಕ್ತಿಯ ಮಾಯೆ ಯಿಂದ. ಹಾಗಾಗಿ ಅವಳನ್ನು ಸ್ತುತಿಸಬೇಕು. ನಾರಾಯಣನ ದೇಹವನ್ನು ಬಿಟ್ಟುಬಾರೆಂದು ಕರೆಯ ಬೇಕು' ಎನ್ನುವ ಜ್ಞಾನ ಮೂಡಿತು. ಅದಕ್ಕನುಗುಣವಾಗಿ ಆತ:

ವಿಷ್ಣುಸ್ತ್ವಯಾ ಪ್ರಕಟೀತಃ ಪ್ರಥಮಂ ಯುಗಾದೌ
ದತ್ತಾಚ ಶಕ್ತಿರಮಲಾ ಖಲು ಪಾಲನಾಯ l
ತ್ರಾತಂ ಚ ಸರ್ವಮಖಿಲಂ ವಿವಶೀಕೃತೋl
ದ್ಯಯದ್ರೋಚತೇ ತವ ತಥಾಂಬ ಕರೋಷಿ ನೂನಮ್l

ಅರ್ಥಾತ್, 'ಓ ತಾಯಿಯೇ, ಈ ಕಲ್ಪದ ಪ್ರಾರಂಭದಲ್ಲಿ ನೀನೇ ವಿಷ್ಣುವನ್ನು ಸೃಷ್ಟಿಸಿದೆ. ಆತನಿಗೆ ಈ ಜಗತ್ತಿನ ರಕ್ಷಣೆಗೆ ಬೇಕಾದ ಶಕ್ತಿಯನ್ನೆಲ್ಲ ಅನುಗ್ರಹಿಸಿದೆ. ಆ ಮೂಲಕ ನೀನೇ ಜಗತ್ತನ್ನೆಲ್ಲ ಪಾಲಿಸಿದೆ. ಈಗ ಆ ವಿಷ್ಣುವನ್ನು ನೀನೇ ನಿದ್ರಾವಶನನ್ನಾಗಿಸಿರುವೆ. ಎಲ್ಲವೂ ನಿನ್ನಿಚ್ಛೆಯಂತೆಯೇ ನಡೆಯುತ್ತದೆಯಾಗಿ ಈಗಲೂ ನಿನಗೆ ಯಾವುದು ಯುಕ್ತವೆನಿಸುತ್ತದೆಯೋ ಅದನ್ನೇ ಮಾಡು' ಎಂದ.

ಭಾರತೀಯ ಪರಂಪರೆಯು ಶಕ್ತಿಯನ್ನು ಹೀಗೆ ದೇವದೇವೋತ್ತಮನನ್ನೂ ಚೇತನಗೊಳಿಸುವ, ಮೋಹಗೊಳಿಸುವ ಅಂಗವಾಗಿ ಕಂಡಿದೆ. ಅಂತಹ ಶಕ್ತಿಯನ್ನು ಮಹಾಕಾಳಿ, ಮಹಾಲಕ್ಷ್ಮಿ ಮತ್ತು ಮಹಾಸರಸ್ವತಿ ಎನ್ನುವುದಾಗಿ ಮೂರು ರೂಪಗಳಿಂದ ಆರಾಧಿಸಿದೆ. ಸತ್ತ್ವ, ರಜಸ್ ಮತ್ತು ತಮೋಗುಣಗಳ ಸಮತೋಲನದ, ತನ್ಮೂಲಕ ಜಗತ್ತಿನ ನಿಯಾಮಕ ಶಕ್ತಿಯಾದ ಋತದೊಂದಿಗೆ ಬಾಳು ಸಮನ್ವಯವನ್ನು ಹೊಂದಬೇಕು ಎಂಬ ಪಾಠದ ಮೂರ್ತರೂಪಗಳನ್ನಾಗಿ ಕಂಡರಿಸಿದೆ.

ಸರಸ್ವತೀ ಪೂಜೆ: ನಾಮ-ರೂಪಾತ್ಮಕವಾದ ಈ ಜಗತ್ತಿನ ವ್ಯವಹಾರವೆಲ್ಲವೂ ನಡೆಯುವುದು ಶಬ್ದ ಮತ್ತು ಅರ್ಥಗಳ ನೆಲೆಯಲ್ಲಿ. ವಾಸ್ತವವಾಗಿ ಈ ಜಗತ್ತೆಲ್ಲವೂ ಒಂದು ಕಲ್ಪಿತ ಸತ್ಯವಾಗಿದ್ದರೂ, ಅದರಲ್ಲಿ ಬದುಕುವಾಗ ಒಂದಷ್ಟು ಸಂಕೇತಗಳು ಅನಿವಾರ್ಯವೇ ಆಗಿವೆ. ಉದಾಹರಣೆಗೆ 'ಅದು ಗೋವು' ಎನ್ನುವುದಾಗಿ ಒಂದು ಹಸುವನ್ನು ನೋಡಿ ನಾವು ಹೇಳುತ್ತೇವೆ. ಆದರೆ ಅದು ಗೋವಲ್ಲ. ಅದೊಂದು ಜೀವಿ. 'ಗೋ' ಎನ್ನುವ ಶಬ್ದದಿಂದ ನಾವು ಅದನ್ನು ಗುರುತಿಸಿರುವುದಷ್ಟೇ. ಹೀಗೆ ಎಂತೆಂತಹ 'abstract' ಆದ ಸಂಗತಿಗಳನ್ನೂ ನಾವು ಅರ್ಥೈಸಿಕೊಳ್ಳುವುದು ಅದಕ್ಕೊಂದು ಶಬ್ದ ಮತ್ತು ಅರ್ಥವನ್ನು ಕಲ್ಪಿಸಿಕೊಂಡೇ. ಅದಕ್ಕೆ ಪ್ರಕ್ರಿಯಾ ಜಗತ್ತು ಎಂತಲೂ ಕರೆಯುತ್ತೇವೆ. ಇಲ್ಲಿನ ಎಲ್ಲ ಆಗುಹೋಗುಗಳನ್ನು ಅರ್ಥೈಸಿಕೊಂಡು, ಕಾಲಕಾಲಕ್ಕೆ ಬೇಕಾದಂತೆ ಧರ್ಮ ಯಾವುದು, ಯುಕ್ತ ಯಾವುದು, ಅಯುಕ್ತ ಯಾವುದು - ಎನ್ನುವುದನ್ನೆಲ್ಲ ಚಿಂತಿಸಲು ಸಾಧ್ಯವಾಗುವಂತೆ ಮಾಡುವುದೇ ಬುದ್ಧಿ ಮತ್ತು ವಾಕ್ ಶಕ್ತಿಗಳು. ಅವುಗಳನ್ನು ಸ್ತ್ರೀರೂಪದಲ್ಲಿ ಆರಾಧನೆ ಮಾಡುವ ಭಾರತೀಯರು ಅವುಗಳ ಅಧಿಷ್ಠಾತೃ ದೇವತೆಯನ್ನು 'ಸರಸ್ವತೀ' ಎನ್ನುವುದಾಗಿ ಕರೆದಿದ್ದಾರೆ. ಜ್ಞಾನಕ್ಕೆ ಕಾರಣಳಾದ ಆ ದೇವಿಯನ್ನು ಆರಾಧಿಸುವ ಮೂಲಕ ಈ ಲೋಕದ ವ್ಯವಹಾರವನ್ನು ದಕ್ಷತೆಯಿಂದ ನಿರ್ವಹಿಸಿ ಮುಂದೆ ಶಬ್ದ ಮತ್ತು ಅರ್ಥಗಳನ್ನೂ ಮೀರಿ ಆತ್ಯಂತಿಕ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವ ಹಂಬಲ ನಮ್ಮದು. ಈ ಹೊತ್ತು 'ಬಾಲಾಸರಸ್ವತೀ' ಎಂಬ ದೇವಿಯ ಕುರಿತಾದ ಮಂತ್ರವೊಂದನ್ನು ಲಕ್ಷಸಂಖ್ಯೆಯಲ್ಲಿ ಜಪಿಸಿ 'ಬಾಲಾಸರಸ್ವತೀ ಹೋಮವನ್ನು' ಮಾಡುವ ಸಂಪ್ರದಾಯವಿದೆ. ವಿದ್ಯಾರ್ಥಿದೆಸೆಯಲ್ಲಿರುವ ಮಕ್ಕಳಿಂದ ಈ ಜಪವನ್ನು ಮಾಡಿಸುವುದು ವಿಶೇಷ.

'ಒಂದಿಂಚು ಭೂಮಿ ಸ್ವಾಧೀನಕ್ಕೂ ಬಿಡಲ್ಲ'

ಜಿಬಿಐಟಿ ವಿರೋಧಿಸಿ ಜೆಡಿಎಸ್ ಪ್ರತಿಭಟನೆ; ಸರ್ಕಾರದ ವಿರುದ್ಧ ಅಪ್ಪ-ಮಗ ಕಿಡಿ

ಪ್ರಜಾವಾಣಿ ವಾರ್ತೆ

ಬಿಡದಿ (ರಾಮನಗರ): ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ (ಜಿಬಿಐಟಿ) ಯೋಜನೆಗೆ ಒಂದಿಂಚೂ ಭೂಮಿ ಸ್ವಾಧೀನಕ್ಕೆ ಬಿಡುವುದಿಲ್ಲ. ಯೋಜನೆ ಕೈ ಬಿಡದಿದ್ದರೆ ವಿಧಾನಸೌಧ ಮತ್ತು ಮುಖ್ಯಮಂತ್ರಿ ನಿವಾಸದವರೆಗೆ ಪಾದಯಾತ್ರೆ ನಡೆಸಿ ಮುತ್ತಿಗೆ ಹಾಕಲಾಗುವುದು...

ಜಿಬಿಐಟಿ ವಿರೋಧಿಸಿ ಹೋಬಳಿಯ ಭೈರಮಂಗಲದಲ್ಲಿ ನಡೆಯುತ್ತಿರುವ ರೈತರ ಅನಿರ್ದಿಷ್ಟಾವಧಿ ಧರಣಿ ಬೆಂಬಲಿಸಿ ಜೆಡಿಎಸ್ ಭಾನುವಾರ ಹಮ್ಮಿಕೊಂಡಿದ್ದ 'ಬಿಡದಿ ಉಳಿಸಿ, ಜಿಬಿಐಟಿ ನಿಲ್ಲಿಸಿ' ಪ್ರತಿಭಟನಾ ಸಭೆಯಲ್ಲಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಮತ್ತು ಪಕ್ಷದ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಈ ಎಚ್ಚರಿಕೆ ನೀಡಿದರು.


ಭೈರಮಂಗಲದಲ್ಲಿ ಭಾನುವಾರ ಜೆಡಿಎಸ್ ಹಮ್ಮಿಕೊಂಡಿದ್ದ ಪ್ರತಿಭಟನಾ ಸಭೆಯಲ್ಲಿ ಭಾಗವಹಿಸಿದ್ದ ರೈತರು ಹಾಗೂ ಪಕ್ಷದ ಕಾರ್ಯಕರ್ತರು

ನಾಯಕರೊಂದಿಗೆ ಭೈರಮಂಗಲ ಕ್ರಾಸ್‌ನಿಂದ ನಿಖಿಲ್ ಎತ್ತಿನಗಾಡಿಯಲ್ಲಿ ಪ್ರತಿಭಟನಾ ಸ್ಥಳಕ್ಕೆ ಬಂದರು. ಕಾರ್ಯಕರ್ತರು ಬೈಕ್, ಇತರ ವಾಹನಗಳಲ್ಲಿ ಹಿಂಬಾಲಿಸಿದರು. ಜಿಬಿಐಟಿ ಯೋಜನೆ, ಸರ್ಕಾರ, ಡಿಸಿಎಂ, ಶಾಸಕ ಬಾಲಕೃಷ್ಣ ವಿರುದ್ಧ ಘೋಷಣೆ ಮೊಳಗಿದವು.

ರೈತರನ್ನು ಉದ್ದೇಶಿಸಿ ದೆಹಲಿಯಿಂದ ನೇರಪ್ರಸಾರದಲ್ಲಿ ಮಾತನಾಡಿದ ಕುಮಾರಸ್ವಾಮಿ, 'ರೈತರ ಮೇಲಿನ ದಬ್ಬಾಳಿಕೆ, ಸರ್ವೆ ನಿಲ್ಲಿಸಬೇಕು. ರೈತರಿಗೆ ತೊಂದರೆಯಾದರೆ ನನ್ನ ಆರೋಗ್ಯವನ್ನೂ ಲೆಕ್ಕಿಸದೆ ಖುದ್ದು ಹೋರಾಟದಲ್ಲಿ ಭಾಗವಹಿಸುವೆ. ರೈತರು ಎದೆಗುಂದಬಾರದು. ನಿಮ್ಮೊಂದಿಗೆ ನಾನಿದ್ದೇನೆ' ಎಂದರು.

'ಇದು ಅಭಿವೃದ್ಧಿ ಯೋಜನೆ ಆಗಿದ್ದರೆ ಭೂ ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿ ನಾಲ್ಕು ತಿಂಗಳಾದರೂ ಸ್ಥಳೀಯ ಶಾಸಕ, ಡಿಸಿಎಂ ಹಾಗೂ ಅಧಿಕಾರಿಗಳು ರೈತರ ಜೊತೆ ಏಕೆ ಸಭೆ ನಡೆಸಿಲ್ಲ. ರೈತರ ಭೂಮಿ ಲಪಟಾಯಿಸುತ್ತಿರುವುದು ರಿಯಲ್ ಎಸ್ಟೇಟ್ ದಂಧೆಗೆ ಎಂದು ಗೊತ್ತಾಗುತ್ತದೆ' ಎಂದು ನಿಖಿಲ್ ಕಿಡಿಕಾರಿದರು.

> **ರೈತರು ವಿರೋಧಿಸಿದ್ದರಿಂದ ಭೂ ಸ್ವಾಧೀನಕ್ಕೆ ಮುಂದಾಗಲಿಲ್ಲ. ಯೋಜನೆ ಹೆಸರಲ್ಲಿ ಡಿ.ಕೆ. ಶಿವಕುಮಾರ್ ಆಡುತ್ತಿರುವ ಆಟ ಗೊತ್ತಿದೆ.**
> **ಎಚ್.ಡಿ.ಕುಮಾರಸ್ವಾಮಿ**
> ಜೆಡಿಎಸ್ ನಾಯಕ

> **ರೈತರಿಗೆ ಅಧಿಕಾರ ಕೊಡುವುದೂ ಗೊತ್ತು. ತೊಡೆ ಮುರಿವುದೂ ಗೊತ್ತು**
> **ನಿಖಿಲ್ ಕುಮಾರಸ್ವಾಮಿ,**
> ಅಧ್ಯಕ್ಷ, ಜೆಡಿಎಸ್ ಯುವಘಟಕ

'ಕ್ಷೇತ್ರ ಬೆಳಗುತ್ತಿದೆ, ನಾವೀಗ ನಿರಾಳ...'

ಧರ್ಮಸ್ಥಳ: ಶೀಘ್ರದಲ್ಲೇ ಸೇವಾ ಕಾರ್ಯಗಳಿಗೆ ಚಾಲನೆ -ಡಿ.ವೀರೇಂದ್ರ ಹೆಗ್ಗಡೆ

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): 'ಧರ್ಮಸ್ಥಳ ಕ್ಷೇತ್ರದ ವತಿಯಿಂದ ಸದ್ಯದಲ್ಲೇ ಹಲವು ಸಮಾಜಮುಖಿ ಸೇವಾ ಕಾರ್ಯ ಪ್ರಾರಂಭಿಸಲಾಗುವುದು' ಎಂದು ಕ್ಷೇತ್ರದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಭಾನುವಾರ ಧರ್ಮಸ್ಥಳದಲ್ಲಿ ಪ್ರಕಟಿಸಿದರು.

ಬೆಳ್ತಂಗಡಿ ತಾಲ್ಲೂಕಿನ 81 ಗ್ರಾಮಗಳ ಗ್ರಾಮಸ್ಥರು ಆಯೋಜಿಸಿದ್ದ 'ಸತ್ಯ ದರ್ಶನ' ಸಮಾವೇಶದಲ್ಲಿ ಅವರು ಮಾತನಾಡಿದರು.

'ಕುಟುಂಬದ ಕಾರ್ಯಕ್ರಮ ಎಂಬಂತೆ ಸಂಭ್ರಮದಿಂದ ಭಾಗವಹಿಸಿದ್ದೀರಿ. ಈಗ ನಾವು ನಿರಾಳರಾಗಿದ್ದು ಹೊಸ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದು' ಎಂದರು.



ಧರ್ಮಸ್ಥಳದಲ್ಲಿ ನಡೆದ ಸತ್ಯದರ್ಶನ ಸಮಾವೇಶದಲ್ಲಿ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಮಾತನಾಡಿದರು

'ಧರ್ಮಸ್ಥಳದ ಬಗ್ಗೆ ಸುಳ್ಳು ವದಂತಿ ಪಸರಿಸಿದರೂ, ಷಡ್ಯಂತ್ರದ ರಹಸ್ಯ ಬಯಲಾಗಿ ಪವಿತ್ರಕ್ಷೇತ್ರ ಇನ್ನಷ್ಟು ಬೆಳಗುತ್ತಿದೆ. ಭಕ್ತರು, ಅಭಿಮಾನಿಗಳ ಸಂಖ್ಯೆ ಹೆಚ್ಚಿದೆ. ಈಗ ಸತ್ಯದ ಅನಾವರಣವಾಗಿದ್ದು, ಸರ್ಕಾರ, ಎಸ್‌ಐಟಿಗೆ ಅಭಿನಂದಿಸುತ್ತೇವೆ' ಎಂದರು. ಸಮಾವೇಶಕ್ಕೆ ಪೂರ್ವಭಾವಿಯಾಗಿ ಧರ್ಮಸ್ಥಳದ ಅರ್ಚಕ ರಾಮಕೃಷ್ಣ ಕಲ್ಲೂರಾಯ ಅವರ ನೇತೃತ್ವದಲ್ಲಿ ಚಂಡಿಕಾಹೋಮ ನಡೆಸಲಾಯಿತು. ಡಾ. ಪ್ರದೀಪ್ ನಾವೂರು, ಸಮಾವೇಶದ ಸಂಚಾಲಕ ಸುಬ್ರಹ್ಮಣ್ಯ ಅಗರ್ತ, ಹೇಮಾವತಿ ವೀ. ಹೆಗ್ಗಡೆ, ಡಿ. ಸುರೇಂದ್ರಕುಮಾರ್, ಅನಿತಾ ಸುರೇಂದ್ರಕುಮಾರ್, ಡಿ. ಹರ್ಷೇಂದ್ರಕುಮಾರ್, ಸುಪ್ರಿಯಾ ಹರ್ಷೇಂದ್ರ ಕುಮಾರ್, ಮೂಡುಬಿದಿರೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ , ಉಜಿರೆ ಜನಾರ್ದನ ಸ್ವಾಮಿ ದೇವಸ್ಥಾನದ ಆನುವಂಶಿಕ ಆಡಳಿತ ಮೊಕ್ತೇಸರ ಶರತ್‌ಕೃಷ್ಣ ಪಡ್ವೆಟ್ನಾಯ ಇತರ ಮುಖಂಡರು ಇದ್ದರು.

ನೇಮಕ: ಪ್ರಮಾಣಪತ್ರ ಅಡ್ಡಿ

ಒಂದನೇ ಪುಟದಿಂದ...

ತಿಂಗಳ ಹಿಂದೆ ಆದೇಶ: ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕುರಿತು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಆಯೋಗ ಮಾಡಿದ್ದ ಶಿಫಾರಸನ್ನು ಮಾರ್ಪಾಡು ಮಾಡಿದ್ದ ರಾಜ್ಯ ಸರ್ಕಾರ, ಪರಿಶಿಷ್ಟ ಜಾತಿಗಳನ್ನು ಪ್ರವರ್ಗ 'ಎ', 'ಬಿ', 'ಸಿ' ಎಂದು ವರ್ಗೀಕರಿಸಿ ಆಗಸ್ಟ್ 28ರಂದೇ ಆದೇಶ ಹೊರಡಿಸಿದೆ.

ಪರಿಶಿಷ್ಟ ಜಾತಿಗೆ ಲಭ್ಯವಿರುವ ಶೇ 17 ಮೀಸಲಾತಿಯನ್ನು 'ಎ' (16 ಜಾತಿಗಳು) ಮತ್ತು 'ಬಿ' (19 ಜಾತಿಗಳು) ಪ್ರವರ್ಗಗಳಿಗೆ ತಲಾ ಶೇ 6 ಮತ್ತು ಪ್ರವರ್ಗ 'ಸಿ'ಗೆ (ಸ್ಪೃಶ್ಯ ಮತ್ತು ಅಲೆಮಾರಿ ಸೇರಿ 63 ಜಾತಿಗಳು) ಶೇ 5ರಂತೆ ಹಂಚಿಕೆ ಮಾಡಲಾಗಿದೆ. ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರ ಈ ಮೂರು ಸಮುದಾಯಗಳು ತಮ್ಮ ಮೂಲ ಜಾತಿ ತಿಳಿಸದ ಕಾರಣ ಪ್ರವರ್ಗ 'ಎ' ಮತ್ತು 'ಬಿ'ಯಲ್ಲಿ ಮೀಸಲಾತಿ ಪಡೆಯಬಹುದು ಎಂದೂ ಆದೇಶದಲ್ಲಿ ವಿವರಿಸಲಾಗಿದೆ.

ಒಳ ಮೀಸಲಾತಿ ಹಂಚಿಕೆಗೆ ಅನುಗುಣವಾಗಿ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿಗಳಿಗೆ 'ಪರಿಷ್ಕೃತ ಮೀಸಲಾತಿ ರೋಸ್ಟರ್' (100 ಹುದ್ದೆಗಳಲ್ಲಿ 17 ಹುದ್ದೆಗಳನ್ನು ಪ್ರವರ್ಗ 'ಎ', 'ಬಿ', 'ಸಿ' ಎಂದು ವರ್ಗೀಕರಣ) ಪಟ್ಟಿಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು (ಡಿಪಿಎಆರ್) ಸೆ. 3ರಂದೇ ಪ್ರಕಟಿಸಿದೆ. ಸಮಾಜ ಕಲ್ಯಾಣ ಇಲಾಖೆ ಮತ್ತು ಕಂದಾಯ ಇಲಾಖೆಗಳು ಪರಸ್ಪರ ಸಮನ್ವಯದಿಂದ, ಪ್ರವರ್ಗವಾರು ಜಾತಿ ಪ್ರಮಾಣಪತ್ರ ನೀಡುವ ಪ್ರಕ್ರಿಯೆಗೆ ಚಾಲನೆ ನೀಡಬೇಕಿದೆ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಅಧಿಕಾರಿಯೊಬ್ಬರು ಹೇಳಿದರು.

ಪರಿಹಾರವಾಗದ ಗೊಂದಲ

'ನೇಮಕಾತಿ ಪ್ರಾಧಿಕಾರಗಳು 2024ರ ಅ. 28ರ ನಂತರ ಯಾವುದಾದರೂ ತಿದ್ದುಪಡಿ ಅಧಿಸೂಚನೆ ಹೊರಡಿಸಿದ್ದರೆ ಅವುಗಳನ್ನು ರದ್ದುಗೊಳಿಸಿ, ಒಳ ಮೀಸಲಾತಿ ಅಳವಡಿಸಿಕೊಂಡು ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಬೇಕು' ಎಂದು 2025ರ ಸೆ. 4ರಂದು ಹೊರಡಿಸಿರುವ ಸುತ್ತೋಲೆ ಗೊಂದಲಕ್ಕೆ ಕಾರಣವಾಗಿದೆ.

ತಿದ್ದುಪಡಿ ಅಧಿಸೂಚನೆ ಹೊರಡಿಸಿ, ಈಗಾಗಲೇ ಪರೀಕ್ಷೆಗಳು ನಡೆದಿರುವ ಹುದ್ದೆ ನೇಮಕಾತಿಗೆ ಹೊರಡಿಸಿದ್ದ ಅಧಿಸೂಚನೆಗಳನ್ನೂ ರದ್ದುಪಡಿಸಬೇಕೇ ಎಂಬ ಗೊಂದಲ ಮುಂದುವರಿದಿದೆ. ಸಾರಿಗೆ ಇಲಾಖೆಯ ಮೋಟಾರು ವಾಹನ ನಿರೀಕ್ಷಕರ ಒಟ್ಟು 76 ಹುದ್ದೆ ನೇಮಕಾತಿಗೆ ಕೆಪಿಎಸ್‌ಸಿ, ಈ ಸುತ್ತೋಲೆ ಹೊರಡಿಸುವ ಮೊದಲೇ ಪರೀಕ್ಷೆ ನಡೆಸಿದೆ. ಹೀಗಾಗಿ, ಈ ಬಗ್ಗೆ ಸರ್ಕಾರದಿಂದ ಕೆಪಿಎಸ್‌ಸಿ ಸ್ಪಷ್ಟನೆ ಕೇಳಿದೆ ಎಂದು ಡಿಪಿಎಆರ್ ಅಧಿಕಾರಿಯೊಬ್ಬರು ತಿಳಿಸಿದರು.

ಸುಗ್ರೀವಾಜ್ಞೆ ಹೊರಡಿಸಿ: ಆಂಜನೇಯ



'ಒಳ ಮೀಸಲಾತಿಗೆ ಸಂಬಂಧಿಸಿದಂತೆ ಇರುವ ಗೊಂದಲ ಮತ್ತು ಆತಂಕ ನಿವಾರಣೆಗೆ ಸರ್ಕಾರವು ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು. ಒಳ ಮೀಸಲಾತಿ ಜಾರಿಗೆ ಸುಗ್ರೀವಾಜ್ಞೆ ಹೊರಡಿಸಬೇಕು' ಎಂದು ಮಾಜಿ ಸಚಿವರಾದ ಕಾಂಗ್ರೆಸ್‌ನ ಎಚ್.ಆಂಜನೇಯ ಒತ್ತಾಯಿಸಿದ್ದಾರೆ.

'ವಿಶ್ವವಿದ್ಯಾಲಯಗಳು ಒಳಗೊಂಡು ಅನೇಕ ಸಂಸ್ಥೆಗಳು ಒಳ ಮೀಸಲಾತಿಗೆ ಸಂಬಂಧಿಸಿದ ಸುತ್ತೋಲೆ ಬಂದಿಲ್ಲ ಎಂದು ಹೇಳುತ್ತಿವೆ ಎಂದು ವರದಿಯಾಗಿದೆ. ಜತೆಗೆ ಆದಿ ಕರ್ನಾಟಕ ಮತ್ತು ಆದಿ ದ್ರಾವಿಡ ಎಂದು ಬರೆಯಿಸಿರುವವರು, ಪ್ರವರ್ಗ-ಎ ಅಥವಾ ಪ್ರವರ್ಗ-ಬಿ ಎರಡರ ಅಡಿಯಲ್ಲೂ ಒಳ ಮೀಸಲಾತಿ ಪಡೆಯಬಹುದು ಎಂದು ಹೇಳಲಾಗಿದೆ. ಈ ಬಗೆಗಿನ ಗೊಂದಲ ನಿವಾರಿಸುವ ಕೆಲಸವನ್ನು ಸಮಾಜ ಕಲ್ಯಾಣ ಇಲಾಖೆ ಮಾಡಬೇಕು' ಎಂದಿದ್ದಾರೆ.

'ಸಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿಯವರು ಸಚಿವರ ಜತೆಗೆ ಚರ್ಚಿಸಿ ಕಡತ ಸಿದ್ಧಪಡಿಸಬೇಕು. ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಈ ವಿಷಯ ಪ್ರಸ್ತಾಪವಾಗುವಂತೆ ಮಾಡಬೇಕು. ಸುಗ್ರೀವಾಜ್ಞೆ ಹೊರಡಿಸುವುದು ಅತ್ಯಗತ್ಯ ಎಂಬುದನ್ನು ಸಚಿವ ಸಂಪುಟಕ್ಕೆ ಮನವರಿಕೆ ಮಾಡಿಕೊಡಬೇಕು' ಎಂದು ವಿವರಿಸಿದ್ದಾರೆ.

ಕರೂರು ಕಾಲ್ತುಳಿತ: ಮೃತರ ಸಂಖ್ಯೆ 40ಕ್ಕೆ

ದುರಂತದ ಕುರಿತು ತನಿಖೆ ಆರಂಭಿಸಿದ ನ್ಯಾ. ಅರುಣಾ ಜಗದೀಶನ್ ಆಯೋಗ

ಕರೂರು (ಪಿಟಿಐ): ತಮಿಳಗ ವೆಟ್ರಿ ಕಳಗಂ (ಟಿವಿಕೆ) ಮುಖ್ಯಸ್ಥ, ನಟ ವಿಜಯ್ ಅವರು ಕರೂರಿನಲ್ಲಿ ಶನಿವಾರ ನಡೆಸಿದ ರ‍್ಯಾಲಿಯಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ ಮೃತಪಟ್ಟವರ ಸಂಖ್ಯೆ 40ಕ್ಕೆ ಏರಿಕೆಯಾಗಿದ್ದು, ದುರಂತದ ತನಿಖೆ ಭಾನುವಾರದಿಂದಲೇ ಆರಂಭವಾಗಿದೆ.

ಮೃತರಲ್ಲಿ 17 ಮಹಿಳೆಯರು, 14 ಪುರುಷರು ಮತ್ತು ಒಂಬತ್ತು ಮಕ್ಕಳು ಸೇರಿದ್ದಾರೆ. ಮಕ್ಕಳ ಪೈಕಿ ನಾಲ್ವರು ಬಾಲಕರಾಗಿದ್ದರೆ, ಐವರು ಬಾಲಕಿಯರು. ಒಟ್ಟು 30 ಶವಗಳ ಮರಣೋತ್ತರ ಪರೀಕ್ಷೆ ನಡೆಸಿ, ಅವರ ಕುಟುಂಬದವರಿಗೆ ಹಸ್ತಾಂತರಿಸಲಾಗಿದೆ. ಇವರಲ್ಲದೆ ಇತರ 67 ಜನರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಅವರಲ್ಲಿ ಇಬ್ಬರ ಸ್ಥಿತಿ ಗಂಭೀರವಾಗಿದೆ.

ಹೊರರೋಗಿಗಳಾಗಿ ದಾಖಲಾಗಿದ್ದ 26 ಜನರು ಚಿಕಿತ್ಸೆ ಪಡೆದು ಮನೆಗಳಿಗೆ ತೆರಳಿದ್ದಾರೆ ಎಂದು ತಮಿಳುನಾಡಿನ ಆರೋಗ್ಯ ಕಾರ್ಯದರ್ಶಿ ಪಿ. ಸೆಂಥಿಲ್ ಕುಮಾರ್ ಮಾಹಿತಿ ನೀಡಿದರು.

ಈ ಪ್ರಕರಣದ ತನಿಖೆ ಸಂಬಂಧ ತಮಿಳುನಾಡು ಸರ್ಕಾರ ರಚಿಸಿರುವ ನಿವೃತ್ತ ನ್ಯಾಯಮೂರ್ತಿ ಅರುಣಾ ಜಗದೀಶನ್ ನೇತೃತ್ವದ ಆಯೋಗ ಭಾನುವಾರವೇ ಕರೂರಿಗೆ ಬಂದು, ತನಿಖೆಗೆ ಚಾಲನೆ ನೀಡಿದೆ.

> ದೊಡ್ಡ ಜನಸಂದಣಿ ಇದ್ದಾಗ ಜನರು ತಮ್ಮ ಭಾವನೆಗಳನ್ನು ನಿಯಂತ್ರಿಸಿಕೊಳ್ಳಬೇಕು. ಕ್ರಿಕೆಟ್ ಪಂದ್ಯದ ನಂತರ ಬೆಂಗಳೂರಿನಲ್ಲೂ ಇಂಥ ಘಟನೆ ನಡೆದಿತ್ತು. ಮತ್ತೆಂದೂ ಇಂಥ ದುರಂತಗಳು ಮರುಕಳಿಸಬಾರದು
> **ಸಿ.ಪಿ.ರಾಧಾಕೃಷ್ಣನ್,** ಉಪ ರಾಷ್ಟ್ರಪತಿ

‘ಕಾಲ್ತುಳಿತ ಪ್ರಕರಣದ ತನಿಖೆಗೆ ಸರ್ಕಾರ ಈ ಆಯೋಗ ರಚಿಸಿದೆ. ಈ ರೀತಿಯ ದುರಂತಗಳು ಭವಿಷ್ಯದಲ್ಲಿ ನಡೆಯದಂತೆ ನೋಡಿಕೊಳ್ಳಬೇಕು. ಅದಕ್ಕೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ’ ಎಂದು ಅರುಣಾ ಅವರು ಪ್ರತಿಕ್ರಿಯಿಸಿದ್ದಾರೆ.

ಆಸ್ಪತ್ರೆಗೆ ಸ್ಟಾಲಿನ್ ಭೇಟಿ: ಕರೂರು ಆಸ್ಪತ್ರೆಗೆ ಭಾನುವಾರ ಬೆಳಿಗ್ಗೆ ಭೇಟಿ ನೀಡಿದ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಕಂಬನಿ ಮಿಡಿದರು. ಮೃತರಿಗೆ ಪುಷ್ಪನಮನ ಸಲ್ಲಿಸಿದ ಅವರು ಸಂತ್ರಸ್ತರ ಕುಟುಂಬದವರ ಜತೆ ಮಾತನಾಡಿ ಸಾಂತ್ವನ ಹೇಳಿದರು. ಗಾಯಗೊಂಡವರನ್ನೂ ಭೇಟಿ ಮಾಡಿ ಮಾತುಕತೆ ನಡೆಸಿದರು. ಅಲ್ಲದೆ ವೈದ್ಯರ ಜತೆ ಸಭೆ ನಡೆಸಿ ನೀಡುತ್ತಿರುವ ಚಿಕಿತ್ಸೆಯ ಬಗ್ಗೆ ಮಾಹಿತಿ ಪಡೆದು, ಅತ್ಯುತ್ತಮ ಚಿಕಿತ್ಸೆ ನೀಡುವಂತೆ ನಿರ್ದೇಶಿಸಿದರು.

ಉಪ ಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಅವರೂ ಕರೂರಿನ ಆಸ್ಪತ್ರೆಗೆ ಭೇಟಿ ನೀಡಿ ಮೃತರ ಮತ್ತು ಗಾಯಗೊಂಡವರ ಕುಟುಂಬದವರ ಜತೆ ಮಾತುಕತೆ ನಡೆಸಿದರು. ಆರೋಗ್ಯ ಸಚಿವ ಎಂ. ಸುಬ್ರಮಣಿಯನ್ ಜತೆಯಲ್ಲಿದ್ದರು. ತನಿಖಾ ಆಯೋಗ ನೀಡುವ ಶಿಫಾರಸನ್ನು ಆಧರಿಸಿ ಮುಖ್ಯಮಂತ್ರಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಿದ್ದಾರೆ ಎಂದು ಉಧಯನಿಧಿ ಸುದ್ದಿಗಾರರಿಗೆ ತಿಳಿಸಿದರು.

ಈ ರೀತಿಯ ಘಟನೆಗಳು ಮುಂದೆ ನಡೆಯದಂತೆ ಸರ್ಕಾರ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಿದೆ ಎಂದ ಅವರು, ಗಾಯಗೊಂಡವರ ಚಿಕಿತ್ಸೆಗಾಗಿ ಪಕ್ಕದ ಜಿಲ್ಲೆಗಳಿಂದ 345 ವೈದ್ಯರು ಮತ್ತು ನರ್ಸ್‌ಗಳನ್ನು ನಿಯೋಜಿಸಲಾಗಿದೆ ಎಂದರು.

ಎಐಡಿಎಂಕೆ ಆರೋಪ: ಕಾಲ್ತುಳಿತ ತಡೆದು, ದುರಂತ ತಪ್ಪಿಸಲು ಪೊಲೀಸರು ಮತ್ತು ಆಡಳಿತ ವ್ಯವಸ್ಥೆ ಸಂಪೂರ್ಣವಾಗಿ ವಿಫಲವಾಗಿದೆ. ಇದರಿಂದ ಅಮಾಯಕರು ಮೃತಪಟ್ಟಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ, ಎಐಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಆರೋಪಿಸಿದ್ದಾರೆ.



ಮೃತ ವ್ಯಕ್ತಿಯ ಪಾರ್ಥಿವ ಶರೀರದ ಮುಂದೆ ಕುಟುಂಬದವರ ರೋದನೆ –ಪಿಟಿಐ

ಸಭೆ ನಡೆಸಲು ಅವಕಾಶ ಕೊಡಬೇಡಿ: ಅರ್ಜಿ

ಚೆನ್ನೈ (ಪಿಟಿಐ): ಕರೂರು ಕಾಲ್ತುಳಿತದಲ್ಲಿ ಗಾಯಗೊಂಡ ವ್ಯಕ್ತಿಯೊಬ್ಬರು ಟಿವಿಕೆ ಮುಖ್ಯಸ್ಥ ವಿಜಯ್ ಅವರಿಗೆ ಸದ್ಯಕ್ಕೆ ಯಾವುದೇ ಸಾರ್ವಜನಿಕ ಸಭೆಗಳನ್ನು ನಡೆಸಲು ಅನುಮತಿ ನೀಡದಂತೆ ತಮಿಳುನಾಡಿನ ಡಿಜಿಪಿ ಅವರಿಗೆ ನಿರ್ದೇಶಿಸುವಂತೆ ಕೋರಿ ಮದ್ರಾಸ್ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ.

‘ಕರೂರು ದುರಂತಕ್ಕೆ ಸಂಬಂಧಿಸಿದಂತೆ ತನಿಖೆ ಪೂರ್ಣಗೊಂಡು, ಜವಾಬ್ದಾರಿ ನಿಗದಿ ಆಗಬೇಕು. ಜತೆಗೆ ಜನರ ಸುರಕ್ಷತೆ ಕುರಿತು ಪರಿಣಾಮಕಾರಿ ಮಾರ್ಗಸೂಚಿ ರಚನೆ ಆಗಬೇಕು. ಅಲ್ಲಿಯವರೆಗೆ ವಿಜಯ್ ಅವರಿಗೆ ಸಾರ್ವಜನಿಕ ಸಭೆಗಳನ್ನು ನಡೆಸಲು ಅವಕಾಶ ನೀಡಬಾರದು’ ಎಂದು ಸೆಂಥಿಲ್ ಕಣ್ಣನ್ ಎಂಬುವರು ಅರ್ಜಿಯಲ್ಲಿ ಕೋರಿದ್ದಾರೆ.

ಮೃತರ ಕುಟುಂಬಕ್ಕೆ ತಲಾ ₹32 ಲಕ್ಷ ಪರಿಹಾರ

ಚೆನ್ನೈ/ಕರೂರು (ಪಿಟಿಐ): ಕಾಲ್ತುಳಿತದಲ್ಲಿ ಮೃತಪಟ್ಟವರ ಕುಟುಂಬದವರಿಗೆ ತಲಾ ₹20 ಲಕ್ಷ ಮತ್ತು ಗಾಯಗೊಂಡವರಿಗೆ ತಲಾ 2 ಲಕ್ಷ ಪರಿಹಾರವನ್ನು ಟಿವಿಕೆ ಮುಖ್ಯಸ್ಥ, ನಟ ವಿಜಯ್ ಘೋಷಿಸಿದ್ದಾರೆ.

ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು, ದುರಂತದಲ್ಲಿ ಮೃತಪಟ್ಟವರ ಕುಟುಂಬದವರಿಗೆ ತಲಾ ₹10 ಲಕ್ಷ ಮತ್ತು ಗಾಯಗೊಂಡವರಿಗೆ ತಲಾ ₹ 1 ಲಕ್ಷ ಪರಿಹಾರ ಪ್ರಕಟಿಸಿದ್ದಾರೆ.

ಇದು ದುರದೃಷ್ಟಕರ ಘಟನೆಯಾಗಿದೆ ಎಂದು ಕಂಬನಿ ಮಿಡಿದಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಮೃತಪಟ್ಟವರಿಗೆ ಪ್ರಧಾನ ಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ ತಲಾ ₹2 ಲಕ್ಷ ಮತ್ತು ಗಾಯಗೊಂಡವರಿಗೆ ತಲಾ ₹50,000 ಪರಿಹಾರ ಘೋಷಿಸಿದ್ದಾರೆ. ‘ನನ್ನ ಕಣ್ಣುಗಳಲ್ಲಿ ನೀರು ತುಂಬಿದೆ. ಮನಸ್ಸು ದುಃಖ ಭರಿತವಾಗಿದೆ. ನಿಮ್ಮೆಲ್ಲರ ಮುಖಗಳು ನನ್ನ ಮನದಲ್ಲಿ ಮಿನುಗುತ್ತಲೇ ಇರುತ್ತವೆ’ ಎಂದು ಟಿವಿಕೆ ಮುಖ್ಯಸ್ಥ ವಿಜಯ್ ‘ಎಕ್ಸ್’ನಲ್ಲಿ ನೋವು ತೋಡಿಕೊಂಡಿದ್ದಾರೆ.

ವಿಳಂಬದಿಂದ ದುರಂತ

ಪ್ರಜಾವಾಣಿ ವಾರ್ತೆ

ಕರೂರು: ನಿಗದಿತ ಅವಧಿಗಿಂತ ಏಳು ಗಂಟೆ ತಡವಾಗಿ ನಟ ವಿಜಯ್ ಬಂದಿದ್ದು ಮತ್ತು ಅಸಮರ್ಪಕ ಆಯೋಜನೆಯು ಕಾಲ್ತುಳಿತ ದುರಂತಕ್ಕೆ ಪ್ರಮುಖ ಕಾರಣ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ.

ತಮ್ಮ ನೆಚ್ಚಿನ ನಟನನ್ನು ನೋಡಲು ಬೆಳಿಗ್ಗೆ 11 ಗಂಟೆಯಿಂದಲೇ ಜನರು ನಿಗದಿತ ಸ್ಥಳಕ್ಕೆ ಬರಲಾರಂಭಿಸಿದ್ದರು. ಕೆಲ ಅಭಿಮಾನಿಗಳು ಕಟ್ಟಡ, ಮರಗಳನ್ನು ಏರಿ ಕಾಯುತ್ತಿದ್ದರು. ವಿಜಯ್ ಸ್ಥಳಕ್ಕೆ ಬರುವುದು ತಡವಾದ್ದರಿಂದ ಜನರು ದೀರ್ಘಕಾಲದಿಂದ ನೀರು, ಆಹಾರ ಇಲ್ಲದೆ ದಣಿದಿದ್ದರು ಎಂದು ಪ್ರತ್ಯಕ್ಷದರ್ಶಿಗಳು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಪ್ರತ್ಯಕ್ಷದರ್ಶಿಗಳು ಹೇಳಿದ್ದು

- ವಿಜಯ್ ಅವರು ಬಂದಾಗ ‘ಸ್ಪಾಟ್‌ಲೈಟ್’ ಸರಿಯಾಗಿ ಕಾರ್ಯನಿರ್ವಹಿಸಲಿಲ್ಲ. ಅದರಿಂದ ನಟನ ಮುಖ ಜನರಿಗೆ ಸರಿಯಾಗಿ ಕಾಣುತ್ತಿರಲಿಲ್ಲ. ಹೀಗಾಗಿ ಅವರು ಬಸ್ಸಿನ ಬಳಿ ನುಗ್ಗಿದರು ಎಂದು ಅಲ್ಲಿನ ಮೊಬೈಲ್ ಅಂಗಡಿ ಮಾಲೀಕ ಕಾರ್ತಿಕೇಯನ್ ತಿಳಿಸಿದರು.
- ಇದೇ ವೇಳೆ ಆಂಬುಲೆನ್ಸ್ ಜನಸಂದಣಿಯತ್ತ ಬರಲಾರಂಭಿಸಿತು. ಅದಕ್ಕೆ ದಾರಿ ಮಾಡಿಕೊಡಲು ಜನರು ರಸ್ತೆಯ ಎಡಭಾಗಕ್ಕೆ ಸರಿದರು. ಆಗ ಅಲ್ಲಿ ನೂಕುನುಗ್ಗಲು ಉಂಟಾಯಿತು. ಆ ಸಂದರ್ಭದಲ್ಲಿ ಮರದ ಕೊಂಬೆಯೊಂದು ಮುರಿದು ಬಿತ್ತು. ಅಲ್ಲದೆ ಹೋರ್ಡಿಂಗ್ ಒಂದು ಕುಸಿದು ಜನರ ಮೇಲೆ ಬಿತ್ತು. ಆಗ ಕೆಲವರು ಗಾಯಗೊಂಡರು, ಹಲವರು ದಿಕ್ಕಾಪಾಲಾಗಿ ಓಡಿದರು ಎಂದು ನಿವಾಸಿ ಸುದರ್ಶನ್ ವಿವರಿಸಿದರು.
- ಹೀಗೆ ಓಡುತ್ತಿದ್ದ ಜನರಲ್ಲಿ ಕೆಲವರು ಪಕ್ಕದಲ್ಲಿದ್ದ ಚರಂಡಿಗೆ ಬಿದ್ದರು. ಬಿದ್ದ ಒಬ್ಬ ಯುವಕನನ್ನು ರಕ್ಷಿಸಿ, ನೀರು ಕುಡಿಸಿದೆ. ಆದರೆ ಅತ ಸ್ವಲ್ಪ ಸಮಯದಲ್ಲಿಯೇ ಅಸುನೀಗಿದ ಎಂದು ಸುದರ್ಶನ್ ನೊಂದು ನುಡಿದರು.
- ವಿದ್ಯುತ್ ಸ್ಥಗಿತ, ಜನರೇಟರ್‌ನ ಅಸಮರ್ಪಕ ಕಾರ್ಯದಿಂದ ಗೊಂದಲಗಳು ಉಂಟಾದವು. ಹಲವರು ಉಸಿರಾಟದ ಸಮಸ್ಯೆಗಳನ್ನು ಎದುರಿಸಿದರು. ಪರಿಸ್ಥಿತಿ ನಿಯಂತ್ರಣದಲ್ಲಿಡಲು ಅಗತ್ಯ ಪೊಲೀಸ್ ಸಿಬ್ಬಂದಿ ಇರಲಿಲ್ಲ ಎಂದು ಪ್ರತ್ಯಕ್ಷದರ್ಶಿಗಳು ದೂರಿದರು.

‘500 ಪೊಲೀಸರ ನಿಯೋಜಿಸಿದ್ದೆವು’

ಕರೂರು (ಪಿಟಿಐ): ಟಿವಿಕೆ ಮನವಿ ಆಧರಿಸಿ 500 ಪೊಲೀಸ್ ಸಿಬ್ಬಂದಿಯನ್ನು ರ‍್ಯಾಲಿಗೆ ನಿಯೋಜಿಸಲಾಗಿತ್ತು. ಇದರಲ್ಲಿ ಒಬ್ಬ ಎಸ್‌ಪಿ, ಮೂವರು ಎಎಸ್‌ಪಿ, ನಾಲ್ವರು ಡಿಎಸ್ಪಿ, ಏಳು ಇನ್‌ಸ್ಪೆಕ್ಟರ್‌ಗಳು, 58 ಸಬ್ ಇನ್‌ಸ್ಪೆಕ್ಟರ್‌ಗಳೂ ಇದ್ದರು ಎಂದು ತಮಿಳುನಾಡಿನ ಎಡಿಜಿಪಿ (ಕಾನೂನು ಮತ್ತು ಸುವ್ಯವಸ್ಥೆ) ಎಸ್. ಡೇವಿಡ್‌ಸನ್ ದೇವಶಿರ್ವತಂ ತಿಳಿಸಿದರು.

ಕರೂರು ರ‍್ಯಾಲಿಗೆಂದು ಜನರು ಶನಿವಾರ ಮಧ್ಯಾಹ್ನ 12 ಗಂಟೆಯಿಂದಲೇ ಜಮಾಯಿಸಿದ್ದರು. ಆದರೆ ನಟ ವಿಜಯ್ ಅವರು ಕರೂರಿಗೆ ಬಂದಿದ್ದು ಸಂಜೆ 6 ಗಂಟೆಗೆ. ಇಷ್ಟು ದೀರ್ಘ ಅವಧಿ ಆಹಾರ, ನೀರು ಇಲ್ಲದೆ ಜನ ಬಸವಳಿದಿದ್ದರು ಎಂದು ಅವರು ವಿವರಿಸಿದರು. ವಿಜಯ್ ಅವರು ಕಾರ್ಯಕ್ರಮ ನಡೆಯುವ ಪ್ರದೇಶಕ್ಕೆ ಬರುವ ಮಾರ್ಗದಲ್ಲಿ ದೊಡ್ಡ ಸಂಖ್ಯೆಯ ಜನ ಅವರ ವಾಹನವನ್ನು ಹಿಂಬಾಲಿಸಿದರು. ಇದು ಅವರು ನಿರ್ದಿಷ್ಟ ಪ್ರದೇಶಕ್ಕೆ ಬರುವುದನ್ನು ಇನ್ನಷ್ಟು ತಡವಾಗಿಸಿತು ಎಂದು ಅವರು ವಿವರಿಸಿದರು.

ಇದೇ ಸಮಯದಲ್ಲಿ ಕಾಲ್ತುಳಿತ ಸಂಭವಿಸಿದೆ. ದುರಂತಕ್ಕೆ ನಿಖರ ಕಾರಣ ಏನು ಎಂಬುದನ್ನು ತಿಳಿಯಲು ತನಿಖೆ ನಡೆಸಲಾಗುತ್ತಿದೆ ಎಂದು ಅವರು ಹೇಳಿದರು.

ಸೂತಕವಾಯ್ತು ಸಂಭ್ರಮ...

ಕರೂರು (ಪಿಟಿಐ): ಎಲ್ಲೆಂದರಲ್ಲಿ ಬಿದ್ದ ಚಪ್ಪಲಿಗಳು, ನಜ್ಜುಗುಜ್ಜಾದ ನೀರಿನ ಬಾಟಲಿಗಳು, ಪಕ್ಷದ ಹರಿದ ಧ್ವಜಗಳು, ಬಟ್ಟೆಯ ಚೂರುಗಳು, ಮುರಿದುಬಿದ್ದ ಕಂಬಗಳು, ಕಸದ ರಾಶಿ– ಇವು ಕರೂರು ಕಾಲ್ತುಳಿತ ದುರಂತದ ಮೂಕಸಾಕ್ಷಿಗಳಾಗಿ ಕಣ್ಣೀರಿನ ಕತೆಯನ್ನು ಹೇಳುತ್ತಿವೆ. ಸಂಭ್ರಮಕ್ಕೆ ಸಾಕ್ಷಿಯಾಗಬೇಕಿದ್ದ ಸ್ಥಳದಲ್ಲಿ ಸೂತಕದ ಛಾಯೆ ಆವರಿಸಿದೆ.

ಕಾಲ್ತುಳಿತದ ಮಾಹಿತಿ ಗೊತ್ತಿರದ ಹಲವರು ಈ ಹೆದ್ದಾರಿಯಲ್ಲಿ ಬೆಳಿಗ್ಗೆ ನಡೆದು ಹೋಗುವಾಗ ದುರಂತದ ಕುರುಹುಗಳನ್ನು ಕಂಡು ಆಘಾತಕ್ಕೆ ಒಳಗಾಗಿದ್ದಾರೆ. ಸದ್ಯ ಪೊಲೀಸರು ಬ್ಯಾರಿಕೇಡ್‌ಗಳನ್ನು ಹಾಕಿ ಸಾರ್ವಜನಿಕರು ಘಟನಾ ಸ್ಥಳಕ್ಕೆ ತೆರಳದಂತೆ ಸೂಚಿಸಿದ್ದಾರೆ.

ಟಿವಿಕೆ ಪಕ್ಷದ ಧ್ವಜಗಳು ಎತ್ತರದ ಕಂಬಗಳ ಮೇಲೆ ಇನ್ನೂ ಹಾರಾಡುತ್ತಿವೆ. ದೊಡ್ಡ ದೊಡ್ಡ ಸ್ಪೀಕರ್ ಬಾಕ್ಸ್‌ಗಳು, ಲೈಟ್‌ಗಳು, ಪೋಸ್ಟರ್‌ಗಳು ಮತ್ತು ಪಕ್ಷದ ಪ್ರಚಾರ ಸಾಮಗ್ರಿಗಳು ಎಲ್ಲೆಂದರಲ್ಲಿ ಬಿದ್ದಿವೆ.

ದುರಂತಕ್ಕೆ ಏನು ಕಾರಣ ಎಂಬ ಪ್ರಶ್ನೆಗೆ ಟಿವಿಕೆ ಕಾರ್ಯಕರ್ತರಾಗಲೀ, ಪದಾಧಿಕಾರಿಗಳಾಗಲೀ ಪ್ರತಿಕ್ರಿಯೆ ನೀಡುತ್ತಿಲ್ಲ. ‘ನೂಕುನುಗ್ಗಲು ಉಂಟಾಗಿದ್ದರಿಂದ ಹಲವರು ರಸ್ತೆ ಪಕ್ಕದ ಚರಂಡಿಗೆ ಬಿದ್ದರು. ಕೆಲವರು ಅಲ್ಲಿಂದ ಎದ್ದು ಬರಲು ಯತ್ನಿಸಿದರು’ ಎಂದು ರ‍್ಯಾಲಿಯಲ್ಲಿ ಪಾಲ್ಗೊಂಡು ಕಾಲ್ತುಳಿತದಿಂದ ಪಾರಾಗಿ ಬಂದಿರುವ ಯುವಕರೊಬ್ಬರು ತಿಳಿಸಿದರು.

ಕಾರ್ಯಕ್ರಮವು ಆರಂಭದಲ್ಲಿ ‘ಸಂಭ್ರಮದಂತಿತ್ತು’, ನಂತರ ‘ದುರಂತ’ವಾಗಿ ಅಂತ್ಯಗೊಂಡಿತು ಎಂದು ಅವರು ಬೇಸರ ವ್ಯಕ್ತಪಡಿಸಿದರು.

‘ವಿಜಯ್ ಅವರ ಮೇಲಿನ ಅಭಿಮಾನದಿಂದ ಅವರ ಹೆಸರನ್ನು ಕೂಗುತ್ತಿದ್ದೆವು. ಈ ಮಧ್ಯೆ ಕಾಲ್ತುಳಿತ ಸಂಭವಿಸಿದ್ದು ತಿಳಿಯಲೇ ಇಲ್ಲ. ಹಲವರು ಕೆಳಗೆ ಬಿದ್ದರು. ಬಿದ್ದಿರುವವರ ಮೇಲೆಯೇ ಜನರು ಕಾಲುಗಳನ್ನು ಇಟ್ಟ ಕಾರಣ ಅನಾಹುತ ಸಂಭವಿಸಿತು’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.



ಕಾಲ್ತುಳಿತ ಸಂಭವಿಸಿದ ನಂತರ ಬಿದ್ದಿರುವ ಚಪ್ಪಲಿಗಳ ರಾಶಿ —ಎಎಫ್‌ಪಿ ಚಿತ್ರ

ಬಿಹಾರ: ಚುನಾವಣಾ ಆಯೋಗದಿಂದ 470 ವೀಕ್ಷಕರ ನಿಯೋಜನೆ

ನವದೆಹಲಿ (ಪಿಟಿಐ): ಚುನಾವಣಾ ಕಣದಲ್ಲಿ ಸಮ ಪ್ರಮಾಣದಲ್ಲಿ ಸ್ಪರ್ಧೆ ಇರುವುದನ್ನು ಖಾತರಿಪಡಿಸಿಕೊಳ್ಳಲು ಮುಂಬರುವ ಬಿಹಾರ ವಿಧಾನಸಭಾ ಚುನಾವಣೆ ಮತ್ತು ಏಳು ವಿಧಾನಸಭೆ ಉಪ ಚುನಾವಣೆಗಳಿಗಾಗಿ 470 ಅಧಿಕಾರಿಗಳನ್ನು ವೀಕ್ಷಕರಾಗಿ ಆಯೋಗ ನಿಯೋಜಿಸಲಿದೆ.

470 ಅಧಿಕಾರಿಗಳಲ್ಲಿ 320 ಐಎಎಸ್ ಅಧಿಕಾರಿಗಳು ಮತ್ತು 60 ಐಪಿಎಸ್ ಅಧಿಕಾರಿಗಳು ಮತ್ತು 90 ಇತರ ಸೇವೆಗಳ ಅಧಿಕಾರಿಗಳು ಇರಲಿದ್ದಾರೆ ಎಂದು ಆಯೋಗವು ಭಾನುವಾರ ಪ್ರಕಟಿಸಿದೆ. ಈ ವೀಕ್ಷಕರ ಸಭೆಯನ್ನು ಅಕ್ಟೋಬರ್ 3ರಂದು ಆಯೋಗ ಇಲ್ಲಿ ನಿಗದಿಪಡಿಸಿದ್ದು, ಅದಕ್ಕೂ ಒಂದು ದಿನ ಮೊದಲು ಚುನಾವಣಾ ಸಿದ್ಧತೆಗಳನ್ನು ಪರಿಶೀಲಿಸಲು ಬಿಹಾರಕ್ಕೆ ಭೇಟಿ ನೀಡಲಿದೆ.

243 ಸದಸ್ಯ ಬಲದ ಬಿಹಾರ ವಿಧಾನಸಭೆಯ ಅವಧಿ ನವೆಂಬರ್ 22ರಂದು ಕೊನೆಗೊಳ್ಳುತ್ತದೆ.

ಎಲ್‌ಎಲ್‌ಆರ್‌ಗೆ ಸ್ಮಾರ್ಟ್ ‘ಲಾಕ್’

ಒಂದನೇ ಪುಟದಿಂದ...

ಅವರಿಗೆ ದೈಹಿಕ ನ್ಯೂನತೆಗಳಿವೆಯೇ? ಮಾನಸಿಕವಾಗಿ ಸದೃಢರೇ ಎಂಬುದು ಆನ್‌ಲೈನ್‌ನಲ್ಲಿ ಗೊತ್ತಾಗುವುದಿಲ್ಲ. ಸ್ಮಾರ್ಟ್ ಲಾಕ್ ಸಾಫ್ಟ್‌ವೇರ್ ಮೂಲಕ ಅರ್ಜಿ ಸಲ್ಲಿಸಿದಾಗ ಇವೆಲ್ಲವನ್ನು ಅದು ಪತ್ತೆ ಹಚ್ಚುತ್ತದೆ ಎಂದು ಸಾರಿಗೆ ಅಧಿಕಾರಿಗಳು ಮಾಹಿತಿ ನೀಡಿದರು.

ಕಲಿಕಾ ಪರವಾನಗಿಗೆ ಅರ್ಜಿ ಸಲ್ಲಿಸಿದವರೇ ಸ್ಮಾರ್ಟ್‌ಲಾಕ್ ಎದುರು ಕುಳಿತುಕೊಳ್ಳಬೇಕಾಗುತ್ತದೆ. ಅವರ ಫೋಟೊ ತೆಗೆಯುವಾಗಲೇ ಅವರ ವರ್ತನೆಯನ್ನೂ ಈ ಸಾಫ್ಟ್‌ವೇರ್ ಅಭ್ಯಸಿಸುತ್ತದೆ. ತಲೆ ಹೊರಳಿಸುವುದು, ಕೈಕಾಲುಗಳ ಚಲನೆಗಳನ್ನು ಗಮನಿಸುತ್ತದೆ. ಫೋಟೊ ಅಪ್‌ಲೋಡ್ ಆದ ಮೇಲೆ ಪರದೆಯಲ್ಲಿ ಕೆಲವು ಪ್ರಶ್ನೆಗಳು ಬರುತ್ತವೆ. ಅವುಗಳಿಗೆ 30 ಸೆಕೆಂಡ್‌ಗಳಲ್ಲಿ ಉತ್ತರಿಸಬೇಕಾಗುತ್ತದೆ. ಇದೇ ರೀತಿಯ ವಿವಿಧ ಪರೀಕ್ಷೆಗಳು ನಡೆಯುತ್ತವೆ. ಅಲ್ಲದೇ ಪರೀಕ್ಷೆಗೆ ಬೇರೆಯವರು ಪ್ರವೇಶಿಸಿದರೆ ಅಥವಾ ದೂರದಿಂದ ಹೇಳಿ ಕೊಡುತ್ತಿದ್ದರೆ, ಅಭ್ಯರ್ಥಿಯು ಕಂಪ್ಯೂಟರ್ ಅಥವಾ ಮೊಬೈಲ್‌ನಲ್ಲಿ ಸ್ಮಾರ್ಟ್ ಲಾಕ್ ನೋಡುವ ಬದಲು ಇನ್ನೆಲ್ಲೋ ನೋಡುತ್ತಿದ್ದರೆ ಅವೆಲ್ಲವನ್ನು ಗಮನಿಸುತ್ತದೆ. ಇದು ನಿಯಮದ ಉಲ್ಲಂಘನೆ ಎಂದು ಅಪ್ಲಿಕೇಶನ್ ಅನ್ನು ಲಾಕ್ ಮಾಡಿ ಬಿಡುತ್ತದೆ ಎಂದು ವಿವರಿಸಿದರು.

ಸ್ಮಾರ್ಟ್ ಲಾಕ್ ವರ್ಚುವಲ್ ಆಗಿ ಕಾರ್ಯನಿರ್ವಹಿಸುತ್ತದೆ. ಅಭ್ಯರ್ಥಿಗಳ ವೆಬ್‌ಕ್ಯಾಮ್, ಮೈಕ್ರೊಫೋನ್ ಬಳಸಿಕೊಂಡು, ಚಲನವಲನ, ಪರಿಸರವನ್ನು ಗಮನಿಸಿಕೊಂಡು ನೈಜ ಸಮಯದಲ್ಲಿ ಅಭ್ಯರ್ಥಿಗಳನ್ನು ಮೇಲ್ವಿಚಾರಣೆ ಮಾಡುತ್ತದೆ ಎಂದು ತಿಳಿಸಿದರು.

‘ಸಾಫ್ಟ್‌ವೇರ್ ಅಪ್‌ಡೇಟ್‌ಗಾಗಿ ಕಾಯುತ್ತಿದ್ದೇವೆ’

ಕಂಪ್ಯೂಟರ್ ಆಧಾರಿತ ಕಲಿಕಾ ಪರವಾನಗಿ ಪರೀಕ್ಷೆಯ ಸಮಯದಲ್ಲಿ ನ್ಯಾಯಸಮ್ಮತ, ಸುರಕ್ಷಿತ ದೃಢೀಕರಣವನ್ನು ಖಚಿತಪಡಿಸುವ ಡಿಜಿಟಲ್ ಮೇಲ್ವಿಚಾರಣೆಯ ವ್ಯವಸ್ಥೆಯೇ ಸ್ಮಾರ್ಟ್ ಲಾಕ್ ಸಾಫ್ಟ್‌ವೇರ್. ಇದನ್ನು ಕೇಂದ್ರ ಸರ್ಕಾರ ಪರಿಚಯಿಸಿದೆ. ಪ್ರಾಯೋಗಿಕವಾಗಿ ಪರೀಕ್ಷೆಗಳನ್ನು ನಡೆಸಿದಾಗ ಹಲವು ಪ್ರಶ್ನೆ, ಗೊಂದಲಗಳು ಉದ್ಭವವಾಗಿವೆ. ಭೂ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯಕ್ಕೆ ಕಳುಹಿಸಿಕೊಡಲಾಗಿದೆ. ಗೊಂದಲಗಳಿಗೆ ಪರಿಹಾರ ಸಿಕ್ಕಿ, ಸಾಫ್ಟ್‌ವೇರ್ ಅಪ್‌ಡೇಟ್‌ಗೊಂಡ ಬಳಿಕ ರಾಜ್ಯದಲ್ಲಿ ಅನುಷ್ಠಾನಗೊಳ್ಳಲಿದೆ ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತ ಎ.ಎಸ್. ಯೋಗೀಶ್ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಸ್ಮಾರ್ಟ್ ಲಾಕ್ ಯೋಜನೆ ಅನುಷ್ಠಾನ ಪ್ರಕ್ರಿಯೆ ಪೂರ್ಣಗೊಳ್ಳದೇ ಇರುವುದರಿಂದ ಎಲ್‌ಎಲ್‌ಆರ್ ನೀಡಲು ಸಮಸ್ಯೆಯಾಗಿದೆ. ಒಮ್ಮೆ ಸಾಫ್ಟ್‌ವೇರ್ ಅನುಷ್ಠಾನಗೊಂಡರೆ ಸುಲಭವಾಗಿ ಎಲ್‌ಎಲ್‌ಆರ್ ಪಡೆಯಲು ಸಾಧ್ಯವಾಗಲಿದೆ ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಜಂಟಿ ಆಯುಕ್ತ ಸಿ. ಮಲ್ಲಿಕಾರ್ಜುನ ತಿಳಿಸಿದರು.

ಭಾರತವನ್ನು ಧರ್ಮ ಒಗ್ಗೂಡಿಸಿದೆ: ಉಪ ರಾಷ್ಟ್ರಪತಿ ಸಿ.ಪಿ ರಾಧಾಕೃಷ್ಣನ್



ಪಾಟ್ನಾ (ಪಿಟಿಐ): ‘ವಿವಿಧ ಭಾಷೆಗಳಲ್ಲಿ ಜನರು ಮಾತನಾಡುತ್ತಿದ್ದರೂ ಧರ್ಮವು ದೇಶವನ್ನು ಒಗ್ಗೂಡಿಸಿದೆ’ ಎಂದು ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹೇಳಿದರು.

ಕೇಂದ್ರ ಸಂಸ್ಕೃತಿ ಸಚಿವಾಲಯದ ಸಹಯೋಗದೊಂದಿಗೆ ಸಾಹಿತ್ಯ ಅಕಾಡೆಮಿಯು ಭಾನುವಾರ ಇಲ್ಲಿ ಆಯೋಜಿಸಿದ್ದ ‘ಉನ್ಮೇಶಾ ಅಂತರರಾಷ್ಟ್ರೀಯ ಸಾಹಿತ್ಯ ಉತ್ಸವ’ದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

‘ಇಡೀ ದೇಶಕ್ಕೆ ಅನ್ವಯವಾಗುವ ಸಾಮಾನ್ಯ ಭಾಷೆ ಇಲ್ಲದಿದ್ದರೂ ಭಾರತ ಹೇಗೆ ಒಗ್ಗಟ್ಟಿನಿಂದ ಇದೆ’ ಎಂದು ಯುರೋಪ್‌ನ ಗಣ್ಯರೊಬ್ಬರು ಪ್ರಶ್ನಿಸಿದ್ದರು. ಅದಕ್ಕೆ ಉತ್ತರಿಸಿದ್ದ ನಾನು, ದೇಶದ ಜನರು ವಿವಿಧ ಭಾಷೆಯಲ್ಲಿ ಮಾತನಾಡುತ್ತಿದ್ದಾರೆ. ಆದರೆ, ಧರ್ಮದ ಪರಿಕಲ್ಪನೆಯಲ್ಲಿ ಇಡೀ ದೇಶದ ಜನರು ಒಂದಾಗಿದ್ದಾರೆ ಎಂಬುದಾಗಿ ತಿಳಿಸಿದ್ದೆ’ ಎಂದರು.

ಪ್ರಜಾಪ್ರಭುತ್ವ ಎಂಬುದು ಪಾಶ್ಚಿಮಾತ್ಯರ ಪರಿಕಲ್ಪನೆ ಎಂಬ ಅಭಿಪ್ರಾಯವನ್ನು ನಿರಾಕರಿಸಿದ ಅವರು, ‘2,500 ವರ್ಷಗಳ ಹಿಂದೆಯೇ ಬಿಹಾರದ ನೆಲದಲ್ಲಿ ಜನ್ಮತಾಳಿದ ಮೌರ್ಯ ಸಾಮ್ರಾಜ್ಯವು ಅತ್ಯಂತ ಪ್ರಾಚೀನ ಪ್ರಜಾಪ್ರಭುತ್ವವಾಗಿದೆ’ ಎಂದು ಪ್ರತಿಪಾದಿಸಿದರು.

ಪ್ರಧಾನಿ– ಉಪ ರಾಷ್ಟ್ರಪತಿ ಮಾತುಕತೆ

ಪ್ರಧಾನಿ ನರೇಂದ್ರ ಮೋದಿ ಅವರು ಉಪ ರಾಷ್ಟ್ರಪತಿ ನಿವಾಸಕ್ಕೆ ಭಾನುವಾರ ಭೇಟಿ ನೀಡಿ, ಸಿ.ಪಿ. ರಾಧಾಕೃಷ್ಣನ್ ಅವರ ಜತೆ ವಿವಿಧ ವಿಷಯಗಳ ಕುರಿತು ಮಾತುಕತೆ ನಡೆಸಿದರು.

ಪ್ರಜಾವಾಣಿ ಸೋಮವಾರ • ಸೆಪ್ಟೆಂಬರ್ 29, 2025

ಪ್ರಜಾಪ್ಲಸ್

ಮನರಂಜನೆ | ಜಾಹೀರಾತು | ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ



ರುಕ್ಮಿಣಿ ವಸಂತ್

ಇದು 'ಕಾಂತಾರ'ದ ಬ್ರಹ್ಮಕಲಶ

ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ 'ಕಾಂತಾರ' ಚಿತ್ರದ ಯಶಸ್ಸಿನಲ್ಲಿ 'ವರಾಹ ರೂಪಂ' ಹಾಡಿನ ಪಾಲು ದೊಡ್ಡದಿತ್ತು. ಹೀಗಾಗಿ 'ಕಾಂತಾರ ಅಧ್ಯಾಯ–1'ರ ಹಾಡುಗಳ ಮೇಲೆ ನಿರೀಕ್ಷೆ ಹೆಚ್ಚಿತ್ತು. ಟ್ರೇಲರ್ ಬಳಿಕ ಇದೀಗ ಚಿತ್ರತಂಡ ಚಿತ್ರದ 'ಬ್ರಹ್ಮಕಲಶ' ಹಾಡು ಬಿಡುಗಡೆಗೊಳಿಸಿದೆ.

ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನದ ಈ ಹಾಡಿಗೆ ಅಬ್ಬಿ ವಿ. ಧ್ವನಿಯಾಗಿದ್ದಾರೆ. ಶಶಿರಾಜ್ ಕಾವೂರು ಸಾಹಿತ್ಯದ ಈ ಹಾಡು ಮತ್ತೊಂದು 'ವರಾಹ ರೂಪಂ' ಕೇಳಿದ ಅನುಭವ ನೀಡುತ್ತಿದೆ. ಸಾಹಿತ್ಯದಲ್ಲಿ ಕನ್ನಡ ಮತ್ತು ತುಳು ಪದಗಳನ್ನು ಬಳಸಲಾಗಿದೆ. ಶಿವನನ್ನು ಭಜಿಸುವ ಹಾಡಿನಲ್ಲಿ ಜನಪದ ವಾದ್ಯ ಪರಿಕರಗಳನ್ನೂ ಬಳಸಿಕೊಂಡಿದ್ದು, ಹಾಡಿಗೆ ದೈವಿಕ ಸ್ಪರ್ಶ ನೀಡಲಾಗಿದೆ. ಕನ್ನಡದ ಜತೆಗೆ ಹಿಂದಿ, ಮಲಯಾಳ, ತೆಲುಗು ಮತ್ತು ತಮಿಳುಗಳಲ್ಲಿಯೂ ಈ ಹಾಡು ಬಿಡುಗಡೆಗೊಂಡಿದೆ.

'ಕಾಂತಾರ' ಪೂರ್ವದ ಕಥೆ ಹೇಳುವ ರಿಷಬ್ ನಿರ್ದೇಶನದ 'ಕಾಂತಾರ ಅಧ್ಯಾಯ–1' ಅ.2ರಂದು ತೆರೆಗೆ ಬರಲಿದೆ. ಚಿತ್ರದ ಮುಂಗಡ ಬುಕ್ಕಿಂಗ್ ಈಗಾಗಲೇ ಪ್ರಾರಂಭಗೊಂಡಿದ್ದು ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಸುಮಾರು 30 ದೇಶಗಳಲ್ಲಿ 7 ಸಾವಿರಕ್ಕಿಂತ ಅಧಿಕ ಸ್ಕ್ರೀನ್‌ಗಳಲ್ಲಿ ಸಿನಿಮಾ ತೆರೆ ಕಾಣಲಿದೆ.

ತುಳುನಾಡಿಗೆ ದೈವಗಳು ಹೇಗೆ ಬಂದವು ಎಂಬ ಕಥೆ ಹೇಳುವ ಚಿತ್ರದಲ್ಲಿ ರುಕ್ಮಿಣಿ ವಸಂತ್ ಕನಕವತಿಯಾಗಿ ಕಾಣಿಸಿಕೊಂಡಿದ್ದಾರೆ. ಗುಲ್ಶನ್ ದೇವಯ್ಯ, ಪ್ರಮೋದ್ ಶೆಟ್ಟಿ ಮುಂತಾದವರು ಪ್ರಮುಖ ಪಾತ್ರದಲ್ಲಿರುವ ಚಿತ್ರಕ್ಕೆ ಅರವಿಂದ್ ಕಶ್ಯಪ್ ಛಾಯಾಚಿತ್ರಗ್ರಹಣವಿದೆ. ಹೊಂಬಾಳೆ ಫಿಲ್ಮ್ಸ್ ಚಿತ್ರವನ್ನು ನಿರ್ಮಿಸಿದೆ.

ಹೊರಬಂತು ವರ್ಣತರಂಗದ ಹಾಡುಗಳು

ಬಹುತೇಕ ಹೊಸಬರಿಂದಲೇ ಕೂಡಿರುವ 'ವರ್ಣತರಂಗ' ಚಿತ್ರದ ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ತೀರ್ಥೇಶ್ ಕೊರಮೇರು ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಬಿ.ಶಿವಕುಮಾರ್ ನಿರ್ಮಾಣವಿದೆ.

'ವರ್ಣತರಂಗ ಎಂದರೆ ಬಣ್ಣಗಳ ಅಲೆಗಳು ಎಂಬರ್ಥ ಕೊಡುತ್ತದೆ. ಒಬ್ಬ ವ್ಯಕ್ತಿ ಕಲರ್‌ಫುಲ್ ಆಗಿ ನಿಜ ಜೀವನದಲ್ಲಿ ಹೇಗಿರುತ್ತಾನೆ? ಆತ ನಕರಾತ್ಮಕವಾಗಿ ಚಿಂತನೆ ಮಾಡುತ್ತಾ, ಯಾವ ರೀತಿಯಲ್ಲಿ ಸೇಡು ತೀರಿಸಿಕೊಳ್ಳುತ್ತಾನೆ? ಎಂಬುದೇ ಕಥೆ. ಬೆಂಗಳೂರು, ಮಂಗಳೂರು ಮುಂತಾದೆಡೆ ಚಿತ್ರೀಕರಣ ನಡೆಸಲಾಗಿದೆ' ಎಂದರು ನಿರ್ದೇಶಕ.

ತಿಲಕ್ ಚಿತ್ರದ ನಾಯಕ. ಜೀವಿತಾ ನಾಯಕಿ, ಸಾಕ್ಷಿ ಮೇಘನಾ, ವರ್ಧನ್, ಹೇಮಂತ್, ರಮೇಶ್ ಪಂಡಿತ್, ಬಲ ರಾಜವಾಡಿ, ಟೆನ್ನಿಸ್ ಕೃಷ್ಣ, ಜಯರಾಮ್, ಬಿರಾದಾರ್, ಭಗತ್, ಸುಂದರ್ ಭಟ್ ಮುಂತಾದವರು ನಟಿಸಿದ್ದಾರೆ.

ಆಕಾಶ್ ರೆಡ್ಡಿ-ಯಶವಂತ್ ಭೂಪತಿ ಸಂಗೀತ, ಮನುಗೌಡ ಛಾಯಾಚಿತ್ರಗ್ರಹಣ, ವೆಂಕಿ. ಯುಡಿವಿ ಸಂಕಲನವಿದೆ.



ನ.14ಕ್ಕೆ ಗತವೈಭವ



ಆಶಿಕಾ ರಂಗನಾಥ್

ಸಿಂಪಲ್ ಸುನಿ ನಿರ್ದೇಶನದ 'ಗತವೈಭವ' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಯುವ ನಟ ದುಶ್ಯಂತ್‌ಗೆ ಆಶಿಕಾ ರಂಗನಾಥ್ ನಾಯಕಿಯಾಗಿದ್ದು, ಚಿತ್ರ ನವೆಂಬರ್ 14ರಂದು ತೆರೆಗೆ ಬರಲಿದೆ.


'ಗತವೈಭವ ತುಂಬಾ ಗಂಭೀರವಾಗಿ ಮಾಡಿದ ಸಿನಿಮಾ. ನನ್ನ ಬ್ಯಾನರ್‌ನಡಿ ಮಾಡಬೇಕು ಎಂದುಕೊಂಡ ಸಿನಿಮಾವಿದು. ಆದರೆ ದುಶ್ಯಂತ್ ಈ ಪ್ರಾಜೆಕ್ಟ್ ಮಾಡಬೇಕು ಎಂದು ಬರೆದಿತ್ತು ಎನ್ನಿಸುತ್ತದೆ. ನಾಲ್ಕು ಸಿನಿಮಾಗಳನ್ನು ಮಾಡಿದಷ್ಟು ಅನುಭವ ನೀಡಿದೆ. ಕೆಲವು ಸಿನಿಮಾಗಳು ಹೆಚ್ಚು ಪ್ರಚಾರ ಮಾಡಿ ತೆರೆಗೆ ಬರುತ್ತವೆ. ಈ ಚಿತ್ರ ಬಿಡುಗಡೆಯಾದರೆ ಪ್ರಚಾರವಾಗುತ್ತದೆ. ನಾನು ಪ್ರೇಕ್ಷಕನ ರೀತಿ ಈ ಸಿನಿಮಾಗಾಗಿ ಕಾಯುತ್ತಿದ್ದೇನೆ. ಚಿತ್ರದಲ್ಲಿ ಮನರಂಜನೆ, ಎಮೋಷನ್ ಎಲ್ಲವೂ ಇವೆ' ಎಂದರು ಸುನಿ.

'ಪೋರ್ಚುಗಲ್ ಸೇರಿದಂತೆ ಅನೇಕ ಸ್ಥಳಗಳಲ್ಲಿ ನೂರು ದಿನಗಳಿಗೂ ಹೆಚ್ಚು ಕಾಲ ಶೂಟಿಂಗ್ ಮಾಡಿದ್ದೇವೆ. ಗ್ರಾಫಿಕ್ ಕಾರಣದಿಂದ ಸಿನಿಮಾ ತಡವಾಯ್ತು. ಚಿತ್ರ ನಿರೀಕ್ಷೆಗೂ ಮೀರಿ ಅದ್ಭುತವಾಗಿ ಮೂಡಿಬಂದಿದೆ. ತಾಂತ್ರಿಕವಾಗಿ ಶ್ರೀಮಂತವಾಗಿದೆ. ಸುನಿ ಸರ್ ಅವರ ಹತ್ತು ಸಿನಿಮಾಗಳಲ್ಲಿ ಇದು ಅತ್ಯುತ್ತಮ ಸಿನಿಮಾವಾಗಲಿದೆ' ಎಂದರು ದುಶ್ಯಂತ್.

'ನನಗೆ ಚಿತ್ರದಲ್ಲಿ ನಾಲ್ಕು ಲುಕ್‌ಗಳಿವೆ. ಈ ಸಿನಿಮಾದಲ್ಲಿ ನಟಿಸಿರುವುದು ಬೇರೆಯದ್ದೇ ಅನುಭವ ನೀಡಿದೆ. ತೆರೆಮೇಲೆ ವೈಭವವಾಗಿ ಕಾಣಿಸಲು ಅದ್ದೂರಿಯಾಗಿ ಚಿತ್ರೀಕರಣ ಮಾಡಲಾಗಿದೆ. ಒಂದೊಳ್ಳೆ ತಂಡದ ಜೊತೆ ಕೆಲಸ ಮಾಡಿದ ಅನುಭವ' ಎಂದರು ಆಶಿಕಾ.

ರೊಮ್ಯಾಂಟಿಕ್ ಲವ್ ಸ್ಟೋರಿ ಜೊತೆಗೆ ಸೈಂಟಿಫಿಕ್ ಥ್ರಿಲ್ಲರ್ ಅಂಶಗಳಿವೆ. ಸುನಿ ಸಿನಿಮಾಸ್ ಸಂಸ್ಥೆಯಡಿ ದೀಪಕ್ ಹಾಗೂ ಸುನಿ ಚಿತ್ರ ನಿರ್ಮಾಣ ಮಾಡಿದ್ದಾರೆ. ವಿಲಿಯಂ ಡೇವಿಡ್ ಛಾಯಾಚಿತ್ರಗ್ರಹಣ, ಜೂಡಾ ಸ್ಯಾಂಡಿ ಸಂಗೀತ ಚಿತ್ರಕ್ಕಿದೆ.

'ದಿಲ್ ಮಾರ್'ಗೆ ಶ್ರೀಮುರಳಿ ಸಾಥ್



ರಾಮ್

ಚಂದ್ರಮೌಳಿ ನಿರ್ದೇಶನದ 'ದಿಲ್ ಮಾರ್' ಚಿತ್ರದ ಮೊದಲ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಶ್ರೀಮುರಳಿ ಟೀಸರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

'ನಾನು 'ಕೆಜಿಎಫ್' ಚಿತ್ರಕ್ಕೆ ಸಂಭಾಷಣೆ ಬರೆದಿದ್ದೆ. ಇದು ನನ್ನ ನಿರ್ದೇಶನದ ಚೊಚ್ಚಲ ಸಿನಿಮಾ. ಚಿತ್ರದ ಟೀಸರ್‌ಗೆ ಉತ್ತಮ ಪ್ರತಿಕ್ರಿಯೆ ಸಿಕ್ಕಿತ್ತು. ಬಳಿಕ ಎಲ್ಲರೂ ಚಿತ್ರ ಬಿಡುಗಡೆ ಯಾವಾಗ ಎಂದು ಕೇಳುತ್ತಿದ್ದರು. ಕಾರಣಾಂತರಗಳಿಂದ ಸ್ವಲ್ಪ ತಡವಾಗಿದೆ. ಈಗ ಯಾವುದೇ ಸಮಸ್ಯೆ ಇಲ್ಲ. ಹಾಡು ಬಿಡುಗಡೆ ಮಾಡುವ ಮೂಲಕ ಪ್ರಚಾರ ಕಾರ್ಯಶುರು ಮಾಡಿದ್ದೇವೆ. ಚಿತ್ರದಲ್ಲಿ ನಾಲ್ಕು ಹಾಡುಗಳಿವೆ. ಆ್ಯಕ್ಷನ್ ಜೊತೆಗೆ ಎಮೋಷನ್, ಲವ್ ಇದೆ' ಎಂದರು ನಿರ್ದೇಶಕ.

'ನೀನಿಲ್ಲದೇ' ಎಂಬ ಹಾಡಿಗೆ ಕೇಶವ್ ವಿ.ಜಿ ಸಾಹಿತ್ಯ ಬರೆದಿದ್ದು, ಶರತ್ ಸಂತೋಷ್ ಧ್ವನಿಯಾಗಿದ್ದಾರೆ. ರದನ್ ಸಂಗೀತವಿದೆ. ರಾಮ್ ಚಿತ್ರದ ನಾಯಕ. ಚಿತ್ರದಲ್ಲಿ ಇಬ್ಬರು ನಾಯಕಿಯರಿದ್ದು, ತೆಲುಗಿನ ನಟಿ ಡಿಂಪಲ್ ಹಯಾತಿ ಹಾಗೂ ಅದಿತಿ ಪ್ರಭುದೇವ ನಟಿಸಿದ್ದಾರೆ. ಸಾಯಿ ಕುಮಾರ್, ಶರತ್ ಲೋಹಿತಾಶ್ವ, ಅಶೋಕ್ ಮುಂತಾದವರು ಚಿತ್ರದಲ್ಲಿದ್ದಾರೆ.

ತನ್ವಿಕ್ ಅವರ ಛಾಯಾಚಿತ್ರಗ್ರಹಣ, ಶಶಾಂಕ್ ಮುರುಳಿಧರನ್ ಸಂಕಲನ ಚಿತ್ರಕ್ಕಿದೆ. ಚಿತ್ರವನ್ನು ನಾಗರಾಜ್ ಭದ್ರಾವತಿ ಹಾಗೂ ಮಹೇಶ್ ಕೆ. ನಿರ್ಮಿಸಿದ್ದಾರೆ.

ಭೈರಪ್ಪ, ಜುಬಿನ್ ಸ್ಮರಿಸಿದ ಮೋದಿ

'ಮನದ ಮಾತು' ಕಾರ್ಯಕ್ರಮದಲ್ಲಿ ವೈಯಕ್ತಿಕ ಒಡನಾಟ ಪ್ರಸ್ತಾಪಿಸಿದ ಪ್ರಧಾನಿ

ನವದೆಹಲಿ (ಪಿಟಿಐ): ಸಾಹಿತಿ ಎಸ್. ಎಲ್.ಭೈರಪ್ಪ, ಜನಪ್ರಿಯ ಗಾಯಕ ಜುಬಿನ್ ಗರ್ಗ್ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಮನದ ಮಾತು ಕಾರ್ಯಕ್ರಮದಲ್ಲಿ ಸಂತಾಪ ಸಲ್ಲಿಸಿದರು.

'ದೇಶವು ವಿಚಾರವಾದಿ, ಚಿಂತಕ ಭೈರಪ್ಪ ಅವರನ್ನು ಕಳೆದುಕೊಂಡಿದೆ. ನಾನು ಅವರ ಜೊತೆ ವ್ಯಕ್ತಿಗತ ಸಂಪರ್ಕ ಇಟ್ಟುಕೊಂಡಿದ್ದೆ. ಹಲವು ಸಂದರ್ಭಗಳಲ್ಲಿ ಅವರ ಜೊತೆ ವಿಚಾರ ಮಂಥನ ನಡೆದಿತ್ತು. ಅವರ ಕೃತಿಗಳು ಯುವಪೀಳಿಗೆಗೆ ದಾರಿದೀಪವಾಗಿವೆ' ಎಂದು ತಿಳಿಸಿದರು.

'ಅಸ್ಸಾಂನ ಹೆಸರಾಂತ ಗಾಯಕರಾದ ಭೂಪೇನ್ ಹಜಾರಿಕಾ ಅವರ ಖ್ಯಾತ ಹಾಡು 'ಮನುಹೇ, ಮನುಹರ್ ಬೇಬೆ' ತಮಿಳು ಹಾಗೂ ಸಿಂಹಳ ಆವೃತ್ತಿಯನ್ನು ನುಡಿಸಲಾಯಿತು.

'ಸ್ನೇಹಿತರೇ, ಭೂಪೇನ್ ಅವರ ಹಾಡುಗಳು ಪ್ರಪಂಚದ ವಿವಿಧ ದೇಶಗಳನ್ನೂ ಹೇಗೆ ಸಂಪರ್ಕಿಸುತ್ತವೆ ಎಂಬುದಕ್ಕೆ ಈ ಧ್ವನಿಯೂ ಸಾಕ್ಷಿಯಾಗುತ್ತವೆ' ಎಂದರು.

'ನಾನು ಈ ಹಾಡುಗಳನ್ನು ಹಲವು ಬಾರಿ ಕೇಳಿದ್ದೇನೆ. ಅಸ್ಸಾಂನಲ್ಲಿ ಭೂಪೇನ್ ಅವರ ಶತಮಾನೋತ್ಸವ ಕಾರ್ಯಕ್ರಮದಲ್ಲಿಯೂ ಭಾಗಿಯಾಗಿದ್ದೆನು. ನಿಜಕ್ಕೂ ಅವಿಸ್ಮರಣೀಯ ಕಾರ್ಯಕ್ರಮ' ಎಂದು ಮೆಲುಕು ಹಾಕಿದರು.



> ವಿಜಯದಶಮಿಯಂದು ಆರ್‌ಎಸ್‌ಎಸ್ ಸ್ಥಾಪನೆಯಾಗಿ 100 ವರ್ಷ ಪೂರೈಸಲಿದೆ. ತ್ಯಾಗ, ಸೇವೆಯ ಮನೋಭಾವ ಆರ್‌ಎಸ್‌ಎಸ್‌ನ ನಿಜವಾದ ಶಕ್ತಿಯಾಗಿದೆ
> **ನರೇಂದ್ರ ಮೋದಿ,** ಪ್ರಧಾನ ಮಂತ್ರಿ

ಜುಬಿನ್ ಅವರ ಹಾಡುಗಳು ಮುಂದಿನ ಪೀಳಿಗೆಗೆ ಸ್ಫೂರ್ತಿತುಂಬಲಿವೆ' ಎಂದರು.

ಕಾರ್ಯಕ್ರಮದ ಮಧ್ಯದಲ್ಲಿ

ಯುನೆಸ್ಕೊ ಪಟ್ಟಿಗೆ 'ಛತ್ ಪೂಜೆ' ಸೇರ್ಪಡೆಗೆ ಯತ್ನ

'ಯುನೆಸ್ಕೊ ಸಾಂಸ್ಕೃತಿಕ ಪರಂಪರೆ ಪಟ್ಟಿಗೆ 'ಛತ್ ಪೂಜೆ'ಯನ್ನು ಸೇರಿಸಲು ಸರ್ಕಾರವು ಪ್ರಯತ್ನ ನಡೆಸುತ್ತಿದೆ. ಇದು ಸಾಧ್ಯವಾದರೆ, ಜಗತ್ತಿನ ಮೂಲೆ ಮೂಲೆಯಲ್ಲಿರುವ ಜನರು ಹಬ್ಬದ ವೈಭವ ಹಾಗೂ ದೈವಿಕತೆಯನ್ನು ಅನುಭವಿಸಲು ಸಾಧ್ಯವಾಗುತ್ತದೆ' ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು.

ಭಾನುವಾರ ಪ್ರಸಾರಗೊಂಡ ಮಾಸಾಂತ್ಯದ 'ಮನದ ಮಾತು' ಕಾರ್ಯಕ್ರಮದ 126ನೇ ಸಂಚಿಕೆಯನ್ನುದ್ದೇಶಿಸಿ ಮಾತನಾಡಿದ ಅವರು, ಕೋಲ್ಕತ್ತದ ದುರ್ಗಾ ಪೂಜೆಯನ್ನು ಕೂಡ ಇದೇ ಪಟ್ಟಿಗೆ ಸೇರ್ಪಡೆಗೊಳಿಸುವ ಪ್ರಯತ್ನ ನಡೆಯುತ್ತಿದೆ' ಎಂದು ಹೇಳಿದರು.



'ನಮ್ಮ ಹಬ್ಬಗಳು ಹಾಗೂ ಆಚರಣೆಗಳು ದೇಶದ ಸಂಸ್ಕೃತಿಯನ್ನು ಜೀವಂತವಾಗಿರುಸುತ್ತವೆ. ಛತ್ ಪವಿತ್ರ ಹಬ್ಬವನ್ನು ದೀಪಾವಳಿ ನಂತರ ಆಚರಿಸಲಾಗುತ್ತದೆ. ಈ ದೊಡ್ಡ ಹಬ್ಬವನ್ನು ಸೂರ್ಯದೇವನಿಗೆ ಸಮರ್ಪಿಸಲಾಗುತ್ತದೆ. ಸೂರ್ಯನಿಗೆ ಅರ್ಘ್ಯ ನೀಡಿ, ನಂತರ ಪೂಜಿಸಲಾಗುತ್ತದೆ. ದೇಶದ ವಿವಿಧೆಡೆ ಮಾತ್ರವಲ್ಲದೆ ಜಗತ್ತಿನಾದ್ಯಂತ ಅದರ ವೈಭವವನ್ನು ಕಾಣಬಹುದಾಗಿದೆ' ಎಂದು ತಿಳಿಸಿದರು.



ಮಹಾರಾಷ್ಟ್ರದ ಸೊಲ್ಲಾಪುರದ ವಸತಿ ಪ್ರದೇಶವು ಪ್ರವಾಹದ ನೀರಿನಿಂದ ಭಾನುವಾರ ಆವೃತಗೊಂಡಿತ್ತು – ಪಿಟಿಐ ಚಿತ್ರ

ಮಹಾರಾಷ್ಟ್ರ: ಮಳೆಯಿಂದ 8 ಸಾವು

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದಲ್ಲಿ ಸುರಿದ ಅಕಾಲಿಕ ಮಳೆಯಿಂದ ಉಂಟಾದ ವಿವಿಧ ಅವಘಡಗಳಲ್ಲಿ 8 ಮಂದಿ ಸಾವಿಗೀಡಾಗಿದ್ದಾರೆ.

ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಮಳೆಯಿಂದಾಗಿ ಹಲವು ಮನೆಗಳು ಹಾನಿಗೊಂಡಿದ್ದು, ಬೆಳೆಗಳು ಕೊಚ್ಚಿ ಹೋಗಿವೆ. ಅಪಾರ ಪ್ರಮಾಣದ ಕೃಷಿಭೂಮಿ ನಾಶವಾಗಿದೆ.

ಕಳೆದ ಎರಡು ದಿನಗಳಲ್ಲಿ 5,000ಕ್ಕೂ ಹೆಚ್ಚು ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲಾಗಿದೆ. ಈ ಮೊದಲೇ ಕೃಷಿ ಭೂಮಿ ಹಾನಿಗೊಳಗಾಗಿದ್ದ ಮರಾಠವಾಡ ಪ್ರದೇಶವು ಮಳೆಯಿಂದ ಇನ್ನಷ್ಟು ಸಂಕಷ್ಟಕ್ಕೀಡಾಗಿದೆ.

> ಶಿಬಿರಗಳಲ್ಲಿರುವ ಜನರಿಗೆ ಅಗತ್ಯ ವಸ್ತು ಪೂರೈಕೆ ಮಾಡುತ್ತಿದ್ದೇವೆ. ಮೇವಿನ ಕೊರತೆ ಉಂಟಾಗಿರುವ ಹಲವು ಜಿಲ್ಲೆಗಳಿಗೆ ಮೇವಿನ ಪೂರೈಕೆ ಮಾಡುವಂತೆಯೂ ಆದೇಶಿಸಲಾಗಿದೆ
> **ದೇವೇಂದ್ರ ಫಡಣವೀಸ್**
> ಮಹಾರಾಷ್ಟ್ರ ಮುಖ್ಯಮಂತ್ರಿ

ಭಾರಿ ಮಳೆಯಿಂದಾಗಿ ನದಿಗಳು ಅಪಾಯ ಮಟ್ಟ ಮೀರಿ ಹರಿಯುತ್ತಿವೆ. ಹಲವು ಅಣೆಕಟ್ಟೆಗಳಲ್ಲಿ ನೀರಿನ ಮಟ್ಟವು ಭರ್ತಿ ಹಂತಕ್ಕೆ ತಲುಪಿದೆ.

ಹಾನಿಗೊಳಗಾಗಿರುವ ಪ್ರತಿ ಹೆಕ್ಟೇರ್ ಕೃಷಿ ಭೂಮಿಗೆ ₹50,000 ಪರಿಹಾರ ಘೋಷಿಸುವಂತೆ ವಿಪಕ್ಷಗಳ ಮಹಾ ವಿಕಾಸ ಅಘಾಡಿ ಮೈತ್ರಿಕೂಟ ಸರ್ಕಾರವನ್ನು ಒತ್ತಾಯಿಸಿದೆ.

ಶಬರಿಮಲೆ: ದ್ವಾರಪಾಲಕ ಮೂರ್ತಿಯ ಪೀಠ ಪತ್ತೆ

ಪಥನಂತಿಟ್ಟ (ಕೇರಳ) (ಪಿಟಿಐ): ಶಬರಿಮಲೆ ದೇವಾಲಯದ ದ್ವಾರಪಾಲಕ ಮೂರ್ತಿಯ ಪೀಠವನ್ನು ತಿರುವಾಂಕೂರು ದೇವಸ್ವಂ ಬೋರ್ಡ್‌ನ (ಟಿಬಿಬಿ) ವಿಜಿಲೆನ್ಸ್ ವಿಭಾಗವು ತಿರುವನಂತಪುರದಲ್ಲಿ ವಶಕ್ಕೆ ಪಡೆದಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ. ಪೀಠವನ್ನು ಕೊಡುಗೆಯಾಗಿ ನೀಡಿದವರ ಸಂಬಂಧಿಕರ ಮನೆಯಿಂದ ಅದನ್ನು ಪತ್ತೆ ಮಾಡಲಾಗಿದೆ ಎಂದು ಅವರು ಹೇಳಿದ್ದಾರೆ.

ಟಿಡಿಬಿ ವಿಜಿಲೆನ್ಸ್ ಮತ್ತು ಪೊಲೀಸ್ ಅಧೀಕ್ಷಕ ಸುನಿಲ್ ಕುಮಾರ್ ವಿ. ಅವರ ನೇತೃತ್ವದ ತಂಡವು ಪೀಠವನ್ನು ಕೊಡುಗೆಯಾಗಿದ್ದ ನೀಡಿದ್ದ ವೆಂಜರ್‌ಮೂಡ್‌ನ ಉನ್ನಿಕೃಷ್ಣನ್ ಪೊಟ್ಟಿ ಅವರ ಸಂಬಂಧಿಕರ ಮನೆಯಲ್ಲಿ ಶನಿವಾರ ಪತ್ತೆ ಮಾಡಿತ್ತು.

ಗಲಭೆಕೋರರಿಗೆ ಉತ್ತರಪ್ರದೇಶ ಮುಖ್ಯಮಂತ್ರಿ ಆದಿತ್ಯನಾಥ ಎಚ್ಚರಿಕೆ

'ಗಜ್ವಾ ಎ ಹಿಂದ್'ಗೆ ಅವಕಾಶ ಇಲ್ಲ'

ಪ್ರಜಾವಾಣಿ ವಾರ್ತೆ

ಲಖನೌ: ರಾಜ್ಯದಲ್ಲಿ ಕೋಮು ಸೌಹಾರ್ದವನ್ನು ಕೆಡಿಸಲು ಪ್ರಯತ್ನಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಭಾನುವಾರ ಎಚ್ಚರಿಸಿದ್ದಾರೆ.

'ಐ ಲವ್ ಮುಹಮ್ಮದ್' ಪೋಸ್ಟರ್‌ಗೆ ಸಂಬಂಧಿಸಿದ ವಿವಾದದ ನಡುವೆಯೇ ಅವರು ಈ ಹೇಳಿಕೆ ನೀಡಿದ್ದಾರೆ. 'ಗಜ್ವಾ ಎ ಹಿಂದ್' (ಭಾರತದಲ್ಲಿ ಇಸ್ಲಾಮಿ ಆಳ್ವಿಕೆ ತರುವುದು) ಪರಿಕಲ್ಪನೆಗೆ

ಮುಖ್ಯಾಂಶಗಳು

- ಗಲಭೆಕೋರರ ವಿರುದ್ಧ ಕಠಿಣ ಕ್ರಮ
- ಬರೇಲಿ ಘಟನೆ ಉಲ್ಲೇಖಿಸಿದ ಸಿ.ಎಂ

ಭಾರತದಲ್ಲಿ ಅವಕಾಶ ಇಲ್ಲ. ಅದರ ಕನಸು ಕಾಣುತ್ತಿರುವವರನ್ನು ನೇರವಾಗಿ ನರಕಕ್ಕೆ ಕಳುಹಿಸಲಾಗುವುದು' ಎಂದು ಬಲರಾಂಪುರದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಅವರು ಹೇಳಿದ್ದಾರೆ.

'ಭಾರತದಲ್ಲಿ ವಾಸಿಸುತ್ತಿದ್ದರೂ ಕೆಲವರು ಅಂತಹ ಘೋಷಣೆಗಳನ್ನು ಕೂಗುತ್ತಾರೆ ಮತ್ತು ರಾಷ್ಟ್ರವಿರೋಧಿ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತಾರೆ. ಭಾರತದ ನೆಲದಲ್ಲಿ ಇಂತಹ ಚಟುವಟಿಕೆಗಳನ್ನು ಅನುಮತಿಸಲಾಗುವುದಿಲ್ಲ. ಅವುಗಳನ್ನು ಹೇಗೆ ಎದುರಿಸಬೇಕು ಎಂಬುದು ನಮಗೆ ತಿಳಿದಿದೆ' ಎಂದಿದ್ದಾರೆ.



ಯೋಗಿ ಆದಿತ್ಯನಾಥ

ಬರೇಲಿಯಲ್ಲಿ ಕಳೆದ ಶುಕ್ರವಾರ ನಡೆದ ಘಟನೆಯನ್ನು ಉಲ್ಲೇಖಿಸುತ್ತಾ ಅವರು ಈ ಎಚ್ಚರಿಕೆ ಕೊಟ್ಟಿದ್ದಾರೆ. ಬರೇಲಿಯಲ್ಲಿ ನಡೆಸಲು ಉದ್ದೇಶಿಸಿದ್ದ 'ಐ ಲವ್ ಮುಹಮ್ಮದ್' ಪ್ರದರ್ಶನ ಜಾಥಾವನ್ನು ಕೊನೆ ಕ್ಷಣದಲ್ಲಿ ಮುಂದೂಡಿದ್ದರಿಂದ ಹಿಂಸಾಚಾರ ನಡೆದಿತ್ತು. ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಹಲವರನ್ನು ಬಂಧಿಸಿದ್ದಾರೆ.

'ನಂಬಿಕೆ ಎಂಬುದು ರಸ್ತೆಗಳಲ್ಲಿ ಪ್ರದರ್ಶಿಸಬೇಕಾದ ವಿಷಯ ಅಲ್ಲ. ಬರೇಲಿಯಲ್ಲಿ ಗಲಭೆಕೋರರ ವಿರುದ್ಧ ಕ್ರಮ ಜರುಗಿಸಲಾಗಿದೆ. ಇತರ ಕಡೆಗಳಲ್ಲೂ ಗಲಭೆಕೋರರನ್ನು ಅದೇ ರೀತಿಯಲ್ಲಿ ಮಟ್ಟಹಾಕಲಾಗುವುದು' ಎಂದು ಹೇಳಿದ್ದಾರೆ.

ಛತ್ತೀಸಗಢ: ಮೂವರು ನಕ್ಸಲರ ಹತ್ಯೆ

ಕಾಂಕೆರ್ (ಪಿಟಿಐ): ಛತ್ತೀಸಗಢದ ಕಾಂಕೆರ್ ಜಿಲ್ಲೆಯಲ್ಲಿ ಭದ್ರತಾ ಪಡೆಯೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಮಹಿಳೆ ಸೇರಿ ಮೂವರು ನಕ್ಸಲರು ಮೃತಪಟ್ಟಿದ್ದಾರೆ ಎಂದು ಹಿರಿಯ ಅಧಿಕಾರಿ ತಿಳಿಸಿದ್ದಾರೆ. ಅವರ ಸುಳಿವು ನೀಡಿದವರಿಗೆ ಒಟ್ಟು ₹14 ಲಕ್ಷ ಬಹುಮಾನ ಘೋಷಿಸಲಾಗಿತ್ತು.



ಕಾಂಕೆರ್ ಮತ್ತು ಗರಿಯಾಬಂದ್ ಜಿಲ್ಲೆಗಳ ಗಡಿ ಪ್ರದೇಶವಾದ ಛಿಂದಖಡಕ್ ಗ್ರಾಮದ ಬಳಿಯ ಕಾಡುಗಳಿಂದ ಆವೃತ್ತವಾದ ಬೆಟ್ಟದಲ್ಲಿ ಮುಂಜಾನೆ ಗುಂಡಿನ ಚಕಮಕಿ ನಡೆದಿದ್ದು, ಭದ್ರತಾ ಪಡೆಯ ಜಂಟಿ ತಂಡವು ಈ ನಕ್ಸಲ್ ವಿರೋಧಿ ಕಾರ್ಯಾಚರಣೆ ನಡೆಸಿದೆ ಎಂದು ಕಾಂಕೆರ್ ಜಿಲ್ಲಾ ಎಸ್‌ಪಿ ಇಂದಿರಾ ಕಲ್ಯಾಣ್ ಯೆಲೆಸೆಲ ಹೇಳಿದ್ದಾರೆ.

ಮೃತ ನಕ್ಸಲರನ್ನು ಸೀತಾನದಿ/ರಾವಸ್ ಪ್ರದೇಶ ಸಮಿತಿಯ ಕಾರ್ಯದರ್ಶಿ ಶ್ರವಣ್ ಅಲಿಯಾಸ್ ವಿಶ್ವನಾಥ್, ನಗರಿ ಪ್ರದೇಶ ಸಮಿತಿಯ ರಾಜೇಶ್ ಅಲಿಯಾಸ್ ರಾಕೇಶ್ ಹೇಮ್ಲಾ ಮತ್ತು ಮೈನ್‌ಪುರ–ನುವಾಪಥ ರಕ್ಷಣಾ ತಂಡದ ಬಸಂತಿ ಕುಂಕ್ಷಮ್ ಅಲಿಯಾಸ್ ಹಿಡ್ಮೆ ಎಂದು ಗುರುತಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಶಾಂತಿ ಒಪ್ಪಂದ ತಿರಸ್ಕಾರ (ನವದೆಹಲಿ ವರದಿ): ನಕ್ಸಲರು ಮುಂದಿಟ್ಟಿರುವ ಶಾಂತಿ ಒಪ್ಪಂದ ಪ್ರಸ್ತಾವವನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ತಿರಸ್ಕರಿಸಿದ್ದಾರೆ.

ಶಸ್ತ್ರಾಸ್ತ್ರ ಕೆಳಗಿಟ್ಟು ಶರಣಾಗುವುದೊಂದೇ ನಕ್ಸಲರ ಮುಂದಿರುವ ಏಕೈಕ ದಾರಿ ಎಂದು ಹೇಳಿದ್ದಾರೆ.


ದುರ್ಗಾ ಪೂಜೆ

ಪಿಟಿಐ ಚಿತ್ರ



ಅಸ್ಸಾಂನ ಸೋನಿತ್‌ಪುರದಲ್ಲಿ ದುರ್ಗಾ ಪೂಜೆ ಮೆರವಣಿಗೆಯಲ್ಲಿ ಪಾಲ್ಗೊಂಡ ಮಹಿಳೆಯರು ಶಂಖ ಊದಿದರು

ಜುಬಿನ್ ಸಾವು: ಇವೆಂಟ್ ಮ್ಯಾನೇಜರ್ ವಿರುದ್ಧ ತನಿಖೆ



ಗುವಾಹಟಿ (ಪಿಟಿಐ): ಗಾಯಕ ಜುಬಿನ್ ಗರ್ಗ್ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ 'ಇವೆಂಟ್ ಮ್ಯಾನೇಜರ್' ಶ್ಯಾಮಕಾನು ಮಹಾಂತ ವಿರುದ್ಧ ಅಸ್ಸಾಂ ಪೊಲೀಸರು ಪ್ರತ್ಯೇಕ ತನಿಖೆ ಆರಂಭಿಸಿದ್ದಾರೆ.

ಸಂಘಟಿತ ಅಪರಾಧ ಕೃತ್ಯಗಳು ಮತ್ತು ಹಣ ಅಕ್ರಮ ವಹಿವಾಟಿನ ಮೂಲಕ ಆಸ್ತಿ ಗಳಿಸಿರುವ ಆರೋಪಗಳನ್ನು ಅವರು ಎದುರಿಸುತ್ತಿದ್ದಾರೆ.

ಶ್ಯಾಮಕಾನು ಅಸ್ಸಾಂನ ಮುಖ್ಯ ಮಾಹಿತಿ ಆಯುಕ್ತ ಭಾಸ್ಕರ್ ಜ್ಯೋತಿ ಮಹಾಂತ್ ಅವರ ಕಿರಿಯ ಸಹೋದರ. ಇದಕ್ಕೂ ಮುನ್ನ ನಾನಿ ಅವರು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರ ಶೈಕ್ಷಣಿಕ ಸಲಹೆಗಾರರಾಗಿದ್ದರು.

ಸಿಐಡಿ ಅಧಿಕಾರಿಗಳು ಶ್ಯಾಮಕಾನು ಅವರ ಮನೆ ಮೇಲೆ ಗುರುವಾರ ಮತ್ತು ಶುಕ್ರವಾರ ನಡೆಸಿದ್ದ ದಾಳಿ ವೇಳೆ ಹಲವು ಮಹತ್ವದ ದಾಖಲೆಗಳನ್ನು ವಶಕ್ಕೆ ಪಡೆದಿದ್ದರು.

ಜುಬಿನ್ ಕುಟುಂಬದ ಸದಸ್ಯರು ಸಿಐಡಿ ತಂಡದವರನ್ನು ಭೇಟಿ ಮಾಡಿ, ಸಾವಿನ ಕುರಿತು ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

'ಲಡಾಖ್ ಜನರು, ಸಂಸ್ಕೃತಿ ಮೇಲೆ ಬಿಜೆಪಿ ದಾಳಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಲಡಾಖ್‌ನ ಅದ್ಭುತ ಜನರು, ಸಂಸ್ಕೃತಿ, ಸಂಪ್ರದಾಯವು ಬಿಜೆಪಿ ಮತ್ತು ಆರ್‌ಎಸ್‌ಎಸ್ ದಾಳಿಯಲ್ಲಿ ಸಿಲುಕಿದೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಭಾನುವಾರ ಹರಿಹಾಯ್ದರು.

ಸಂವಿಧಾನದ ಆರನೇ ಪರಿಚ್ಛೇದದ ಅಡಿಯಲ್ಲಿ ಕೇಂದ್ರಾಡಳಿತ ಪ್ರದೇಶವನ್ನು ಸೇರಿಸಬೇಕು ಎಂದು ಒತ್ತಿ ಹೇಳಿರುವ ಅವರು, 'ಲಡಾಖ್ ಜನರು ತಮ್ಮ ಬೇಡಿಕೆಯನ್ನು ಪ್ರತಿಪಾದಿಸಿದರಷ್ಟೆ. ನಾಲ್ವರನ್ನು ಹತ್ಯೆಗೈದು ಇದಕ್ಕೆ ಬಿಜೆಪಿ ಪ್ರತಿಕ್ರಿಯಿಸಿತು, ಸೋನಂ ವಾಂಗ್ ಚೂಕ್ ಅವರನ್ನು ಜೈಲಿಗಟ್ಟಿತು. ಹತ್ಯೆ, ಹಿಂಸಾಚಾರ, ಬೆದರಿಕೆಯನ್ನು ನಿಲ್ಲಿಸಿ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಲೇಹ್ ಹಿಂಸಾಚಾರದಲ್ಲಿ ನಾಲ್ವರು ಮೃತಪಟ್ಟು, 50ಕ್ಕೂ ಹೆಚ್ಚು ಮಂದಿ ಗಾಯಗೊಂಡ ಘಟನೆ ಬೆನ್ನಲ್ಲೇ ಈ ಹೇಳಿಕೆ ನೀಡಿದ್ದಾರೆ.

ಹಿಂಸಾಚಾರದ ಕಾರಣದಿಂದಾಗಿ ಲೇಹ್‌ನಲ್ಲಿ ಭಾನುವಾರವೂ ಕರ್ಫ್ಯೂ ಜಾರಿಯಲ್ಲಿತ್ತು.

ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ಪ್ರಕರಣ

ಸ್ವಾಮಿ ಚೈತನ್ಯಾನಂದ ಸರಸ್ವತಿ ಬಂಧನ

ನವದೆಹಲಿ/ಆಗ್ರಾ (ಪಿಟಿಐ): ಶೃಂಗೇರಿ ಶಾರದಾ ಪೀಠಕ್ಕೆ ಸೇರಿದ ಶ್ರೀ ಶಾರದಾ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಮ್ಯಾನೇಜ್‌ಮೆಂಟ್‌ನ 17 ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಪ್ರಕರಣದ ಆರೋಪಿಯಾದ, ಇದುವರೆಗೆ ತಲೆ ಮರೆಸಿಕೊಂಡಿದ್ದ ಸ್ವಯಂ ಘೋಷಿತ ದೇವಮಾನವ ಸ್ವಾಮಿ ಚೈತನ್ಯಾನಂದ ಸರಸ್ವತಿ ಅವರನ್ನು ಆಗ್ರಾದಲ್ಲಿ ಭಾನುವಾರ ಬಂಧಿಸಲಾಗಿದೆ. ನಂತರ, ಪೊಲೀಸರು ಅವರನ್ನು ಪಟಿಯಾಲ ನ್ಯಾಯಾಲಯ ಮುಂದೆ ಹಾಜರುಪ ಡಿಸಿದ್ದು, 5 ದಿನ ಪೊಲೀಸ್ ಕಸ್ಟಡಿಗೆ ಒಪ್ಪಿಸಿ ಆದೇಶ ನೀಡಿದೆ.

'ಪೊಲೀಸರ ತಂಡವು ಚೈತನ್ಯಾನಂದ (62) ಅವರು ಆಗ್ರಾದ ಹೋಟೆಲ್‌ನಲ್ಲಿ ತಂಗಿದ್ದನ್ನು ಪತ್ತೆಹಚ್ಚಿ ಬಂಧಿಸಿದೆ' ಎಂದು ದೆಹಲಿ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.


'ಚೈತನ್ಯಾನಂದ ಅವರ ಬಂಧನಕ್ಕೆ ಹಲವು ತಂಡಗಳನ್ನು ರಚಿಸಲಾಗಿತ್ತು. ಖಚಿತ ಮಾಹಿತಿ ಆಧರಿಸಿ, ಆಗ್ರಾದ ತಾಜ್ ಗಂಜ್ ಪ್ರದೇಶದಲ್ಲಿರುವ ಹೋಟೆಲ್‌ವೊಂದರಲ್ಲಿ ಅವರು ತಂಗಿರುವುದು ಗೊತ್ತಾದ ಬಳಿಕ ಭಾನುವಾರ ಬೆಳಿಗ್ಗೆ 3:30ರ ವೇಳೆಗೆ ಬಂಧಿಸಲಾಗಿದೆ' ಎಂದು ಹೇಳಿದ್ದಾರೆ.

ಮುಖ್ಯಾಂಶಗಳು

- ಎಫ್‌ಐಆರ್ ದಾಖಲಾದ ಒಂದೂವರೆ ತಿಂಗಳ ನಂತರ ಬಂಧನ
- 17 ವಿದ್ಯಾರ್ಥಿನಿಯರಿಂದ ದೂರು ದಾಖಲು
- ₹8 ಕೋಟಿ ಮುಟ್ಟುಗೋಲು

ಚೈತನ್ಯಾನಂದ ವಿರುದ್ಧ ಆಗಸ್ಟ್ 4ರಂದು ಎಫ್‌ಐಆರ್ ದಾಖಲಾಗುತ್ತಿದ್ದಂತೆಯೇ ಆಶ್ರಮದಿಂದ ಪರಾರಿಯಾಗಿದ್ದರು.

ಆಗ್ರಾದ ಹೋಟೆಲ್‌ನ ಸಿಬ್ಬಂದಿ ಪ್ರಕಾರ, 'ಚೈತನ್ಯಾನಂದ ಅವರು 'ಪಾರ್ಥ ಸಾರಥಿ' ಹೆಸರಿನಲ್ಲಿ ಹೋಟೆಲ್‌ನಲ್ಲಿ ಸೆಪ್ಟೆಂಬರ್ 27ರಂದು ಕೊಠಡಿ ಪಡೆದುಕೊಂಡಿದ್ದರು. ಇಡೀ ರಾತ್ರಿ ಕೊಠಡಿಯಲ್ಲೇ ಉಳಿದಿದ್ದರು' ಎಂದು ತಿಳಿಸಿದ್ದಾರೆ.



ಉತ್ತರ ಪ್ರದೇಶದಲ್ಲಿ ಆಗ್ರಾದಲ್ಲಿ ಚೈತನ್ಯಾನಂದ ಸರಸ್ವತಿಯನ್ನು ದೆಹಲಿ ಪೊಲೀಸರು ಬಂಧಿಸಿದರು –ಪಿಟಿಐ ಚಿತ್ರ

ಬಂಧನದ ಕುರಿತು ಯಾವುದೇ ಹೇಳಿಕೆ ನೀಡಲು ಆಗ್ರಾ ಪೊಲೀಸರು ನಿರಾಕರಿಸಿದರು.

ಇದಕ್ಕೂ ಮುನ್ನ, ಚೈತನ್ಯಾನಂದ ಅವರ ಹೆಸರಿನಲ್ಲಿ ವಿವಿಧ ಬ್ಯಾಂಕ್‌ಗಳಲ್ಲಿ ಠೇವಣಿ ಇಡಲಾಗಿದ್ದ ₹8 ಕೋಟಿ ಮೊತ್ತವನ್ನು ಪೊಲೀಸರು ಮುಟ್ಟುಗೋಲು ಹಾಕಿಕೊಂಡಿದ್ದರು.

'ನೈರುತ್ಯ ದೆಹಲಿಯಲ್ಲಿರುವ ಶ್ರೀ ಶಾರದಾ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಮ್ಯಾನೇಜ್‌ಮೆಂಟ್‌ನ ಮಾಜಿ ಮುಖ್ಯಸ್ಥರಾಗಿದ್ದ ಸರಸ್ವತಿ ಅವರ ವಸತಿಗೃಹಕ್ಕೆ ಭೇಟಿ ನೀಡುವಂತೆ ವಿದ್ಯಾರ್ಥಿನಿಯರ ಮೇಲೆ ಒತ್ತಡ ಹೇರುತ್ತಿದ್ದರು. ಅಲ್ಲದೇ, ಅವರ ಚಲನವಲನಗಳ ಮೇಲೆ ಮೊಬೈಲ್‌ನ ಮೂಲಕವೇ ನಿಗಾ ಇಡುತ್ತಿದ್ದರು' ಎಂದು ಎಫ್‌ಐಆರ್‌ನಲ್ಲಿ ತಿಳಿಸಲಾಗಿದೆ.

'ಚೈತನ್ಯಾನಂದ ಅವರು ಬೇರೆ ಬೇರೆ ಹೆಸರಿನಲ್ಲಿ ಬ್ಯಾಂಕ್ ಖಾತೆಗಳನ್ನು ತೆರೆದಿದ್ದು, ಎಫ್‌ಐಆರ್ ದಾಖಲಾಗುತ್ತಿದ್ದಂತೆಯೇ, ₹50 ಲಕ್ಷ ಹಣವನ್ನು ಪಡೆದುಕೊಂಡಿದ್ದರು. ಬ್ಯಾಂಕ್ ಖಾತೆ ತೆರೆಯುವ ಸಂದರ್ಭದಲ್ಲಿ ನಕಲಿ ದಾಖಲೆಗಳನ್ನು ಸಲ್ಲಿಸಿದ್ದರು' ಎಂದು ವಿಚಾರಣೆಯ ವೇಳೆ ತಿಳಿದುಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿಶ್ವಸಂಸ್ಥೆ ಹಾಗೂ ಬ್ರಿಕ್ಸ್ ಸಂಘಟನೆಯ ಜೊತೆ ಸಂಪರ್ಕ ಹೊಂದಿರುವುದಾಗಿ ಮಾಡಿಟ್ಟುಕೊಂಡಿದ್ದ ನಕಲಿ ವಿಸಿಟಿಂಗ್ ಕಾರ್ಡ್‌ಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಪ್ರಜಾವಾಣಿ ನವವರ್ಣ

ಕೇಸರಿ ಬಣ್ಣದ ದಿರಿಸನ್ನು ಧರಿಸಿ ತೆಗೆಸಿಕೊಂಡ ಭಾವಚಿತ್ರಗಳನ್ನು ಇಂದು, ಸೋಮವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...

7338018541


ಸ್ವಿಮ್ಮಿಂಗ್ ಪೂಲ್ ಕಿಟ್ಟಿ, ಬೆಂಗಳೂರು


ಸರ್ಕಾರಿ ಪಾಲಿಟೆಕ್ನಿಕ್ ಸಿಬ್ಬಂದಿ, ರಾಮನಗರ


ಸೇಂಟ್ ಫ್ರಾನ್ಸಿಸ್ ಶಾಲಾ ಸಿಬ್ಬಂದಿ, ಕೋರಮಂಗಲ


ವೈಶಾಲಿ ಮತ್ತು ಗೆಳತಿಯರು, ಬಸವೇಶ್ವರ ನಗರ


ಶುಭ & ತಂಡ, ಯಲಹಂಕ


ಶೋಬಿತಾ & ಗೆಳತಿಯರು


ಯಶೋದಾ ಮತ್ತು ಗೆಳತಿಯರು, ಮಧುಗಿರಿ


ಸಂಧ್ಯಾ & ಗೆಳತಿಯರು, ಬೆಂಗಳೂರು


ಚಂದ್ರಕಲಾ & ಗೆಳತಿಯರು, ಕಾಮಾಕ್ಷಿಪಾಳ್ಯ


ಸುನೀತಾ & ಕುಟುಂಬ, ನೆಲಮಂಗಲ


ಆಶಾ, ಬೆಂಗಳೂರು



ರಾಜೇಶ್ವರಿ & ಗೆಳತಿಯರು, ಧಾರವಾಡ


ಮಂಗಳಾ & ಗೆಳತಿಯರು, ನಿಸರ್ಗ ಲೇಔಟ್


ಕವನ & ಗೆಳತಿಯರು, ಜೆಪಿ ನಗರ


ಶ್ರೇಯಾ ಮತ್ತು ಗೆಳತಿಯರು, RR ನಗರ


ಅನನ್ಯ & ಶ್ರೀದೇವಿ, ಬೆಂಗಳೂರು


ಚೈತ್ರಾ & ಸ್ವಾತಿ, ಬೆಂಗಳೂರು


ಶ್ರೀ ವಿನಾಯಕ ಶಾಲಾ ಸಿಬ್ಬಂದಿ, ಸುಂಕದಕಟ್ಟೆ


ಜಯಶೀಲ & ಗೆಳತಿಯರು, ಜೆಪಿ ನಗರ


ಜಲಜಾ & ಗೆಳತಿಯರು, ಶಿಡ್ಲಘಟ್ಟ


ರಾಜಶ್ರೀ & ತಂಡ, ಕೊಡಿಗೇಹಳ್ಳಿ


ರೇವಾ ವಿಶ್ವವಿದ್ಯಾಲಯದ ಸಿಬ್ಬಂದಿ, ಬೆಂಗಳೂರು

ಇಂದಿನ ಬಣ್ಣ - ಕೇಸರಿ


ಆಶಾ & ಗೆಳತಿಯರು, ಬೆಂಗಳೂರು


ಮಾಲಾ & ಗೆಳತಿಯರು, ಬೆಂಗಳೂರು


ಸರೋಜಾ ಸ್ಮಾರಕ ಶಾಲಾ ಸಿಬ್ಬಂದಿ, ಬೆಂಗಳೂರು


ಲಾವಣ್ಯ & ರಜನಿ, ತುಮಕೂರು


ವಸಂತ & ಗೆಳತಿಯರು, ಬೆಂಗಳೂರು


ವಿಜಯಾ & ಗೆಳತಿಯರು, ಶಂಕರಪುರಂ


ಶ್ವೇತಾ & ಗೆಳತಿಯರು, ಬೆಂಗಳೂರು


ಗ್ರೀಷ್ಮಾ & ಗೆಳತಿಯರು, ನಂದಿನಿ ಲೇಔಟ್


ನಳಿನಿ & ಗೆಳತಿಯರು, ಬೆಂಗಳೂರು

ಆಸ್ಪತ್ರೆ ನಿರ್ಮಾಣಕ್ಕೆ ಭೂಮಿಪೂಜೆ

ಆನೇಕಲ್: ತಾಲ್ಲೂಕಿನ ಚಂದಾಪುರ ಪುರಸಭೆ ವ್ಯಾಪ್ತಿಯ ವಾರ್ಡ್ ನಂ.3 ರಾಮಸಾಗರದಲ್ಲಿ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಿಂದ ಸುಮಾರು ₹40 ಲಕ್ಷ ವೆಚ್ಚದಲ್ಲಿ ಪ್ರಾಥಮಿಕ ಆರೋಗ್ಯ ಉಪಕೇಂದ್ರ, ಯೋಗ ಮಂದಿರ ಮತ್ತು ನರ್ಸ್‌ಗಳ ವಸತಿ ಗೃಹ ನಿರ್ಮಾಣಕ್ಕೆ ಶಾಸಕ ಬಿ.ಶಿವಣ್ಣ ಭಾನುವಾರ ಭೂಮಿ ಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ‘ಆನೇಕಲ್ ತಾಲ್ಲೂಕಿನ ಪ್ರತಿ ಗ್ರಾಮಗಳಲ್ಲಿಯೂ ಆರೋಗ್ಯ ಕೇಂದ್ರಗಳಿರಬೇಕು. ರಾಮಸಾಗರದಲ್ಲಿ ಪ್ರಾಥಮಿಕ ಆರೋಗ್ಯ ಉಪಕೇಂದ್ರ ನಿರ್ಮಿಸಲು ಭೂಮಿ ಪೂಜೆ ನೆರವೇರಿಸಲಾಗಿದೆ. ಕೇಂದ್ರದಲ್ಲಿ ಕಾರ್ಯನಿರ್ವಹಿಸುವ ನರ್ಸ್‌ಗಳಿಗೆ ವಸತಿ ಗೃಹ ನಿರ್ಮಿಸಲಾಗುತ್ತಿದೆ. ಇದರಿಂದ ವಾರದ ಎಲ್ಲಾ ದಿನಗಳು ಆರೋಗ್ಯ ಸೇವೆ ದೊರೆಯುತ್ತದೆ’ ಎಂದು ತಿಳಿಸಿದರು.

ಮುಖಂಡರಾದ ಹೀಲಲಿಗೆ ನಾಗವೇಣಿ, ಮುನಿರಾಜು, ವನಿತಾ, ಸಾವಿತ್ರಮ್ಮ, ಸುಮ, ಕಾಂತರಾಜ್, ಚಂದಾಪುರ ಶ್ರೀಧರ್, ಗಣೇಶ್, ಶಿವಪ್ಪ, ಗೋಪಾಲರೆಡ್ಡಿ ಇದ್ದರು.

‘ಸಂಪ್ರದಾಯ, ಹಬ್ಬ ಮರೆಯದಿರಿ’

ಸಹಕಾರನಗರ ದಸರಾ ಉತ್ಸವ ಸಾಂಸ್ಕೃತಿಕ ಸಂಭ್ರಮ

ಪ್ರಜಾವಾಣಿ ವಾರ್ತೆ

ಯಲಹಂಕ: ‘ನಮ್ಮ ಜನರು ಹಳೆಯ ಸಂಪ್ರದಾಯ ಮತ್ತು ಹಬ್ಬಗಳನ್ನು ಮರೆಯುತ್ತಿದ್ದಾರೆ. ಈ ನಿಟ್ಟಿನಲ್ಲಿ ಗತಕಾಲದ ವೈಭವವನ್ನು ಮರುಕಳಿಸುವಂತೆ ಮಾಡುವುದರ ಜೊತೆಗೆ ಮುಂದಿನ ಪೀಳಿಗೆಗೂ ಕೊಂಡೊಯ್ಯಬೇಕಾದುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ’ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಅಭಿಪ್ರಾಯಪಟ್ಟರು.

ಕೆಬಿಜಿ ಸ್ವಯಂಸೇವಕರು ಮತ್ತು ಬ್ಯಾಟರಾಯನಪುರ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ‘ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್’ ಸಹಯೋಗದೊಂದಿಗೆ ಸಹಕಾರ ನಗರದಲ್ಲಿ ಆಯೋಜಿಸಿದ್ದ ದಸರಾ ಉತ್ಸವ-ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಬ್ಯಾಟರಾಯನಪುರ ವಿಧಾನಸಭೆ ಕ್ಷೇತ್ರದಲ್ಲಿ ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ದಸರಾ ಸೇರಿ ಪ್ರತಿಯೊಂದು ಹಬ್ಬಗಳನ್ನೂ ವಿಶಿಷ್ಟ ರೀತಿಯಲ್ಲಿ ಆಚರಿಸುವ ಮೂಲಕ ಇಂದಿನ ಯುವಪೀಳಿಗೆಗೆ ನಾಡಿನ ಕಲೆ, ಸಂಸ್ಕೃತಿ ಮತ್ತು ಹಬ್ಬಗಳ ಪರಿಚಯ ಮಾಡಿಕೊಡಲಾಗುತ್ತಿದೆ’ ಎಂದರು.

‘ನಮ್ಮ ನಾಡಿನ ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಿ, ಬೆಳೆಸುವುದರ ಜೊತೆಗೆ ಮುಂದಿನ ಪೀಳಿಗೆಯೂ ಕೊಂಡೊಯ್ಯುವ ನಿಟ್ಟಿನಲ್ಲಿ ಹೆಸರಾಂತ ಕಲಾವಿದರನ್ನು ಆಹ್ವಾನಿಸಿ, ಅವರ ಪ್ರತಿಭೆಯನ್ನು ಪ್ರೋತ್ಸಾಹಿಸುವುದರ ಜೊತೆಗೆ ಜನತೆಗೆ ಪರಿಚಯಿಸಲಾಗುತ್ತಿದೆ. ಅಲ್ಲದೆ ಕ್ಷೇತ್ರದಲ್ಲಿ ಸ್ಥಳೀಯ ಪ್ರತಿಭೆಗಳನ್ನು ಗುರುತಿಸಿ, ಪ್ರದರ್ಶನಕ್ಕೆ ವೇದಿಕೆ ಕಲ್ಪಿಸಲಾಗುತ್ತಿದೆ’ ಎಂದು ತಿಳಿಸಿದರು.

ದಸರಾ ಪ್ರಯುಕ್ತ ಗೊಂಬೆಗಳನ್ನು ಪ್ರದರ್ಶನಕ್ಕೆ ಇರಿಸಿದವರ ಮನೆಗಳಿಗೆ ತೆರಳಿ ಉಡುಗೊರೆ ನೀಡಲಾಯಿತು. ಕಲಾವಿದರು ಪ್ರದರ್ಶಿಸಿದ ಪೂಜಾ ಕುಣಿತ, ಗಾರುಡಿ ಗೊಂಬೆ, ನಂದಿಕೋಲು ನೃತ್ಯ ಜನರ ಗಮನ ಸೆಳೆದವು.

ಸ್ಥಳೀಯ ಯುವಕರು, ಮಹಿಳೆಯರು ಹಾಗೂ ಮಕ್ಕಳಿಂದ ವಿವಿಧ ನೃತ್ಯಪ್ರದರ್ಶನ ಹಾಗೂ ಸ್ಪರ್ಧೆ ಏರ್ಪಡಿಸಲಾಗಿತ್ತು. ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಶಂಕರಿ-ನೃತ್ಯೋಮಾ ಅಕಾಡೆಮಿ ಆಫ್ ಪರ್ಫಾರ್ಮಿಂಗ್ ಆರ್ಟ್ಸ್ ತಂಡದವರಿಂದ ಭರತನಾಟ್ಯ ಹಾಗೂ ಕೆರೆಮನೆ ಶಿವಾನಂದ ಹೆಗಡೆ ಮತ್ತು ತಂಡದಿಂದ ‘ಸೀತಾಪಹರಣ’ ಯಕ್ಷಗಾನ ಪ್ರದರ್ಶನ, ಪ್ರೇಕ್ಷಕರನ್ನು ಆಕರ್ಷಿಸಿತು.



ದಸರಾ ಉತ್ಸವದಲ್ಲಿ ಕಲಾವಿದರು ಮಹಿಷಾಸುರ ಮರ್ಧಿನಿ ನೃತ್ಯರೂಪಕ ಪ್ರದರ್ಶಿಸಿದರು



ದಸರಾ ಉತ್ಸವಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕೃಷ್ಣ ಬೈರೇಗೌಡ ಮಾತನಾಡಿದರು

ಸುದ್ದಿ 2 ನಿಮಿಷ

ಅಥರ್ವ, ಹಿಮಾಂಶಿ ಚಾಂಪಿಯನ್

ಬೆಂಗಳೂರು: ಅಥರ್ವ ನವರಂಗೆ ಹಾಗೂ ಹಿಮಾಂಶಿ ಚೌಧರಿ ಅವರು ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆಯುತ್ತಿರುವ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ 17 ವರ್ಷದೊಳಗಿವರ ವಿಭಾಗದಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ಸಿಂಗಲ್ಸ್‌ನಲ್ಲಿ ಪ್ರಶಸ್ತಿ ಗೆದ್ದರು.

ಜೆಟಿಟಿಎ ಆಶ್ರಯದಲ್ಲಿ ನಡೆಯುತ್ತಿರುವ ಈ ಟೂರ್ನಿಯ 17 ವರ್ಷದೊಳಗಿವರ ಬಾಲಕರ ವಿಭಾಗದ ಫೈನಲ್‌ನಲ್ಲಿ ಸಿದ್ಧಾಂತ್ 11-8, 11-9, 11-7ರಿಂದ ನೇರ ಸೆಟ್‌ಗಳಲ್ಲಿ ಶುಭಂ ತ್ರಿವೇದಿ ಅವರನ್ನು ಮಣಿಸಿದರು.

ಸೆಮಿಫೈನಲ್ ಪಂದ್ಯಗಳಲ್ಲಿ ಶುಭಂ ಅವರು 11-8, 11-6, 13-11ರಿಂದ ರೇಯಾನ್ಶ್ ಜಲನ್ ಎದುರು; ಅಥರ್ವ 11-9, 11-9, 11-9ರಿಂದ ಆರ್ಯ ಜೈನ್ ಎದುರು ಗೆಲುವು ಸಾಧಿಸಿದ್ದರು. 17 ವರ್ಷದೊಳಗಿವರ ಬಾಲಕಿಯರ ವಿಭಾಗದ ಪ್ರಶಸ್ತಿ ಸುತ್ತಿನಲ್ಲಿ ಹಿಮಾಂಶಿ 11-13, 11-9, 11-4, 11-7ರಿಂದ ಹಿಯಾ ಸಿಂಗ್ ಅವರನ್ನು ಪರಾಭವಗೊಳಿಸಿದರು.

ಸೆಮಿಫೈನಲ್ ಪಂದ್ಯಗಳಲ್ಲಿ ಹಿಮಾಂಶಿ ಅವರು 11-4, 11-5, 10-12, 11-5ರಿಂದ ಶಿವಾನಿ ಮಹೇಂದ್ರನ್ ವಿರುದ್ಧ; ಹಿಯಾ 11-9, 11-8, 11-2ರಿಂದ ಸುಮೇಧಾ ಭಟ್ ವಿರುದ್ಧ ಜಯ ಸಾಧಿಸಿದ್ದರು.

ಲಕ್ಷ್ಮಿ ಆಶ್ರಿತಾ ಚಾಂಪಿಯನ್: 15 ವರ್ಷದೊಳಗಿವರ ಬಾಲಕಿಯರ ವಿಭಾಗದಲ್ಲಿ ಲಕ್ಷ್ಮಿ ಆಶ್ರಿತಾ ಅವರು 2-11, 11-8, 11-9, 6-11, 11-9ರಿಂದ ಮಿಹಿಕಾ ಉಡುಪ ಅವರನ್ನು ಮಣಿಸಿ ಚಾಂಪಿಯನ್ ಆದರು. ಬಾಲಕರ ವಿಭಾಗದಲ್ಲಿ ಅಮನ್ ಜಾರ್ಜ್ ಥಾಮಸ್ 11-9, 11-9, 12-10ರಿಂದ ವೇದಾಂತ್ ವಸಿಷ್ಠ ಅವರನ್ನು ಸೋಲಿಸಿ ಪ್ರಶಸ್ತಿ ಜಯಿಸಿದರು.

ಬಿಎಫ್‌ಸಿ ತಂಡಕ್ಕೆ ಜಯ



ಬೆಂಗಳೂರು: ಸಂಘಟಿತ ಆಟವಾಡಿದ ಬಿಎಫ್‌ಸಿ ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 3-0ಯಿಂದ ಭಾರತ್ ಬೆಂಗಳೂರು ಎಫ್‌ಸಿ ತಂಡವನ್ನು ಸುಲಭವಾಗಿ ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ 7ನೇ ಸುತ್ತಿನ ಪಂದ್ಯದಲ್ಲಿ ಬಿಎಫ್‌ಸಿ ತಂಡದ ಆಶಿಕ್ ಅಧಿಕಾರಿ (14ನೇ ನಿ.), ಯೈಂಹರೆಂಬಾ ಚಿಂಗಂಗಖಂ (35ನೇ ನಿ.) ಹಾಗೂ ಸರ್ಟೊ ವೊರ್ನೈ ಲೆನ್‌ಕೊಮ್ (68ನೇ ನಿ.) ಅವರು ತಲಾ ಒಂದು ಗೋಲು ದಾಖಲಿಸಿದರು. ಭಾರತ್ ಬೆಂಗಳೂರು ತಂಡದ ಆಟಗಾರರು ಎದುರಾಳಿ ತಂಡದ ರಕ್ಷಣಾ ಕೋಟೆ ಭೇದಿಸುವಲ್ಲಿ ವಿಫಲರಾದರು.

ಮತ್ತೊಂದು ಪಂದ್ಯದಲ್ಲಿ ಎಂಎಫ್‌ಎಆರ್ ಸ್ಟುಡೆಂಟ್ಸ್ ಯೂನಿಯನ್ ಎಫ್‌ಸಿ ತಂಡ 2-1ರಿಂದ ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ಎದುರು ಗೆಲುವು ಸಾಧಿಸಿತು. ಎಂಎಫ್‌ಎಆರ್ ಪರ ವಾಂಖೊಲೆನ್ ಡೌಂಗೆಲ್ (52ನೇ ನಿ.) ಹಾಗೂ ಮಲ್ಸಾವ್ನ್‌ಡಾಂಗ್ ಕೀಮಾ (76 ನಿ.) ತಲಾ ಒಂದು ಗೋಲು ಹೊಡೆದರು. ಡ್ರೀಮ್ ಯುನೈಟೆಡ್ ಪರ ಮುಹಮ್ಮದ್ ಆದಿಲ್ ಶಾ (46ನೇ ನಿ.) ಏಕೈಕ ಗೋಲು ದಾಖಲಿಸಿದರು. ಪರಿಕ್ರಮ ಎಫ್‌ಸಿ ಹಾಗೂ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ನಡುವಣ ಪಂದ್ಯವು 1-1ರಲ್ಲಿ ಡ್ರಾ ಆಯಿತು.

‘ಕೃಷಿ ಪರಿಸರದ ಕಡೆಗೆ ನಮ್ಮ ನಡಿಗೆ’ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಆಯೋಜಿಸಿದ್ದ ‘ಕೃಷಿ ಪರಿಸರದ ಕಡೆಗೆ ನಮ್ಮ ನಡಿಗೆ’ ಮಾರ್ಗದರ್ಶಿ ಪ್ರವಾಸಕ್ಕೆ ಶನಿವಾರ ಚಾಲನೆ ನೀಡಲಾಯಿತು.

ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ಮಾತನಾಡಿ, ‘ಕೃಷಿಯ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಈ ಮಾರ್ಗದರ್ಶಿ ನಡಿಗೆ ಆಯೋಜಿಸಲಾಗಿದೆ. ನಗರದ ಒತ್ತಡದ ಬದುಕು, ಸಂಚಾರ ದಟ್ಟಣೆ, ಶಬ್ದ ಮಾಲಿನ್ಯ, ವಾಯು ಮಾಲಿನ್ಯದಂತಹ ಸಮಸ್ಯೆಗಳನ್ನು ಮರೆತು ಈ ಹಸಿರು ಪರಿಸರದಲ್ಲಿ ನಡಿಗೆ ಮಾಡಿದರೆ ಮನಸ್ಸಿಗೆ ನೆಮ್ಮದಿ ಸಿಗುತ್ತದೆ’ ಎಂದು ಹೇಳಿದರು.

‘ಜಿಕೆವಿಕೆ ಆವರಣದ 5 ಕಿ.ಮೀ ನಡಿಗೆಯಲ್ಲಿ ವೈದ್ಯರು, ಐಟಿ ಉದ್ಯೋಗಿಗಳು, ಗೃಹಿಣಿಯರು, ಮಕ್ಕಳ, ವೃದ್ಧರು ಸೇರಿದಂತೆ 150ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ನಡಿಗೆಯಲ್ಲಿ ಕೃಷಿಗೆ ಸಂಬಂಧಿತ ವಿಷಯಗಳ ಕುರಿತು ಮಾಹಿತಿ ಹಂಚಿಕೊಳ್ಳಲಾಯಿತು. ಜೇನುಕೃಷಿ, ಸಮಗ್ರ ಕೃಷಿ ಪ್ರಾತ್ಯಕ್ಷಿಕೆ, ಬೆಳೆ ಸಂಗ್ರಹಾಲಯ, ಜಾನುವಾರು ಸಂಕೀರ್ಣ, ಹೈಡ್ರೊಪೋನಿಕ್ಸ್ ಘಟಕ, ಜೈವಿಕ ಉದ್ಯಾನಕ್ಕೆ ಭೇಟಿ ನೀಡಲಾಯಿತು’ ಎಂದರು

‘ನಡಿಗೆಯಲ್ಲಿ ಪಾಲ್ಗೊಂಡಿದ್ದ ಎಲ್ಲರಿಗೂ ಸಿರಿಧಾನ್ಯಗಳಿಂದ ತಯಾರಿಸಿದ್ದ ಉಪಾಹಾರ ನೀಡಲಾಯಿತು. ನಡಿಗೆಯ ಜೊತೆಗೆ ರೈತ ಸಂತೆಯು ಆಯೋಜಿಸಲಾಗಿತ್ತು. ರೈತರು ಬೆಳೆದ ವಿವಿಧ ಉತ್ಪನ್ನಗಳು, ಮೌಲ್ಯವರ್ಧಿತ ಉತ್ಪನ್ನಗಳು ಖರೀದಿಸಿದರು. ಮಕ್ಕಳು ಎತ್ತಿನ ಬಂಡಿ ಸವಾರಿ ಮಾಡಿ ಕೃಷಿ ಪಟ್ಟರು’ ಎಂದು ತಿಳಿಸಿದರು.

‘ಥಿನ್ ವೈಟ್ ಟಾಪಿಂಗ್’ ಕಾಮಗಾರಿಗೆ ಸಂದ ಗೌರವ

ಜಿಬಿಎಗೆ ಐಸಿಐ ಅಲ್ಟ್ರಾಟೆಕ್ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರವು (ಜಿಬಿಎ) ಭಾರತೀಯ ಕಾಂಕ್ರೀಟ್ ಸಂಸ್ಥೆ(ಐಸಿಐ)- ಅಲ್ಟ್ರಾಟೆಕ್ ಪ್ರಶಸ್ತಿಗೆ ಭಾಜನವಾಗಿದೆ.

ಕೋರಮಂಗಲದಲ್ಲಿ ಅನುಷ್ಠಾನಗೊಳಿಸಲಾದ ‘ಥಿನ್ ವೈಟ್ ಟಾಪಿಂಗ್ (ಟಿಡಬ್ಲ್ಯುಟಿ)’ ಕಾಮಗಾರಿ ವಿನ್ಯಾಸ ಮತ್ತು ಅನುಷ್ಠಾನಕ್ಕೆ ಈ ಗೌರವ ಸಂದಿದೆ.

ಕೋರಮಂಗಲ ಒಳ ವರ್ತುಲ ರಸ್ತೆ- ಎಂಪೈರ್ ರಸ್ತೆಯಿಂದ ಗಣಪತಿ ದೇವಸ್ಥಾನದವರೆಗೆ 1.1 ಕಿ.ಮೀ ಹಾಗೂ ಏಳನೇ ಅಡ್ಡರಸ್ತೆಯಲ್ಲಿರುವ ಬಿಡಿಎ ಕಾಂಪ್ಲೆಕ್ಸ್‌ನಿಂದ ವಿಪ್ರೋ ಪಾರ್ಕ್ ಸಿಗ್ನಲ್‌ವರೆಗೆ 1.17 ಕಿ.ಮೀ ಉದ್ದದ ರಸ್ತೆಗೆ ಹೊಸ ವಿನ್ಯಾಸದಲ್ಲಿ 125 ಎಂ.ಎಂ ದಪ್ಪದ ವೈಟ್ ಟಾಪಿಂಗ್ ಅನ್ನು 2023ರಲ್ಲಿ ಅನುಷ್ಠಾನಗೊಳಿಸಲಾಗಿತ್ತು.

ನಗರದಲ್ಲಿ ಸಾಮಾನ್ಯವಾಗಿ ವೈಟ್ ಟಾಪಿಂಗ್ ರಸ್ತೆಗಳಿಗೆ 180 ಎಂ.ಎಂ ದಪ್ಪದ ವಿನ್ಯಾಸ ಬಳಸಲಾಗುತ್ತಿತ್ತು. ಹೊಸ ಯೋಜನೆಯಲ್ಲಿ, ಜಿಬಿಎಯ (ಹಿಂದಿನ ಬಿಬಿಎಂಪಿ) ಎಂಜಿನಿಯರ್‌ಗಳ ತಂಡವು 125 ಎಂ.ಎಂ ದಪ್ಪದ ಹೊಸ ವಿನ್ಯಾಸವನ್ನು ಯಶಸ್ವಿಯಾಗಿ ರೂಪಿಸಿ, ಜಾರಿಗೊಳಿಸಿತ್ತು.

ಈ ವಿನ್ಯಾಸವು ನಗರದ ಸರ್ವತೋಮುಖ ಬೆಳವಣಿಗೆಯಲ್ಲಿ ಹಲವು ಸವಾಲುಗಳಿಗೆ ಸಮರ್ಥವಾದ ಉತ್ತರವಾಗಿದೆ. ರಸ್ತೆಗಳ ಎತ್ತರ, ಮಳಿಗೆಗಳು ಹಾಗೂ ನಿವಾಸಗಳ ಪ್ರವೇಶ ಮತ್ತು ಮಳೆಯ ನೀರಿನ ಹರಿವಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಇದು ಪರಿಹಾರವಾಗಿದೆ. ಜೊತೆಗೆ ಈ ಯೋಜನೆ ಅನುಷ್ಠಾನದಿಂದ ಹಣದ ಉಳಿತಾಯವೂ ಆಗಲಿದೆ ಎಂದು ಜಿಬಿಎ ತಿಳಿಸಿದೆ.

ಟಿಡಬ್ಲ್ಯುಟಿ ವಿನ್ಯಾಸ ಅನುಷ್ಠಾನಗೊಳಿಸಿದ ಮುಖ್ಯ ಎಂಜಿನಿಯರ್ ಎಂ. ಲೋಕೇಶ್, ಸೂಪರಿಂಟೆಂಡಿಂಗ್ ಎಂಜಿನಿಯರ್ ಕೆ. ಹೇಮಲತಾ, ಕಾರ್ಯಪಾಲಕ ಎಂಜಿನಿಯರ್ ಎ. ಸತ್ಯನಾರಾಯಣ, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಸಿ. ವೀಣಾ ಅವರು ಪ್ರಶಸ್ತಿ ಸ್ವೀಕರಿಸಿದರು.

ಐಸಿಐ- ಬೆಂಗಳೂರು ಕೇಂದ್ರದ ಅಧ್ಯಕ್ಷ ಎಚ್.ಆರ್. ಗಿರೀಶ್, ಅಲ್ಟ್ರಾ ಟೆಕ್‌ನ ಮಾರುಕಟ್ಟೆ ವಿಭಾಗದ ಪ್ರಾದೇಶಿಕ ಮುಖ್ಯಸ್ಥ ರಾಘವೇಂದ್ರ ದೇಸಾಯಿ, ಐಸಿಐ ಕಾರ್ಯದರ್ಶಿ ಬಿ.ಎಸ್ ಸಂತೋಷ್ ಉಪಸ್ಥಿತರಿದ್ದರು.



ಜಿಬಿಎ ಎಂಜಿನಿಯರ್‌ಗಳು ಭಾರತೀಯ ಕಾಂಕ್ರೀಟ್ ಸಂಸ್ಥೆ(ಐಸಿಐ) ಅಲ್ಟ್ರಾಟೆಕ್ ಪ್ರಶಸ್ತಿ ಸ್ವೀಕರಿಸಿದರು



ಕ್ರಿಸ್ತು ಜಯಂತಿ ಡೀಮ್ಡ್ ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ನಡೆದ ‘ಕನ್ನಡ ಹಬ್ಬ 2025’ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಗಣ್ಯರು ಭಾಗವಹಿಸಿದ್ದರು

‘ವಿದ್ಯಾರ್ಥಿಗಳು ವಿಶ್ವಜ್ಯೋತಿಗಳಾಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾನಪದ ಪರಂಪರೆಯಲ್ಲಿ ತಾಯಂದಿರು ಹೇಳಿರುವ ‘ಆಚಾರಕ್ಕೆ ಅರಸನಾಗು, ನೀತಿಗೆ ಪ್ರಭುವಾಗು, ಮಾತಿಗೆ ಚೂಡಾಮಣಿಯಾಗು, ಜಗಕ್ಕೆ ಜ್ಯೋತಿಯೇ ಆಗು’ ಎಂಬ ಮಾತಿನಂತೆ ವಿದ್ಯಾರ್ಥಿಗಳು ವಿಶ್ವಜ್ಯೋತಿಗಳಾಗಬೇಕು ಎಂದು ಜಾನಪದ ಗಾಯಕ ಜೋಗಿಲ ಸಿದ್ಧರಾಜು ಅಭಿಪ್ರಾಯಪಟ್ಟರು.

ನಗರದ ಕ್ರಿಸ್ತು ಜಯಂತಿ ಡೀಮ್ಡ್ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ವತಿಯಿಂದ ಆಯೋಜಿಸಲಾಗಿದ್ದ ‘ಕನ್ನಡ ಹಬ್ಬ-2025’ ಕಾರ್ಯಕ್ರಮ ಉದ್ಘಾಟಿಸಿ, ಭಿತ್ತಿಚಿತ್ರ ಪ್ರದರ್ಶನ ಬಿಡುಗಡೆಗೊಳಿಸಿ ಮಾತನಾಡಿದರು.

‘ಜಗತ್ತಿಗೆ ಕೇಡಾಗದಂತೆ ತಮ್ಮ ಜೀವನವನ್ನು ಆರೋಗ್ಯಕರವಾಗಿ ಧ್ಯಾನಶೀಲ, ಜ್ಞಾನಶೀಲ ಹಾಗೂ ಸೃಜನಶೀಲವಾಗಿಸಿಕೊಂಡವರು ಜಾನಪದರು. ಇದನ್ನು ಇಂದಿನ ಆಧುನಿಕರು ಅರಿತುಕೊಳ್ಳುವ ಮೂಲಕ ಉತ್ತಮ ಪ್ರಜೆಗಳಾಗಬೇಕು. ಬಡತನದಲ್ಲಿ ಬೆಳೆದ ನನ್ನ ಬದುಕು ಹಾಗೂ ಕಲಾಜ್ಞಾನವನ್ನು ವಿಶ್ವಮಟ್ಟಕ್ಕೇರಿಸಿ ಶ್ರೀಮಂತಗೊಳಿಸಿದ್ದೇ ಜಾನಪದ’ ಎಂದು ತಿಳಿಸಿದರು.

ವಿಶ್ವವಿದ್ಯಾಲಯದ ಮಾನವಿಕ ಹಾಗೂ ಸಮಾಜ ವಿಜ್ಞಾನ ನಿಕಾಯದ ನಿರ್ದೇಶಕ ಜೋಶಿ ಮ್ಯಾಥ್ಯೂ ಅಧ್ಯಕ್ಷತೆ ವಹಿಸಿದ್ದರು. ಮಾನವಿಕ ನಿಕಾಯದ ಡೀನ್ ಗೋಪಕುಮಾರ್ ಎ.ವಿ. ಹಾಗೂ ಸಮಾಜ ವಿಜ್ಞಾನ ಹಾಗೂ ಭಾಷಾ ವಿಭಾಗದ ಮುಖ್ಯಸ್ಥೆ ಕಾವೇರಿ ಸ್ವಾಮಿ ಭಾಗವಹಿಸಿದ್ದರು.

ಕನ್ನಡ ವಿಭಾಗದ ಮುಖ್ಯಸ್ಥ ಕ್ಯಾಪ್ಟನ್ ಸರ್ವೇಶ್ ಬಿ.ಎಸ್, ಕನ್ನಡ ಹಬ್ಬದ ಸಂಯೋಜಕ ಎಂ.ಭೈರಪ್ಪ, ಸಂಯೋಜಕ ಪ್ರೊ.ಎನ್.ಚಂದ್ರಶೇಖರ್, ಕನ್ನಡ ಅಧ್ಯಾಪಕರಾದ ಸೈಯದ್ ಮುಯಿನ್, ರವಿಶಂಕರ್ ಎ.ಕೆ., ಕಿರಣಕುಮಾರ್ ಎಚ್.ಜಿ, ಕನ್ನಡ ಸಾಹಿತ್ಯ ವೇದಿಕೆಯ ವಿದ್ಯಾರ್ಥಿ ಸಂಚಾಲಕರಾದ ಧೃತಿ ಹಾಗೂ ನಿತಿನ್ ಗೌಡ ಉಪಸ್ಥಿತರಿದ್ದರು. ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ದಸರಾ ಗೊಂಬೆ ನಿನ್ನ ನೋಡಲು...



ಬಿದರಹಳ್ಳಿಯ ಬಿ.ವಿ. ರಾಘವೇಂದ್ರ ಅವರ ಮನೆಯಲ್ಲಿ ದಸರಾ ಗೊಂಬೆಗಳನ್ನು ಆಕರ್ಷಕವಾಗಿ ಜೋಡಿಸಿಟ್ಟಿರುವುದು



ಉಲ್ಲಾಳ ಕ್ರಾಸ್‌ನ ಆರ್.ಟಿ.ಒ ಮುಖ್ಯ ರಸ್ತೆಯಲ್ಲಿರುವ ವಿದ್ಯಾನಿಕೇತನ ಪಬ್ಲಿಕ್ ಶಾಲೆಯಲ್ಲಿ ದಸರಾ ಗೊಂಬೆಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ



ಸಹಕಾರನಗರದ ಸಂಧ್ಯಾ ಮೂರ್ತಿ ಅವರು ಮನೆಯಲ್ಲಿ ಜೋಡಿಸಿರುವ ಗೊಂಬೆಗಳು



ಚನ್ನಮ್ಮನ ಕೆರೆ ಅಚ್ಚುಕಟ್ಟಿನ ಶ್ರುತಿ ಸ್ವಾಮಿನಾಥ್ ಅವರ ಮನೆಯಲ್ಲಿ ದಸರಾ ಗೊಂಬೆಗಳನ್ನು ಜೋಡಿಸಲಾಗಿದೆ



ಜೆ.ಪಿ.ನಗರದ ಎರಡನೇ ಹಂತದಲ್ಲಿರುವ ಡಾ. ಶೀಲಾ ಹಾಗೂ ಡಾ. ನಟರಾಜ್ ಶೆಟ್ಟಿ ದಂಪತಿ ಮನೆಯಲ್ಲಿ ಕುಂಭಕರ್ಣ ವಿಷಯಾಧಾರಿತ ಗೊಂಬೆಗಳ ಪ್ರದರ್ಶನ



ಬಿಎಚ್‌ಇಎಲ್ ಬಡಾವಣೆಯ ಗೀತಾ ರಘುನಾಥ್ ಅವರ ಮನೆಯಲ್ಲಿ ಕೂರಿಸಿರುವ ಗೊಂಬೆಗಳು

ಕರಾವಳಿ ಕ್ರೀಡಾ ಮತ್ತು ಸಾಂಸ್ಕೃತಿಕ ಅಕಾಡೆಮಿ ಉದ್ಘಾಟನೆ

‘ಸರ್ಕಾರಗಳಿಂದ ಕರಾವಳಿ ಜಿಲ್ಲೆಗಳ ಕಡೆಗಣನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರಾವಳಿ ಜಿಲ್ಲೆಗಳಿಗೆ ಸೂಕ್ತ ಸ್ಥಾನಮಾನ ನೀಡುವಲ್ಲಿ ಹಿಂದಿನಿಂದಲೂ ಸರ್ಕಾರಗಳು ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿವೆ’ ಎಂದು ಬರಹಗಾರ ಕೆಂಚನೂರು ಶಂಕರ್ ಹೇಳಿದರು.

ನಗರದಲ್ಲಿ ಭಾನುವಾರ ನಡೆದ ಕರಾವಳಿ ಕ್ರೀಡಾ ಮತ್ತು ಸಾಂಸ್ಕೃತಿಕ ಅಕಾಡೆಮಿ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ, ಮಾತನಾಡಿದರು.

‘ಕರಾವಳಿ ಪ್ರದೇಶವು ವೈವಿಧ್ಯದಿಂದ ಕೂಡಿದ್ದು, ದೇಶದಾಚೆಗೂ ಚಿರಪರಿಚಿತವಾಗಿದೆ. ಆಡಳಿತದ ಚುಕ್ಕಾಣಿ ಹಿಡಿಯುವವರು ಹಲವು ರೀತಿಯಲ್ಲಿ ಈ ಪ್ರದೇಶಕ್ಕೆ ಮನ್ನಣೆ ನೀಡಬೇಕಾದ ಅಗತ್ಯವಿದೆ. ಕರಾವಳಿಯವರು ಸಂಸ್ಕೃತಿ ಹಾಗೂ ಕ್ರೀಡಾ ಕ್ಷೇತ್ರಗಳಿಗೆ ಹೆಚ್ಚಿನ ಆದ್ಯತೆ ನೀಡುವ ಜತೆಗೆ, ಈ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ. ಯಕ್ಷಗಾನವು ಈ ಭಾಗದ ಜನಪ್ರಿಯ ಕಲೆಯಾಗಿದ್ದು, ಈ ಕಲಾ ಕ್ಷೇತ್ರದ ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಬೇಕು’ ಎಂದರು.

ತುಳು ಕೂಟದ ಅಧ್ಯಕ್ಷ ಸುಂದರ್ ರಾಜ್ ರೈ, ‘ಕರಾವಳಿ ಭಾಗವು ಕನ್ನಡ ನಾಡಿಗೆ ಹಲವು ಕೊಡುಗೆಗಳನ್ನು ನೀಡುತ್ತಾ ಬಂದಿದೆ. ಹಾಗಾಗಿ, ಕರಾವಳಿ ಭಾಗದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಕ್ರೀಡೆಗೆ ಉತ್ತೇಜನ ನೀಡಲು ಪ್ರವಾಸೋದ್ಯಮ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಅವಿಭಜಿತ ದಕ್ಷಿಣ ಕನ್ನಡದವರು ಎಲ್ಲರನ್ನೂ ಒಪ್ಪಿಕೊಂಡು ಸಾಗುವವರಾಗಿದ್ದಾರೆ’ ಎಂದು ಹೇಳಿದರು.


ದಕ್ಷಿಣ ಕನ್ನಡಿಗರ ಸಂಘದ ಅಧ್ಯಕ್ಷ ಡಾ.ಕೆ.ಸಿ.ಬಲ್ಲಾಳ್, ‘ಕರಾವಳಿಯ ಕ್ರೀಡೆ ಮತ್ತು ಸಂಸ್ಕೃತಿಯು ಜಾತಿ, ಧರ್ಮಗಳನ್ನು ಮೀರಿದೆ. ಎಲ್ಲವನ್ನೂ ಒಳಗೊಂಡಿರುವ ಕರಾವಳಿ ಪ್ರದೇಶ ತನ್ನದೆ ಆದ ವೈಶಿಷ್ಟ್ಯ ಹೊಂದಿದೆ’ ಎಂದರು.

‘ಕರ್ನಾಟಕ ರತ್ನ’ ಪ್ರಶಸ್ತಿಗೆ ಭಾಜನರಾದ ವಿಷ್ಣುವರ್ಧನ್ ಹಾಗೂ ಬಿ.ಸರೋಜಾ ದೇವಿ ಅವರಿಗೆ ಸಾಂಸ್ಕೃತಿಕ ನಮನ ಸಲ್ಲಿಸಲಾಯಿತು. ಯಕ್ಷೇಶ್ವರಿ ಯಕ್ಷಗಾನ ತಂಡದವರು ‘ಸುದರ್ಶನ ವಿಜಯ’ ಯಕ್ಷಗಾನ ಪ್ರದರ್ಶಿಸಿದರು.



ಸಮಾರಂಭದಲ್ಲಿ (ಎಡದಿಂದ) ಗುತ್ತಿಗೆದಾರ ಜಯಪ್ರಕಾಶ್ ನಾಯಕ್, ಡಾ.ಕೆ.ಸಿ ಬಲ್ಲಾಳ್, ಚಲನಚಿತ್ರ ನಿರ್ಮಾಪಕ ಸುರೇಶ್ ಚಿತ್ರಾಪು, ಸುಂದರ್ ರಾಜ್ ರೈ ಮತ್ತು ಅಕಾಡೆಮಿ ಅಧ್ಯಕ್ಷ ಬೆಳುವಾಯಿ ನವೀನ ಹೆಗ್ಡೆ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು



ದಸರಾ ಮಹೋತ್ಸವ: ದೇವಿಗೆ ಪ್ರಾಣಪ್ರತಿಷ್ಠಾಪನೆ ಸರಸ್ವತಿ ಹೋಮ, ಮಂಗಳಾರತಿ, ಪ್ರಸಾದ ವಿನಿಯೋಗ, ಆಯೋಜನೆ: ರಜಪೂತ್ ಸಭಾ, ಸ್ಥಳ: ರಜಪೂತ ಭವನ, ವಸಂತನಗರ, ಬೆಳಿಗ್ಗೆ 9 ಹಾಗೂ ಸಂಜೆ 7

ನವರಾತ್ರಿ ಮಹೋತ್ಸವದ ಅಂಗವಾಗಿ ‘ಧಾತು’ ಗೊಂಬೆಗಳ ಪ್ರದರ್ಶನ: ಕೋಲ್ಕತ್ತಾ ನೃತ್ಯ ಪ್ರದರ್ಶನ, ಆಯೋಜನೆ: ಧಾತು ಕ್ರಿಯೇಟಿವ್, ಸ್ಥಳ: ಮಂಡಲ ಕಲ್ಚರಲ್ ಸೆಂಟರ್, ಕನಕಪುರ ರಸ್ತೆ, ಬೆಳಿಗ್ಗೆ 10.30

ನವರಾತ್ರಿ ಉತ್ಸವ: ದಸರಾ ಗೊಂಬೆಗಳ ಪ್ರದರ್ಶನ, ಆಯೋಜನೆ ಮತ್ತು ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11ರಿಂದ

ವಚನ ದಸರಾ: ವಚನ ಗಾಯನ: ಶಾಂತಸಾಗರ್ ಮತ್ತು ತಂಡ, ಅತಿಥಿಗಳು: ಡಿ. ಚೆನ್ನಮಲ್ಲಯ್ಯ, ಎಚ್.ಎಸ್. ಚನ್ನಬಸವಣ್ಣ, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಆಯೋಜನೆ: ವಚನಜ್ಯೋತಿ ಬಳಗ, ಸ್ಥಳ: ಬಸವ ಬೆಳಕು, ನಂ. 533, 7ನೇ ಮುಖ್ಯರಸ್ತೆ, ದೊಡ್ಡಬಸ್ತಿ ಮುಖ್ಯರಸ್ತೆ, ಕಲ್ಯಾಣ ಗೃಹನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5

ಯುವ ದಸರಾ: ‘ಮೈಸೂರು ಮಲ್ಲಿಗೆ’ ನಾಟಕ ಪ್ರದರ್ಶನ: ಕಲಾಗಂಗೋತ್ರಿ, ಆಯೋಜನೆ: ಯುವಕ ಸಂಘ, ಸ್ಥಳ: ಯುವಪಥ, ನಾಲ್ಕನೇ ಬ್ಲಾಕ್, ಜಯನಗರ, ಸಂಜೆ 5.45

ತ್ರಿಮೂರ್ತಿ ದೇವಸ್ಥಾನದಲ್ಲಿ ಬೆಣ್ಣೆ ಅಲಂಕಾರ: ಆಯೋಜನೆ ಹಾಗೂ ಸ್ಥಳ: ಶಿವಬಾಲಯೋಗಿ ಮಹಾರಾಜ್ ಟ್ರಸ್ಟ್, ಜೆ.ಪಿ. ನಗರ 3ನೇ ಹಂತ, ಸಂಜೆ 6

ದೇವಿಗೆ ಸರಸ್ವತಿ ಅಲಂಕಾರ: ಆಯೋಜನೆ ಮತ್ತು ಸ್ಥಳ: ಯಲ್ಲಮ್ಮ ದೇವಿ ದೇವಾಲಯ, ದೇಶದಪೇಟೆ ರಸ್ತೆ, ಯಲಹಂಕ, ಸಂಜೆ 6

ದೇವಿಗೆ ಸರಸ್ವತಿ ಅಲಂಕಾರ: ಭಜನೆ: ಮಧು ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ದುರ್ಗಾ ಮಹೇಶ್ವರಮ್ಮ ದೇವಾಲಯ, ಕೆ.ಆರ್. ಪುರ, ಸಂಜೆ 6

ನವರಾತ್ರಿ ಉತ್ಸವ: ‘ಶ್ರೀನಿವಾಸ ಕಲ್ಯಾಣದಲ್ಲಿ ವಾಯು ತತ್ವ’ ಉಪನ್ಯಾಸ: ಆನಂದತೀರ್ಥಾಚಾರ್ಯ ಮಹಿಷಿ, ಆಯೋಜನೆ ಹಾಗೂ ಸ್ಥಳ: ರಾಘವೇಂದ್ರ ಸ್ವಾಮಿ ಮಠ, ರಾಜರಾಜೇಶ್ವರಿ ನಗರ, ಸಂಜೆ 6

ದುರ್ಗಾ ಪರಮೇಶ್ವರಿ ದೇವಿಗೆ ಪಂಚವರ್ಣ ಅಲಂಕಾರ: ಆಯೋಜನೆ ಮತ್ತು ಸ್ಥಳ: ವರಸಿದ್ಧಿ ವಿನಾಯಕ ದೇವಾಲಯ, ಕೆನರಾ ಬ್ಯಾಂಕ್ ಕಾಲೊನಿ, ನಾಗರಬಾವಿ ರಸ್ತೆ, ಸಂಜೆ 6.30

ದೇವಿಯರಿಗೆ ವಿಶೇಷ ಅಲಂಕಾರ, ಆಯೋಜನೆ ಮತ್ತು ಸ್ಥಳ: ದೇವಿ ಸಲ್ಲಾಪುರದಮ್ಮ, ದೇವಿ ರೇಣುಕಾಯಲ್ಲಮ್ಮ ದೇವಸ್ಥಾನ, ಮಾರೇನಹಳ್ಳಿ ಗ್ರಾಮ, ಜೆ.ಪಿ. ನಗರ, ಸಂಜೆ 6.30

ದೇವಿಗೆ ಸರಸ್ವತಿ ಅಲಂಕಾರ: ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ಆಯೋಜನೆ ಮತ್ತು ಸ್ಥಳ: ಸರ್ಕಲ್ ಮಾರಮ್ಮ ದೇವಸ್ಥಾನ, ಮಲ್ಲೇಶ್ವರ, ಸಂಜೆ 6.30

ನವರಾತ್ರಿ ದಸರಾ ಉತ್ಸವ: ಭರತನಾಟ್ಯ ಪ್ರದರ್ಶನ: ದೀಕ್ಷಾ ಕುಮಾರ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಶಾಂತಲ ಆರ್ಟ್ಸ್ ಟ್ರಸ್ಟ್, ಯಶವಂತಪುರ, ಸಂಜೆ 6.30

ದೇವಿಗೆ ಸರಸ್ವತಿ ಅಲಂಕಾರ: ಆಯೋಜನೆ ಮತ್ತು ಸ್ಥಳ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಚಿಕ್ಕದೇವಸಂದ್ರ, ಕೆ.ಆರ್.ಪುರ, ಸಂಜೆ 7.30

ಇತರೆ ಕಾರ್ಯಕ್ರಮ

ವಾಕಥಾನ್: ಅತಿಥಿಗಳು: ಕೆ. ಗೋಪಾಲಯ್ಯ, ಜೆಸ್ಸಿ ಮರ್ಲಿನ್, ಡಾ. ಶ್ರೀಧರ್, ಯೋಗೇಶ್ ಪಿ., ಆಯೋಜನೆ ಮತ್ತು ಸ್ಥಳ: ಸೇಂಟ್ ಥೆರೇಸಾ ತಥಾಗತ್ ಹಾರ್ಟ್ ಸೆಂಟರ್, ರಾಜಾಜಿನಗರ, ಬೆಳಿಗ್ಗೆ 8

ರಾಜೀವ್ ಜೆ. ಮಿಸ್ತ್ರಿ ಅವರ ಏಕವ್ಯಕ್ತಿ ಕಲಾಕೃತಿಗಳ ಪ್ರದರ್ಶನ: ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11ರಿಂದ

ನಂದಬಸಪ್ಪ ವಾಡೆ ಅವರ ಏಕವ್ಯಕ್ತಿ ಕಲಾಕೃತಿಗಳ ಪ್ರದರ್ಶನದ ಉದ್ಘಾಟನೆ: ವೂಡೇ ಪಿ. ಕೃಷ್ಣ, ಇಂದುಮತಿ ಭಾಸ್ಕರ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5.30

ಕಪ್ಪಣ್ಣ ಅಂಗಳ ದಶಮಾನೋತ್ಸವ: ಕನ್ನಡ ಕವಿ ಗೀತೆಗಳ ಗಾಯನ: ಇಂಪು ತಂಡ, ಗಾಯನ: ಶೈಲಜಾ ವಿ., ಎಚ್.ಆರ್.ಕೆ. ಪ್ರಸಾದ್, ಪಿ. ಶಶಿಧರ್, ಆಯೋಜನೆ ಮತ್ತು ಸ್ಥಳ: ಕಪ್ಪಣ್ಣ ಅಂಗಳ, ಐದನೇ ಮುಖ್ಯರಸ್ತೆ, ಐಟಿಐ ಕಾಲೊನಿ, ಜೆ.ಪಿ. ನಗರ ಮೊದಲ ಹಂತ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.
nagaradalli_indu@prajavani.co.in

ಪ್ರಜಾವಾಣಿ ನವವರ್ಣ

ಕೇಸರಿ ಬಣ್ಣದ ದಿರಿಸನ್ನು ಧರಿಸಿ ತೆಗೆಸಿಕೊಂಡ ಭಾವಚಿತ್ರಗಳನ್ನು ಇಂದು, ಸೋಮವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...

7338018541


ಆಶಾ & ಲೀಲಾ, ಬೆಂಗಳೂರು


ಆದಿಚುಂಚನಗಿರಿ ಶಾಲಾ ಸಿಬ್ಬಂದಿ, ಅರಸೀಕೆರೆ


ಡೆಕ್ಕನ್ ಹ್ಯಾಬಿಟಾಟ್, ಯಶವಂತಪುರ


ಚಂದನಾ & ಗೆಳತಿಯರು, ಇಂದಿರಾನಗರ


BSNL ಸಿಬ್ಬಂದಿ, ವಿಜಯನಗರ


ಗಾಯತ್ರಿ & ಗೆಳತಿಯರು, ಕೊರಟಗೆರೆ


ಅಮೃತಾ ಕನ್‌ಸ್ಟ್ರಕ್ಷನ್ಸ್ ಸಿಬ್ಬಂದಿ, ಬೆಂಗಳೂರು


ಲಕ್ಷ್ಮಿ & ಲಾವಣ್ಯ, ಬಸವನಗುಡಿ


PVP ಪಾಲಿಟೆಕ್ನಿಕ್ ಸಿಬ್ಬಂದಿ, ಮಲ್ಲತ್ತಹಳ್ಳಿ


GR ರೀಜೆಂಟ್ ಪಾರ್ಕ್ ಅಪಾರ್ಟ್‌ಮೆಂಟ್, ಗೊಟ್ಟಿಗೆರೆ


ಜಮುನಾ & ಗೆಳತಿಯರು, ಚಂದ್ರಾ ಲೇಔಟ್


ರಾಜೇಶ್ವರಿ & ಗೆಳತಿಯರು, ಬೆಂಗಳೂರು


ಪೂಜಿತಾ, ಹಂಪಿನಗರ


ಅನಿತಾ & ಗೆಳತಿಯರು, ಹೊಸಕೋಟೆ


ನಳಿನಾ & ಗೆಳತಿಯರು, ಬೆಂಗಳೂರು


ಉಷಾ & ಗೆಳತಿಯರು, ಬೆಂಗಳೂರು


ಬಬಿತಾ & ತಂಡ, ಮಟ್ಟಿ

ಇಂದಿನ ಬಣ್ಣ - ಕೇಸರಿ


ವಿಶಾಲ ಶಾಲಾ ಸಿಬ್ಬಂದಿ, ನೆಲಮಂಗಲ


ರಶ್ಮಿ & ಗೆಳತಿಯರು, ಬೆಂಗಳೂರು


ವೀಣಾ & ಗೆಳತಿಯರು, ನಾಗರಭಾವಿ


ಕಿಡ್ಜೀ ಶಾಲೆ ಸಿಬ್ಬಂದಿ, ಟಿ-ದಾಸರಹಳ್ಳಿ


ವರಸಿದ್ಧಿ ವಿನಾಯಕ ಭಜನಾ ಮಂಡಳಿ, ಬೆಂಗಳೂರು



ಶ್ವೇತಾ & ಅನುಷ್ಕಾ, ದೊಡ್ಡಬಳ್ಳಾಪುರ


ಪದ್ಮಾ & ಗೆಳತಿಯರು, ಹೆಬ್ಬಾಳ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in



ಸುಭಾಷಿತ

ಬೇರೆ ಸಂಸ್ಕೃತಿಯನ್ನು ಪ್ರೀತಿಸು, ನಿನ್ನ ಸಂಸ್ಕೃತಿಯಲ್ಲಿ ಜೀವಿಸು.

–ಮಹಾತ್ಮ ಗಾಂಧೀಜಿ

ಸಂಪಾದಕೀಯ

ತಮಿಳುನಾಡಿನಲ್ಲಿ ಕಾಲ್ತುಳಿತ ದುರಂತ ತಪ್ಪುಗಳಿಂದ ಪಾಠ ಕಲಿಯದ ವ್ಯವಸ್ಥೆ

ತಮಿಳುನಾಡಿನ ಕರೂರು ಜಿಲ್ಲೆಯಲ್ಲಿ ಸೆ. 27ರಂದು ನಡೆದ ರಾಜಕೀಯ ರ‍್ಯಾಲಿಯಲ್ಲಿ ಕನಿಷ್ಠ 40 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಇವರಲ್ಲಿ ಮಹಿಳೆಯರು ಮತ್ತು ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ರಾಜಕೀಯ ರ‍್ಯಾಲಿಯೊಂದರಲ್ಲಿ ಏನೆಲ್ಲ ತಪ್ಪುಗಳು ಆಗಬಹುದೋ ಅವೆಲ್ಲವೂ ಅಲ್ಲಿ ನಡೆದವು. ರ‍್ಯಾಲಿಯನ್ನು ಸೂಕ್ತವಲ್ಲದ ಸಮಯದಲ್ಲಿ ಆಯೋಜಿಸಿದ್ದುದು, ಜನರು ಭಾರಿ ಸಂಖ್ಯೆಯಲ್ಲಿ ಜಮಾಯಿಸಿದ್ದುದು, ಜನಸಮೂಹವನ್ನು ನಿಯಂತ್ರಿಸುವುದಕ್ಕೆ ಸಂಬಂಧಿಸಿದ ನಿಯಮಗಳ ಉಲ್ಲಂಘನೆ, ಎಚ್ಚರಿಕೆಯ ಸಂದೇಶಗಳ ಉಪೇಕ್ಷೆ, ಜನರನ್ನು ನಿರ್ವಹಿಸುವಲ್ಲಿನ ವೈಫಲ್ಯ, ಪರಿಸ್ಥಿತಿಯನ್ನು ನಿಭಾಯಿಸಲು ಸ್ವಲ್ಪವೂ ಸಜ್ಜಾಗಿರದೆ ಇದ್ದುದು... ಇವೆಲ್ಲ ಅಲ್ಲಿ ಕಂಡುಬಂದವು. ಮೃತರ ಸಂಖ್ಯೆಯು ಇನ್ನೂ ಹೆಚ್ಚಾಗುವ ಭೀತಿ ಇದೆ. ತಮಿಳಿನ ಜನಪ್ರಿಯ ನಟ ವಿಜಯ್ ಅವರು ತಮ್ಮ ರಾಜಕೀಯ ಪಕ್ಷ ‘ಟಿವಿಕೆ’ (ತಮಿಳಗ ವೆಟ್ರಿ ಕಳಗಂ) ಪರವಾಗಿ ಪ್ರಚಾರ ನಡೆಸಲು ಈ ರ‍್ಯಾಲಿ ಆಯೋಜಿಸಿದ್ದರು. ಅವರ ರ‍್ಯಾಲಿಗಳಿಗೆ ಜನರು ದೊಡ್ಡ ಸಂಖ್ಯೆಯಲ್ಲಿ ಸೇರುತ್ತಿದ್ದಾರೆ. ರಾಜಕೀಯ ಸಮಾವೇಶಗಳು, ಧಾರ್ಮಿಕ ಸಮಾರಂಭಗಳು, ಮನರಂಜನಾ ಕಾರ್ಯಕ್ರಮಗಳಿಗೆ ಜನರು ದೊಡ್ಡ ಸಂಖ್ಯೆಯಲ್ಲಿ ಸೇರಿದಾಗ, ಆಯೋಜಕರ ಮೈಮರೆವು ಹಾಗೂ ಕಾನೂನು ಮತ್ತು ಸುವ್ಯವಸ್ಥೆಯಲ್ಲಿನ ಲೋಪದಿಂದಾಗಿ ಕಾಲ್ತುಳಿತದಂತಹ ದುರ್ಘಟನೆಗಳು ಆಗುತ್ತವೆ ಎಂಬುದಕ್ಕೆ ಹಲವು ನಿದರ್ಶನಗಳಿವೆ. ಇಂತಹ ನಿದರ್ಶನಗಳಿಗೆ ಈಗ ಕರೂರು ಜಿಲ್ಲೆಯಲ್ಲಿ ನಡೆದ ದುರಂತವು ಮತ್ತೊಂದು ಸೇರ್ಪಡೆ.



ತಮಿಳುನಾಡಿನಲ್ಲಿ ಸಂಭವಿಸಿರುವ ಕಾಲ್ತುಳಿತದ ಘೋರ ದುರ್ಘಟನೆ, ಹಳೆಯ ತಪ್ಪುಗಳಿಂದ ಸಮಾಜ ಹಾಗೂ ವ್ಯವಸ್ಥೆ ಪಾಠ ಕಲಿಯದೆ ಇರುವುದರ ಪ್ರತಿಫಲ.

ಟಿವಿಕೆ ಪಕ್ಷದ ರ‍್ಯಾಲಿಯನ್ನು ಆಯೋಜಿಸಿದ್ದ ಸ್ಥಳವು ದೊಡ್ಡ ಪ್ರಮಾಣದಲ್ಲಿ ಜನರನ್ನು ಸೇರಿಸಲು ಸೂಕ್ತವಾಗಿರಲಿಲ್ಲ, ಅಲ್ಲಿ ಸ್ಥಳಾವಕಾಶ ಕಡಿಮೆ ಇತ್ತು. 10 ಸಾವಿರ ಜನ ಸೇರಲು ಅನುಮತಿ ಇದ್ದ ಸ್ಥಳದಲ್ಲಿ 25 ಸಾವಿರಕ್ಕೂ ಹೆಚ್ಚು ಜನ ಸೇರಿದ್ದರು. ನಟ ವಿಜಯ್ ಅವರು ಅಲ್ಲಿಗೆ ತಡವಾಗಿ ಬಂದರು. ಅದು ಕಾಲ್ತುಳಿತ ಸಂಭವಿಸುವುದಕ್ಕೆ ಮುಖ್ಯ ಕಾರಣ. ಏಕೆಂದರೆ, ಅಲ್ಲಿ ಜನರ ಜಮಾವಣೆ ಆಗುತ್ತಲೇ ಇತ್ತು; ನಟನ ಬರುವಿಕೆಗಾಗಿ ಕಾಯುತ್ತಿದ್ದ ಹಲವರು ಸುಸ್ತಾಗಿ ಮೂರ್ಛೆಹೋದರು. ಸೂರ್ಯನ ಝಳ ತೀವ್ರವಾಗಿದ್ದಾಗ ಮಹಿಳೆಯರು ಮತ್ತು ಮಕ್ಕಳು ನೀರು, ಆಹಾರ ಇಲ್ಲದೆ ಬಹಳ ಹೊತ್ತು ಕಾಯುವಂತೆ ಮಾಡುವುದು ಒಂದು ಕ್ರೌರ್ಯ. ನಟನ ವಾಹನ ಸಾಗಲು ಅವಕಾಶ ಮಾಡಿಕೊಡುವ ಉದ್ದೇಶದಿಂದ, ಜನಸಮೂಹವು ದಾರಿಬಿಡುವಂತೆ ಒತ್ತಡ ತಂದಾಗ ಕಾಲ್ತುಳಿತ ಆರಂಭವಾಯಿತು ಎಂದು ವರದಿಗಳು ಹೇಳುತ್ತಿವೆ. ಕಾರ್ಯಕ್ರಮದ ಸ್ಥಳದಲ್ಲಿ ಅಗತ್ಯ ಸಂಖ್ಯೆಯಲ್ಲಿ ಪೊಲೀಸ್ ಸಿಬ್ಬಂದಿ ಹಾಗೂ ಭದ್ರತಾ ಸಿಬ್ಬಂದಿ ಇರಲಿಲ್ಲ. ನಿರೀಕ್ಷೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬಂದಿದ್ದು ಅದಕ್ಕೆ ಕಾರಣ ಎಂದು ಹೇಳಲಾಗಿದೆ. ರಸ್ತೆಗಳು ಕಿರಿದಾಗಿದ್ದ ಪರಿಣಾಮವಾಗಿ ದುರಂತದ ಸ್ಥಳ ತಲುಪಲು ಆ್ಯಂಬುಲೆನ್ಸ್‌ಗಳಿಗೆ ಕಷ್ಟವಾಯಿತು. ಗಾಯಾಳುಗಳಿಗೆ ಚಿಕಿತ್ಸೆ ನೀಡಲು ಬೇಕಿರುವ ಎಲ್ಲ ಸೌಲಭ್ಯಗಳು ಸ್ಥಳೀಯ ಆಸ್ಪತ್ರೆಯಲ್ಲಿ ಇರಲಿಲ್ಲ. ದುರ್ಘಟನೆಗೆ ಕಾರಣವಾದ ಇತರ ಹಲವು ಅಂಶಗಳ ಬಗ್ಗೆ ತನಿಖೆ ನಡೆಸಿದ ನಂತರವೇ ಸಮಗ್ರ ಚಿತ್ರಣವೊಂದು ಸಿಗಬಹುದು. ಘಟನೆಯ ಬಗ್ಗೆ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಈ ನಡುವೆ ತಮಿಳುನಾಡು ಸರ್ಕಾರವು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯೊಬ್ಬರ ನೇತೃತ್ವದಲ್ಲಿ ನ್ಯಾಯಾಂಗ ತನಿಖೆ ಆರಂಭಿಸಿದೆ.

ಕಾಲ್ತುಳಿತದ ಪ್ರಾಥಮಿಕ ಜವಾಬ್ದಾರಿಯನ್ನು ಸಾಮಾನ್ಯವಾಗಿ ರ‍್ಯಾಲಿಯ ಆಯೋಜಕರು ಹೊರಬೇಕಾಗುತ್ತದೆ. ನಟ ವಿಜಯ್ ಹಾಗೂ ಅವರ ಪಕ್ಷದ ಪದಾಧಿಕಾರಿಗಳು ಹೊಣೆಯಿಂದ ತಪ್ಪಿಸಿಕೊಳ್ಳಲು ಆಗದು. ವಿಜಯ್ ಅವರ ಪಕ್ಷವು ಈಚೆಗೆ ಆಯೋಜಿಸಿದ್ದ ಕೆಲವು ರ‍್ಯಾಲಿಗಳಲ್ಲಿ ಲೋಪಗಳು ಹಲವಾರು ಇದ್ದವು. ಅವುಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದ ಸಮಸ್ಯೆಗಳೂ ಇದ್ದವು ಎಂಬ ದೂರುಗಳು ಇದ್ದವು. ಹೆಚ್ಚಿನ ಪ್ರಮಾಣದಲ್ಲಿ ಎಚ್ಚರಿಕೆ ವಹಿಸುವಂತೆ ನ್ಯಾಯಾಲಯವು ಪಕ್ಷಕ್ಕೆ ಹಾಗೂ ಪೊಲೀಸರಿಗೆ ಸೂಚಿಸಿತ್ತು. ದುರದೃಷ್ಟಕರ ಸಂಗತಿಯೆಂದರೆ, ಈ ದುರಂತವನ್ನು ಈಗ ರಾಜಕೀಯಕ್ಕೆ ಬಳಸಿಕೊಳ್ಳಲಾಗುತ್ತಿದೆ. ಪಕ್ಷಗಳ ನಡುವೆ ಆರೋಪ–ಪ್ರತ್ಯಾರೋಪ ಶುರುವಾಗಿದೆ. ವಿಧ್ವಂಸಕ ಕೃತ್ಯವೂ ಈ ದುರಂತಕ್ಕೆ ಕಾರಣ ಆಗಿರಬಹುದು ಎಂದು ಕೆಲವರು ಊಹೆ ಮಾಡಿದ್ದಾರೆ. ಕಾಲ್ತುಳಿತದಂತಹ ದುರ್ಘಟನೆ ನಡೆಯುವುದಕ್ಕೆ ಹಲವು ಸರಣಿ ಕಾರಣಗಳು ಇರುತ್ತವೆ. ಕರೂರು ಜಿಲ್ಲೆಯಲ್ಲಿ ನಡೆದ ಕಾಲ್ತುಳಿತಕ್ಕೆ ಕಾರಣ ಏನು ಎಂಬುದು ತನಿಖೆಗಳಿಂದ ಸ್ಪಷ್ಟವಾಗುತ್ತದೆ; ಅದಕ್ಕೆ ಹೊಣೆ ಯಾರು ಎಂಬುದು ಗೊತ್ತಾಗುತ್ತದೆ ಎಂಬ ಆಶಾವಾದವನ್ನು ಈಗ ಹೊಂದಬಹುದು. ದೇಶದಲ್ಲಿ ಕಾಲ್ತುಳಿತದ ಪ್ರಕರಣಗಳು ಮತ್ತೆ ಮತ್ತೆ ನಡೆಯುತ್ತಲೇ ಇವೆ. ಅದರೆ ಇಂತಹ ದುರ್ಘಟನೆಗಳಿಂದ ಸರಿಯಾದ ಪಾಠವನ್ನು ವ್ಯವಸ್ಥೆ ಕಲಿಯುತ್ತಿಲ್ಲ.

ಜಾಲತಾಣ

ಸಹಬಾಳುವೆಯ ಅನುಭೂತಿ



ತಾಳಿಕೆಯ ಗುಣವೇ ಪ್ರಜಾಪ್ರಭುತ್ವದ ಮೂಲ ಮಂತ್ರ. ಪ್ರಜಾಪ್ರಭುತ್ವವಾದಿಗಳು ಆಗೋಣ ಮತ್ತು ಸೌಹಾರ್ದತೆಯಿಂದ ಬದುಕೋಣ ಎನ್ನುವುದೇ ನಮ್ಮ ನಂಬಿಕೆಯ ಜಗತ್ತಾಗಿ ರೂಪುಗೊಳ್ಳಬೇಕು. ಇಂತಹದೊಂದು ನಂಬಿಕೆಯ ಜಗತ್ತನ್ನು ರೂಪಿಸುವ ಹೊಣೆಗಾರಿಕೆ ನಮಗೆಲ್ಲರಿಗೂ ಸೇರಿದ್ದು.

ಮೇಟಿ ಮಲ್ಲಿಕಾರ್ಜುನ, ಲೇಖಕ, ‘ಫೇಸ್‌ಬುಕ್’ನಿಂದ

ಕಿಡಿನುಡಿ



ಕರ್ನಾಟಕದಲ್ಲಿ ಸಿಎಂ-ಡಿಸಿಎಂ-ಮಂತ್ರಿಗಳೆಲ್ಲಾ ಭ್ರಷ್ಟಾಚಾರ ಮಾಡಿ, ಕಮಿಷನ್ ಪಡೆಯುತ್ತಾರೆ. ದೆಹಲಿಯ ಕಲೆಕ್ಷನ್ ಏಜೆಂಟ್ ಬಂದು, ಆ ಹಣವನ್ನು ಸಂಗ್ರಹ ಮಾಡಿಕೊಂಡು, ಬೇರೆ ರಾಜ್ಯಗಳ ಚುನಾವಣೆಗೆ ಬಳಸುತ್ತಾರೆ. ಕನ್ನಡಿಗರ ಶ್ರಮದ ತೆರಿಗೆ ದುಡ್ಡು ಕಾಂಗ್ರೆಸ್ ಹೈಕಮಾಂಡ್‌ನ ಪಾರ್ಟಿ ಫಂಡ್ ಆಗಿದೆ.

ಆರ್. ಅಶೋಕ, ವಿಧಾನಸಭಾ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶುಕ್ರವಾರ, 29-9-2000

• ವೀರಪ್ಪನ್ ಹಿಡಿತದಿಂದ ತಪ್ಪಿಸಿಕೊಂಡು ಬಂದ ನಾಗಪ್ಪ

ಬೆಂಗಳೂರು, ಸೆ. 28– ಕಳೆದ 60 ದಿನಗಳಿಂದ ವರನಟ ಡಾ. ರಾಜ್ ಜತೆ ದಂತಚೋರ ವೀರಪ್ಪನ್‌ನ ಒತ್ತೆಯಾಳಾಗಿದ್ದ ನಾಗಪ್ಪ ಮರಡಗಿ ಅವರು, ಇಂದು ಬೆಳಗಿನ ಜಾವ ವೀರಪ್ಪನ್ ಸಹಚರರ ಕಪಿಮುಷ್ಟಿಯಿಂದ ತಪ್ಪಿಸಿಕೊಂಡು ಗಾಜನೂರಿಗೆ ಬಂದು ತಲುಪಿದ್ದಾರೆ.

ಬೆಳಗಿನ ಜಾವ ಎರಡು ಗಂಟೆ ವೇಳೆಯಲ್ಲಿ ತಮ್ಮ ಬೆಂಗಾವಲಿಗಿದ್ದ ವೀರಪ್ಪನ್ ಸಹಚರರ ಕಣ್ಣು ತಪ್ಪಿಸಿ ನಾಗಪ್ಪ ಅಲ್ಲಿಂದ ಪರಾರಿಯಾಗಿದ್ದು, ತಮಿಳುನಾಡಿನ ಕಲ್ಮಲಾ ಕಾಡಿನ ಮೂಲಕ ಗಾಜನೂರಿನ ತೋಟದ ಮನೆಗೆ ಬಂದು ಸೇರಿರುವುದಾಗಿ ರಾಜ್ಯದ ಪೊಲೀಸ್ ಮಹಾನಿರ್ದೇಶಕ ಸಿ. ದಿನಕರ್ ಇಂದು ರಾತ್ರಿ, ‘ಪ್ರಜಾವಾಣಿ’ಗೆ ತಿಳಿಸಿದರು.

• ಬಲ್ಲೊಳ್ಳಿ ಬಳಿ ಲಾರಿ-ಜೀಪ್ ಡಿಕ್ಕಿ: ಐವರ ಸಾವು

ವಿಜಾಪುರ, ಸೆ. 28– ಇಂದು ಮುಂಜಾನೆ ಬಲ್ಲೊಳ್ಳಿ ಸಮೀಪದ ರಾಷ್ಟ್ರೀಯ ಹೆದ್ದಾರಿ 13ರಲ್ಲಿ ಲಾರಿ ಮತ್ತು ಜೀಪ್ ನಡುವೆ ಸಂಭವಿಸಿದ ಡಿಕ್ಕಿಯಲ್ಲಿ ಐವರು ಸ್ಥಳದಲ್ಲೇ ಮೃತಪಟ್ಟಿದ್ದು, ಮೂವರು ಗಾಯಗೊಂಡಿದ್ದಾರೆ.

ಶಿರಡೋಣದ ಶ್ರೀಶೈಲ ಅಣ್ಣಪ್ಪ ಪೂಜಾರಿ (35), ಧರ್ಮಪ್ಪ ಮಲ್ಲಪ್ಪ ಮಲ್ಲಾಡಿ (45), ಹನುಮಂತ ನಿಂಗಪ್ಪ ಹಲಗೊಂಡಿ (40), ಸಿದ್ಧಪ್ಪ ಕೊಳಂಕರ್ (30) ಮತ್ತು ಬಾಗಣ್ಣ ಕಲ್ಲಪ್ಪ ಬೈರವಾಡಗಿ (23) ಮೃತಪಟ್ಟಿದ್ದಾರೆ.

75 ವರ್ಷಗಳ ಹಿಂದೆ


ಶುಕ್ರವಾರ, 29-9-1950

• ಆಹಾರ ಅಭಾವ ಸಾಧ್ಯತೆ: ಸಿ.ಎಂ

ಬೆಂಗಳೂರು, ಸೆ. 28– ‘ಕೇಂದ್ರ ಸರ್ಕಾರದಿಂದ ಹೆಚ್ಚುವರಿ ಆಹಾರ ಧಾನ್ಯ ಪೂರೈಕೆಯಾಗದಿದ್ದರೆ ಈ ವರ್ಷದ ಅಂತ್ಯದಲ್ಲಿ ಮೈಸೂರು ರಾಜ್ಯದಲ್ಲಿ ಆಹಾರದ ಕೊರತೆ ತಲೆದೋರುವ ಸಾಧ್ಯತೆಯಿದೆ’ ಎಂದು ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರು ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ವಿವಿಧ ಪ್ರದೇಶಗಳಲ್ಲಿ ತಲೆದೋರಿದ್ದ ಆಹಾರ ಅಭಾವದ ಬಗ್ಗೆ ಮಾಹಿತಿ ನೀಡಿದರು. ‘ಸದ್ಯ ಆ ಪ್ರದೇಶಗಳಲ್ಲಿ ಆಹಾರದ ಪರಿಸ್ಥಿತಿ ಸುಧಾರಿಸುತ್ತಿದೆ’ ಎಂದು ಹೇಳಿದರು.

ಜಾತಿ ಎಂಬುದೇ ಜ್ಯೋತಿರ್ಲಿಂಗ!



ಅನುಸಂಧಾನ

ರವೀಂದ್ರ ಭಟ್ಟ

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಜಾತಿ ರಾಜಕಾರಣದ ಬಣ್ಣಗಳನ್ನು ಬಯಲಾಗಿಸುತ್ತಿದೆ. ದುರ್ಬಲ ಸಮುದಾಯಗಳಿಗೆ ಅನುಕೂಲ ಕಲ್ಪಿಸಿಕೊಡುವ ಉದ್ದೇಶದಿಂದ ಈವರೆಗೆ ನಡೆದಿರುವ ಎಲ್ಲ ಸಮೀಕ್ಷೆಗಳೂ ರಾಜಕೀಯಕ್ಕೆ ಬಲಿಯಾಗಿವೆ! ಪ್ರಸಕ್ತ ಸಮೀಕ್ಷೆ ಜಾತಿಗಳಲ್ಲಿ ಹಾಗೂ ರಾಜಕಾರಣಿಗಳಲ್ಲಿ ಸಂಚಲನ ಹುಟ್ಟಿಸಿರುವುದು ನೋಡಿದರೆ, ಇದು ಎಲ್ಲಿಗೆ ಹೋಗಿ ಮುಟ್ಟುತ್ತದೋ?

ಮಾತೆಂಬುದು ಜ್ಯೋತಿರ್ಲಿಂಗ ಎಂದರು ಅಲ್ಲಮಪ್ರಭು. ಅಷ್ಟಕ್ಕೇ ಅವರು ನಿಲ್ಲಿಸಲಿಲ್ಲ. ‘ತಾಳೋಷ್ಠ ಸಂಪುಟವೆಂಬುದು ನಾದಬಿಂದು ಕಳಾತೀತ’ ಎಂದರು. ಅಂದರೆ ಉಸಿರಾಟವನ್ನು ನಿಯಂತ್ರಿಸುವ ಒಂದು ಮುದ್ರೆ ನಾದ ಎಂದರ್ಥ. ನಮ್ಮ ರಾಜಕಾರಣಿಗಳಿಗೆ ಮಾತು ಮುತ್ತು ನಿಜ. ಆದರೆ, ಅವರ ಉಸಿರಾಟವನ್ನು ನಿಯಂತ್ರಿಸುವ ಮುದ್ರೆ ಜಾತಿ. ಶರಣರಿಗೆ ಮಾತು ಜ್ಯೋತಿರ್ಲಿಂಗವಾದರೆ ರಾಜಕಾರಣಿಗಳಿಗೆ ಜಾತಿಯೇ ಜ್ಯೋತಿರ್ಲಿಂಗ. ‘ತೇನ ವಿನಾ ತೃಣಮಪಿ ನ ಚಲತಿ’ ಎಂಬ ಮಾತೊಂದಿದೆ. ರಾಜಕಾರಣದಲ್ಲಿಯೂ ಹಾಗೆ. ಜಾತಿ ಇಲ್ಲದೆ ಇಲ್ಲಿ ತೃಣವೂ ಚಲಿಸುವುದಿಲ್ಲ. ಚುನಾವಣೆಯಲ್ಲಿ ಟಿಕೆಟ್ ನೀಡುವಾಗ ಜಾತಿ, ಸಚಿವರನ್ನು ನೇಮಿಸುವಾಗ ಜಾತಿ, ನಿಗಮ–ಮಂಡಳಿಗಳಿಗೆ ಆಯ್ಕೆ ಮಾಡುವಾಗ ಜಾತಿ, ಉದ್ಯೋಗದಲ್ಲಿ ಜಾತಿ, ಎಲ್ಲವೂ ಜಾತಿಮಯ. ರಾಜ್ಯದಲ್ಲಿ ಜಾತಿವಾರು ಸಮೀಕ್ಷೆ ಪ್ರಕಟಣೆ ಹೊರಬಿದ್ದ ತಕ್ಷಣದಿಂದಲೇ ಜಾತಿ ಜಾತಿಗಳ ಬಣ್ಣ ಬಯಲಾಗುತ್ತಿದೆ. ಕೆಲವರಿಗೆ ತಮ್ಮ ಜಾತಿಯ ಪ್ರತಿಷ್ಠೆ ಉಳಿಸಿಕೊಳ್ಳುವ ತವಕ. ಇನ್ನು ಕೆಲವರಿಗೆ ಕಳೆದುಕೊಳ್ಳುವ ಆತಂಕ. ಒಟ್ಟಾರೆ ಎಲ್ಲರಿಗೂ ಐಡೆಂಟಿಟಿ ಪ್ರಶ್ನೆ.

ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಜಾತಿವಾರು ಸಮೀಕ್ಷೆ ಅನಿವಾರ್ಯ. ತೀರಾ ಹಿಂದುಳಿದ ಜಾತಿಗಳನ್ನು ಗುರುತಿಸಿ ಅವರನ್ನು ಮೇಲಕ್ಕೆತ್ತಲು ಇದು ಸಹಕಾರಿ. ಅದರಲ್ಲಿ ಅನುಮಾನವೇ ಇಲ್ಲ. ಆದರೆ, ಕರ್ನಾಟಕದಲ್ಲಿ ಇಂತಹ ಪ್ರಯತ್ನ ನಡೆದಾಗಲೆಲ್ಲಾ ಅಡ್ಡಿ ಆತಂಕಗಳೇ ಎದುರಾಗಿವೆ. ಮಿಲ್ಲರ್ ವರದಿಯಿಂದ ಇತ್ತೀಚಿನ ಕಾಂತರಾಜ ವರದಿಯವರೆಗೂ ಯಾವುದೂ ಸುಗಮವಾಗಿ ನಡೆದಿಲ್ಲ. ಮಿಲ್ಲರ್ ವರದಿ ಬಂದಾಗ ಆಗಿನ ಮೈಸೂರು ಸಂಸ್ಥಾನದ ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನೇ ನೀಡಿದರು. ಕರ್ನಾಟಕದ ಎರಡನೇ ಹಿಂದುಳಿದ ವರ್ಗಗಳ ಆಯೋಗ ಎಂದು ಕರೆಯಲಾಗುವ ವೆಂಕಟಸ್ವಾಮಿ ಆಯೋಗದ ವರದಿಗೂ ಸಿಕ್ಕಿದ್ದು ತಿರಸ್ಕಾರದ ಭಾಗ್ಯ. ವಿಶ್ವೇಶ್ವರಯ್ಯ ರಾಜೀನಾಮೆ ನೀಡಿದ್ದರೂ, ಮೇಲ್ವರ್ಗದ ಜನರ ಪ್ರತಿಭಟನೆ ಇದ್ದರೂ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮಿಲ್ಲರ್ ಆಯೋಗದ ವರದಿಗೆ ಆದ್ಯತೆ ನೀಡಿದ್ದರು. ಆದರೆ 1983ರಲ್ಲಿ ಆಗಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರು ರಚಿಸಿದ್ದ ಟಿ. ವೆಂಕಟಸ್ವಾಮಿ ಆಯೋಗ 1986ರಲ್ಲಿ ತನ್ನ ವರದಿಯನ್ನು ನೀಡಿತು. ಕೆಲವು ಸಮುದಾಯಗಳನ್ನು ಹೊರಗಿಟ್ಟ ಕಾರಣದಿಂದ ರಾಜಕೀಯ ಒತ್ತಡ ಹೆಚ್ಚಾಗಿ ಹೆಗಡೆ ಸರ್ಕಾರ ವರದಿಯನ್ನು ತಿರಸ್ಕರಿಸಿತು.

ಇದಕ್ಕೂ ಮೊದಲು 1960ರಲ್ಲಿ ಡಾ. ನಾಗನಗೌಡ ಅಧ್ಯಕ್ಷತೆಯಲ್ಲಿ ಹಿಂದುಳಿದ ವರ್ಗಗಳ ಮೀಸಲಾತಿ ನಿರ್ಣಯಕ್ಕೆ ಸಮಿತಿಯೊಂದನ್ನು ರಚಿಸಲಾಗಿತ್ತು. ಒಟ್ಟು 399 ಜಾತಿಗಳು ಮೀಸಲಾತಿಗೆ ಅರ್ಹವೆಂದು ಈ ಸಮಿತಿ ಅಭಿಪ್ರಾಯಪಟ್ಟಿತ್ತು. ಶಿಕ್ಷಣದಲ್ಲಿ ಶೇ 50ರಷ್ಟು ಮತ್ತು ಸರ್ಕಾರಿ ಉದ್ಯೋಗದಲ್ಲಿ ಶೇ 45ರಷ್ಟು ಈ ಜಾತಿಗಳಿಗೆ ಮೀಸಲಾತಿ ನೀಡಬೇಕು ಎಂದು ಶಿಫಾರಸು ಮಾಡಿತ್ತು. ಈ ಶಿಫಾರಸು ಆಧರಿಸಿ ಸರ್ಕಾರ ಹಿಂದುಳಿದ ವರ್ಗಗಳು ಮತ್ತು ಅತಿ ಹಿಂದುಳಿದ ವರ್ಗಗಳು ಎಂದು ಎರಡು ಭಾಗ ಮಾಡಿ ಮೀಸಲಾತಿ ಕಲ್ಪಿಸಿತು. ಹಿಂದುಳಿದ ವರ್ಗಗಳಿಗೆ ಶೇ 28 ಮತ್ತು ಅತಿ ಹಿಂದುಳಿದ ವರ್ಗಗಳಿಗೆ ಶೇ 22ರಷ್ಟು ಮೀಸಲಾತಿ ಕಲ್ಪಿಸಲಾಗಿತ್ತು. ಆದರೆ, ಅದನ್ನು ಸುಪ್ರೀಂ ಕೋರ್ಟ್ ಅನೂರ್ಜಿತಗೊಳಿಸಿತು.

1970ರ ದಶಕದಲ್ಲಿ ಕರ್ನಾಟಕದ ರಾಜಕೀಯ ಇನ್ನೊಂದು ಮಗ್ಗುಲು ಪಡೆಯಿತು. ದೇವರಾಜ ಅರಸು ಅವರು ಮುಖ್ಯಮಂತ್ರಿಯಾದ ನಂತರ ಬಡವರನ್ನು ಮೇಲೆತ್ತುವುದೇ ಸರ್ಕಾರದ ಮುಖ್ಯ ಕರ್ತವ್ಯ ಎಂಬುದನ್ನು ಅನುಷ್ಠಾನಕ್ಕೆ ತಂದರು. ಯಾವ ಅಂಕಿ ಸಂಖ್ಯೆಯ ಹಂಗಿಲ್ಲದೆ ಅವರು ಹಿಂದುಳಿದ ವರ್ಗಗಳ ಏಳಿಗೆಗೆ ಮುಂದಾದರು. ಹಿಂದುಳಿದ ಜಾತಿಯ ಯುವಕರನ್ನು ಹುಡುಕಿ ಹುಡುಕಿ ಅಧಿಕಾರ ಕೊಡಿಸಿದರು. 1972ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಟಿಕೆಟ್ ಹಂಚಿಕೆ ಮಾಡುವಾಗ ದೇವರಾಜ ಅರಸರು, ‘ನಾವು ಬಹುಸಂಖ್ಯಾತ ಜಾತಿಗಳ ವಿರುದ್ಧ ಅಲ್ಲ. ಆದರೆ ರಾಜ್ಯದಲ್ಲಿ ದೊಡ್ಡ ವರ್ಗ ಎಂದರೆ ತುಳಿತಕ್ಕೆ ಒಳಗಾದ ವರ್ಗ. ಅಧಿಕಾರದ ಹತ್ತಿರಕ್ಕೂ ಬರದ ವರ್ಗ. ಅವರಿಗೆ ಅಧಿಕಾರ ಕೊಡುವುದು ಎಂದರೆ ಪ್ರಜಾಪ್ರಭುತ್ವಕ್ಕೆ ಬೆಲೆ ನೀಡಿದಂತೆ’ ಎಂದು ಹೇಳಿ, ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಮೊದಲ ಬಾರಿಗೆ ಸಾಮಾಜಿಕ ನ್ಯಾಯ ಎಂಬ ಪರಿಕಲ್ಪನೆಯನ್ನು ಜಾರಿಗೆ ತಂದರು. ಅದಕ್ಕಾಗಿಯೇ ಆ ಬಾರಿ ಕಾಂಗ್ರೆಸ್ ಪಕ್ಷದಿಂದ ಗೆದ್ದ 165 ಶಾಸಕರಲ್ಲಿ 93 ಮಂದಿ ಹಿಂದುಳಿದ ವರ್ಗದವರೇ ಆಗಿದ್ದರು. ಅಂದರೆ ಸಮೀಕ್ಷೆ, ಅಂಕಿ ಸಂಖ್ಯೆಗಿಂತ ಮುಖ್ಯವಾಗಿ ಬೇಕಾಗಿದ್ದು ಹೃದಯ ವೈಶಾಲ್ಯತೆ. ಕೆಳಕ್ಕೆ ಬಿದ್ದವರನ್ನು ಮೇಲಕ್ಕೆ ಎತ್ತಬೇಕು ಎಂಬ ಮಾತೃ ಹೃದಯ. ಅದು ದೇವರಾಜ ಅರಸರಿಗೆ ಇತ್ತು. ಮತ್ತು ಅಂತಹ ಇನ್ನೊಂದು ಉದಾಹರಣೆ ಕರ್ನಾಟಕದ ರಾಜಕೀಯದಲ್ಲಿ ವಿರಳ.

ಮುಖ್ಯಮಂತ್ರಿ ದೇವರಾಜ ಅರಸು ಅವರು ಒಮ್ಮೆ ವಿಧಾನಸಭೆಯಲ್ಲಿ ಮಾತನಾಡುತ್ತಾ, ತಮ್ಮ ಮುಂದೆ ಇದ್ದ ಒಂದು ಲೋಟ ನೀರನ್ನು ಕೈಯಲ್ಲಿ ಹಿಡಿದು ‘ಇದು ಸರ್ಕಾರದ ಕಾರ್ಯಕ್ರಮ. ದಾಹ ಇರುವವನಿಗೆ ಕೊಟ್ಟು ಬಾ ಎಂದರೆ ನೀವು ನಮ್ಮ ಪಕ್ಷದವರಿಗೆ, ನಮ್ಮ ಜಾತಿಯವರಿಗೆ ಎಂದು ಹುಡುಕಿ ಕೊಡಬಾರದು. ಅದು ರಾಜಧರ್ಮಕ್ಕೆ ವಿರೋಧ. ಜನತಂತ್ರಕ್ಕೆ ಅಪಚಾರ. ಕುಡಿಯುವ ನೀರಿಗೆ, ಉರಿಯುವ ದೀಪಕ್ಕೆ, ತಿರುಗುವ ರಸ್ತೆಗೆ, ಓದುವ ಶಾಲೆಗೆ, ರೋಗಿಯ ಚಿಕಿತ್ಸೆಗೆ ಜಾತಿ, ಧರ್ಮ, ಜನಾಂಗ, ಭಾಷೆಗಳ ವಿಚಾರದಲ್ಲಿ ರಾಜಕಾರಣ ಬೆರೆಸುವುದು ಜನದ್ರೋಹ. ಎಲ್ಲ ವಿಷಯಗಳಲ್ಲಿಯೂ ರಾಜಕಾರಣ ಮಾಡುವುದು ಅಪಾಯಕಾರಿ’ ಎಂದು ಹೇಳಿದ್ದರು. ಅಲ್ಲದೆ ಹಾಗೆಯೇ ನಡೆದುಕೊಂಡಿದ್ದರು. ಈಗ ಮುಖ್ಯಮಂತ್ರಿ ಆದಿಯಾಗಿ ಎಲ್ಲ ರಾಜಕಾರಣಿಗಳೂ ಜಾತಿ ಪ್ರೇಮ ಮೆರೆಸುವುದನ್ನು ನೋಡಿದರೆ ಕಾಲ ಎಲ್ಲಿಗೆ ಬಂತಪ್ಪಾ ಎನಿಸುತ್ತದೆ.

ದೇವರಾಜ ಅರಸು ಅವರು 1972ರಲ್ಲಿ ಎಲ್.ಜಿ. ಹಾವನೂರು ಆಯೋಗ ರಚಿಸಿದರು. ಹಿಂದುಳಿದ ವರ್ಗಗಳ ಮೀಸಲಾತಿ ಮತ್ತು ಇತರ ವಿಷಯಗಳ ಬಗ್ಗೆ ಅಧ್ಯಯನ ನಡೆಸಿದ ಆಯೋಗ 1975ರಲ್ಲಿ ವರದಿ ನೀಡಿತು. ಇದರಲ್ಲಿ ಲಿಂಗಾಯತ, ವೀರಶೈವ, ಬಂಟ, ಕ್ರೈಸ್ತ, ಅರಸು ಮುಂತಾದ ಜಾತಿಗಳನ್ನು ಹಿಂದುಳಿದ ಜಾತಿಗಳ ಪಟ್ಟಿಯಿಂದ ಕೈಬಿಡಲಾಗಿತ್ತು. ಪ್ರಬಲ ಜಾತಿಗಳ ಪ್ರತಿಭಟನೆಗೆ ಹೆದರಿ ಆಯೋಗದ ವರದಿ ಎರಡು ವರ್ಷ ಜಾರಿಗೆ ಬರಲಿಲ್ಲ. ದೇಶದಲ್ಲಿ ತುರ್ತು ಪರಿಸ್ಥಿತಿ ಜಾರಿಯಾದ ಸಂದರ್ಭದಲ್ಲಿ 1977ರ ಫೆಬ್ರುವರಿ 22ರಂದು ಸರ್ಕಾರ ಹಾವನೂರು ವರದಿಯನ್ನು ಅಂಗೀಕರಿಸಿ ಆದೇಶ ಹೊರಡಿಸಿತು. ದೇವರಾಜ ಅರಸು ಅವರಿಗೂ ಅರಸು ಜಾತಿಯನ್ನು ಪಟ್ಟಿಯಿಂದ ಕೈಬಿಟ್ಟದ್ದು ಇಷ್ಟವಾಗದೇ, ಅರಸು ಜಾತಿಯನ್ನು ಹಿಂದುಳಿದ ಪಟ್ಟಿಗೆ ಸೇರಿಸಿ ಆದೇಶ ಹೊರಡಿಸಿದರು. ಜೊತೆಗೆ, ವಿವಿಧ ಸಮುದಾಯಗಳ ಬಡವರನ್ನು ವಿಶೇಷ ಗುಂಪು ಎಂದು ಗುರುತಿಸಿ ಶೇ 5ರಷ್ಟು ಮೀಸಲಾತಿ ಒದಗಿಸಿದರು. ಹಾವನೂರು ವರದಿ ಕೂಡಾ ನ್ಯಾಯಾಲಯದ ಮೆಟ್ಟಿಲು ಏರಿತು. ಆಗ ಅಧಿಕಾರದಲ್ಲಿದ್ದ ಗುಂಡೂ ರಾವ್ ಸರ್ಕಾರ ಹೊಸ ಆಯೋಗ ರಚಿಸುವುದಾಗಿ ಹೇಳಿದ್ದರಿಂದ ಹಾವನೂರು ವರದಿಗೂ ಹಿನ್ನೆಡೆಯಾಯಿತು. ನಂತರ ಬಂದ ವೆಂಕಟಸ್ವಾಮಿ ಆಯೋಗದ ವರದಿ ಕತೆಯಂತೂ ಗೊತ್ತೇ ಇದೆ. 1990ರ ದಶಕದಲ್ಲಿ ಚಿನ್ನಪ್ಪ ರೆಡ್ಡಿ ಆಯೋಗದ ವರದಿಗೂ ವ್ಯಾಪಕ ವಿರೋಧ ವ್ಯಕ್ತವಾಯಿತು. ಅದೂ ಸಂಪೂರ್ಣ ಚಾಲ್ತಿಗೆ ಬರಲಿಲ್ಲ.

ಕಾಂತರಾಜ ಆಯೋಗ ನಡೆಸಿದ ಸಮೀಕ್ಷೆ ಕೂಡ ಮೂಲೆ ಸೇರಿತು. ಈಗ ಮತ್ತೊಂದು ಸಮೀಕ್ಷೆ ನಡೆಸಲಾಗುತ್ತಿದೆ. ಸಮೀಕ್ಷೆ ನಡೆಯುತ್ತಿರುವಾಗಲೇ ಇದು ಸೂಕ್ತವಾಗಿ ನಡೆಯುತ್ತಿಲ್ಲ ಎಂದು ವಿರೋಧ ಪಕ್ಷಗಳು ಹುಯಿಲೆಬ್ಬಿಸಿವೆ. ಕೆಲವು ಜಾತಿಗಳಿಗೆ ತಾವು ಎಲ್ಲಿ ಗುರುತಿಸಿಕೊಳ್ಳಬೇಕು ಎನ್ನುವುದೇ ಅರ್ಥವಾಗುತ್ತಿಲ್ಲ. ಕೆಲವು ಸಣ್ಣ ಸಣ್ಣ ಜಾತಿಗಳು ಅನುಕೂಲದ ದೃಷ್ಟಿಯಿಂದ ದೊಡ್ಡ ಜಾತಿಗಳೊಂದಿಗೆ ಗುರುತಿಸಿಕೊಂಡಿದ್ದವು. ಆದರೆ, ಇದರಿಂದ ಸಾಮಾಜಿಕವಾಗಿಯೂ ಲಾಭವಾಗಿಲ್ಲ, ರಾಜಕೀಯವಾಗಿಯೂ ಲಾಭವಾಗಿಲ್ಲ ಎನ್ನುವುದು ಅವುಗಳಿಗೆ ಅರ್ಥವಾಗಿದೆ. ಅದಕ್ಕೇ ಈಗ ಅವು ಪ್ರತ್ಯೇಕ ಐಡೆಂಟಿಟಿಗೆ ಪ್ರಯತ್ನಿಸುತ್ತಿವೆ.

ರಾಜಕೀಯ ಪಕ್ಷಗಳ ಗೋಳು ಇನ್ನೊಂದು ರೀತಿಯದ್ದು. ಪರಿಶಿಷ್ಟರು, ಹಿಂದುಳಿದ ಜಾತಿಗಳು, ಅಲ್ಪಸಂಖ್ಯಾತರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅವರೆಲ್ಲಾ ಒಂದಾದರೆ ತನಗೆ ಲಾಭ ಎಂದು ಕಾಂಗ್ರೆಸ್ ಭಾವಿಸಿದರೆ, ಲಿಂಗಾಯತ ಪ್ರತ್ಯೇಕ ಧರ್ಮ ಎಂಬುದು ಹೆಚ್ಚು ಪ್ರಚಾರವಾದರೆ ಹಿಂದೂಗಳ ಸಂಖ್ಯೆ ಕಡಿಮೆಯಾಗಿ ತನಗೆಲ್ಲಿ ತೊಂದರೆಯಾಗುವುದೋ ಎಂಬ ಆತಂಕ ಬಿಜೆಪಿಗೆ. ಹಿಂದುಳಿದ ವರ್ಗಗಳ ಸಮೀಕ್ಷೆ ನಡೆಸಿ ಎಂದು ರಾಹುಲ್ ಗಾಂಧಿ ಹೇಳಿರುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬಲ. ಪಕ್ಷದ ನಿಲುವು ಒಂದು ಕಡೆ, ಜನಾಂಗದ ನಿಲುವು ಇನ್ನೊಂದು ಕಡೆ ಎನ್ನುವುದು ಕೆಪಿಸಿಸಿ ಅಧ್ಯಕ್ಷರಿಗೆ ಎರಡು ಕಡೆಯ ಬಿಸಿ. ಸಮೀಕ್ಷೆಯಿಂದ ವಾಸ್ತವ ಸ್ಥಿತಿ ಹೊರಬಂದರೆ ಇಲ್ಲಿಯವರೆಗೆ ನಡೆಸಿಕೊಂಡು ಬಂದ ದರ್ಬಾರಿಗೆ ಸಂಚಕಾರ ಬರಬಹುದು ಎನ್ನುವುದು ದೊಡ್ಡ ಜಾತಿಗಳ ಭಯವಾದರೆ, ಸಣ್ಣ ಸಣ್ಣ ಜಾತಿಗಳಿಗೆ ಏನಾದರೂ ಲಾಭ ಆಗಬಹುದು ಎಂಬ ಆಸೆ. ಒಟ್ಟಿನಲ್ಲಿ ಎಲ್ಲರೂ ಹೇಳುವುದು ‘ಜಾತಿಯೇ ಶರಣಂ ಸ್ವೈಯಪ್ಪ’.



ವಾಚಕರ ವಾಣಿ

ಕನ್ನಡದಲ್ಲಿಯೂ ಪ್ರಶ್ನೆಪತ್ರಿಕೆ ಇರಲಿ

ಕೇಂದ್ರ ಸರ್ಕಾರವು ಏಕಲವ್ಯ ಮಾದರಿ ವಸತಿಶಾಲೆಗಳಲ್ಲಿ ಖಾಲಿ ಇರುವ ಉಪನ್ಯಾಸಕ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿದೆ. ಇಂಗ್ಲಿಷ್ ಮತ್ತು ಹಿಂದಿ ಭಾಷೆಯಲ್ಲಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಲಾಗುತ್ತದೆ. ಇದರಿಂದ ದಕ್ಷಿಣ ಭಾರತದ ಅಭ್ಯರ್ಥಿಗಳಿಗೆ ಅನ್ಯಾಯವಾಗಲಿದೆ. ಉದಾಹರಣೆಗೆ, ಕರ್ನಾಟಕದಲ್ಲಿ ಬಹುತೇಕರು ಹಿಂದಿಯನ್ನು ಮೂರನೇ ಭಾಷೆಯಾಗಿ ಆಯ್ಕೆ ಮಾಡಿಕೊಂಡಿರುತ್ತಾರೆ. ಹೆಚ್ಚೆಂದರೆ ಹತ್ತನೇ ತರಗತಿವರೆಗಷ್ಟೆ ಅಭ್ಯಾಸ ಮಾಡುತ್ತಾರೆ. ಉತ್ತರ ಭಾರತದ ಬಹುತೇಕ ರಾಜ್ಯಗಳಲ್ಲಿ ಹಿಂದಿ ಮಾತೃಭಾಷೆಯಾಗಿದೆ. ಪ್ರಶ್ನೆಪತ್ರಿಕೆಯು ಹಿಂದಿಯಲ್ಲಿ ಇರುವುದರಿಂದ ಅವರಿಗೆ ಉತ್ತರಿಸುವುದು ಸುಲಭ. ಉತ್ತರ ಭಾರತದ ಅಭ್ಯರ್ಥಿಗಳೇ ಆಯ್ಕೆಯಾಗುವ ಸಾಧ್ಯತೆ ಹೆಚ್ಚು. ಹಾಗಾಗಿ, ಪ್ರಶ್ನೆಪತ್ರಿಕೆಯನ್ನು ಕನ್ನಡದಲ್ಲಿ ನೀಡುವಂತೆ ರಾಜ್ಯ ಸರ್ಕಾರವು, ಕೇಂದ್ರಕ್ಕೆ ಮನವರಿಕೆ ಮಾಡಿಕೊಡಬೇಕಿದೆ.

ಸುರೇಂದ್ರ, ಮಾನ್ವಿ

ಐವರು ಪೊಲೀಸ್ ಆಯುಕ್ತರು ಬೇಕಲ್ಲವೆ?

ಗೃಹ ಸಚಿವ ಜಿ. ಪರಮೇಶ್ವರ ಅವರು, ಬೆಂಗಳೂರಿಗೆ ಇಬ್ಬರು ಪೊಲೀಸ್ ಕಮಿಷನರ್ ನೇಮಿಸುವ ಕುರಿತು ಪ್ರಸ್ತಾಪಿಸಿದ್ದಾರೆ. ಈಗ ಬೆಂಗಳೂರಿಗೆ ಐದು ಪಾಲಿಕೆಗಳು ಇವೆ. ಐವರು ಪೊಲೀಸ್ ಆಯುಕ್ತರನ್ನು ನೇಮಿಸುವುದು ಒಳಿತಲ್ಲವೇ? ಬೆಂಗಳೂರಿಗೆ ಇದು ಅನಿವಾರ್ಯವೂ ಹೌದು.

ಪ್ರಸನ್ನ ಗಣಪತಿ, ಬೆಂಗಳೂರು

ಕ್ರಿಮಿನಲ್‌ಗಳಿಗೆ ಎಚ್ಚರಿಕೆಯ ಸಂದೇಶ

ಬಾಲಕಿಯ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಿದ್ದ ಆರೋಪಿಗೆ ಬೆಳಗಾವಿಯ ಪೋಕ್ಸೊ ನ್ಯಾಯಾಲಯವು ಗಲ್ಲುಶಿಕ್ಷೆ ವಿಧಿಸಿರುವುದು ಸ್ವಾಗತಾರ್ಹ. ಆರೋಪಿಗೆ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲೂ ವಿಚಾರಣಾ ನ್ಯಾಯಾಲಯ ನೀಡಿರುವ ಆದೇಶವು ಊರ್ಜಿತಗೊಂಡರೆ ಇಂತಹ ಕ್ರಿಮಿನಲ್‌ಗಳಿಗೆ ತಕ್ಕಪಾಠ ಕಲಿಸಿದಂತಾಗುತ್ತದೆ. ಭವಿಷ್ಯದಲ್ಲಿ ಈ ರೀತಿಯ ಪೈಶಾಚಿಕ ಕೃತ್ಯ ಎಸಗಿದರೆ ಶಿಕ್ಷೆ ನಿಶ್ಚಿತ ಎಂಬ ಎಚ್ಚರಿಕೆಯ ಸಂದೇಶವನ್ನು ನೀಡಿದಂತಾಗುತ್ತದೆ.

ಆರ್.ಟಿ. ವೆಂಕಟೇಶ್ ಬಾಬು, ತುಮಕೂರು

ನರಳಾಟ

ಬೆಂಗಳೂರಿನ ರಸ್ತೆಗಳಲ್ಲಿ ಗುಂಡಿಗಳದ್ದೆ ಕಾರುಭಾರ ರಾಜಕಾರಣಿ, ಅಧಿಕಾರಿಗಳ ಪರ್ಸೆಂಟೇಜ್ ವ್ಯವಹಾರ ಇರುವಷ್ಟು ಕಾಲ ರಾಜಧಾನಿ ಜನರ ನರಳಾಟಕ್ಕೆ ದೊರೆಯದು ಪರಿಹಾರ!

ವೈ. ಯಮುನೇಶ್, ಹೊಸಪೇಟೆ

ಪಾಠ ಕಲಿಯದ ರಾಜಕೀಯ ಪಕ್ಷಗಳು

ತಮಿಳುನಾಡಿನ ಕರೂರಿನಲ್ಲಿ ನಡೆದ ಕಾಲ್ತುಳಿತ ಪ್ರಕರಣವು ನೋವು ತಂದಿದೆ. ಅಭಿಮಾನಿಗಳು ತಮ್ಮ ನೆಚ್ಚಿನ ನಟ ವಿಜಯ್ ಅವರನ್ನು ನೋಡಲು ನಿಗದಿತ ಸಮಯಕ್ಕಿಂತ ಹೆಚ್ಚು ಹೊತ್ತು ಕಾದಿದ್ದಾರೆ. ಆದರೆ, ಅವರು ಬಂದದ್ದು ಆರು ಗಂಟೆ ತಡವಾಗಿ. ಇದರಿಂದ ಅಭಿಮಾನಿಗಳು ತೀವ್ರವಾಗಿ ನಿತ್ರಾಣಗೊಂಡಿದ್ದಾರೆ. ಸರ್ಕಾರವು ಸೂಕ್ತ ಭದ್ರತೆ ನೀಡಿಲ್ಲವೆಂದು ವಿಜಯ್ ದೂಷಿಸಿದ್ದಾರೆ. ಇದು ತಮ್ಮಿಂದಾದ ಅನಾಹುತದಿಂದ ನುಣುಚಿಕೊಳ್ಳುವ ಯತ್ನವಷ್ಟೆ. ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂ ಬಳಿ ನಡೆದ ಕಾಲ್ತುಳಿತ ಪ್ರಕರಣ ಜನರ ಮನಸ್ಸಿನಿಂದ ದೂರ ಸರಿಯುವ ಮುನ್ನವೇ ಮತ್ತೆ ಇಂತಹದ್ದೇ ಅನಾಹುತ ಸಂಭವಿಸಿದೆ. ಆಯೋಜಕರು ಇನ್ನೂ ಬುದ್ಧಿ ಕಲಿತಿಲ್ಲ ಎಂಬುದಕ್ಕೆ ಇದು ನಿದರ್ಶನವಾಗಿದೆ.

ಅಶೋಕ ಎನ್.ಹೆಚ್., ಕೋಲಾರ

ಸಮೀಕ್ಷೆ: ಅನಗತ್ಯ ಗೊಂದಲ ಸೃಷ್ಟಿ

ವಿವಿಧ ಸಮುದಾಯಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿ ಅರಿಯುವುದೇ ಸಮೀಕ್ಷೆಯ ಮೂಲ ಉದ್ದೇಶವೆಂದು ಸರ್ಕಾರ ಸ್ಪಷ್ಟಪಡಿಸಿದೆ. ಸಮೀಕ್ಷೆಯ ಪ್ರಶ್ನಾವಳಿಯಲ್ಲಿ 60 ಪ್ರಶ್ನೆಗಳಿವೆ. ಅವುಗಳಲ್ಲಿ ಧರ್ಮ, ಲಿಂಗ, ಜಾತಿ, ಉಪಜಾತಿ, ಮೂಲವೃತ್ತಿ, ಶಿಕ್ಷಣ ಕುರಿತು ಮಾಹಿತಿ ನೀಡಬೇಕಾಗಿದೆ. ಇರುವ 60 ಅಂಶಗಳಲ್ಲಿ ‘ಜಾತಿ’ ಒಂದನ್ನೇ ಗುರಿಯಾಗಿಸಿ ಎಲ್ಲ ಜಾತಿಯ ನಾಯಕರು ಮತ್ತು ಸಂಘ-ಸಂಸ್ಥೆಗಳು ತಮ್ಮ ಸಮುದಾಯದವರಿಗೆ ತಮಗಿಷ್ಟ ಬಂದಂತೆ ಸಲಹೆ ನೀಡುತ್ತಿರುವುದು ಕುಚೋದ್ಯವೇ ಸರಿ. ಇಂತಹ ಸಂದೇಶಗಳ ಹಿಂದೆ ರಾಜಕೀಯ ಹುನ್ನಾರ ಅಡಗಿರುವುದು ಸ್ಪಷ್ಟ. ಅಷ್ಟಕ್ಕೂ ಈ ಸಮೀಕ್ಷೆಯು ಮೀಸಲಾತಿ ನಿಗದಿಪಡಿಸಲು ನಡೆಯುತ್ತಿಲ್ಲ. ಹಾಗಿದ್ದೂ, ಜನರಲ್ಲಿ ಸಮೀಕ್ಷೆ ಬಗ್ಗೆ ಅಸ್ಪಷ್ಟ ಭಾವನೆ ಮೂಡಿಸುವುದು ತಪ್ಪು.

ಡಿ.ಎಂ. ನದಾಫ್, ಅಫ್ಜಲ್ಪುರ

ಯುಜಿಸಿ ಮಾನದಂಡ ಧಿಕ್ಕರಿಸಬೇಡಿ

ಪ್ರಸ್ತುತ ನಿರುದ್ಯೋಗದ ಸಮಸ್ಯೆ ಯಾವ ಮಟ್ಟಿಗೆ ಇದೆ ಎಂದರೆ ವಿಶ್ವವಿದ್ಯಾಲಯ ಮಟ್ಟದ ಉಪನ್ಯಾಸಕರಾಗಲು ಅರ್ಹತೆ ಹೊಂದಿದ ಅಭ್ಯರ್ಥಿಗಳಿಗೂ ಉದ್ಯೋಗ ನೀಡಲು ಸರ್ಕಾರ ಅನಾದರ ತೋರುತ್ತಿದೆ. ಯುಜಿಸಿ ಅರ್ಹತೆ ಹೊಂದಿದವರನ್ನೇ ಪದವಿ ಕಾಲೇಜುಗಳಿಗೆ ಉಪನ್ಯಾಸಕರನ್ನಾಗಿ ಪರಿಗಣಿಸಬೇಕು ಎಂದು ಹೈಕೋರ್ಟ್ ಆದೇಶಿಸಿದೆ. ಆದರೂ, ತರಗತಿಗಳು ಆರಂಭವಾಗಿ ಸೆಮಿಸ್ಟರ್‌ನ ಅರ್ಧ ಅವಧಿ ಮುಗಿಯುತ್ತಾ ಬಂದರೂ ಸರ್ಕಾರಿ ಪದವಿ ಕಾಲೇಜುಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಿಸಿಲ್ಲ.

ಪ್ರಸ್ತುತ ಸರ್ಕಾರವು ಯುಜಿಸಿ ಮಾನದಂಡಗಳನ್ನೇ ಧಿಕ್ಕರಿಸಿದೆ. ಪಿಎಚ್.ಡಿ, ಎನ್ಇಟಿ, ಕೆ–ಸೆಟ್ ಉತ್ತೀರ್ಣರಾದ ಅರ್ಹರನ್ನೇ ನಿರುದ್ಯೋಗಿಗಳನ್ನಾಗಿಸಿರುವ ಸರ್ಕಾರದ ನಡವಳಿಕೆ ಸರಿಯಲ್ಲ. ನಿರುದ್ಯೋಗಿಗಳಿಗೆ ಉದ್ಯೋಗ ನೀಡುವ ನಿಲುವನ್ನು ಸರ್ಕಾರ ತಳೆಯಬೇಕಿದೆ. ಈಗಿರುವ ಅತಿಥಿ ಉಪನ್ಯಾಸಕರ ಸಂಭಾವನೆಯನ್ನು ಹೆಚ್ಚಿಸಬೇಕು. ಜೊತೆಗೆ, ಹಾಲಿ ಇರುವ ಕಾರ್ಯಭಾರವನ್ನು 15 ಗಂಟೆ ಬದಲಾಗಿ ಹಿಂದಿನಂತೆ ವಾರಕ್ಕೆ 8 ಗಂಟೆಗೆ ನಿಗದಿಪಡಿಸಬೇಕಿದೆ.

ದಾದಾ ಹಯಾತ್ ಬಾವಾಜಿ, ಹಂಪಿ

ಚುರುಮುರಿ



ಮುಚ್ಚಲಾಗದ ಗುಂಡಿಗಳು

• ಸುಮಂಗಲಾ

‘750 ಕೋಟಿ ರೂಪಾಯಿ...! ನನಗರೆ ಅಂಕಿಗಳ ಮುಂದೆ ಎಷ್ಟು ಸೊನ್ನಿ ಬರತಾವು ಅಂತ ತಲಿಕೆಡಿಸಿಕೊಂಡು ಸಾಕಾಗೈತಿ’ ಎಂದು ಬೆಕ್ಕಣ್ಣ ನಿಟ್ಟುಸಿರು ಬಿಟ್ಟಿತು.

‘ನಿನಗೆ ಸಿಕ್ಕಿತೇನ್ ಅಷ್ಟ್ ರೊಕ್ಕಾ?’ ನಾನು ಗಾಬರಿಯಾಗಿಬಿಟ್ಟೆ.

‘ಅಯ್ಯೋ... ನನಗ ಯಾವ ಕುಬೇರ ಕೊಡತಾನ? ಅಷ್ಟಕೊಂದು ರೊಕ್ಕ ಗುಂಡಿಗೆ ಸುರಿತಾರಂತೆ!’

‘ಯಾರು ಸುರಿತಾರಂತೆ? ಯಾವ ಗುಂಡಿಗೆ?’ ನಾನು ಇನ್ನಷ್ಟು ಗಾಬರಿಯಾದೆ.

‘ಎದಕ್ಕ ಹಂಗೆ ಗಾಬರಿಯಾಗತೀ? ಸುದ್ದಿ ಓದಿಲ್ಲೇನು?’ ಬೆಕ್ಕಣ್ಣ ಗುರುಗುಟ್ಟಿತು.

‘ಬೆಂಗಳೂರಿನ ರಸ್ತೆಗಳಲ್ಲಿ 14 ಸಾವಿರಕ್ಕೂ ಹೆಚ್ಚು ಗುಂಡಿಗಳಿದ್ದವಂತೆ. ಸುಮಾರು 7,000 ಗುಂಡಿ ಮುಚ್ಯಾರಂತೆ. ಇನ್ನುಳಿದವನ್ನು ವಾರದಾಗೆ ಮುಚ್ತಾರಂತೆ. ಒಟ್ ಎಲ್ಲಾ ಗುಂಡಿ ಮುಚ್ಚಾಕೆ 750 ಕೋಟಿ ರೂಪಾಯಿ ಬಿಡುಗಡೆ ಮಾಡೀವಂತ ಡಿಕೇಶಂಕಲ್ಲು ಹೇಳ್ಯಾರೆ.’ ಬೆಕ್ಕಣ್ಣ ಸುದ್ದಿ ವದರಿತು.

‘ಅಂದ್ರ ಒಂದು ಗುಂಡಿ ಮುಚ್ಚಕ್ಕೆ ಸುಮಾರು ಐದು ಲಕ್ಷ ರೂಪಾಯಿ ರೊಕ್ಕ ಖರ್ಚಾಗತೈತಾ?’ ನಾನು ಲೆಕ್ಕಹಾಕಿ ಕೇಳಿದೆ.

‘ಇವೆಲ್ಲ ಬಿಜೆಪಿ ಕಾಲದ ಹಳೇ ಗುಂಡಿಗಳಂತ ಸರ್ಕಾರ ಹೇಳೈತೆ. ಹಳೇ ಗುಂಡಿ ತುಂಬಕ್ಕೆ ಮತ್ತೆ ರೊಕ್ಕನೂ ಭಾಳ ಬೇಕಾಗ್ತಿರಬಕು’ ಬೆಕ್ಕಣ್ಣನ ಸಮಜಾಯಿಷಿ.

‘ಗುಂಡಿ ತುಂಬತಾರೋ... ಗುತ್ತಿಗೆದಾರರ ಹುಂಡಿ ತುಂಬತಾರೋ ಯಾರಿಗ್ಗೊತ್ತು!’

‘ಅಪ್ಪ, ಅಮ್ಮ ಯಾರು ಅಂತ ತಿಳಿಯಾಕೆ ಅದೇನೋ ಡಿಎನ್‌ಎ ಟೆಸ್ಟ್ ಮಾಡತಾರಲ್ಲ... ಹಂಗ ಗುಂಡಿಗಳ ಖರೇ ವಾರಸುದಾರರು ಯಾರು ಅಂತ ತಿಳಿಯಕ್ಕೆ ಏನರೆ ಟೆಸ್ಟ್ ಮಾಡಬಕು ನೋಡು’ ಎಂದಿತು ಬೆಕ್ಕಣ್ಣ.

‘ಅಂತಹ ಟೆಸ್ಟ್ ಮಾಡಕ್ಕೆ ಕೋಟಿಗಟ್ಟಲೆ ರೊಕ್ಕ ಖರ್ಚು ಮಾಡತಾರೆ. ಏನೂ ಬ್ಯಾಡ ಸುಮ್ನಿರು’ ಎಂದೆ.

‘ರಸ್ತೆಗಳ ಗುಂಡಿಗೇನೋ ತ್ಯಾಪೆ ಹಾಕಿ ಮುಚ್ಚಬೌದು. ನೀವು ನರಮನುಷ್ಯರು ನಿಮ್ಮೆದೆವಳಗೆ ಜಾತಿ, ಮತದ ಗುಂಡಿ ತೋಡಿಕೊಂಡು ಕುಂತೀರಲ್ಲ... ಅದನ್ನು ಹೆಂಗೆ ಮುಚ್ಚುತೀರಿ?’ ಎಂದು ಬೆಕ್ಕಣ್ಣ ನನ್ನ ಮೂತಿಗೆ ತಿವಿಯಿತು. ನಾನು ತಲೆ ತಗ್ಗಿಸಿದೆ.

ಸಂಗತ

ನಮ್ಮ ಹಣಕ್ಕೆ ಯಾಕಿಷ್ಟು ದುರ್ಬಲ ರಕ್ಷಣೆ?

ಜನಸಾಮಾನ್ಯರಿಗೆ ನೀಡುವ ಸಾಲದ ಬಗ್ಗೆ ಬ್ಯಾಂಕ್‌ಗಳು ಸಾಕಷ್ಟು ಎಚ್ಚರಿಕೆ ವಹಿಸುತ್ತವೆ. ಇದೇ ಕಾಳಜಿಯನ್ನು ಗ್ರಾಹಕರ ಖಾತೆಗಳಲ್ಲಿನ ಹಣದ ಬಗ್ಗೆ ಯಾಕೆ ವಹಿಸುತ್ತಿಲ್ಲ?

• ಜಿ.ಎಸ್. ಗೋಪಾಲ ನಾಯ್ಕ

ಆನ್‌ಲೈನ್ ವಂಚಕರಿಂದ ಹಣ ಕಳೆದುಕೊಳ್ಳುತ್ತಿರುವವರ ಸುದ್ದಿಗಳು ಇತ್ತೀಚೆಗೆ ಪತ್ರಿಕೆಗಳಲ್ಲಿ ಮತ್ತೆ ಮತ್ತೆ ಪ್ರಕಟಗೊಳ್ಳುತ್ತಿವೆ. ಹಣದ ಆಮಿಷಕ್ಕೆ ಬಲಿಯಾಗಿ ವಿದ್ಯಾವಂತರೂ ಮೋಸ ಹೋಗುತ್ತಿದ್ದಾರೆ. ಅದೇನೇ ಇರಲಿ, ಬ್ಯಾಂಕ್‌ಗಳು ನೀಡಿರುವ ಆನ್‌ಲೈನ್ ಸೇವೆ ಮತ್ತು ಜನರ ಕೈಗೆ ಸ್ಮಾರ್ಟ್ ಫೋನ್ ಬಂದ ಮೇಲೆ ಹಣ ದೋಚಲು ವಂಚಕರಿಗೆ ಸುಲಭ ಆದಂತಿದೆ.

ಆನ್‌ಲೈನ್ ವ್ಯವಸ್ಥೆ ಬರುವ ಮುಂಚೆ ಜನಸಾಮಾನ್ಯರ ಹಣ ನಗದು ರೂಪದಲ್ಲಿ ಬ್ಯಾಂಕ್‌ಗಳಲ್ಲಿ ಸುರಕ್ಷಿತವಾಗಿತ್ತು. ಒಂದು ವೇಳೆ ಬ್ಯಾಂಕ್‌ಗಳಲ್ಲಿ ದರೋಡೆ ಆಗಿ, ಗ್ರಾಹಕರ ಠೇವಣಿ ಹಣ ಕಳುವಾದರೆ, ಅದಕ್ಕೆ ಬ್ಯಾಂಕ್‌ಗಳೇ ಜವಾಬ್ದಾರಿ ಆಗಿರುತ್ತಿದ್ದವು ಮತ್ತು ಗ್ರಾಹಕರು ತಮ್ಮ ಖಾತೆಯ ನಿರ್ವಹಣೆ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುವ ಅಗತ್ಯವಿರಲಿಲ್ಲ. ಯಾವಾಗ ಬ್ಯಾಂಕ್‌ಗಳು ಗ್ರಾಹಕರ ಖಾತೆಯ ಸುಲಭ ನಿರ್ವಹಣೆಗಾಗಿ ಆನ್‌ಲೈನ್ ವ್ಯವಸ್ಥೆ ಅಳವಡಿಸಿಕೊಂಡವೋ ಅಂದಿನಿಂದ ವಂಚನೆಗಳೂ ಹೆಚ್ಚಾಗತೊಡಗಿವೆ.

ಕಷ್ಟಪಟ್ಟು ಸಂಪಾದಿಸಿದ ಹಣ ಬ್ಯಾಂಕ್‌ಗಳಲ್ಲಿ ಸುರಕ್ಷಿತವಾಗಿರುತ್ತದೆ ಎಂದು ನಂಬಿ, ನಮ್ಮ ಖಾತೆಯಲ್ಲಿ ಹಣ ಇರಿಸುತ್ತೇವೆ. ಬ್ಯಾಂಕಿನವರೂ ಇಪ್ಪತ್ತನಾಲ್ಕು ಗಂಟೆಯೂ ನಮ್ಮ ಖಾತೆಯ ಮೇಲೆ ನಿಗಾ ಇರಿಸುತ್ತಾರೆ ಎಂದು ನಂಬಿದ್ದೇವೆ. ಅವರು ಖಾತೆಯ ಸುರಕ್ಷತೆ ವಿಷಯದಲ್ಲಿ ಪರಿಣತಿಯನ್ನೂ ಹೊಂದಿದವರಾಗಿರುತ್ತಾರೆ. ನಮ್ಮದೇ ಆದ ಪಾಸ್‌ವರ್ಡ್, ಪ್ರೊಫೈಲ್ ಪಾಸ್‌ವರ್ಡ್, ಕ್ಯಾಪ್ಚ, ಇತ್ಯಾದಿ ಸುರಕ್ಷಿತ ಸಂಕೇತಗಳನ್ನು ನಮೂದಿಸಿ ನಮ್ಮ ಖಾತೆಯನ್ನು ನಿರ್ವಹಿಸುತ್ತಿರುತ್ತೇವೆ. ಒಂದು ವೇಳೆ, ಯಾವುದಾದರೊಂದು ಸಂಖ್ಯೆ ತಪ್ಪಾಗಿ ನಮೂದಿಸಿದರೆ ಆನ್‌ಲೈನ್ ವ್ಯವಹಾರ ಮುಂದುವರಿಸುವುದು ಸಾಧ್ಯವಿಲ್ಲ. ಹೀಗೆ ಮೂರು ಬಾರಿ ತಪ್ಪಾಗಿ ನಮೂದಿಸಿದರೆ ಖಾತೆ ಸ್ಥಗಿತಗೊಳ್ಳುತ್ತದೆ. ನಾವು ಮತ್ತೆ ಖಾತೆ ನಿರ್ವಹಣೆ ಮಾಡಬೇಕೆಂದರೆ ಒಂದು ದಿನ ಕಾಯಬೇಕು. ಇದರ ಜೊತೆಗೆ ಆರು ತಿಂಗಳಿಗೊಮ್ಮೆ ನಮ್ಮ ಪಾಸ್‌ವರ್ಡ್ ಮತ್ತು ಪ್ರೊಫೈಲ್ ಪಾಸ್‌ವರ್ಡ್ ಬದಲಾವಣೆ ಮಾಡಲು ಬ್ಯಾಂಕಿನವರೇ ಸೂಚಿಸುತ್ತಾರೆ. ಅಲ್ಲದೆ ನಮ್ಮ ಸ್ಮಾರ್ಟ್ ಫೋನನ್ನು ಕೂಡ ಆಗಾಗ ಅಪ್‌ಡೇಟ್ ಮಾಡುತ್ತಲೇ ಇರಬೇಕಾಗುತ್ತದೆ. ಸ್ಮಾರ್ಟ್ ಫೋನ್ ಹಳೆಯ ಮಾದರಿಯದಾಗಿದ್ದರೆ, ಕೆಲವು ಬ್ಯಾಂಕ್‌ಗಳ ಆ್ಯಪ್‌ಗಳು ಕಾರ್ಯ ನಿರ್ವಹಿಸದೆ ಸ್ಥಗಿತಗೊಳ್ಳುತ್ತವೆ. ಹೀಗೆ ಬ್ಯಾಂಕ್‌ನ ಆನ್‌ಲೈನ್ ವ್ಯವಹಾರದ ಸುರಕ್ಷತೆ ಹಲವು ಆಯಾಮಗಳನ್ನು ಒಳಗೊಂಡಿರುತ್ತದೆ.

ಏನೆಲ್ಲಾ ಸುರಕ್ಷತೆ ಇದ್ದರೂ ಕೇವಲ ಒಂದು ಒಟಿಪಿ ಅಥವಾ ಯಾವುದೋ ಒಂದು ಲಿಂಕಿನ ಮೇಲೆ ಒಮ್ಮೆ ಕ್ಲಿಕ್ ಮಾಡಿದರೆ ನಮ್ಮ ಖಾತೆಯಲ್ಲಿರುವ ಹಣ ಕಳುವಾಗುತ್ತದೆ ಎಂದರೆ, ವಂಚಕರು ಬ್ಯಾಂಕಿನ ಬುದ್ಧಿವಂತ ಸಿಬ್ಬಂದಿಗಿಂತ ಹೆಚ್ಚು ಚಾಲಾಕಿಗಳಾಗಿರುತ್ತಾರೆ ಎಂದು ಭಾವಿಸಬೇಕಾಗುತ್ತದೆ. ಅಂದರೆ, ಇಲ್ಲಿ ಬ್ಯಾಂಕಿನವರೇ ವಿಫಲರಾದಂತೆ. ಹೀಗಿದ್ದಾಗ ಗ್ರಾಹಕರು ಯಾವ ನಂಬಿಕೆಯ ಮೇಲೆ ಬ್ಯಾಂಕಿನಲ್ಲಿ ಹಣ ಇಡಬೇಕು?



ನಮ್ಮ ಖಾತೆಯನ್ನು ನಿರ್ವಹಿಸುವ ಬ್ಯಾಂಕ್, ಗ್ರಾಹಕರಿಂದ ಹಲವು ರೂಪದಲ್ಲಿ ಬದ್ಧತೆಯನ್ನು ಅಪೇಕ್ಷಿಸುತ್ತದೆ. ನಮ್ಮ ಖಾತೆಯಿಂದ ನಾವೇ ವಹಿವಾಟು ನಿರ್ವಹಿಸಿದರೂ, ಖಾತೆಯ ನಿರ್ವಹಣೆಗೆ ಎಂದು ಶುಲ್ಕವನ್ನು ಪಡೆಯುತ್ತದೆ. ನಾವು ಆನ್‌ಲೈನ್‌ನಲ್ಲಿ ಶಾಲಾ– ಕಾಲೇಜಿನ ಶುಲ್ಕ, ಸಿನಿಮಾ ಅಥವಾ ರೈಲು ಟಿಕೆಟ್ ಇತ್ಯಾದಿಗಳನ್ನು ಖರೀದಿಸಿದರೆ ಅದಕ್ಕೆ ಹೆಚ್ಚುವರಿಯಾಗಿ ಶುಲ್ಕವನ್ನು ಪಡೆಯುತ್ತದೆ. ಬ್ಯಾಂಕಿನ ಚೆಕ್‌ನಲ್ಲಿ ಸಹಿ ಮಾಡಿದವರು ಸಹಿಯ ಒಂದು ಸಣ್ಣ ಗೆರೆ ತಪ್ಪಾಗಿ ಬರೆದರೆ ಸಹಿ ಮಾಡಿದವರಿಗೂ ಮತ್ತು ಚೆಕ್ ಪಡೆದು ಸಲ್ಲಿಸಿದವರಿಗೂ ದಂಡ ವಿಧಿಸಲಾಗುತ್ತದೆ. ಖಾತೆಯಲ್ಲಿ ನಿಗದಿಪಡಿಸಿದ ಕನಿಷ್ಠ ಮೊತ್ತಕ್ಕಿಂತ ಕಡಿಮೆ ಹಣ ಇದ್ದರೂ ದಂಡ ವಿಧಿಸಲಾಗುತ್ತದೆ.

ನಾವು ಬ್ಯಾಂಕಿನಿಂದ ಗೃಹಸಾಲವನ್ನೋ ವೈಯಕ್ತಿಕ ಸಾಲವನ್ನೋ ಪಡೆದಲ್ಲಿ, ಆ ಹಣದ ಭದ್ರತೆಗಾಗಿ ನಮ್ಮ ಯಾವುದಾದರೊಂದು ಆಸ್ತಿಯನ್ನು ಅಡಮಾನ ಇಟ್ಟುಕೊಳ್ಳುವುದರ ಜೊತೆಗೆ ಒಂದಿಬ್ಬರು ವ್ಯಕ್ತಿಗಳಿಂದ ಜಾಮೀನನ್ನೂ ಬ್ಯಾಂಕ್ ಪಡೆಯುತ್ತದೆ. ಅಷ್ಟಾದರೂ ನಮ್ಮ ಮೇಲೆ ನಂಬಿಕೆ ಇಡದೆ, ನಮ್ಮಿಂದ ಜೀವ ವಿಮೆಯನ್ನೂ ಮಾಡಿಸಿಕೊಳ್ಳುತ್ತಾರೆ. ತಾವು ನೀಡುವ ಹಣಕ್ಕೆ ಎಷ್ಟು ಬೇಕೋ ಅಷ್ಟು ಸುರಕ್ಷತೆಯನ್ನು ಖಾತರಿಪಡಿಸಿಕೊಳ್ಳುವ ಬ್ಯಾಂಕ್‌ಗಳು, ನಮ್ಮ ಹಣದ ನಿರ್ವಹಣೆ ಹಾಗೂ ಸುರಕ್ಷತೆಗೆ ಸಂಬಂಧಿಸಿದಂತೆ ಹೆಚ್ಚಿನ ಹೊಣೆಗಾರಿಕೆ ವಹಿಸುವುದಿಲ್ಲ.

ಆನ್‌ಲೈನ್ ವಂಚನೆಗಳಿಗೆ ಸಂಬಂಧಿಸಿದಂತೆ ಜನಸಾಮಾನ್ಯರಲ್ಲಿ ಕೆಲವು ಅನುಮಾನಗಳಿವೆ. ಅವುಗಳಲ್ಲಿ ಮುಖ್ಯವಾದುದು, ಗ್ರಾಹಕನೊಬ್ಬ ಆನ್‌ಲೈನ್ ವಂಚನೆಗೊಳಗಾಗುವ ಪ್ರಸಂಗಗಳಲ್ಲಿ ಬ್ಯಾಂಕೊಂದರ ಹೊಣೆಗಾರಿಕೆ ಯಾವ ಬಗೆಯದು ಎನ್ನುವುದು. ಆ ವಂಚನೆಗೆ ಬ್ಯಾಂಕ್‌ನ ಸುರಕ್ಷತಾ ಕ್ರಮಗಳಲ್ಲಿನ ಲೋಪವೂ ಒಂದು ಕಾರಣ ಆಗಿರುವುದಿಲ್ಲವೆ? ವಂಚಕರು ಬಹುತೇಕ ಸಂದರ್ಭಗಳಲ್ಲಿ ನಮ್ಮ ದೇಶದ ಯಾವುದೋ ಮೂಲೆಯಲ್ಲಿರುತ್ತಾರೆ. ಬ್ಯಾಂಕ್ ಸಿಬ್ಬಂದಿ ಹಾಗೂ ಪೊಲೀಸರು ಒಟ್ಟಾಗಿ ಅವರನ್ನು ಪತ್ತೆ ಮಾಡುವುದು ಸಾಧ್ಯವಿಲ್ಲವೆ? ನಮ್ಮ ಬ್ಯಾಂಕ್ ಖಾತೆಯನ್ನು ಯಾರು ಬೇಕಾದರೂ ಹ್ಯಾಕ್ ಮಾಡಬಹುದು ಎನ್ನುವುದಾದರೆ ಬ್ಯಾಂಕ್‌ಗಳ ಬಗ್ಗೆ ಗ್ರಾಹಕರು ಯಾಕಾಗಿ ನಂಬಿಕೆ ಇಡಬೇಕು?

ಆನ್‌ಲೈನ್ ವಂಚನೆ ಪ್ರಕರಣಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ ಬ್ಯಾಂಕ್‌ಗಳ ಕಾರ್ಯ ನಿರ್ವಹಣೆಯ ಪರಾಮರ್ಶೆಯೂ ಅಗತ್ಯವಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಕಾಲ್ತುಳಿತ: ವ್ಯವಸ್ಥೆಯ ಕುಸಿತ

ತಮಿಳುನಾಡಿನ ಕರೂರಿನಲ್ಲಿ ನಟ ವಿಜಯ್ ಅವರ ಸಾರ್ವಜನಿಕ ಸಮಾರಂಭದ ವೇಳೆ ನಡೆದಿರುವ ಕಾಲ್ತುಳಿತ ಜನರಲ್ಲಿ ದಿಗ್ಭ್ರಾಂತಿ ಉಂಟುಮಾಡಿದೆ. ಭಾರತದಲ್ಲಿ ಕಾಲ್ತುಳಿತ ಪ್ರಕರಣಗಳು ಆಗಿಂದಾಗ್ಗೆ ನಡೆಯುತ್ತಲೇ ಇವೆ. ರಾಜಕೀಯ ಸಮಾವೇಶಗಳು, ಧಾರ್ಮಿಕ–ಆಧ್ಯಾತ್ಮಿಕ ಕಾರ್ಯಕ್ರಮಗಳು, ಆರಾಧನಾ ಸ್ಥಳಗಳಲ್ಲಿ ಕಾಲ್ತುಳಿತದಿಂದ ಜನ ಸಾವಿಗೀಡಾಗುತ್ತಲೇ ಇದ್ದಾರೆ. ದೇಶದಾದ್ಯಂತ ಜನಜಂಗುಳಿ ನಿಯಂತ್ರಣ ಮತ್ತು ನಿರ್ವಹಣೆಗೆ ಸೂಕ್ತ ವ್ಯವಸ್ಥೆ ಇಲ್ಲ ಎನ್ನುವುದನ್ನು ಇದು ತೋರಿಸುತ್ತದೆ



ಪ್ರಜಾವಾಣಿ ವಾರ್ತೆ

ಕಾಲ್ತುಳಿತವು ದೇಶದಲ್ಲಿ ಸಾಮಾನ್ಯ ಎನ್ನುವಂತಾಗಿದೆ. ತಮ್ಮ ಅಭಿಮಾನದ ಕ್ರೀಡಾ ಪಟುಗಳು, ಸಿನಿಮಾ ತಾರೆಯರನ್ನು ನೋಡಲು, ರಾಜಕೀಯ ಸಮಾವೇಶಗಳಲ್ಲಿ ಭಾಗವಹಿಸಲು, ಆಧ್ಯಾತ್ಮಿಕ ವ್ಯಕ್ತಿಗಳ ಕಾರ್ಯಕ್ರಮದಲ್ಲಿ ಭಾಗವಹಿಸಿದವರು, ದೇವಾಲಯಗಳಿಗೆ ತೆರಳಿದವರು ಕಾಲ್ತುಳಿತಕ್ಕೆ ಸಿಲುಕಿರುವುದು ದೇಶದಲ್ಲಿ ನಡೆದಿವೆ. ಕೊನೆಗೆ, ಹಬ್ಬದ ಸಂದರ್ಭದ ದಟ್ಟಣೆಯಿಂದಾಗಿ ಊರಿಗೆ ಹೋಗಲು ರೈಲು ನಿಲ್ದಾಣಕ್ಕೆ ಬಂದವರು ಕೂಡ ನೂಕುನುಗ್ಗಲಿನಿಂದ ಸಾವಿಗೀಡಾದದ್ದು ಇದೆ.

ಜಗತ್ತಿನ ಹಲವೆಡೆ ಕಾಲ್ತುಳಿತಗಳು ನಡೆದಿವೆ, ನಡೆಯುತ್ತಿವೆ. ಆದರೆ, ಭಾರತದಲ್ಲಿ ಬೃಹತ್ ಸಮಾವೇಶಗಳು ಹೆಚ್ಚಾಗಿ ನಡೆಯುವುದರಿಂದ ಮತ್ತು ಅವು ಅವ್ಯವಸ್ಥಿತವಾಗಿರುವುದರಿಂದ ಸಹಜವಾಗಿಯೇ ಸಾವು–ನೋವಿನ ಪ್ರಮಾಣವೂ ಹೆಚ್ಚಿರುತ್ತದೆ.

ಸಿದ್ಧತೆಯ ಕೊರತೆ: ಬಹುತೇಕ ಎಲ್ಲ ಕಾಲ್ತುಳಿತ ಘಟನೆಗಳಿಗೂ ಸಿದ್ಧತೆಯ ಕೊರತೆ, ಪೊಲೀಸರ ವೈಫಲ್ಯವೇ ಮುಖ್ಯ ಕಾರಣವಾಗಿರುತ್ತವೆ. ಜತೆಗೆ, ಬೃಹತ್ ಸಂಖ್ಯೆಯಲ್ಲಿ ಜನ ಸೇರಿದಾಗ, ಕೆಲವರ ಆತುರ, ಆತಂಕ, ಆಸೆಯಿಂದ ಘಟಿಸುವ ಒಂದು ಸಣ್ಣ ತಪ್ಪು ದೊಡ್ಡ ಅನಾಹುತಕ್ಕೆ ಕಾರಣವಾಗುತ್ತದೆ. ಕರೂರಿನಲ್ಲಿ ನಡೆದ ಘಟನೆಯನ್ನೇ ನೋಡುವುದಾದರೆ, ರ್‍ಯಾಲಿಯಲ್ಲಿ ಒಂದಷ್ಟು ಜನ ತಮ್ಮ ನೆಚ್ಚಿನ ನಟನನ್ನು ನೋಡಲು ಸಮೀಪದ ಮರ ಏರಿ, ಆಯ ತಪ್ಪಿ ಅಲ್ಲಿಂದ ಕೆಳಗಿರುವ ಜನರ ಮೇಲೆ ಬಿದ್ದದ್ದು ನೂಕುನುಗ್ಗಲು ಉಂಟಾಗಲು ಕಾರಣ ಎನ್ನಲಾಗುತ್ತಿದೆ.

ಇದೇ ಜೂನ್‌ನಲ್ಲಿ ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಸಂಭವಿಸಿದ್ದ ಘಟನೆಗೆ ಪ್ರಾಯೋಜಕರು–ಸರ್ಕಾರದ ನಡುವಿನ ಸಮನ್ವಯದ ಕೊರತೆ, ಕಡಿಮೆ ಸಂಖ್ಯೆಯಲ್ಲಿ ಇದ್ದ ಪೊಲೀಸರು, ಆಟಗಾರರ ಪರೇಡ್ ಕುರಿತ ಗೊಂದಲ, ಉಚಿತ ಪಾಸ್‌ಗಳ ಬಗ್ಗೆ ಹರಡಿದ್ದ ವದಂತಿಗಳು... ಹೀಗೆ ಹಲವು ಕಾರಣ ಎನ್ನಲಾಗಿತ್ತು. ಹೈದರಾಬಾದ್‌ನಲ್ಲಿ ‘ಪುಷ್ಪ–2’ ಚಿತ್ರದ ಪ್ರದರ್ಶನದ ವೇಳೆ ನಾಯಕ ನಟ ಅಲ್ಲು ಅರ್ಜುನ್ ಮತ್ತು ಇತರರು ಥಿಯೇಟರ್‌ಗೆ ಭೇಟಿ ನೀಡಿದ್ದರಿಂದ ನೂಕುನುಗ್ಗಲು ಉಂಟಾಗಿ ಒಬ್ಬ ಮಹಿಳೆ ಮೃತಪಟ್ಟಿದ್ದರು. ಪೊಲೀಸರಿಗೆ ಪೂರ್ವಭಾವಿಯಾಗಿ ಮಾಹಿತಿ ನೀಡದೇ ಅಲ್ಲು ಅರ್ಜುನ್ ಚಿತ್ರಮಂದಿರಕ್ಕೆ ಭೇಟಿ ನೀಡಿದ್ದೇ ಘಟನೆಗೆ ಕಾರಣ ಎಂದು ಪೊಲೀಸರು ಹೇಳಿದ್ದರು.

ತಿರುಪತಿಯಲ್ಲಿ ಸಂಭವಿಸಿದ ಕಾಲ್ತುಳಿತಕ್ಕೆ ಅಲ್ಲಿನ ಅವ್ಯವಸ್ಥೆ, ಪೊಲೀಸ್ ವೈಫಲ್ಯ ಕಾರಣವಾಗಿತ್ತು. ದೇವರ ದರ್ಶನಕ್ಕೆ ಕಾದಿದ್ದವರು, ಟಿಕೆಟ್ ಪಡೆಯಲು ಏಕಾಏಕಿ ಮುಗಿಬಿದ್ದಾಗ ಅವರನ್ನು ನಿಭಾಯಿಸುವ ಸೂಕ್ತ ವ್ಯವಸ್ಥೆ ಇಲ್ಲದೇ ಕಾಲ್ತುಳಿತ ಉಂಟಾಗಿ ಹಲವು ಭಕ್ತರು ಮೃತಪಟ್ಟರು. ಉತ್ತರ ಪ್ರದೇಶದ ಹಾಥರಸ್‌ನಲ್ಲಿ ಕಳೆದ ವರ್ಷ ಭೋಲೆ ಬಾಬಾ ಅವರ ‘ಸತ್ಸಂಗ’ದಲ್ಲಿಯೂ ಇಂಥದ್ದೇ ಅವಘಡ ಸಂಭವಿಸಿತ್ತು. ಗರಿಷ್ಠ 80 ಸಾವಿರ ಮಂದಿ ಸೇರಬಹುದಾಗಿದ್ದ ಕಾರ್ಯಕ್ರಮದಲ್ಲಿ 2.5 ಲಕ್ಷ ಮಂದಿ ಸೇರಿದ್ದು, ಅಷ್ಟು ದೊಡ್ಡ ಜನಸಂಖ್ಯೆಯನ್ನು ನಿರ್ವಹಿಸುವ ವ್ಯವಸ್ಥೆ ಇಲ್ಲದಿದ್ದುದು ದುರ್ಘಟನೆಗೆ ಕಾರಣವಾಗಿತ್ತು. ಇವುಗಳ ಜತೆಗೆ, ಧಾರ್ಮಿಕ ಮುಖಂಡರು, ಸಿನಿಮಾ ತಾರೆಯರು, ಕ್ರೀಡಾಪಟುಗಳು, ರಾಜಕಾರಣಿಗಳ ಬಗ್ಗೆ ಜನರಲ್ಲಿ ಇರುವ ಹುಚ್ಚು ಅಭಿಮಾನವೂ ಅವಘಡಗಳಿಗೆ ಕಾರಣವಾಗುತ್ತಿದೆ.

ಅವಘಡಗಳ ಪುನರಾವರ್ತನೆ: ಜಗತ್ತಿನ ವಿವಿಧ ದೇಶಗಳಲ್ಲಿ ಕಾಲ್ತುಳಿತ ಪ್ರಕರಣಗಳು ನಡೆದಿವೆ. ಹೆಚ್ಚಿನ ದೇಶಗಳಲ್ಲಿ ಅವು ಪುನರಾವರ್ತನೆಯಾಗದಂತೆ ಅಲ್ಲಿನ ಸರ್ಕಾರಗಳು ಕ್ರಮ ವಹಿಸುತ್ತವೆ. ಆದರೆ, ಭಾರತದ ಸಂದರ್ಭದಲ್ಲಿ ಈ ದಿಸೆಯಲ್ಲಿ ಹೆಚ್ಚಿನ ಪ್ರಯತ್ನಗಳು ನಡೆದಿಲ್ಲ. ನಿಯಮ ಪಾಲನೆ ಮಾಡದೇ ಹೆಚ್ಚು ಜನರನ್ನು ಸೇರಿಸುವುದು, ಸಿದ್ಧತೆ ನಡೆಸದೇ ಕಾರ್ಯಕ್ರಮಗಳನ್ನು ಆಯೋಜಿಸುವುದು ನಡೆಯುತ್ತಲೇ ಇದೆ. ಕೆಲವು ಧಾರ್ಮಿಕ ಕೇಂದ್ರಗಳಲ್ಲಿ ಪದೇ ಪದೇ ಕಾಲ್ತುಳಿತ ಸಂಭವಿಸುತ್ತಲೇ ಇದೆ. ಇದಕ್ಕೆ ಉದಾಹರಣೆ ಎಂದರೆ, ಉತ್ತರ ಪ್ರದೇಶದಲ್ಲಿ ನಡೆಯುವ ಕುಂಭಮೇಳ. ಆದರೂ ಸರ್ಕಾರಗಳು ಎಚ್ಚೆತ್ತುಕೊಂಡಿಲ್ಲ. ಜನಸಂದಣಿಯನ್ನು ನಿಯಂತ್ರಿಸುವ ಸೂಕ್ತ ವ್ಯವಸ್ಥೆಯನ್ನು ರೂಪಿಸಿಲ್ಲ. ಚಿನ್ನಸ್ವಾಮಿ ಸ್ಟೇಡಿಯಂನ ಕಾಲ್ತುಳಿತದ ನಂತರ ಕರ್ನಾಟಕ ಸರ್ಕಾರವು ಸಾರ್ವಜನಿಕ ಸಭೆಗಳಲ್ಲಿ ಜನಜಂಗುಳಿ ನಿಯಂತ್ರಿಸಲು ‘ಕರ್ನಾಟಕ ಜನಸಂದಣಿ ನಿಯಂತ್ರಣ ಮಸೂದೆ–2025’ ಜಾರಿಗೆ ತರಲು ಮುಂದಾಗಿರುವುದು ಉಲ್ಲೇಖಾರ್ಹ.

ಜನಜಂಗುಳಿಯ ನಿಯಂತ್ರಣಕ್ಕೆ ಎಲ್ಲ ಪ್ರದೇಶ, ಎಲ್ಲ ಕಾಲಕ್ಕೂ ಸಲ್ಲುವಂಥ ಒಂದು ನಿಯಮ ಎನ್ನುವುದಿಲ್ಲ. ಸ್ಥಳ, ಕಾರ್ಯಕ್ರಮ/ಸಮಾವೇಶ, ಸಮಯ, ಅಲ್ಲಿ ಎಂಥ ಜನ ಸೇರುತ್ತಾರೆ ಇತ್ಯಾದಿ ಅಂಶಗಳನ್ನು ಆಧರಿಸಿ ವ್ಯವಸ್ಥೆ ಕೈಗೊಳ್ಳಬೇಕಾಗುತ್ತದೆ. ಸೂಕ್ತ ನಿಯಮಾವಳಿ ರೂಪಿಸುವುದು ಮತ್ತು ಅಸ್ತಿತ್ವದಲ್ಲಿರುವ ನಿಯಮಾವಳಿಯನ್ನು ಪಾಲಿಸುವಂತೆ ಕ್ರಮ ಜರುಗಿಸದ ಹೊರತು ಸಾವುಗಳನ್ನು ತಡೆಯಲಾಗದು.

ಸಾವಿರಾರು ಸಾವುಗಳು

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) 1996ರಿಂದಲೂ (2022ರವರೆಗೆ) ಕಾಲ್ತುಳಿತ ಪ್ರಕರಣಗಳ ದತ್ತಾಂಶವನ್ನು ಸಂಗ್ರಹಿಸಿದೆ. ದೇಶದಲ್ಲಿ ಮೂರು ದಶಕಗಳಲ್ಲಿ ಸುಮಾರು ನಾಲ್ಕು ಸಾವಿರ ಕಾಲ್ತುಳಿತ ಘಟನೆಗಳು ನಡೆದಿವೆ ಎಂದು ಅದು ಹೇಳಿದೆ. ಕಳೆದ, ಎರಡು ದಶಕಗಳಲ್ಲಿ (2000–2022) 3,074 ಮಂದಿ ನೂಕುನುಗ್ಗಲಿನಲ್ಲಿ ಸಾವಿಗೀಡಾಗಿದ್ದಾರೆ ಎಂದು ಎನ್‌ಸಿಆರ್‌ಬಿ ದತ್ತಾಂಶ ಹೇಳುತ್ತದೆ.

ಮಾರ್ಗಸೂಚಿ ಹೇಳುವುದೇನು?

ದೊಡ್ಡ ಪ್ರಮಾಣದಲ್ಲಿ ಜನರು ಸೇರುವ ಸ್ಥಳಗಳಲ್ಲಿ ಕಾಲ್ತುಳಿತದಂತಹ ದುರ್ಘಟನೆಗಳನ್ನು ತಡೆಯಲು ಕೈಗೊಳ್ಳಬೇಕಾದ ಕ್ರಮಗಳ ಕುರಿತಂತೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು (ಎನ್‌ಡಿಎಂಎ) 2014ರಲ್ಲಿಯೇ ಮಾರ್ಗಸೂಚಿಯನ್ನು ಹೊರಡಿಸಿದೆ. ಜನಸಂದಣಿಯನ್ನು ನಿರ್ವಹಿಸಲು ಕಾರ್ಯಕ್ರಮಗಳ ಆಯೋಜಕರು, ರಾಜ್ಯ ಸರ್ಕಾರ (ಪೊಲೀಸ್ ಹಾಗೂ ಇತರ ಇಲಾಖೆಗಳು), ಸ್ಥಳೀಯ ಆಡಳಿತಗಳು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಇದರಲ್ಲಿ ವಿವರಿಸಲಾಗಿದೆ.

- ಯಾವ ಕಾರ್ಯಕ್ರಮ, ಯಾವ ರೀತಿ ನಡೆಯುತ್ತದೆ, ಎಷ್ಟು ಜನ ಸೇರಬಹುದು, ಯಾವ ವಯಸ್ಸಿನವರು ಭಾಗವಹಿಸುತ್ತಾರೆ ಎಂಬುದೂ ಸೇರಿದಂತೆ ಕಾರ್ಯಕ್ರಮ ನಡೆಯುವ ಸ್ಥಳದ ಬಗ್ಗೆ ಸ್ಪಷ್ಟ ಚಿತ್ರಣ, ಜನ ಧಾರಣಾ ಸಾಮರ್ಥ್ಯ ಮುಂತಾದ ವಿವರಗಳನ್ನು ಆಯೋಜಕರು ಮೊದಲೇ ತಿಳಿದಿರಬೇಕು
- ಜನದಟ್ಟಣೆಯನ್ನು ನಿರ್ವಹಿಸುವ ಕ್ರಮಗಳ (ಸಂಚಾರ ನಿರ್ವಹಣೆ, ಮಾರ್ಗ ನಕ್ಷೆ, ತಡೆ ಬೇಲಿಗಳ ನಿರ್ಮಾಣ, ಗಣ್ಯರ ನಿರ್ವಹಣೆ ಇತ್ಯಾದಿ) ಅನುಷ್ಠಾನದ ಬಗ್ಗೆ ನಿಖರವಾದ ಯೋಜನೆಗಳಿರಬೇಕು
- ಸುರಕ್ಷತೆ ಮತ್ತು ಭದ್ರತೆಗೆ ಒತ್ತು ನೀಡಬೇಕು. ಅಂದರೆ, ಅಗ್ನಿಶಾಮಕ ದಳದ ನಿಯೋಜನೆ, ಸಿ.ಸಿ.ಟಿ.ವಿ. ಕ್ಯಾಮೆರಾಗಳ ಮೂಲಕ ನಿಗಾ, ಸಾಕಷ್ಟು ಭದ್ರತಾ ಸಿಬ್ಬಂದಿ ನಿಯೋಜನೆ ಮಾಡಬೇಕು
- ಪರಿಣಾಮಕಾರಿ ಸಂವಹನ ವ್ಯವಸ್ಥೆ (ತುರ್ತು ಸಂದರ್ಭಗಳಲ್ಲಿ ಸ್ಥಳದಲ್ಲಿ ಸೇರಿರುವ ಜನರಿಗೆ ಮಾಹಿತಿಗಳನ್ನು ನೀಡುವ, ಜನರಲ್ಲಿನ ಆತಂಕ ದೂರಮಾಡಲು ತುರ್ತು ಸಂದೇಶಗಳನ್ನು ನೀಡುವ ವ್ಯವಸ್ಥೆ) ಇರಬೇಕು
- ವೈದ್ಯಕೀಯ ಮತ್ತು ತುರ್ತು ಚಿಕಿತ್ಸೆ ವ್ಯವಸ್ಥೆ ಮಾಡಿರಬೇಕು
- ಜನರ ನಿರ್ವಹಣೆಯಲ್ಲಿ ಎನ್‌ಜಿಒಗಳು, ಸ್ಥಳೀಯ ಸಮುದಾಯಗಳು ಪೊಲೀಸರು ಹಾಗೂ ಇತರ ಇಲಾಖೆಗಳೊಂದಿಗೆ ಭಾಗಿಯಾಗಬೇಕು
- ಮಾಧ್ಯಮಗಳು ಕೂಡ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು
- ಜನದಟ್ಟಣೆ ನಿರ್ವಹಣೆ ಮತ್ತು ವಿಪತ್ತುಗಳನ್ನು ಎದುರಿಸುವ ಕೌಶಲಗಳ ಸುಧಾರಣೆಗಾಗಿ ಆಯೋಜಕರು, ಪೊಲೀಸರು, ಸ್ವಯಂ ಸೇವಕರಿಗೆ ನಿರಂತರ ತರಬೇತಿಗಳನ್ನು ನೀಡಬೇಕು

ಆಧಾರ: ಪಿಟಿಐ, ಎನ್‌ಡಿಎಂಎ ಮಾರ್ಗಸೂಚಿ, ಮಾಧ್ಯಮ ವರದಿಗಳು

ಕಾಲ್ತುಳಿತ: ದೇಶದಲ್ಲಿ ನಡೆದ ಪ್ರಮುಖ ಘಟನೆಗಳು

ಜುಲೈ 25, 2025	ಉತ್ತರಾಖಂಡದ ಹರಿದ್ವಾರದ ಮಾನಸ ದೇವಿ ದೇವಾಲಯಕ್ಕೆ ಹೋಗುವ ಪಾದಚಾರಿ ಮಾರ್ಗದಲ್ಲಿ ಉಂಟಾದ ಕಾಲ್ತುಳಿತದಿಂದಾಗಿ **8** ಭಕ್ತರ ಸಾವು
ಜೂನ್ 29, 2025	ಒಡಿಶಾದ ಜಗದ್ವಿಖ್ಯಾತ ಪುರಿ ಜಗನ್ನಾಥ ರಥಯಾತ್ರೆಯ ಸಂದರ್ಭದಲ್ಲಿ ಗುಂಡಿಚಾ ದೇವಾಲಯದ ಸಮೀಪ ಕಾಲ್ತುಳಿತ ಸಂಭವಿಸಿ **3** ಜನರು ಸಾವು
ಜೂನ್ 4, 2025	ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರ್‌ಸಿಬಿ ಐಪಿಎಲ್ ಗೆಲುವಿನ ಸಂಭ್ರಮಾಚರಣೆ ವೇಳೆ ಉಂಟಾದ ಕಾಲ್ತುಳಿತದಲ್ಲಿ **11** ಅಭಿಮಾನಿಗಳ ಸಾವು
ಮೇ 3, 2025	ಗೋವಾದ ಶಿರ್ಗಾವ್‌ದಲ್ಲಿ ಶ್ರೀ ಲೈರಾಯಿ ದೇವಿ ದೇವಾಲಯದ ವಾರ್ಷಿಕ ಜಾತ್ರೆಯಲ್ಲಿ ಕಾಲ್ತುಳಿತ ಉಂಟಾಗಿ **7** ಭಕ್ತರ ಮರಣ
ಫೆ.15, 2025	ದೆಹಲಿಯ ರೈಲ್ವೆ ನಿಲ್ದಾಣದ ಪಾದಚಾರಿ ಮೇಲ್ಸೇತುವೆಯಲ್ಲಿ ದುರಂತ. ಮಹಾ ಕುಂಭ ಮೇಳಕ್ಕೆ ಹೊರಟಿದ್ದ **18** ಯಾತ್ರಾರ್ಥಿಗಳು ಮೃತ
ಜನವರಿ 29, 2025	ಉತ್ತರಪ್ರದೇಶದ ಪ್ರಯಾಗರಾಜ್ ಮಹಾ ಕುಂಭ ಮೇಳದಲ್ಲಿ ಮೌನಿ ಅಮಾವಾಸ್ಯೆ ದಿನ, ಏಕಾ ಏಕಿ ಭಾರಿ ಸಂಖ್ಯೆಯಲ್ಲಿ ಭಕ್ತರು ಜಮಾಯಿಸಿದ್ದರಿಂದ ಉಂಟಾದ ಕಾಲ್ತುಳಿತದಿಂದಾಗಿ ಕನಿಷ್ಠ **30** ಭಕ್ತರ ಸಾವು
ಜನವರಿ 9, 2025	ಆಂಧ್ರಪ್ರದೇಶದ ತಿರುಪತಿಯಲ್ಲಿ ದೇವರ ದರ್ಶನದ ಟಿಕೆಟ್ ಕೌಂಟರ್‌ನಲ್ಲಿ ಉಂಟಾದ ಕಾಲ್ತುಳಿತದಲ್ಲಿ **6** ಭಕ್ತರು ಸಾವು
ಜುಲೈ 2, 2024	ಉತ್ತರ ಪ್ರದೇಶದ ಹಾಥರಸ್‌ನಲ್ಲಿ ಧರ್ಮ ಬೋಧಕರೊಬ್ಬರ ಆಶೀರ್ವಚನ ಕೇಳಲು ಸೇರಿದ್ದ ಸ್ಥಳದಲ್ಲಿ ದುರ್ಘಟನೆ. **121** ಮಂದಿ ಮರಣ
ಅಕ್ಟೋಬರ್ 13, 2013	ಮಧ್ಯಪ್ರದೇಶದ ದತಿಯಾ ಜಿಲ್ಲೆಯ ರತನಗಢ ಮಾತಾ ದೇವಾಲಯದ ಸಮೀಪದ ಸೇತುವೆಯಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ **121** ಭಕ್ತರ ಸಾವು
ಫೆಬ್ರುವರಿ 10, 2013	ಉತ್ತರ ಪ್ರದೇಶದ ಪ್ರಯಾಗರಾಜ್‌ನಲ್ಲಿ ನಡೆಯುತ್ತಿದ್ದ ಕುಂಭ ಮೇಳದಲ್ಲಿ ಕಾಲ್ತುಳಿತ ಉಂಟಾಗಿ **40**ಕ್ಕೂ ಹೆಚ್ಚು ಯಾತ್ರಿಗಳ ಸಾವು
ಜನವರಿ 14, 2011	ಕೇರಳದ ಶಬರಿಮಲೆಯಲ್ಲಿ ನಡೆದ ದುರ್ಘಟನೆಯಲ್ಲಿ **102** ಅಯ್ಯಪ್ಪ ವ್ರತಧಾರಿಗಳ ಸಾವು
ಸೆಪ್ಟೆಂಬರ್ 30, 2008	ರಾಜಸ್ಥಾನದ ಜೋಧಪುರದ ಚಾಮುಂಡಿ ದೇವಿ ದೇವಾಲಯದಲ್ಲಿ ಉಂಟಾದ ಕಾಲ್ತುಳಿತದಲ್ಲಿ **249** ಭಕ್ತರ ಸಾವು
ಆಗಸ್ಟ್ 3, 2008	ಹಿಮಾಚಲ ಪ್ರದೇಶದ ಬಿಲಸಾಪುರದ ನೈನಾ ದೇವಿ ದೇವಾಲಯದಲ್ಲಿ ದುರ್ಘಟನೆ. **162** ಭಕ್ತರು ಬಲಿ
ಜನವರಿ 25, 2005	ಮಹಾರಾಷ್ಟ್ರದ ಸತಾರಾ ಜಿಲ್ಲೆಯ ವಾಯಿಯ ಮಂಧರ್‌ದೇವ್ ದೇವಿ ದೇವಾಲಯದಲ್ಲಿ ನಡೆದ ದುರಂತದಲ್ಲಿ **293** ಭಕ್ತರ ದಾರುಣ ಸಾವು
ಜೂನ್ 13, 1997	ದೆಹಲಿಯ ಉಪಾಹಾರ್ ಸಿನಿಮಾ ಮಂದಿರದಲ್ಲಿ ಉಂಟಾದ ಅಗ್ನಿ ಆಕಸ್ಮಿಕದಿಂದ ಭಯಭೀತರಾಗಿ ಪ್ರೇಕ್ಷಕರು ಹೊರಗೆ ಬರುವ ವೇಳೆ ಕಾಲ್ತುಳಿತ. **59** ಜನರು ಸಾವು
ಫೆಬ್ರುವರಿ 24, 1997	ಒಡಿಶಾದ ಬಾರಿಪದಾದಲ್ಲಿ ನಡೆದ ಧಾರ್ಮಿಕ ಸಮಾವೇಶದಲ್ಲಿ ದುರ್ಘಟನೆ ನಡೆದು **206** ಜನರು ಮರಣ
ಡಿಸೆಂಬರ್ 23, 1995	ಹರಿಯಾಣದ ಡಬ್‌ವಾಲಿಯಲ್ಲಿ ಶಾಲೆಯೊಂದರ ಕಾರ್ಯಕ್ರಮದಲ್ಲಿ ಬೆಂಕಿ ಅವಘಡದಿಂದಾಗಿ ಕಾಲ್ತುಳಿತ ಸಂಭವಿಸಿ **446** ಜನರ ಸಾವು
ಫೆಬ್ರುವರಿ 3, 1954	ಉತ್ತರಪ್ರದೇಶದ ಅಲಹಾಬಾದ್‌ನಲ್ಲಿ ನಡೆಯುತ್ತಿದ್ದ ಕುಂಭ ಮೇಳದಲ್ಲಿ ಕಾಲ್ತುಳಿತ ಉಂಟಾಗಿ **800**ಕ್ಕೂ ಹೆಚ್ಚು ಭಕ್ತರ ದುರ್ಮರಣ



ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದ ದುರಂತದ ತೀವ್ರತೆಯನ್ನು ಹೇಳಿದ್ದ ಪಾದರಕ್ಷೆಗಳು –ಪಿಟಿಐ ಚಿತ್ರ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**


ಹಾಸನ ಜಿಲ್ಲೆಯ ಬೇಲೂರಿನಲ್ಲಿ ಇತ್ತೀಚೆಗೆ ಮಹಿಳೆಯೊಬ್ಬರು ಗಣೇಶ ವಿಗ್ರಹದ ಮೇಲೆ ಚಪ್ಪಲಿ ಇಟ್ಟಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಒಂದು ಹರಿದಾಡುತ್ತಿದೆ. ‘ಇದು ಮತಾಂತರ ಮಾಫಿಯಾದವರ ಕೃತ್ಯದಂತೆ ಭಾಸವಾಗುತ್ತಿದೆ’ ಎಂದು ಪ್ರತಿಪಾದಿಸುತ್ತಾ ಈ ಪ್ರಕರಣಕ್ಕೆ ಕೋಮು ಆಯಾಮ ನೀಡಲು ಯತ್ನಿಸಲಾಗಿದೆ. ಈ ಪೋಸ್ಟ್ ಅನ್ನು ಹಲವರು ಹಂಚಿಕೊಳ್ಳುತ್ತಿದ್ದಾರೆ. ಆದರೆ. ಇದು ಸುಳ್ಳು ಸುದ್ದಿ.



ಘಟನೆ ನಡೆದ ಬಳಿಕ ಪೊಲೀಸರು ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳ ಆಧಾರದಲ್ಲಿ ಗಣೇಶ ವಿಗ್ರಹದ ಮೇಲೆ ಪಾದರಕ್ಷೆ ಇಟ್ಟ ಮಹಿಳೆಯ ಬಂಧನಕ್ಕೆ ವಿಶೇಷ ತಂಡವನ್ನು ರಚಿಸಿದ್ದರು. ಪೊಲೀಸರ ತಂಡವು ಲೀಲಮ್ಮ ಎಂಬ ಮಹಿಳೆಯನ್ನು ಬಂಧಿಸಿತ್ತು. ಆಕೆ ಮಾನಸಿಕ ಅಸ್ವಸ್ಥೆ ಎಂದು ಆಕೆಯ ಕುಟುಂಬದವರು ಹೇಳಿದ್ದರು. ಅಲ್ಲದೇ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಕೂಡ ಹೇಳಿದ್ದರು. ‘ಪ್ರಜಾವಾಣಿ’ ಸೇರಿದಂತೆ ಎಲ್ಲ ಮಾಧ್ಯಮಗಳೂ ಇದನ್ನು ವರದಿ ಮಾಡಿವೆ. ಕೋಮು ದ್ವೇಷದಿಂದ ಈ ಘಟನೆ ನಡೆದಿರುವ ಬಗ್ಗೆ ಅವರೆಲ್ಲೂ ಹೇಳಿಕೆ ನೀಡಿಲ್ಲ. ಕೋಮು ಆಯಾಮ ದ್ವೇಷದ ವರದಿ ಮಾಧ್ಯಮಗಳಲ್ಲೂ ಪ್ರಕಟವಾಗಿಲ್ಲ. ಹಾಗಾಗಿ, ಪೋಸ್ಟ್‌ನಲ್ಲಿ ಮಾಡಲಾದ ಪ್ರತಿಪಾದನೆ ಸುಳ್ಳು. ಪಿಟಿಐ ಕೂಡ ಈ ಬಗ್ಗೆ ಫ್ಯಾಕ್ಟ್‌ಚೆಕ್ ವರದಿ ಮಾಡಿದೆ.

ಪರಧನ ಮಡಿಲಲ್ಲಿ ಕಟ್ಟಿಕೊಂಡ ಕೆಂಡ

ನುಡಿ ಬೆಳಗು



ದಾದಾಪೀರ್ ನವಿಲೇಹಾಳ್

ಭಾರತದ ಸ್ವಾತಂತ್ರ್ಯ ಚಳವಳಿಗೆ ಗಾಂಧೀಜಿಯವರ ಪ್ರವೇಶದಿಂದ ಅಪೂರ್ವವಾದ ನೈತಿಕ ಬಲ ಬಂದಿತು. ಸಾರ್ವಜನಿಕ ಹಣಕಾಸಿನ ನಿರ್ವಹಣೆಯ ಕುರಿತಾದ ಅವರ ಪಾರದರ್ಶಕ ಹಾಗೂ ನಿಷ್ಠುರ ನಿಲುವುಗಳು ಆ ನೈತಿಕ ಬಲದ ಭಾಗವಾಗಿದ್ದವು. ಅಸ್ಪೃಶ್ಯತೆಯ ನಿರ್ಮೂಲನೆಯ ಕಾರ್ಯಕ್ರಮಗಳಿಗಾಗಿ ತಮ್ಮನ್ನು ಭೇಟಿ ಮಾಡಲು ಬಂದವರು ದೇಣಿಗೆ ನೀಡಲು ಅವರು ಆಗ್ರಹಿಸುತ್ತಿದ್ದರು. ಹಾಗೆ ನಗದು ರೂಪದಲ್ಲಿ ಕಾಣಿಕೆ ನೀಡುವವರು ಅದಕ್ಕಾಗಿ ಮೀಸಲಾಗಿದ್ದ ಹುಂಡಿಯಲ್ಲಿ ಹಣ ಹಾಕಿ ಸಂಬಂಧಿಸಿದ ಪುಸ್ತಕದಲ್ಲಿ ಅವರ ಹೆಸರು, ನೀಡಿದ ದೇಣಿಗೆಯ ವಿವರ ಬರೆಯಬೇಕಾಗಿತ್ತು. ಒಮ್ಮೆ ಧನಿಕರೊಬ್ಬರು ಬಂದಾಗ ಗಾಂಧೀಜಿಯವರು ಆಶ್ರಮದಲ್ಲಿ ಇರಲಿಲ್ಲ. ಕಸ್ತೂರಬಾ ಅವರನ್ನು ಕಂಡು ಮಾತನಾಡಿ ಹರಿಜನೋದ್ಧಾರ ಕಾರ್ಯಕ್ಕಾಗಿ ಎರಡು ರೂಪಾಯಿ ಕೊಟ್ಟರು. ಕಸ್ತೂರಬಾ ಆ ಧನಿಕರಿಗೆ ವಿವರ ಬರೆಯಲು ತಿಳಿಸಿ ತಮ್ಮ ಕೆಲಸದಲ್ಲಿ ನಿರತರಾದರು. ಮತ್ತು ಅವರು ಕೊಟ್ಟ ಎರಡು ರೂಪಾಯಿಗಳನ್ನು ಆಮೇಲೆ ಹುಂಡಿಯಲ್ಲಿ ಹಾಕಿದರಾಯಿತು ಎಂದುಕೊಂಡು ಹಾಕುವುದನ್ನು ಮರೆತುಬಿಟ್ಟರು. ಸಂಜೆ ಬಂದವರೇ ಗಾಂಧೀಜಿಯವರು ಅಂದು ಹುಂಡಿಯಲ್ಲಿ ಸಂಗ್ರಹವಾದ ಹಣವನ್ನು ಎಣಿಸಿ ಪುಸ್ತಕದಲ್ಲಿ ಬರೆದ ವಿವರವನ್ನು ಪರಿಶೀಲಿಸಿದರು. ತಾಳೆಯಾಗಲಿಲ್ಲ. ಕಸ್ತೂರಬಾ ತಕ್ಷಣ ಬಂದು ಎರಡು ರೂಪಾಯಿ ಕೊಟ್ಟು ಅದನ್ನು ಹುಂಡಿಗೆ ಹಾಕುವುದನ್ನು ಮರೆತೆ ಎಂದರು. ಹಾಗೆ ಸಾರ್ವಜನಿಕ ಹಣವನ್ನು ಅದು ಸೇರಬೇಕಾದ ಜಾಗಕ್ಕೆ ಸೇರಿಸದೇ ತನ್ನಲ್ಲೇ ಇಟ್ಟುಕೊಳ್ಳುವುದು ಸ್ವಂತಕ್ಕೆ ಬಳಸಿಕೊಂಡಂತಹ ಅಪರಾಧ ಎಂದು ನಿರ್ಧರಿಸಿ ಎರಡು ರೂಪಾಯಿಗೆ ಮತ್ತೆರಡು ರೂಪಾಯಿ ದಂಡಹಾಕಿ ಕಸ್ತೂರಬಾ ಅವರಿಂದ ವಸೂಲಿ ಮಾಡಿ ವಿವರವನ್ನು ಪುಸ್ತಕದಲ್ಲಿ ದಾಖಲಿಸುತ್ತಾರೆ.

ಅದು ಎಷ್ಟೇ ಇರಲಿ, ಹೇಗೇ ಇರಲಿ ಪರಧನ ಎನ್ನುವುದು ಮಡಿಲಲ್ಲಿ ಕಟ್ಟಿಕೊಂಡ ಕೆಂಡದಂತೆ. ಸ್ವಂತಕ್ಕೆ ಬಳಸಿಕೊಂಡರೆ ಸುಡುತ್ತದೆ. ಸಾರ್ವಜನಿಕ ಉದ್ದೇಶಗಳಿಗಾಗಿ ಸಂಗ್ರಹಿಸಿದ ಒಂದೊಂದು ಪೈಸೆಯನ್ನೂ ಅದೇ ಉದ್ದೇಶಕ್ಕಾಗಿ ಬಳಸುವುದು ಮತ್ತು ಅದನ್ನು ಪಾರದರ್ಶಕ ವಿವರಗಳೊಂದಿಗೆ ಬಹಿರಂಗಗೊಳಿಸುವುದರಿಂದ ಸಂಗ್ರಹಿಸಿದವನ ನೈತಿಕ ಶಕ್ತಿ ಹೆಚ್ಚುತ್ತದೆ. ಮಂದಿರಕ್ಕೆ, ಮಸೀದಿಗೆ, ಹಬ್ಬಹರಿದಿನಕ್ಕೆ ಸಾರ್ವಜನಿಕರಿಂದ ಹಣ ಸಂಗ್ರಹಿಸಿ ಮಂದಿಯ ದುಡ್ಡಿನಲ್ಲಿ ತಮ್ಮವರ ಉದ್ಧಾರ ಮಾಡುತ್ತಾ ಮೋಜು ನಡೆಸುವವರ ನಡುವೆ ನಾವಿದ್ದೇವೆ. ಅದು ಪಾಪಿಯ ಧನ, ದಕ್ಕುವುದಿಲ್ಲ ಸತ್ಪಾತ್ರಕ್ಕೆ ಸಲ್ಲುವುದಿಲ್ಲ ಎಂಬ ಯೋಚನೆ ಅವರಿಗೆ ಬರುತ್ತದೋ ಇಲ್ಲವೋ ಗೊತ್ತಿಲ್ಲ. ಗಾಂಧೀಜಿಯವರಿಗೆ ಲೆಕ್ಕ ಕೊಡಿ ಎಂದು ಯಾರೂ ಕೇಳಿರಲಾರರು. ಆದರೆ ಅವರು ಕಂಡವರ ಹಣದ ವಿಷಯದಲ್ಲಿ ಇರಬೇಕಾದ ಪಾರದರ್ಶಕತೆಯ ಇಂಗಿತವನ್ನು ಗ್ರಹಿಸಿ ಜನ ಮೆಚ್ಚುವಂತೆ ಅಲ್ಲ ಮನ ಮೆಚ್ಚುವಂತೆ ನಡೆದುಕೊಳ್ಳುತ್ತಿದ್ದರು. ಅವರು ಸಾರ್ವಜನಿಕ ಬದುಕಿನಲ್ಲಿ ಸತ್ಯ ಅಹಿಂಸೆಗಳನ್ನು ತೀವ್ರವಾಗಿ ಪ್ರತಿಪಾದಿಸಿದರು. ನಾಲ್ಕು ಜನರ ಹಣದ ದುರುಪಯೋಗ ಮತ್ತು ಸ್ವಜನಪಕ್ಷಪಾತವನ್ನು ಅದಕ್ಕಿಂತ ತೀವ್ರವಾಗಿ ವಿರೋಧಿಸಿದರು.

ಸತ್ಯ ಅಹಿಂಸೆಗಳಿಂದ ಸಮಾಜದಲ್ಲಿ ಸಹಬಾಳ್ವೆಯ ಅಡಿಪಾಯ ಸುಭದ್ರವಾಗುತ್ತದೆ. ನಾಲ್ಕು ಜನರ ಹಣದ ದುರುಪಯೋಗ ಮತ್ತು ಸ್ವಜನಪಕ್ಷಪಾತದಿಂದ ಸಮಾಜದ ನೈತಿಕ ಮಟ್ಟ ಕುಸಿಯುತ್ತದೆ. ತಮ್ಮ ಬೆವರು ಕಂಡವರ ಪಾಲಿನ ಪಾನೀಯವಾದರೆ ಸಮಾಜ ನಂಬಿಕೆಯನ್ನು ಕಳೆದುಕೊಂಡು ಸಿನಿಕವಾಗುತ್ತದೆ. ಸಮಕಾಲೀನ ಬದುಕು ಹೀಗಾಗಬಾರದು ಎಂದಾದರೆ ಎಲ್ಲರೂ ತೀವ್ರ ಎಚ್ಚರದಿಂದ ಈ ಮೌಲ್ಯಗಳನ್ನು ಜೀವಿಸಬೇಕು. ಮತ್ತು ದಾಂಪತ್ಯದ ಸೊಗಸಿನಲ್ಲಿ ಜಗತ್ತಿನ ಸೌಂದರ್ಯವನ್ನು ಕಾಣಬೇಕು. ನೈತಿಕತೆಯನ್ನು ಅಣಕಮಾಡುವ ನಡವಳಿಕೆಗಳಿಂದ ಸಮಾಜ ಪತನಮುಖಿಯಾಗುತ್ತದೆ. ಮಹಾತ್ಮರ ಜಯಂತಿಗಳು ಬರೀ ಉತ್ಸವಗಳಂತಾಗದೆ ನಮ್ಮ ನೈತಿಕ ಪ್ರಜ್ಞೆಯನ್ನು ವಿಸ್ತರಿಸುವ ಕ್ಷಣಗಳೂ ಆಗಬೇಕು.

ಗುಂಡಣ್ಣ



ಪದಬಂಧ 6179

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಭಸ್ಮವಿಟ್ಟು ಮಹಾಪುರುಷನಿಗೆ ಮಾಡುವ ಆದರ (5)
3. ಕನ್ನಡಿಗ ಹಿಡಿದಿರುವ ಸ್ಪೂನ್! (3)
5. ಗುಂಪು ಗುಂಪಾಗಿ ವರ್ಗೀಕರಿಸುವುದು (5)
7. ಕಟ ಕಟ ಸದ್ದು ಮಾಡುವ ಬಾಗಿಲು (3)
8. ಪ್ರಣಯಿಗಳ ಸುಳ್ಳು ಕೋಪ (5)
11. ಬೆಂದ ಅಕ್ಕಿಯ ಕಾಳು (3)
12. ಹೆಸರಿಡುವ ಶಾಸ್ತ್ರ (5)
14. ಕೊಡತಕ್ಕ ಹಣ (3)
15. ಲೋಹದ ಹಕ್ಕಿಯಲ್ಲಿನ ಪಯಣ (5)

ಮೇಲಿಂದ ಕೆಳಕ್ಕೆ

1. ಕವಿಕಲ್ಪನೆಯ ನಡುವೆ ಅಕ್ಕನ ಗಂಡ ನುಸುಳಿದ್ದಾನೆ (4)
2. ಈತ ತಿರುಪೆ ಬೇಡುವವನು (3)
4. ಒರಟ ಹಿಡಿದಿದ್ದು ನಿಸ್ಸಾರವಾದ ಗಸಿ (3)
6. ಇನ್ನೂ ಸಿಕ್ಕದಿರುವ ರಾಕ್ಷಸಿ! (3)
7. ಕರು ಹಾಕದ ಎಮ್ಮೆ (3)
8. ಹುಳುವಿನಲ್ಲಿರುವ ಸತ್ವ ಕಾಣುತ್ತಿದೆಯೇ? (3)
9. ಯಮನಿದ್ದಾಗಿನ ಸೂತ್ರ (3)
10. ಬುದ್ಧಿವಂತಿಕೆ ಇಲ್ಲಿದೆ (4)
11. ಸುಗಂಧಯುಕ್ತವಾದ ನೀರು (3)
13. ದನಕ್ಕಾಗಿ ನಡೆದ ಹೋರಾಟ (3)

1		2			■	3		4
	■		■	■	■	■	■	
5			6		■	7		
	■	■		■	■		■	■
■	■	8			9		■	■
■	■		■	■		■	■	10
11			■	12		13		
	■	■	■	■	■		■	
14			■	15				

6178ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉದರಂಭರಣ 3.ಭವಿ
5.ಮಭೌರ್ವಸಾ 7.ಆಗಮ
9.ಬಿಸಿಲ್ಗುದುರೆ 11.ಮಡದಿ
12.ನವರಂಗ 15.ದಯ
16.ವನಮಹೋತ್ಸವ

ಮೇಲಿಂದ ಕೆಳಕ್ಕೆ:
1.ಉಗಮ 2.ರಫ್ತು
4.ವಿರಾಮಚಿಹ್ನೆ 6.ಸಾಹಸಿ
7.ಅಸರೆ 8.ಪರಮಪದ
9.ಬಿಡದಿ 10.ದುಮ್ಮಾನ
13.ಗಡವ 14.ಮನ

ಸುಡೊಕು 6563

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6	7			5		2		8
5		4	1		8			
	8			7			5	
	6		9	3		1		2
2		5						
	3			8	2	5		6
			5		6		2	
3		2						5
	5			2		4		1

6562 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

29 ಸೆಪ್ಟೆಂಬರ್ 2025 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ಸಪ್ತಮಿ ಗಂ. 16-32 **ನಕ್ಷತ್ರ:** ಮೂಲ ಅಹೋರಾತ್ರ **ಯೋಗ:** ಸೌಭಾಗ್ಯ ಗಂ. 25-00 **ಕರಣ:** ವಣಿಜ ಗಂ. 16-32 ಕನ್ಯಾ ಮಾಸದ 12 ನೇ ದಿನ. **ಮಳೆ ನಕ್ಷತ್ರ :** ಹಸ್ತಾ 1 ನೇ ಪಾದ. **ರಾಹುಕಾಲ :** ಬೆಳಿಗ್ಗೆ 07-30 09-00 , **ಸೂರ್ಯೋದಯ :** 06-23 **ಸೂರ್ಯಾಸ್ತ :** 06-19, **ಮುಸ್ಲಿಂ ದಿನಾಂಕ :** 06 ರಬಿಯುಸ್ಸಾನಿ , **ದಿನ ವಿಶೇಷ :** ಸರಸ್ವತಿ ಆವಾಹನ, ಶಾರದಾ ಪೂಜೆ, **ಅದೃಷ್ಟ ಸಂಖ್ಯೆ :** 6, 12

ಮೇಷ: ನಿರಂತರ ಉತ್ಸಾಹ, ಹುಮ್ಮಸ್ಸಿನಿಂದಾಗಿ ಹೊಸ ಅವಕಾಶಗಳನ್ನು ಗಳಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಕೆಲಸದಲ್ಲಿ ಹರಿತ ಆಯುಧಗಳನ್ನು ಬಳಸುವಾಗ ಜಾಗ್ರತೆ ವಹಿಸಿ.

ವೃಷಭ: ಯಶಸ್ಸಿಗೆ ಕಾರಣರಾದವರನ್ನು ಮತ್ತು ಹೆಗಲು ಕೊಟ್ಟವರನ್ನು ಕಾರ್ಯ ಮುಗಿಯುವವರೆಗೆ ಜೊತೆಯಲ್ಲಿ ಇರಿಸಿಕೊಳ್ಳಿ. ಅಧಿಕ ಪ್ರಯತ್ನದಿಂದ ನಿವೇಶನ ಅಥವಾ ಕೃಷಿ ಭೂಮಿ ಖರೀದಿಸುವ ಕನಸು ನನಸಾಗಲಿದೆ.

ಮಿಥುನ: ಅಸೂಯೆ ಪಡುವ ಸಹೋದ್ಯೋಗಿಗಳು ಹಾಗೂ ಮೇಲಧಿಕಾರಿಗಳೊಂದಿಗೆ ಜಾಣ್ಮೆಯಿಂದ ವ್ಯವಹರಿಸಿ. ಕಾರ್ಯಕ್ಷೇತ್ರದಲ್ಲಿ ಯಾರೋ ಮಾಡಿದ ತಪ್ಪಿಗೆ ನೀವು ಹೆಗಲುಕೊಡಬೇಕಾದಂತೆ ಆಗಲಿದೆ.

ಕರ್ಕಾಟಕ: ಕಾನೂನು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಯಶಸ್ಸು ಪ್ರಾಪ್ತಿ. ಬಂಧುಗಳ ಸಹಾಯದಿಂದ ಪುತ್ರನಿಗೆ ಕಾರ್ಯಾನುಕೂಲ ಅಥವಾ ಆಶ್ರಯ ಸಿಗುವುದು. ಬಾಲ್ಯದ ಸ್ನೇಹಿತರ ಭೇಟಿಯಿಂದ ನೆನಪುಗಳು ಮರುಕಳಿಸಲಿವೆ.

ಸಿಂಹ: ಮಧ್ಯಾಹ್ನದ ನಂತರದಲ್ಲಿ ಷೇರು ವ್ಯವಹಾರಗಳಿಂದ ನಿರೀಕ್ಷಿಸಿದ ಲಾಭ ಬರುವುದು. ಮನೆಗೆ ಹೊಸ ಆಲಂಕಾರಿಕ ವಸ್ತುಗಳನ್ನು ಖರೀದಿಸುವುದರಿಂದ ಹಣ ವ್ಯಯ ಆಗಲಿದೆ. ಶುಭ ಫಲಗಳಿಗಾಗಿ ವಿಷ್ಣು ಸಹಸ್ರನಾಮ ಸ್ತೋತ್ರ ಪಠಿಸಿರಿ.

ಕನ್ಯಾ: ಹೆಚ್ಚಾಗಿ ಪ್ರೀತಿಸುತ್ತಿದ್ದ ವ್ಯಕ್ತಿ ಅಥವಾ ವಸ್ತು ಎಚ್ಚರದಿಂದ ತಪ್ಪಿದಲ್ಲಿ ಕಣ್ಮರೆಯಾಗುವುದು. ಲೆಕ್ಕಪತ್ರಗಳು ಪರಿಶ್ರಮ ವಹಿಸಿ ಪೂರೈಸಿದಲ್ಲಿ ಯಶಸ್ಸಿನ ಹಾದಿ ಸುಗಮವಾಗುವುದು.

ತುಲಾ: ಸಂಬಂಧಿಗಳ ಮನೆಯಲ್ಲಿ ಪರಿಚಯವಾದ ವ್ಯಕ್ತಿಗಳು ನಿಮ್ಮ ಹತ್ತಿರದ ಸಂಬಂಧವಾಗಿ ಬದಲಾಗುವ ಎಲ್ಲಾ ಲಕ್ಷಣಗಳೂ ಇವೆ. ಗುರಿ ಸಾಧಿಸಲು ಕೆಲಸಗಳನ್ನು ಶೀಘ್ರವಾಗಿ, ಪರಿಪೂರ್ಣವಾಗಿ ಮಾಡಿರಿ.

ವೃಶ್ಚಿಕ: ಮಂಗಳಕರ ಕಾರ್ಯಕ್ರಮ ನಡೆಯುವಾಗ ಜಾಗ್ರತೆ ವಹಿಸಿ. ಅತಿಯಾದ ಆಲಸ್ಯ, ಅಕಾಲದ ನಿದ್ದೆಯನ್ನು ನಿರ್ವಹಣೆ ಮಾಡುವ ಬಗ್ಗೆ ಯೋಚಿಸುವುದು ಆರೋಗ್ಯಕರ.

ಧನು: ಯಾರಾದರೂ ಹಿತವಲ್ಲದಿದ್ದರೂ ಸಲಹೆ ಕೊಡಲು ಬಂದರೆ ಕೋಪಿಸಿಕೊಳ್ಳದೆ ಸಮಾಧಾನದಿಂದ ಸುಮ್ಮನೆ ಕೇಳಿಸಿಕೊಳ್ಳಿ. ಇಂದು ಧಾರ್ಮಿಕ ಕಾರ್ಯಕ್ರಮದ ಕರೆ ಇದ್ದಲ್ಲಿ ತಪ್ಪದೇ ಭೇಟಿ ನೀಡಿ.

ಮಕರ: ವಿದ್ಯೆ ಹೇರಳವಾಗಿದ್ದರೂ ವಿನಯದ ಕೊರತೆ ಇದ್ದಲ್ಲಿ ಪಾಂಡಿತ್ಯಕ್ಕೆ ಬೆಲೆ ಸಿಗದೆ ಹೋಗಬಹುದು. ವೈರುಧ್ಯಗಳನ್ನು ಮೀರಿ ವ್ಯವಹರಿಸಿದಲ್ಲಿ ಸಂಬಂಧವು ಉಳಿಯಲಿದೆ. ಹಾಕಿದ ಯೋಜನೆಗಳು ಸಫಲವಾಗಲಿವೆ.

ಕುಂಭ: ಯುವಕ ಯುವತಿಯರಿಗೆ ಸುತ್ತಮುತ್ತ ನಡೆಯುವ ಕೆಲವು ಘಟನೆಗಳಿಂದ ದೇಶಭಕ್ತಿಯು ಗರಿಗೆದರಬಹುದು. ವಿಶೇಷ ಕುಶಲತೆಯನ್ನು ಹೊಂದಿದ ಅಂಗವಿಕಲರಿಗೆ ಪ್ರಶಸ್ತಿ ಸಿಗಬಹುದು.

ಮೀನ: ಕಣ್ಣಿಗೆ ಹಿತವೆನ್ನಿಸುವುದ್ದೆಲ್ಲವನ್ನು ತಿನ್ನುವ ಪ್ರವೃತ್ತಿಯಿಂದ ಜೀರ್ಣಾಂಗ ವ್ಯೂಹ ಕಾರ್ಯನಿರ್ವಹಿಸದೆ ಇರುವುದು ಗಮನಕ್ಕೆ ಬರಲಿದೆ. ಈಶ್ವರನ ಕೃಪೆಯಿಂದ ನಡೆಯುತ್ತಿರುವ ಕೆಲಸದಲ್ಲಿ ಔನ್ನತ್ಯವು ನಿಶ್ಚಿತವಾದದ್ದು.

ಎಲ್‌ಪಿಜಿ ವಿತರಕರನ್ನು ಬದಲಾಯಿಸಲು ಅವಕಾಶ?



ನವದೆಹಲಿ (ಪಿಟಿಐ): ಎಲ್‌ಪಿಜಿ ವಿತರಕರ ಸೇವೆ ಚೆನ್ನಾಗಿ ಇಲ್ಲದಿದ್ದರೆ, ಎಲ್‌ಪಿಜಿ ಸಂಪರ್ಕವನ್ನು ಹಾಗೆಯೇ ಉಳಿಸಿಕೊಂಡು ವಿತರಕರನ್ನು ಮತ್ತು ಕಂಪನಿಯನ್ನು ಬದಲಾಯಿಸುವ ಅವಕಾಶವು ಗ್ರಾಹಕರಿಗೆ ಸದ್ಯದಲ್ಲೇ ಸಿಗುವ ಸಾಧ್ಯತೆ ಇದೆ.

ತೈಲೋತ್ಪನ್ನಗಳ ನಿಯಂತ್ರಣ ಸಂಸ್ಥೆಯಾದ 'ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ನಿಯಂತ್ರಣ ಮಂಡಳಿ'ಯು (ಪಿಎನ್‌ಜಿಆರ್‌ಬಿ) ಇಂಥದ್ದೊಂದು ಅವಕಾಶ ಕಲ್ಪಿಸುವ ಚಿಂತನೆ ನಡೆಸಿದೆ. ಈ ಬಗ್ಗೆ ಸಲಹೆ ನೀಡುವಂತೆ ಅದು ಗ್ರಾಹಕರು ಹಾಗೂ ಸಂಬಂಧಪಟ್ಟ ಇತರರಿಗೆ ಸೂಚಿಸಿದೆ.

2013ರಲ್ಲಿ ಕೇಂದ್ರದಲ್ಲಿ ಅಧಿಕಾರದಲ್ಲಿ ಇದ್ದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು ಎಲ್‌ಪಿಜಿ ಸಂಪರ್ಕವನ್ನು ಬದಲಾಯಿಸಿಕೊಳ್ಳುವ ಪ್ರಾಯೋಗಿಕ ಯೋಜನೆಯೊಂದನ್ನು 24 ಜಿಲ್ಲೆಗಳಲ್ಲಿ ಆರಂಭಿಸಿತ್ತು. ಇದನ್ನು 2014ರಲ್ಲಿ ದೇಶದಾದ್ಯಂತ 480 ಜಿಲ್ಲೆಗಳಿಗೆ ವಿಸ್ತರಿಸಲಾಯಿತು.

ಆದರೆ, ಆಗ ಜಾರಿಗೆ ತಂದ ಯೋಜನೆಯಲ್ಲಿ ಗ್ರಾಹಕರಿಗೆ ತಮ್ಮ ಎಲ್‌ಪಿಜಿ ವಿತರಕರನ್ನು ಮಾತ್ರ ಬದಲಾಯಿಸುವ ಅವಕಾಶ ಇತ್ತು. ಎಲ್‌ಪಿಜಿ ಸೇವೆ ಒದಗಿಸುವ ಕಂಪನಿಯನ್ನು ಬದಲಾಯಿಸಲು ಅವಕಾಶ ಇರಲಿಲ್ಲ.

ಅಂದರೆ, ಇಂಡೇನ್ ಗ್ಯಾಸ್‌ನ ಗ್ರಾಹಕರು ಇಂಡೇನ್ ಗ್ಯಾಸ್‌ನ ವಿತರಕರನ್ನು ಬದಲಾಯಿಸಬಹುದಿತ್ತು. ಆದರೆ ಅವರಿಗೆ ಸಂಪರ್ಕವನ್ನು ಹಾಗೆಯೇ ಉಳಿಸಿಕೊಂಡು ಭಾರತ್ ಗ್ಯಾಸ್ ಅಥವಾ ಎಚ್‌ಪಿ ಗ್ಯಾಸ್ ಎಲ್‌ಪಿಜಿ ಸೇವೆಗೆ ಬದಲಾಗಲು ಅವಕಾಶ ಇರಲಿಲ್ಲ.

ಈಗ ಗ್ರಾಹಕರಿಗೆ ಎಲ್‌ಪಿಜಿ ಸೇವೆ ಒದಗಿಸುವ ಕಂಪನಿಯನ್ನೂ ಬದಲಾಯಿಸುವ ಅವಕಾಶ ಕಲ್ಪಿಸಬೇಕು ಎಂಬ ಚಿಂತನೆ ಪಿಎನ್‌ಜಿಆರ್‌ಬಿ ಅಧಿಕಾರಿಗಳಲ್ಲಿ ಇದೆ. 'ಇದಕ್ಕಾಗಿ ಗ್ರಾಹಕರು, ಇತರ ಪಾಲುದಾರರು ಮತ್ತು ವಿತರಕರಿಂದ ಸಲಹೆ ಆಹ್ವಾನಿಸಲಾಗಿದೆ' ಎಂದು ಪಿಎನ್‌ಜಿಆರ್‌ಬಿ ಹೇಳಿದೆ.

ಸಲಹೆಗಳನ್ನು ಅಕ್ಟೋಬರ್ ಮಧ್ಯಭಾಗಕ್ಕೆ ಮೊದಲು ಸಲ್ಲಿಸಬೇಕಿದೆ. ಇವು ಬಂದ ನಂತರದಲ್ಲಿ ಅಗತ್ಯ ನಿಯಮಗಳನ್ನು, ಮಾರ್ಗಸೂಚಿಗಳನ್ನು ಪಿಎನ್‌ಜಿಆರ್‌ಬಿ ರೂಪಿಸಲಿದೆ. ಈ ಸೌಲಭ್ಯದ ಜಾರಿಗೆ ದಿನಾಂಕವನ್ನು ಕೂಡ ಗೊತ್ತುಮಾಡಲಿದೆ.

ಹೂ ಸಂಭ್ರಮ


ಪಿಟಿಐ ಚಿತ್ರ



ಚಿಕ್ಕಮಗಳೂರಿನ ತೋಟವೊಂದರಲ್ಲಿ ಮಹಿಳಾ ಕಾರ್ಮಿಕರು ಚೆಂಡು ಹೂವು ಕೀಳುವುದರಲ್ಲಿ ಭಾನುವಾರ ತೊಡಗಿದ್ದರು

5 ವರ್ಷ: ₹50 ಲಕ್ಷ ಒಗ್ಗೂಡಿಸುವುದು ಹೇಗೆ?

ಹಣಕಾಸು ಸಾಕ್ಷರತೆ



ರಾಜೇಶ್ ಕುಮಾರ್ ಟಿ.ಆರ್
ಚಾರ್ಟರ್ಡ್ ಅಕೌಂಟೆಂಟ್

'ಮಗಳು ಈಗ 8ನೇ ಕ್ಲಾಸ್‌ನಲ್ಲಿ ಓದುತ್ತಿದ್ದಾಳೆ, ಅವಳು ಮುಂದೆ ವೈದ್ಯಕೀಯ ವ್ಯಾಸಂಗ ಮಾಡಲು ಬಯಸಿದರೆ ಕನಿಷ್ಠ ₹50 ಲಕ್ಷ ಬೇಕು. ನನ್ನ ನಿವೃತ್ತಿಗೆ ಇನ್ನು ಐದು ವರ್ಷ ಇದೆ. ಕನಿಷ್ಠ ₹50 ಲಕ್ಷ ಉಳಿತಾಯ ಮಾಡಿಕೊಂಡರೆ ಹೇಗೋ ನಿವೃತ್ತಿ ನಂತರದ ಜೀವನ ಸಲೀಸಾಗಿ ಹೋಗುತ್ತೆ. ಒಂದು ನಿವೇಶನವಿದೆ. ನಾಲ್ಕೈದು ವರ್ಷಗಳಲ್ಲಿ ಅಲ್ಲಿ ಒಂದು ಅಂತಸ್ತಿನ ಮನೆ ಕಟ್ಟಿಸೋಕೆ ₹50 ಲಕ್ಷವಾದರೂ ಬೇಕು. ಹೀಗೆ ಐದು ವರ್ಷಗಳಲ್ಲಿ ದೊಡ್ಡ ಮೊತ್ತ ಗಳಿಸಲು ಸಾಧ್ಯವೇ' ಎನ್ನುವ ಪ್ರಶ್ನೆ ಅನೇಕರನ್ನು ಕಾಡುತ್ತದೆ. ಆದರೆ ಕಡಿಮೆ ಸಮಯದಲ್ಲಿ ದೊಡ್ಡ ಮೊತ್ತ ಗಳಿಸಬೇಕಾದರೆ ದೊಡ್ಡ ಮೊತ್ತದ ಹೂಡಿಕೆಯ ಜೊತೆಗೆ ಸರಿಯಾದ ಯೋಜನೆಯೂ ಬೇಕಾಗುತ್ತದೆ. ಐದು ವರ್ಷಗಳಲ್ಲಿ ₹50 ಲಕ್ಷ ಪೇರಿಸಬೇಕಾದರೆ ಹೂಡಿಕೆ ಯೋಜನೆ ಹೇಗಿರಬೇಕು?

ಯಾವ ಹೂಡಿಕೆ ಪರಿಗಣಿಸಬಹುದು?: ಐದು ವರ್ಷಗಳಲ್ಲಿ ₹50 ಲಕ್ಷ ಒಗ್ಗೂಡಿಸಬೇಕಾದರೆ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳು ಸರಿಯಾದ ಆಯ್ಕೆಯಲ್ಲ. ಏಕೆಂದರೆ ಅಲ್ಪಾವಧಿಯಲ್ಲಿ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳ ಮೇಲಿನ ಗಳಿಕೆ ಏರಿಳಿತದ ಹಾದಿಯಲ್ಲಿರುವ ಸಾಧ್ಯತೆ ಇರುತ್ತದೆ. ಒಂದೊಮ್ಮೆ ಐದು ವರ್ಷದ ಆಸುಪಾಸಿನಲ್ಲಿ ಮಾರುಕಟ್ಟೆ ಕುಸಿತದ ಹಾದಿಯಲ್ಲಿದ್ದರೆ ಹೂಡಿಕೆ ಮೊತ್ತವನ್ನು ಲಾಭದೊಂದಿಗೆ ನಗದೀಕರಣ ಮಾಡುವುದು ಕಷ್ಟವಾಗುತ್ತದೆ. ಐದು ವರ್ಷಗಳ ಗುರಿ ಇರುವಾಗ ಹೈಬ್ರಿಡ್ ಫಂಡ್‌ಗಳಾದ ಬ್ಯಾಲೆನ್ಸ್ಡ್ ಅಡ್ವಾಂಟೇಜ್ ಫಂಡ್ ಅಥವಾ ಅಗ್ರೆಸಿವ್ ಹೈಬ್ರಿಡ್ ಫಂಡ್‌ಗಳನ್ನು ಪರಿಗಣಿಸಬೇಕಾಗುತ್ತದೆ. ಹೈಬ್ರಿಡ್ ಫಂಡ್‌ಗಳು ಹೂಡಿಕೆದಾರರ ಕನಿಷ್ಠ ಶೇ 65ರಷ್ಟು ಮೊತ್ತವನ್ನು ಷೇರು ಮಾರುಕಟ್ಟೆ ಆಧಾರಿತ ಹೂಡಿಕೆಗಳಲ್ಲಿ ತೊಡಗಿಸುತ್ತವೆ. ಇನ್ನುಳಿದ ಶೇ 35ರಷ್ಟು ಮೊತ್ತವನ್ನು ಹೆಚ್ಚು ರಿಸ್ಕ್ ಇಲ್ಲದ ಹಾಗೂ ಸ್ಥಿರ ಗಳಿಕೆ ಕೊಡುವ ಸಾಲಪತ್ರ ಆಧಾರಿತ ಹೂಡಿಕೆಗಳಲ್ಲಿ ತೊಡಗಿಸಲಾಗುತ್ತದೆ. ಇಲ್ಲಿ ಷೇರು ಮಾರುಕಟ್ಟೆ ಆಧಾರಿತ ಹೂಡಿಕೆಯ ಜೊತೆಗೆ ಸ್ಥಿರ ಆದಾಯ ಕೊಡುವ ಸಾಲಪತ್ರದ ಹೂಡಿಕೆಗಳೂ ಇರುವುದರಿಂದ ಮಾರುಕಟ್ಟೆ ಅನಿಶ್ಚಿತತೆಯ ಸಂದರ್ಭದಲ್ಲಿ ಆಗುವ ನಷ್ಟವನ್ನು ನಿಭಾಯಿಸಲು ಸಾಧ್ಯವಾಗುತ್ತದೆ. ಅಂದರೆ ಹೈಬ್ರಿಡ್ ಫಂಡ್‌ಗಳು ಮಾರುಕಟ್ಟೆ ಓಟದ ಸಂದರ್ಭದಲ್ಲಿ ಹೆಚ್ಚು ಗಳಿಕೆ ತಂದುಕೊಡುತ್ತವೆ ಮತ್ತು ಮಾರುಕಟ್ಟೆ ಅನಿಶ್ಚಿತತೆಯ ಸಂದರ್ಭದಲ್ಲಿ ನಿಮ್ಮ ಹೂಡಿಕೆಯನ್ನು ತೀರಾ ಕೆಳಮಟ್ಟಕ್ಕೆ ಕುಸಿಯಲು ಬಿಡುವುದಿಲ್ಲ.

ಹೇಗೆ ಹೂಡಿಕೆ ಮಾಡಬೇಕು?: ಯಾವು ದರ ಮೇಲೆ ಹೂಡಿಕೆ ಮಾಡಬೇಕು ಎನ್ನುವುದು ತೀರ್ಮಾನವಾದ ಬಳಿಕ ಹೇಗೆ ಹೂಡಿಕೆ ಮಾಡಬೇಕು ಎನ್ನುವುದನ್ನು ನಿರ್ಣಯಿಸಬೇಕಾಗುತ್ತದೆ. ಸಾಧ್ಯವಾದಾಗಲೆಲ್ಲ ದೊಡ್ಡ ಮೊತ್ತವನ್ನು ಹೂಡಿಕೆ ಮಾಡುತ್ತಾ ಹೋಗುವುದೇ ಐದು ವರ್ಷಗಳಲ್ಲಿ ₹50 ಲಕ್ಷದ ಗುರಿ ಮುಟ್ಟಲು ಸರಿಯಾದ ಮಾರ್ಗ ಎನಿಸುತ್ತದೆ. ಆದರೆ ದೊಡ್ಡ ಮೊತ್ತ ಪೇರಿಸುವಾಗ ಮಾರುಕಟ್ಟೆ ಏರಿಳಿತಗಳ ಲೆಕ್ಕಾಚಾರದೊಂದಿಗೆ ಶಿಸ್ತುಬದ್ಧ ಹೂಡಿಕೆ ಮಾಡುವುದು ಮುಖ್ಯ. ಹೈಬ್ರಿಡ್ ಮ್ಯೂಚುವಲ್ ಫಂಡ್‌ಗಳಲ್ಲಿ ಪ್ರತಿ ತಿಂಗಳು ವ್ಯವಸ್ಥಿತವಾಗಿ ಹೂಡಿಕೆ ಮಾಡುವ ಮೂಲಕ ಮಾರುಕಟ್ಟೆ ಏರಿಳಿತಗಳ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೆ ಹೂಡಿಕೆ ಗುರಿ ತಲುಪಬಹುದಾಗಿದೆ.

ಎಷ್ಟು ಮೊತ್ತ ಹೂಡಿಕೆ?: ಹೂಡಿಕೆ ಉತ್ಪನ್ನ ಮತ್ತು ಕ್ರಮವನ್ನು ನಿರ್ಧರಿಸಿದ ಮೇಲೆ ₹50 ಲಕ್ಷದ ಗುರಿ ತಲುಪಲು ಪ್ರತಿ ತಿಂಗಳು ಎಷ್ಟು ಮೊತ್ತವನ್ನು ಎಸ್‌ಐಪಿ ಮೂಲಕ ತೊಡಗಿಸಬೇಕು ಎನ್ನುವುದನ್ನು ನಿರ್ಧರಿಸಬೇಕಾಗುತ್ತದೆ. ಹೈಬ್ರಿಡ್ ಫಂಡ್‌ನಲ್ಲಿ ಹೂಡಿಕೆ ಮೇಲಿನ ಗಳಿಕೆ ಮಾರುಕಟ್ಟೆ ಸ್ಥಿತಿಗತಿಗೆ ಅನುಗುಣವಾಗಿ ಬದಲಾಗುವುದರಿಂದ ವಿವಿಧ ಗಳಿಕೆ ಲೆಕ್ಕಾಚಾರದೊಂದಿಗೆ ನಿಮ್ಮ ಹೂಡಿಕೆ ಮೊತ್ತವನ್ನು ನಿಗದಿಪಡಿಸಬೇಕಾಗುತ್ತದೆ. ಹೂಡಿಕೆ ಮೇಲೆ ವಾರ್ಷಿಕ ಸರಾಸರಿ ಶೇ 8ರಷ್ಟು ಗಳಿಕೆ ಸಿಕ್ಕರೆ ಪ್ರತಿ ತಿಂಗಳು ₹67,610 ಹೂಡಿಕೆ ಮಾಡಬೇಕಾಗುತ್ತದೆ. ಶೇ 10ರಷ್ಟು ಸಿಕ್ಕರೆ ₹64,040 ತೊಡಗಿಸಬೇಕಾಗುತ್ತದೆ. ಶೇ 12ರಷ್ಟು ಗಳಿಕೆ ಸಿಕ್ಕರೆ ಪ್ರತಿ ತಿಂಗಳು ₹60,650 ಎಸ್‌ಐಪಿ ಮಾಡಬೇಕಾಗುತ್ತದೆ. ಇವೆಲ್ಲದರ ಜೊತೆಗೆ ನಿಮ್ಮ ಗಳಿಕೆ ಸಾಧ್ಯತೆಯನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾದಾಗಲೆಲ್ಲಾ ದೊಡ್ಡ ಮೊತ್ತದ ಹೂಡಿಕೆ ಮಾಡಿದರೆ ₹50 ಲಕ್ಷದ ಗುರಿಯನ್ನು ತಲುಪಲು ಸಾಧ್ಯವಾಗುತ್ತದೆ.

ಪರ್ಯಾಯ ಮಾರ್ಗಗಳು: ಐದು ವರ್ಷಗಳಲ್ಲಿ ₹50 ಲಕ್ಷ ಗಳಿಸಲು ಮಾಡಬೇಕಿರುವ ಎಸ್‌ಐಪಿ ಮೊತ್ತ ಹೆಚ್ಚು ಎನಿಸಿದರೆ ಆರಂಭದಲ್ಲಿ ಎಸ್‌ಐಪಿ ಮೊತ್ತವನ್ನು ಕಡಿಮೆ ಮಾಡಿಕೊಂಡು ನಂತರದಲ್ಲಿ ಹೆಚ್ಚಳ ಮಾಡುತ್ತಾ ಹೋಗಿ. ನಿಮ್ಮ ವಾರ್ಷಿಕ ಸಂಬಳದಲ್ಲಿ ಏರಿಕೆಯಾಗುವ ಪ್ರಮಾಣಕ್ಕೆ ತಕ್ಕಂತೆ ನೀವು ಎಸ್‌ಐಪಿಯಲ್ಲಿ ಏರಿಕೆ ಮಾಡುತ್ತಾ ಹೋದರೆ ಗುರಿ ತಲುಪಲು ಸಾಧ್ಯ. ಹೂಡಿಕೆ ಮೊತ್ತ ಹೆಚ್ಚಿಸುತ್ತಾ ಹೋಗಲು ಸಾಧ್ಯವಿಲ್ಲ ಎನ್ನುವುದಾದರೆ ಹೂಡಿಕೆ ಗುರಿಯ ಅವಧಿಯನ್ನೇ ಆರೇಳು ವರ್ಷಕ್ಕೆ ವಿಸ್ತರಿಸಿಕೊಳ್ಳಿ.

ಗುರಿ ಸಾಧಿಸಲು ಈ ತಪ್ಪು ಮಾಡಬೇಡಿ

5 ವರ್ಷಗಳಲ್ಲಿ ₹50 ಲಕ್ಷ ಗಳಿಸಬೇಕಾದರೆ ಯೋಜನೆ ಎಷ್ಟು ಮುಖ್ಯವೋ ಅದರ ಶಿಸ್ತುಬದ್ಧ ಅನುಷ್ಠಾನವೂ ಮುಖ್ಯ. ಪ್ರತಿ ತಿಂಗಳು ನಿಗದಿತ ಎಸ್‌ಐಪಿ ಮೊತ್ತವನ್ನು ತೊಡಗಿಸುವುದು ಬಹಳ ಮುಖ್ಯ. ಅನಿವಾರ್ಯ ಸಂದರ್ಭದಲ್ಲಿ ಹೂಡಿಕೆ ತಪ್ಪಿಸಿದರೆ ಮುಂದಿನ ತಿಂಗಳು ಹೆಚ್ಚುವರಿ ಮೊತ್ತ ಹೂಡಿಕೆ ಮಾಡಲು ಗಮನವಹಿಸಿ. ಧುತ್ತೆಂದು ಬರುವ ತುರ್ತು ಖರ್ಚುಗಳು ನಿಮ್ಮ ಹೂಡಿಕೆಯನ್ನು ಬಾಧಿಸದಂತೆ ನೋಡಿಕೊಳ್ಳಿ. ಅದಕ್ಕಾಗಿ 6 ತಿಂಗಳ ಖರ್ಚಿನ ಬಾಬ್ತನ್ನು ತುರ್ತು ನಿಧಿಯಲ್ಲಿ ಇಟ್ಟುಕೊಳ್ಳಿ. ₹50 ಲಕ್ಷದ ಗುರಿ ಇದೆ ಎನ್ನುವಾಗ ಹಣದುಬ್ಬರ ಪ್ರಮಾಣದ ಅಂದಾಜಿರಲಿ. ಈಗ ₹50 ಲಕ್ಷಕ್ಕೆ ಇರುವ ಮೌಲ್ಯಕ್ಕೂ ಐದು ವರ್ಷಗಳ ಬಳಿಕದ ₹50 ಲಕ್ಷಕ್ಕೆ ಇರುವ ಮೌಲ್ಯಕ್ಕೂ ವ್ಯತ್ಯಾಸವಿರುತ್ತದೆ ಎನ್ನುವುದು ತಿಳಿದಿರಲಿ.

ಮದ್ಯ ಮಾರಾಟ: ಕರ್ನಾಟಕ ಮೊದಲಿಗ

'ಸರ್ಕಾರದ ನೀತಿಗಳಿಂದಾಗಿ ಅಲ್ಪಾವಧಿ, ಮಧ್ಯಮಾವಧಿಯಲ್ಲಿ ಪರಿಣಾಮ'



ನವದೆಹಲಿ (ಪಿಟಿಐ): ದೇಶದಲ್ಲಿ ತಯಾರಾದ ವಿದೇಶಿ ಮದ್ಯದ (ಐಎಂಎಫ್‌ಎಲ್) ಮಾರಾಟದಲ್ಲಿ ದಕ್ಷಿಣದ ರಾಜ್ಯಗಳು ಹೆಚ್ಚಿನ ಪಾಲು ಹೊಂದಿವೆ. ಅದರಲ್ಲೂ ಮುಖ್ಯವಾಗಿ ಐಎಂಎಫ್‌ಎಲ್ ಮಾರಾಟದಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದ್ದು, ರಾಷ್ಟ್ರ ಮಟ್ಟದಲ್ಲಿ ಶೇಕಡ 17ರಷ್ಟು ಪಾಲು ಹೊಂದಿದೆ.

ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ದಕ್ಷಿಣದ ಆಂಧ್ರಪ್ರದೇಶ, ಕರ್ನಾಟಕ, ಕೇರಳ, ತಮಿಳುನಾಡು ಮತ್ತು ತೆಲಂಗಾಣ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿ ಹೊಂದಿದ್ದ ಒಟ್ಟು ಪಾಲು ಶೇ 58ರಷ್ಟು ಆಗಿತ್ತು.

ದೇಶದ ಇತರ ಕಡೆಗಳಲ್ಲಿ ಆಗಿರುವ ಮಾರಾಟದ ಪ್ರಮಾಣವು ಒಟ್ಟು ಮಾರಾಟದಲ್ಲಿ ಶೇ 42ರಷ್ಟು ಇದೆ ಎಂದು ಭಾರತೀಯ ಮದ್ಯ ತಯಾರಿಕಾ ಕಂಪನಿಗಳ ಒಕ್ಕೂಟ (ಸಿಐಎಬಿಸಿ) ನೀಡಿರುವ ಅಂಕಿ–ಅಂಶಗಳು ಹೇಳುತ್ತಿವೆ.

2024-25ನೇ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಲೋಕಸಭಾ ಚುನಾವಣೆ ಹಾಗೂ ಕೆಲವು ರಾಜ್ಯಗಳಲ್ಲಿನ ಅಬಕಾರಿ ನೀತಿಗಳ ಕಾರಣದಿಂದಾಗಿ ಹೆಚ್ಚಿನ ಪ್ರಮಾಣದಲ್ಲಿ ಮಾರಾಟ ಆಗಿರಲಿಲ್ಲ. ಇದರಿಂದಾಗಿ ಇಡೀ ವರ್ಷದ ಒಟ್ಟು ಮಾರಾಟ ಕೂಡ ಕಡಿಮೆ ಆಗಿದೆ ಎಂದು ಸಿಐಎಬಿಸಿ ಮಹಾನಿರ್ದೇಶಕ ಅನಂತ ಎಸ್. ಅಯ್ಯರ್ ಹೇಳಿದ್ದಾರೆ.

'ರಾಜ್ಯಗಳು ವಿಧಿಸುವ ಸುಂಕ ಪ್ರತಿ ವರ್ಷವೂ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗುತ್ತಿದೆ. ಅಬಕಾರಿ ನೀತಿಗಳೂ ಬದಲಾಗುತ್ತವೆ. ಇವು ಅಲ್ಪಾವಧಿ ಹಾಗೂ ಮಧ್ಯಮಾವಧಿಯಲ್ಲಿ ಮದ್ಯ ಮಾರಾಟದ ಮೇಲೆ ಪರಿಣಾಮ ಬೀರುತ್ತವೆ' ಎಂದು ಅಯ್ಯರ್ ಹೇಳಿದ್ದಾರೆ.

ವಿಸ್ಕಿ, ವೊಡ್ಕಾ, ರಮ್, ಜಿನ್ ಮತ್ತು ಬ್ರ್ಯಾಂಡಿಯನ್ನು ಐಎಂಎಫ್‌ಎಲ್ ಹೆಸರಿನಿಂದ ಗುರುತಿಸಲಾಗುತ್ತದೆ.

ಕರ್ನಾಟಕದಲ್ಲಿ 2024–25ರಲ್ಲಿ ಒಟ್ಟು 6.88 ಕೋಟಿ ಕೇಸ್ ಐಎಂಎಫ್‌ಎಲ್ ಮಾರಾಟವಾಗಿದೆ. ಕರ್ನಾಟಕದ ನಂತರದ ಸ್ಥಾನದಲ್ಲಿರುವ ತಮಿಳುನಾಡಿನಲ್ಲಿ 6.47 ಕೋಟಿ ಕೇಸ್‌ಗಳಷ್ಟು ಐಎಂಎಫ್‌ಎಲ್ ಮಾರಾಟ ಆಗಿದೆ. ಉತ್ತರ ಪ್ರದೇಶದಲ್ಲಿ ಒಟ್ಟು 2.5 ಕೋಟಿ ಕೇಸ್‌ಗಳಷ್ಟು ಐಎಂಎಫ್‌ಎಲ್ ಮಾರಾಟ ಆಗಿದೆ.

'ಉತ್ತರ ಪ್ರದೇಶ, ರಾಜಸ್ಥಾನ, ಪಶ್ಚಿಮ ಬಂಗಾಳ, ಒಡಿಶಾ ಮತ್ತು ಆಂಧ್ರಪ್ರದೇಶದಲ್ಲಿ ಮಾರಾಟದಲ್ಲಿ ಉತ್ತಮ ಬೆಳವಣಿಗೆ ಆಗುತ್ತಿದೆ. ದೆಹಲಿ ಕೂಡ ಪ್ರಮುಖ ಮಾರುಕಟ್ಟೆ. ಅಲ್ಲಿ ಮಾರಾಟ ಹೆಚ್ಚಳ ಕಾಣುವುದಕ್ಕೆ ಹೊಸ ಅಬಕಾರಿ ನೀತಿಗಾಗಿ ಕಾಯುತ್ತಿದ್ದೇವೆ' ಎಂದು ಅಯ್ಯರ್ ಹೇಳಿದ್ದಾರೆ.

ಪ್ರೀಮಿಯಂ ವಿಸ್ಕಿಗೆ ಬೇಡಿಕೆ

ಮದ್ಯ ಉದ್ಯಮದಲ್ಲಿನ ಈಚೆಗಿನ ಬೆಳವಣಿಗೆಗಳ ಬಗ್ಗೆ ಮಾತನಾಡಿದ ಅನಂತ ಅಯ್ಯರ್, 'ಪ್ರೀಮಿಯಂ ಮತ್ತು ಐಷಾರಾಮಿ ವರ್ಗದ ಪೇಯಗಳ, ಅದರಲ್ಲೂ ಮುಖ್ಯವಾಗಿ ವಿಸ್ಕಿಗಳ ಮಾರಾಟ, ಈಚಿನ ವರ್ಷಗಳಲ್ಲಿ ಹೆಚ್ಚು ಬೆಳವಣಿಗೆ ಕಂಡಿದೆ' ಎಂದು ಹೇಳಿದ್ದಾರೆ.

'ಬಹಳಷ್ಟು ಕಂಪನಿಗಳು ಪ್ರೀಮಿಯಂ ವಿಸ್ಕಿ, ರಮ್, ವೊಡ್ಕಾಗಳ ಕಡೆ ಮುಖ ಮಾಡಿವೆ. ಪ್ರೀಮಿಯಂ ಬ್ರ್ಯಾಂಡ್‌ಗಳು ಹೆಚ್ಚಿನ ಪ್ರಮಾಣದಲ್ಲಿ ಮಾರಾಟ ಆಗುವುದು ಮುಂದೆಯೂ ಇರಲಿದೆ. ಈ ವರ್ಗದಲ್ಲಿ ಹೊಸತನ ಇರಲಿದೆ' ಎಂದಿದ್ದಾರೆ.

ರೆಪೊ ದರ ಇಳಿಕೆ ನಿರೀಕ್ಷೆ: ಎಸ್‌ಬಿಐ ರಿಸರ್ಚ್

ಇಂದಿನಿಂದ ಎಂಪಿಸಿ ಸಭೆ, ಬುಧವಾರ ತೀರ್ಮಾನ ಪ್ರಕಟ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರವನ್ನು ಶೇ 0.25ರಷ್ಟು ಕಡಿತಗೊಳಿಸಬಹುದು ಎಂದು ಎಸ್‌ಬಿಐ ರಿಸರ್ಚ್‌ನ ವರದಿ ಹೇಳಿದೆ. ಆದರೆ ಹಲವು ತಜ್ಞರ ಪ್ರಕಾರ, ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವ ಸಾಧ್ಯತೆಯೂ ಇದೆ.

ಆರ್‌ಬಿಐನ ಗವರ್ನರ್ ಸಂಜಯ್ ಮಲ್ಹೋತ್ರ ಅಧ್ಯಕ್ಷತೆಯಲ್ಲಿ ಹಣಕಾಸು ನೀತಿ ಸಮಿತಿಯ (ಎಂಪಿಸಿ) ಸಭೆ ಸೋಮವಾರದಿಂದ ಪ್ರಾರಂಭವಾಗಲಿದ್ದು, ಬುಧವಾರ (ಅಕ್ಟೋಬರ್ 1) ಸಭೆಯ ನಿರ್ಧಾರವು ಪ್ರಕಟವಾಗಲಿದೆ.

ಫೆಬ್ರುವರಿ ನಂತರ ಆರ್‌ಬಿಐ ರೆಪೊ ದರವನ್ನು ಮೂರು ಬಾರಿ ಕಡಿಮೆ ಮಾಡಿದೆ. ಆದರೆ, ಆಗಸ್ಟ್ ತಿಂಗಳಿನಲ್ಲಿ ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿತ್ತು.

ಮುಂಬರುವ ಆರ್ಥಿಕ ವರ್ಷದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ನಿಯಂತ್ರಣದಲ್ಲಿರುವ ನಿರೀಕ್ಷೆ ಇದೆ. ಹೀಗಾಗಿ, ಮುಂಬರುವ ಹಣಕಾಸು ನೀತಿ ಸಭೆಯು ಶೇ 0.25ರಷ್ಟು ರೆಪೊ ದರ ಕಡಿತ ಮಾಡಲಿದೆ ಎಂದು ಹೇಳಿದೆ.

ಜಿಎಸ್‌ಟಿ ಸರಳೀಕರಣದಿಂದಾಗಿ ಪ್ರಸಕ್ತ ಆರ್ಥಿಕ ವರ್ಷದ ಮೂರನೇ ತ್ರೈಮಾಸಿಕದಿಂದ ಮುಂದಿನ ಆರ್ಥಿಕ ವರ್ಷದ ಎರಡನೇ ತ್ರೈಮಾಸಿಕದವರೆಗೂ ಹಣದುಬ್ಬರ ಶೇ 0.25ರಿಂದ ಶೇ 0.50ರಷ್ಟು ಕಡಿಮೆ ಆಗಲಿದೆ ಎಂದು ಐಸಿಆರ್‌ಎ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ. ಅಕ್ಟೋಬರ್ ಮತ್ತು ನವೆಂಬರ್‌ನಲ್ಲಿ ಚಿಲ್ಲರೆ ಹಣದುಬ್ಬರ ಮತ್ತಷ್ಟು ಇಳಿಕೆ ಕಾಣಬಹುದು ಎಂದು ಹೇಳಿದ್ದಾರೆ.

'₹1 ಲಕ್ಷ ಕೋಟಿ ಹೂಡಿಕೆ ಪ್ರಸ್ತಾವ'

ನವದೆಹಲಿ (ಪಿಟಿಐ): ಸೆಪ್ಟೆಂಬರ್ 25ರಿಂದ 28ರವರೆಗೆ ನಡೆದ 'ವಿಶ್ವ ಆಹಾರ ಭಾರತ' ಶೃಂಗಸಭೆಯಲ್ಲಿ ₹1.02 ಲಕ್ಷ ಕೋಟಿಗೂ ಹೆಚ್ಚು ಬಂಡವಾಳ ಹೂಡಿಕೆಯ ಪ್ರಸ್ತಾವ ಬಂದಿದೆ ಎಂದು ಕೇಂದ್ರ ಆಹಾರ ಸಂಸ್ಕರಣಾ ಸಚಿವಾಲಯ ಭಾನುವಾರ ತಿಳಿಸಿದೆ.

ನವದೆಹಲಿಯ 'ಭಾರತ ಮಂಟಪ' ದಲ್ಲಿ ನಡೆದ ಈ ಶೃಂಗಸಭೆಯಲ್ಲಿ ದೇಶ ಮತ್ತು ವಿದೇಶಗಳ ಪ್ರಮುಖ 26 ಕಂಪನಿಗಳು ₹1.02 ಲಕ್ಷ ಕೋಟಿ ಮೊತ್ತವನ್ನು ದೇಶದ ಆಹಾರ ಸಂಸ್ಕರಣಾ ವಲಯದಲ್ಲಿ ಹೂಡಿಕೆ ಮಾಡಲು ಮುಂದಾಗಿವೆ. ಈ ಕುರಿತು ಕಂಪನಿಗಳೊಂದಿಗೆ ತಿಳಿವಳಿಕೆ ಪತ್ರಕ್ಕೆ ಸಹಿ ಹಾಕಲಾಗಿದೆ ಎಂದು ತಿಳಿಸಿದೆ.

ಇದು ದೇಶದ ಆಹಾರ ಸಂಸ್ಕರಣಾ ವಲಯದಲ್ಲಿನ ಅತಿದೊಡ್ಡ ಹೂಡಿಕೆಯಾಗಿದೆ. ಈ ಒಪ್ಪಂದಿಂದ 64 ಸಾವಿರಕ್ಕೂ ಹೆಚ್ಚು ನೇರ ಉದ್ಯೋಗ ಮತ್ತು ಪರೋಕ್ಷವಾಗಿ 10 ಲಕ್ಷಕ್ಕೂ ಅಧಿಕ ಉದ್ಯೋಗ ಅವಕಾಶಗಳು ಸೃಷ್ಟಿಯಾಗಲಿದೆ ಎಂದು ಅಂದಾಜಿಸಿದೆ.

'ಚಿನ್ನದ ಧಾರಣೆ ಏರಿಕೆ ನಿರೀಕ್ಷೆ'

ಹಬ್ಬದ ಖರೀದಿ ಹೆಚ್ಚಳ ದರ ಏರಿಕೆಗೆ ಕಾರಣ: ತಜ್ಞರು


ನವದೆಹಲಿ (ಪಿಟಿಐ): ಚಿನ್ನ ಮತ್ತು ಬೆಳ್ಳಿ ಧಾರಣೆಯು ಏರಿಕೆಯ ಹಾದಿಯಲ್ಲಿರುವ ನಿರೀಕ್ಷೆ ಇದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಜಾಗತಿಕವಾಗಿ ತಯಾರಿಕಾ ಮತ್ತು ಸೇವಾ ವಲಯದ ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕ (ಪಿಎಂಐ) ದತ್ತಾಂಶವು ಈ ವಾರ ಬಿಡುಗಡೆ ಆಗಲಿದೆ. ಅಮೆರಿಕದ ಉದ್ಯೋಗ ದತ್ತಾಂಶವು ಪ್ರಕಟಗೊಳ್ಳಲಿದೆ. ಇದು ಹಳದಿ ಲೋಹದ ದರವನ್ನು ನಿರ್ಧರಿಸಲಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಅಮೆರಿಕದ ಆರ್ಥಿಕ ವಿಚಾರಗಳು, ದೇಶದಲ್ಲಿ ಹಬ್ಬಗಳ ಭಾಗವಾಗಿ ನಡೆಯುವ ಚಿನ್ನದ ಖರೀದಿಯು ದರ ಏರಿಕೆಗೆ ಕಾರಣವಾಗಲಿವೆ ಎಂದು ಸ್ಮಾರ್ಟ್‌ವೆಲ್ತ್.ಎಐನ ಸಂಸ್ಥಾಪಕ ಮತ್ತು ಪ್ರಧಾನ ಸಂಶೋಧಕ ಪಂಕಜ್ ಸಿಂಗ್ ಹೇಳಿದ್ದಾರೆ.

ವರ್ಷಾಂತ್ಯದ ವೇಳೆಗೆ ಫೆಡರಲ್ ರಿಸರ್ವ್ ಎರಡು ಬಾರಿ ಬಡ್ಡಿ ದರ ಕಡಿತಗೊಳಿಸುವ ಸಾಧ್ಯತೆ ಇದೆ ಎಂದು ಹೂಡಿಕೆದಾರರು ಭಾವಿಸಿದ್ದಾರೆ. ಅಮೆರಿಕದ ಬಾಂಡ್ ಗಳಿಕೆ ಇಳಿಕೆಯಾಗಿರುವುದು ಮತ್ತು ಜಾಗತಿಕ ಅನಿಶ್ಚಿತತೆಗಳು ಚಿನ್ನವನ್ನು ಸುರಕ್ಷಿತ ಹೂಡಿಕೆಯ ತಾಣವಾಗಿಸಿವೆ ಎಂದು ಹೇಳಿದ್ದಾರೆ.

ಬೆಳ್ಳಿ ಕೆ.ಜಿಗೆ ₹1.70 ಲಕ್ಷ ತಲುಪುವ ಸಾಧ್ಯತೆ



ಮುಂದಿನ ದಿನಗಳಲ್ಲಿ ಕೆ.ಜಿ ಬೆಳ್ಳಿ ದರವು ₹1.5 ಲಕ್ಷದಿಂದ ₹1.7 ಲಕ್ಷದವರೆಗೆ ತಲುಪುವ ನಿರೀಕ್ಷೆ ಇದೆ ಎಂದು ಜೆಎಂ ಫೈನಾನ್ಶಿಯಲ್ ಸರ್ವಿಸಸ್‌ನ ಪ್ರಣವ್ ಮೆರ್ ಹೇಳಿದ್ದಾರೆ. ಆದರೆ, ಲಾಭದ ಗಳಿಕೆಯ ವಹಿವಾಟಿಗೆ ಹೂಡಿಕೆದಾರರು ಮುಂದಾಗುವುದು ಮತ್ತು ಮಾರುಕಟ್ಟೆಯಲ್ಲಿನ ಇತರ ಬೆಳವಣಿಗೆಗಳು ಕೂಡ ದರದ ಮೇಲೆ ಪ್ರಭಾವ ಬೀರಬಹುದು ಎಂದು ಅವರು ಹೇಳಿದ್ದಾರೆ. ಪ್ರಸಕ್ತ ವರ್ಷದಲ್ಲಿ ಚಿನ್ನದ ದರವು ಶೇ 45ರಷ್ಟು ಏರಿಕೆಯಾಗಿದ್ದರೆ, ಬೆಳ್ಳಿ ಶೇ 60ಕ್ಕೂ ಹೆಚ್ಚು ಏರಿಕೆ ಕಂಡಿದೆ ಎಂದು ಹೇಳಿದ್ದಾರೆ.

'ಭಾರತದ ವಿದೇಶ ನೀತಿ ರಷ್ಯಾ ಸಂಬಂಧಕ್ಕೆ ಮಾನದಂಡವಲ್ಲ'



ಸೆರ್ಗೀ ಲಾವ್ರೊವ್

ವಿಶ್ವಸಂಸ್ಥೆ (ಪಿಟಿಐ): ಭಾರತದ ರಾಷ್ಟ್ರೀಯ ಹಿತಾಸಕ್ತಿ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ಸ್ವತಂತ್ರ ವಿದೇಶಿ ನೀತಿಯನ್ನು ರಷ್ಯಾ ಗೌರವಿಸುತ್ತದೆ ಎಂದು ರಷ್ಯಾದ ವಿದೇಶಾಂಗ ಸಚಿವ ಸೆರ್ಗೀ ಲಾವ್ರೊವ್ ಅವರು ತಿಳಿಸಿದ್ದಾರೆ.

ಅಮೆರಿಕ ಅಥವಾ ಇತರ ದೇಶದೊಂದಿಗೆ ಭಾರತ ಹೊಂದಿರುವ ಸಂಬಂಧವು ರಷ್ಯಾದೊಂದಿಗಿನ ಬಾಂಧವ್ಯಕ್ಕೆ ಮಾನದಂಡವಾಗುವುದಿಲ್ಲ. ಉಭಯ ದೇಶಗಳು ಉತ್ತಮ ಸಂಬಂಧ ಹೊಂದಿವೆ ಎಂದು ಅವರು ಹೇಳಿದ್ದಾರೆ.

ವಿಶ್ವಸಂಸ್ಥೆಯ ಸಾಮಾನ್ಯಸಭೆ ಉದ್ದೇಶಿಸಿ ಮಾತನಾಡಿದ ಅವರು, ಭಾರತ ಮತ್ತು ರಷ್ಯಾವು ಕಾರ್ಯತಂತ್ರದ ಪಾಲುದಾರಿಕೆ ಹೊಂದಿವೆ ಎಂದರು.

ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಡಿಸೆಂಬರ್‌ನಲ್ಲಿ ಭಾರತಕ್ಕೆ ಬರುವ ಸಾಧ್ಯತೆಯಿದೆ ಎಂದು ಅವರು ಹೇಳಿದರು.

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹560
	12 ಕ್ಕೆ	₹75
ಮೈಸೂರು:	100 ಕ್ಕೆ	₹570

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹316-669
ದ್ವಿತಳಿ (ಬಿ.ವಿ)	₹433-839

ಭಾರತದಲ್ಲಿ ಜನಿಸಿದ ಚೀತಾ ಪ್ರೌಢಾವಸ್ಥೆಗೆ

ಭೋಪಾಲ್ (ಪಿಟಿಐ): 'ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದಲ್ಲಿ ಜನಿಸಿದ 16 ಚೀತಾ ಮರಿಗಳ ಪೈಕಿ ಒಂದು ಮರಿಯು ಪ್ರೌಢಾವಸ್ಥೆಗೆ ತಲುಪಿದೆ. ಇದರಿಂದಾಗಿ ಚೀತಾಗಳನ್ನು ಮರುಪರಿಚಯಿಸುವ ಮೂರು ವರ್ಷಗಳ ಹಿಂದಿನ ಪ್ರಯತ್ನಕ್ಕೆ ಯಶಸ್ಸು ಸಿಗುವ ವಿಶ್ವಾಸ ಮೂಡಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

2023ರ ಮಾರ್ಚ್ 29ರಂದು ನಮೀಬಿಯಾದಿಂದ ತರಿಸಿದ್ದ 'ಜ್ವಾಲಾ' ಚೀತಾಕ್ಕೆ ಜನಿಸಿದ 'ಮುಖಿ' ಮರಿಯು ಪ್ರೌಢಾವಸ್ಥೆಗೆ ತಲುಪಿದೆ. ಸೋಮವಾರದ ವೇಳೆಗೆ ಮರಿ ಜನಿಸಿ, 915 ದಿನಗಳು ಅಥವಾ 30 ತಿಂಗಳು ಪೂರ್ಣವಾಗಲಿದೆ. 'ಇದರಿಂದ ಭಾರತದಲ್ಲಿ ಚೀತಾಗಳ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಕಾಣಿಸುತ್ತಿದೆ' ಎಂದು 'ಪ್ರಾಜೆಕ್ಟ್ ಚೀತಾ'ದ ನಿರ್ದೇಶಕ ಉತ್ತಮ್ ಕುಮಾರ್ ಶರ್ಮಾ ಅವರು ತಿಳಿಸಿದ್ದಾರೆ.

'ಜ್ವಾಲಾ ಜನ್ಮ ನೀಡಿದ್ದ ನಾಲ್ಕು ಮರಿಗಳ ಪೈಕಿ ಮೂರು ಮರಿಗಳು ವಿಪರೀತ ತಾಪಮಾನದಿಂದಾಗಿ ಮೃತಪಟ್ಟಿದ್ದವು. ಮುಖಿ ಬದುಕುಳಿದು, ಚೆನ್ನಾಗಿ ಬೆಳೆದಿದೆ. ನಮ್ಮ ಪ್ರಯತ್ನಗಳು ಫಲವಾಗಿ ಪರಿವರ್ತನೆಯಾಗುತ್ತಿವೆ' ಎಂದು ಆಶಾವಾದ ವ್ಯಕ್ತಪಡಿಸಿದ್ದಾರೆ.

'ಸದ್ಯ ಭಾರತದಲ್ಲಿ 27 ಚೀತಾಗಳಿದ್ದು, 16 ಭಾರತದಲ್ಲಿಯೇ ಜನಿಸಿವೆ. ಈ ಪೈಕಿ 25 ಕುನೊದಲ್ಲಿ ಇದ್ದು, ಉಳಿದ ಮೂರು ಗಾಂಧಿ ಸಾಗರ್ ವನ್ಯಜೀವಿ ಅಭಯಾರಣ್ಯದಲ್ಲಿವೆ' ಎಂದು ಶರ್ಮಾ ಮಾಹಿತಿ ನೀಡಿದ್ದಾರೆ.

ಕಾಂಗ್ರೆಸ್‌ನ ದಾಖಲೆಗಳ ಡಿಜಿಟಲೀಕರಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಕ್ಷದ ಐತಿಹಾಸಿಕ ಹಲವು ದಾಖಲೆಗಳು ಕಾರ್ಯಕರ್ತರು ಹಾಗೂ ಸಾರ್ವಜನಿಕರಿಗೆ ಸುಲಭವಾಗಿ ಸಿಗುವಂತೆ ಕಾಂಗ್ರೆಸ್ ಡಿಜಿಟಲೀಕರಣವನ್ನು ಕೈಗೆತ್ತಿಕೊಂಡಿದೆ.

ಎಐಸಿಸಿ ಅಧಿವೇಶನಗಳ ದಾಖಲೆಗಳಿಂದ ಹಿಡಿದು 1952ರಲ್ಲಿ ನಡೆದ ಮೊದಲ ಲೋಕಸಭಾ ಚುನಾವಣೆಯ ಪ್ರಣಾಳಿಕೆ, ಇದೀಗ ಸ್ಥಗಿತಗೊಂಡಿರುವ 'ಸಮಾಜವಾದಿ ಭಾರತ' ವಾರಪತ್ರಿಕೆಯ ಸಂಚಿಕೆಗಳು ಹಾಗೂ ಪಕ್ಷದ ಅಧ್ಯಕ್ಷರ ಭಾಷಣಗಳನ್ನು ಇತಿಹಾಸದ ಭಾಗವಾಗಿ ಸಂರಕ್ಷಿಸಲು ಡಿಜಿಟಲೀಕರಣಕ್ಕೆ ಮುಂದಾಗಿದೆ.

ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಕಳೆದ ಶುಕ್ರವಾರ ಪಕ್ಷದ ಪ್ರಧಾನ ಕಚೇರಿ ಇಂದಿರಾ ಭವನದಲ್ಲಿ ಉದ್ಘಾಟಿಸಿದ ಡಾ. ಮನಮೋಹನ್ ಸಿಂಗ್ ಸಂಶೋಧನಾ ಕೇಂದ್ರ ಮತ್ತು ಗ್ರಂಥಾಲಯದಲ್ಲಿ ಡಿಜಿಟಲೀಕರಣ ಕಾರ್ಯ ನಡೆಯಲಿದೆ.

ಸ್ವಾತಂತ್ರ್ಯ ನಂತರ ದೇಶದಲ್ಲಿ ಜರುಗಿದ ಪ್ರತಿ ಲೋಕಸಭಾ ಚುನಾವಣೆಯ ಫಲಿತಾಂಶ ವರದಿಗಳು ಈಗಾಗಲೇ ನೂತನ ಗ್ರಂಥಾಲಯದಲ್ಲಿ ಭೌತಿಕ ರೂಪದಲ್ಲಿದ್ದು, ಇವುಗಳು ಸಹ ಡಿಜಿಟಲೀಕರಣಗೊಳ್ಳಲಿವೆ.

ಮಹಾತ್ಮ ಗಾಂಧಿ, ಜವಾಹರಲಾಲ್ ನೆಹರೂ, ಇಂದಿರಾ ಗಾಂಧಿ, ರಾಜೀವ್ ಗಾಂಧಿ, ಸರ್ದಾರ್ ವಲ್ಲಭಭಾಯಿ ಪಟೇಲ್, ನೇತಾಜಿ ಸುಭಾಷ್ ಚಂದ್ರ ಬೋಸ್, ಮೌಲಾನಾ ಅಬುಲ್ ಕಲಾಂ ಆಜಾದ್ ಮತ್ತು ಪಿ.ವಿ. ನರಸಿಂಹರಾವ್ ಅವರಿಗೆ ಮೀಸಲಾಗಿರುವ ಪ್ರತ್ಯೇಕ ವಿಭಾಗಗಳೊಂದಿಗೆ ಸುಮಾರು 1,200 ಪುಸ್ತಕಗಳನ್ನು ಹೊಂದಿರುವ ಸುಸಜ್ಜಿತ ಗ್ರಂಥಾಲಯವನ್ನು ನಿರ್ವಹಿಸಬಲ್ಲ ಪರಿಣತ ಗ್ರಂಥಪಾಲಕರು ಹಾಗೂ ಪತ್ರಾಗಾರ ಪಾಲಕರನ್ನು ಕಾಂಗ್ರೆಸ್ ಶೋಧಿಸುತ್ತಿದೆ.

ರಾಹುಲ್‌ಗೆ ಬೆದರಿಕೆ ಅಮಿತ್ ಶಾಗೆ ಪತ್ರ

ಪ್ರಜಾವಾಣಿ ವಾರ್ತೆ



ರಾಹುಲ್ ಗಾಂಧಿ

ನವದೆಹಲಿ: ಸುದ್ದಿ ವಾಹಿನಿಯೊಂದರ ಚರ್ಚೆಯಲ್ಲಿ ಬಿಜೆಪಿಯ ಮಾಧ್ಯಮ ವಕ್ತಾರರೊಬ್ಬರು 'ರಾಹುಲ್ ಗಾಂಧಿಯ ಎದೆಗೆ ಗುಂಡಿಕ್ಕಬೇಕು' ಎಂದಿರುವುದಕ್ಕೆ ಕಾಂಗ್ರೆಸ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

'ಪಕ್ಷದ ತಳಹಂತದ ಪದಾಧಿಕಾರಿಯೊಬ್ಬರು ನೀಡಿರುವ ಕ್ಷುಲ್ಲಕ ಹೇಳಿಕೆ ಇದು ಎಂದು ಅಸಡ್ಡೆ ತೋರಬಾರದು. ಲೋಕಸಭೆಯ ವಿರೋಧ ಪಕ್ಷದ ನಾಯಕನನ್ನು ಉದ್ದೇಶಪೂರ್ವಕವಾಗಿ ಗುರಿಯಾಗಿಸಿಕೊಂಡು ನೀಡಿರುವ ದ್ವೇಷದ ಹೇಳಿಕೆ ಇದಾಗಿದೆ' ಎಂದಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಅವರು ಈ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆದಿದ್ದಾರೆ.

'ಬಿಜೆಪಿಯ ಮಾಧ್ಯಮ ವಕ್ತಾರರಾಗಿ ಸುದ್ದಿ ವಾಹಿನಿಗಳ ಚರ್ಚೆಯಲ್ಲಿ ಭಾಗವಹಿಸುವ ಎಬಿವಿಪಿಯ ಮಾಜಿ ಕಾರ್ಯಕರ್ತ ಪ್ರಿಂಟು ಮಹದೇವ್ ಹೇಳಿಕೆಯನ್ನು ನಿರ್ಲಕ್ಷ್ಯದಿಂದ ನೋಡಬಾರದು. ಅದು ಜೀವ ಬೆದರಿಕೆ' ಎಂದಿರುವ ವೇಣುಗೋಪಾಲ್, ಆತನ ವಿರುದ್ಧ ತ್ವರಿತವಾಗಿ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ರಾಜಕೀಯ ಭಿನ್ನಾಭಿಪ್ರಾಯಗಳನ್ನು ಸಾಂವಿಧಾನಿಕ ಚೌಕಟ್ಟಿನೊಳಗೆ ಪರಿಹರಿಸಿಕೊಳ್ಳಬೇಕು. ಆದರೆ ಬಿಜೆಪಿ ನಾಯಕರು ತಮ್ಮ ವಿರೋಧಿಗಳಿಗೆ ಜೀವ ಬೆದರಿಕೆ ಹಾಕುತ್ತಿದ್ದಾರೆ ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ವಿಶ್ವಸಂಸ್ಥೆಯ ಸಾಮಾನ್ಯಸಭೆಯಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವರ ಅಭಿಪ್ರಾಯ

ಜಾಗತಿಕ ಕಾರ್ಯಪಡೆ ಅಗತ್ಯ: ಜೈಶಂಕರ್



ಎಸ್.ಜೈಶಂಕರ್

ನ್ಯೂಯಾರ್ಕ್ (ಪಿಟಿಐ): ಜಗತ್ತಿಗೆ ಜಾಗತಿಕ ಕಾರ್ಯಪಡೆಯ ಅಗತ್ಯವಿದೆ ಮತ್ತು ಅನಿಶ್ಚಿತತೆಯ ನಡುವೆಯೂ ಹೊಸ ವಾಣಿಜ್ಯ ವ್ಯವಸ್ಥೆಯು ಜಾರಿಗೆ ಬರಲಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಹೇಳಿದರು.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧಿವೇಶನದ ನಡುವೆ 'ಅಬ್ಸರ್‌ವರ್ ರಿಸರ್ಚ್ ಫೌಂಡೇಶನ್' (ಒಆರ್‌ಎಫ್) ಸಭೆಯಲ್ಲಿ ಮಾತನಾಡಿದ ಅವರು, 'ಅನಿಶ್ಚಿತತೆ ಮಧ್ಯೆಯೂ ವಾಣಿಜ್ಯ ವ್ಯಾಪಾರವು ತನ್ನ ಮಾರ್ಗವನ್ನು ತಾನೇ ಹುಡುಕಿಕೊಂಡು ಸಾಗುತ್ತದೆ' ಎಂದು ಆಶಾವಾದ ವ್ಯಕ್ತಪಡಿಸಿದರು.

ಭಾರತವು ವ್ಯಾಪಾರ ಮತ್ತು ಪಾಲುದಾರಿಕೆಯನ್ನು ವಿಸ್ತರಿಸುವ ಉದ್ದೇಶದೊಂದಿಗೆ ಲ್ಯಾಟಿನ್ ಅಮೆರಿಕ ಮತ್ತು ಕೆರೀಬಿಯಾದೊಂದಿಗೆ ವ್ಯಾಪಾರದಲ್ಲಿ ತೊಡಗಿದೆ ಎಂದು ತಿಳಿಸಿದರು.

ದೊಡ್ಡ ರಾಷ್ಟ್ರಗಳು 'ಕ್ಷೋಭೆಯ ವಾತಾವರಣ'ವನ್ನು ಎದುರಿಸುತ್ತಿದ್ದು, ಈ ಸಂದರ್ಭದಲ್ಲಿ ಸ್ವಾವಲಂಬಿಯಾಗಲು ಸಾಮರ್ಥ್ಯ ವೃದ್ಧಿ ಅವಶ್ಯಕ ಎಂದು ಹೇಳಿದರು.

ನಾಯಕರೊಂದಿಗೆ ದ್ವಿಪಕ್ಷೀಯ ಚರ್ಚೆ

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧಿವೇಶನದ ಮಧ್ಯೆಯೇ ಎಸ್.ಜೈಶಂಕರ್ ಅವರು ಸರಣಿ ಉನ್ನತ ಮಟ್ಟದ ದ್ವಿಪಕ್ಷೀಯ ಸಭೆ ನಡೆಸಿದರು.

ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಅವರನ್ನು ಭೇಟಿಯಾಗಿ ಭೌಗೋಳಿಕ ರಾಜಕೀಯ ಬೆಳವಣಿಗೆ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಚರ್ಚೆ ನಡೆಸಿದರು. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧ್ಯಕ್ಷೆ ಅನ್ನಾಲೆನಾ ಬೇರ್‌ಬಾಕ್ ಅವರೊಂದಿಗೂ ಮಾತುಕತೆ ನಡೆಸಿದರು. ಸೌದಿ ಅರೇಬಿಯಾ ಮತ್ತು ಅಲ್ಜೀರಿಯಾದ ವಿದೇಶಾಂಗ ಸಚಿವರಾದ ಫೈಸಲ್ ಬಿನ್ ಫರ್ಹಾನ್ ಮತ್ತು ಅಹ್ಮದ್ ಅತ್ತಾಫ್ ಅವರೊಂದಿಗೂ ಪ್ರತ್ಯೇಕವಾಗಿ ಸಂವಾದ ನಡೆಸಿದರು.

'ಭಯೋತ್ಪಾದನೆಗೆ ಕುಮ್ಮಕ್ಕು ಒಪ್ಪಿಕೊಂಡ ಪಾಕಿಸ್ತಾನ'

ವಿಶ್ವಸಂಸ್ಥೆ: ಸಾಮಾನ್ಯಸಭೆಯ ಅಧಿವೇಶನದಲ್ಲಿ ಭಯೋತ್ಪಾದನೆ ವಿರುದ್ಧ ಮಾತನಾಡಿದ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಪಾಕಿಸ್ತಾನಕ್ಕೆ ಭಾರತ ತಿರುಗೇಟು ನೀಡಿದೆ.

'ಜೈಶಂಕರ್ ಅವರು ಪಾಕಿಸ್ತಾನದ ಹೆಸರನ್ನು ಪ್ರಸ್ತಾಪಿಸಿರಲಿಲ್ಲ. ಆದರೂ ಅವರ ಹೇಳಿಕೆಗೆ ಪ್ರತಿಕ್ರಿಯಿಸುವ ಮೂಲಕ ಪಾಕಿಸ್ತಾನವು ಗಡಿ ಭಯೋತ್ಪಾದನೆಗೆ ಕುಮ್ಮಕ್ಕು ನೀಡುತ್ತಿರುವುದನ್ನು ಒಪ್ಪಿಕೊಂಡಿದೆ' ಎಂದು ಹೇಳಿದೆ.

'ಪ್ರಮುಖ ಅಂತರರಾಷ್ಟ್ರೀಯ ಭಯೋತ್ಪಾದಕ ಕೃತ್ಯಗಳ ಹಿಂದೆ ಇರುವುದು ಒಂದೇ ದೇಶ. ಅದು ಭಯೋತ್ಪಾದನೆಯ ಕೇಂದ್ರ ಬಿಂದು' ಎಂದು ಜೈಶಂಕರ್ ಅವರು ಶನಿವಾರ ಹೇಳಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ಪಾಕಿಸ್ತಾನದ ಪ್ರತಿನಿಧಿಯೊಬ್ಬರು, 'ಭಾರತವು ದೇಶದ ವಿರುದ್ಧ ಅಪಪ್ರಚಾರ ಮಾಡುತ್ತಿದೆ' ಎಂದು ಆರೋಪಿಸಿದ್ದರು.

ತಿಲಕ್ ವರ್ಮಾ ಆಟ; ಭಾರತದ ಮುಡಿಗೆ ಕಿರೀಟ

ಸೂರ್ಯಕುಮಾರ್ ಬಳಗಕ್ಕೆ ಏಷ್ಯಾ ಕಪ್ ಮಿಂಚಿದ ಕುಲದೀಪ್ ಯಾದವ್

ಪ್ರಜಾವಾಣಿ ವಾರ್ತೆ/ಪಿಟಿಐ



ಆಟದ ಮೈದಾನದಲ್ಲಿಯೂ 'ಆಪರೇಷನ್ ಸಿಂಧೂರ'... ಫಲಿತಾಂಶ ಒಂದೇ– ಭಾರತದ ವಿಜಯ. ನಮ್ಮ ಕ್ರಿಕೆಟ್ ಆಟಗಾರರಿಗೆ ಅಭಿನಂದನೆಗಳು..!
ನರೇಂದ್ರ ಮೋದಿ, ಪ್ರಧಾನ ಮಂತ್ರಿ

ದುಬೈ: ಅಪಾರ ಒತ್ತಡದ ಪರಿಸ್ಥಿತಿಯಲ್ಲಿ ತಿಲಕ್ ವರ್ಮಾ ತಮ್ಮ ಜೀವನದ ಸ್ಮರಣೀಯ ಇನಿಂಗ್ಸ್ ಆಡಿದರು. ಅವರ ದಿಟ್ಟ ಆಟದ ಫಲವಾಗಿ ಭಾರತ ತಂಡವು ಏಷ್ಯಾ ಕಪ್ ಗೆದ್ದು ಸಂಭ್ರಮಿಸಿತು.

ಭಾನುವಾರ ರಾತ್ರಿ ದುಬೈ ಅಂತರ ರಾಷ್ಟ್ರೀಯ ಕ್ರೀಡಾಂಗಣದಲ್ಲಿ 147 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ ಭಾರತ ತಂಡವು ಆರಂಭದಲ್ಲಿಯೇ ಎಡವಿತ್ತು. 4 ಓವರ್‌ಗಳಲ್ಲಿ 20 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡಿತ್ತು. ಅದರಲ್ಲಿ ಸಿಡಿಲಮರಿ ಅಭಿಷೇಕ್ ಶರ್ಮಾ, ನಾಯಕ ಸೂರ್ಯಕುಮಾರ್ ಮತ್ತು ಶುಭಮನ್ ಗಿಲ್ ಅವರು ಡಗ್‌ಔಟ್ ಸೇರಿದರು. ಸ್ಪಿನ್ನರ್ ಕುಲದೀಪ್ ಯಾದವ್ (30ಕ್ಕೆ4) ಅವರ ಶ್ರಮವು ವ್ಯರ್ಥವಾಗುವ ಆತಂಕ ಎದುರಾಗಿತ್ತು. ಏಕೆಂದರೆ ಟಾಸ್ ಗೆದ್ದ ಭಾರತ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತ್ತು. ಪಾಕ್ ತಂಡದ ಆರಂಭಿಕ ಜೋಡಿಯು ಅಮೋಘ ಆಟವಾಡಿದ್ದರು. ಆದರೂ ಪಾಕ್ ತಂಡವನ್ನು 146 ರನ್‌ಗಳ ಸಾಧಾರಣ ಮೊತ್ತಕ್ಕೆ ಕಟ್ಟಿಹಾಕುವಲ್ಲಿ ಕುಲದೀಪ್ ಪ್ರಮುಖ ಪಾತ್ರ ವಹಿಸಿದ್ದರು.

ಏಷ್ಯಾ ಕಪ್ 2025

ಆದರೆ ಕುಲದೀಪ್ ಶ್ರಮ ವ್ಯರ್ಥವಾಗದಂತೆ ತಿಲಕ್ (ಔಟಾಗದೇ 69; 53ಎಸೆತ, 4X3, 6X4) ನೋಡಿಕೊಂಡರು. ಭಾರತ ತಂಡವು 5 ವಿಕೆಟ್‌ಗಳಿಂದ ಜಯಿಸಿತು. ಭಾರತವು 9ನೇ ಬಾರಿ ಏಷ್ಯಾ ಕಪ್ ಮುಡಿಗೇರಿಸಿ-ಕೊಂಡಿತು. ಪ್ರಸಕ್ತ ಟೂರ್ನಿಯಲ್ಲಿ ಭಾರತ ತಂಡವು ಪಾಕ್ ತಂಡವನ್ನು ಮೂರು ಪಂದ್ಯಗಳಲ್ಲಿ ಮಣಿಸಿತು. ಏಷ್ಯಾ ಕಪ್ ಇತಿಹಾಸದಲ್ಲಿ ಉಭಯ ತಂಡಗಳು ಇದೇ ಮೊದಲ ಸಲ ಫೈನಲ್‌ನಲ್ಲಿ ಮುಖಾಮುಖಿಯಾಗಿದ್ದವು.

ಅವರು ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ ಸಂಜು ಸ್ಯಾಮ್ಸನ್ (24; 21ಎ) ಅವರೊಂದಿಗೆ 57 ರನ್ ಸೇರಿಸಿದರು. ಆದರೆ ಸಂಜು ಪ್ರಯೋಗಿಸಿದ ಒಂದು ತಪ್ಪು ಹೊಡೆತ ದಿಂದ ಜೊತೆಯಾಟ ಮುರಿಯಿತು.

ಆದರೆ ತಿಲಕ್ ಮಾತ್ರ ಎದೆಗುಂದ ಲಿಲ್ಲ. ಅವರಿಗೆ ಅದೃಷ್ಟವೂ ಜತೆಗೂಡಿತು. ತಿಲಕ್ ಅವರನ್ನು ಒಂದು ಹಂತದಲ್ಲಿ ಸುಲಭವಾಗಿ ರನ್‌ಔಟ್ ಮಾಡುವ ಅವಕಾಶವನ್ನು ವಿಕೆಟ್‌ಕೀಪರ್ ಕೈತಪ್ಪಿಸಿ-ಕೊಂಡರು. ಅದು ದುಬಾರಿಯಾಯಿತು. ತಿಲಕ್ ಜೊತೆಗೂಡಿದ ಶಿವಂ ದುಬೆ (33; 22ಎ, 4X2, 6X2) ತಂಡವನ್ನು ಗೆಲುವಿನ ಸನಿಹ ತಂದು ನಿಲ್ಲಿಸಿದರು.

ಪಾಕ್ ತಂಡದ ಅನುಭವಿ ಬೌಲರ್ ಹ್ಯಾರಿಸ್ ರವೂಫ್ ಅವರ ಓವರ್‌ಗ-ಳಲ್ಲಿಯೇ ತಿಲಕ್ ಮತ್ತು ದುಬೆ ಹೆಚ್ಚು ರನ್‌ಗಳನ್ನು ಸೂರೆ ಮಾಡಿದರು. ಅದರಲ್ಲೂ 15ನೇ ಓವರ್‌ನಲ್ಲಿ 17 ರನ್ ಮತ್ತು 18ನೇ ಓವರ್‌ನಲ್ಲಿ 13 ರನ್ ಹೊಡೆದ ಭಾರತದ ಜೋಡಿಯು ಮಿಂಚಿತು.

ಕುಲದೀಪ್ ಮೋಡಿ: ಕುಲದೀಪ್ (4–0–30–4) ಅವರ ಎಸೆತಗಳ ತಿರುವು, ಚಲನೆಗಳನ್ನು ಅಂದಾಜಿಸುವಲ್ಲಿ ಎಡವಿದ ಪಾಕ್ ತಂಡವು ಸಾಧಾರಣ ಮೊತ್ತ ಗಳಿಸಿತು. ಕುಲದೀಪ್ ಅವರಿಗೆ ವರುಣ್ ಚಕ್ರವರ್ತಿ (30ಕ್ಕೆ2), ಅಕ್ಷರ್ ಪಟೇಲ್ (26ಕ್ಕೆ2) ಮತ್ತು ವೇಗಿ ಜಸ್‌ಪ್ರೀತ್ ಬೂಮ್ರಾ (25ಕ್ಕೆ2) ಅವರೂ ಉತ್ತಮ ಜೊತೆ ನೀಡಿದರು. ಅದರಿಂದಾಗಿ ಇನಿಂಗ್ಸ್‌ನಲ್ಲಿ ಇನ್ನೂ ಐದು ಎಸೆತಗಳು ಬಾಕಿ ಇರುವಾಗಲೇ ಪಾಕ್ ತಂಡದ ಎಲ್ಲ ಬ್ಯಾಟರ್‌ಗಳೂ ಗೂಡಿಗೆ ಮರಳಿದರು.

ಪಾಕ್ ಆರಂಭಿಕ ಜೋಡಿ ಫರ್ಹಾನ್ (57; 38ಎಸೆತ) ಮತ್ತು ಫಕರ್ ಜಮಾನ್ (46; 35ಎ) ಅವರು ಪ್ರಯತ್ನಿಸಿದರು. ಗಾಯಗೊಂಡಿರುವ ಹಾರ್ದಿಕ್ ಪಾಂಡ್ಯ ಅವರಿಲ್ಲದೇ ಕಣಕ್ಕಿಳಿದ ಭಾರತ ತಂಡಕ್ಕೆ ಶಿವಂ ದುಬೆ ಬೌಲಿಂಗ್ ಆರಂಭಿಸಿದರು. ಮೊದಲ ಓವರ್ ಚೆನ್ನಾಗಿಯೇ ಮಾಡಿದರು.

ಆದರೆ ನಂತರ ಪಾಕ್ ಜೋಡಿಯು ಬೀಸಾಟ ಆರಂಭಿಸಿತು. ಇದರಿಂದಾಗಿ ಹತ್ತು ಓವರ್ ದಾಟುವ ಮುನ್ನವೇ ಪಾಕ್ ತಂಡದ ಸ್ಕೋರ್‌ಬೋರ್ಡ್‌ನಲ್ಲಿ 84 ರನ್‌ಗಳಾಗಿದ್ದವು. ಒಂದೂ ವಿಕೆಟ್ ಪತನ-ವಾಗಿರಲಿಲ್ಲ. ಅಷ್ಟರಲ್ಲಿ ಫರ್ಹಾನ್ ಕೂಡ ತಮ್ಮ ಅರ್ಧಶತಕ ಗಳಿಸಿದ್ದರು.

ಆದರೆ ಹತ್ತನೇ ಓವರ್ ಬೌಲಿಂಗ್ ಮಾಡಿದ ವರುಣ್ ಅವರ ಎಸೆತವನ್ನು ಸಿಕ್ಸರ್‌ಗೆತ್ತುವ ಭರದಲ್ಲಿ ತಿಲಕ್ ವರ್ಮಾಗೆ ಸುಲಭ ಕ್ಯಾಚ್ ಕೊಟ್ಟ ಫರ್ಹಾನ್ ಆಟಕ್ಕೆ ತೆರೆಬಿತ್ತು. ಇದರ ನಂತರದ 62 ರನ್‌ಗಳು ಪಾಕ್ ಖಾತೆ ಸೇರುವಷ್ಟರಲ್ಲಿ ಎಲ್ಲ ಬ್ಯಾಟರ್‌ಗಳು ಪೆವಿಲಿಯನ್ ಮರಳಿದರು.



ತಿಲಕ್ ವರ್ಮಾ ಸಂಭ್ರಮ ಎಎಫ್‌ಪಿ ಚಿತ್ರ

ನಖ್ವಿಯಿಂದ ಟ್ರೋಫಿ ನಿರಾಕರಿಸಿದ ಭಾರತ

ದುಬೈ (ಪಿಟಿಐ): ಪಾಕಿಸ್ತಾನ ತಂಡದ ಎದುರಿನ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಗೆದ್ದ ಭಾರತ ತಂಡವು ಏಷ್ಯನ್ ಕ್ರಿಕೆಟ್ ಕೌನ್ಸಿಲ್ ಅಧ್ಯಕ್ಷರೂ ಆಗಿರುವ ಪಾಕಿಸ್ತಾನದ ಸಚಿವ ಮೊಹಸೀನ್ ನಖ್ವಿ ಅವರಿಂದ ಟ್ರೋಫಿ ಸ್ವೀಕರಿಸಲಿಲ್ಲ.

ಭಾನುವಾರ ತಡರಾತ್ರಿ ಪಂದ್ಯದ ನಂತರ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಯಿತು. ಪೂರ್ವನಿಗದಿಯಂತೆ ನಖ್ವಿ ಅವರೇ ಟ್ರೋಫಿ ಪ್ರದಾನ ಮಾಡಲು ಸಿದ್ಧರಾಗಿದ್ದರು. ಎಸಿಸಿ ಅಧ್ಯಕ್ಷರಾಗಿ ನಖ್ವಿ ಅವರು ಪ್ರಶಸ್ತಿ ಪ್ರದಾನ ಮಾಡುವುದು ಶಿಷ್ಟಾಚಾರ.

ಆದರೆ ಅವರು ಪಾಕ್ ಸರ್ಕಾರದಲ್ಲಿ ಸಚಿವರಾಗಿ ಭಾರತ ವಿರೋಧಿ ನಿಲುವು ಹೊಂದಿದ್ದಾರೆ. ಈ ಹಿಂದೆಯೂ ಅವರು ಭಾರತದ ಎದುರು ಹಲವು ವಿವಾದಾತ್ಮಕ ಹೇಳಿಕೆಗಳನ್ನು ನೀಡಿದ್ದರೆನ್ನಲಾಗಿದೆ.

ಸ್ಕೋರ್ ಕಾರ್ಡ್

ಪಾಕಿಸ್ತಾನ: 19.1 ಓವರ್‌ಗಳಲ್ಲಿ 146

ಫರ್ಹಾನ್ ಸಿ ತಿಲಕ್ ಬಿ ವರುಣ್ 57 (38ಎ, 4x5, 6x3)
ಫಕಾರ್ ಸಿ ಕುಲದೀಪ್ ಬಿ ವರುಣ್ 46 (35ಎ, 4x2, 6x2)
ಅಯೂಬ್ ಸಿ ಬೂಮ್ರಾ ಬಿ ಕುಲದೀಪ್ 14 (11ಎ, 4x2)
ಹ್ಯಾರಿಸ್ ಸಿ ರಿಂಕು ಬಿ ಅಕ್ಷರ್ 0 (2ಎ)
ಆಘಾ ಸಿ ಸ್ಯಾಮ್ಸನ್ ಬಿ ಕುಲದೀಪ್ 8 (7ಎ)
ತಲಾತ್ ಸಿ ಸ್ಯಾಮ್ಸನ್ ಬಿ ಅಕ್ಷರ್ 1 (2ಎ)
ನವಾಜ್ ಸಿ ರಿಂಕು ಬಿ ಬೂಮ್ರಾ 6 (9ಎ)
ಶಾಹೀನ್ ಎಲ್‌ಬಿಡಬ್ಲ್ಯು ಬಿ ಕುಲದೀಪ್ 0 (3ಎ)
ಫಾಹೀಮ್ ಸಿ ತಿಲಕ್ ಬಿ ಕುಲದೀಪ್ 0 (2ಎ)
ರವೂಫ್ ಬಿ ಬೂಮ್ರಾ 6 (4ಎ, 4x1)
ಅಬ್ರಾರ್ ಔಟಾಗದೇ 1 (2ಎ)
ಇತರೆ: 7 (ಬೈ 1, ಲೆಗ್‌ಬೈ 2, ವೈಡ್ 4)
ವಿಕೆಟ್ ಪತನ: 1-84 (ಸಾಹಿಬ್ ಝಾದಾ ಫರ್ಹಾನ್, 9.4), 2-113 (ಸೈಮ್ ಅಯೂಬ್, 12.5), 3-114 (ಮೊಹಮ್ಮದ್ ಹ್ಯಾರಿಸ್, 13.3), 4-126 (ಫಕರ್ ಜಮಾನ್, 14.4), 5-131 (ಹುಸೇನ್ ತಲಾತ್, 15.3), 6-133 (ಸಲ್ಮಾನ್ ಆಘಾ, 16.1), 7-134 (ಶಾಹೀನ್ ಶಾ ಅಫ್ರಿದಿ, 16.4), 8-134 (ಫಾಹೀಮ್ ಅಶ್ರಫ್, 16.6), 9-141 (ಹ್ಯಾರಿಸ್ ರವೂಫ್, 17.5), 10-146 (ಮೊಹಮ್ಮದ್ ನವಾಜ್, 19.1)
ಬೌಲಿಂಗ್: ಶಿವಂ ದುಬೆ 3-0-23-0, ಜಸ್‌ಪ್ರೀತ್ ಬೂಮ್ರಾ 3.1-0-25-2, ವರುಣ್ ಚಕ್ರವರ್ತಿ 4-0-30-2, ಅಕ್ಷರ್ ಪಟೇಲ್ 4-0-26-2, ಕುಲದೀಪ್ ಯಾದವ್ 4-0-30-4, ತಿಲಕ್ ವರ್ಮಾ 1-0-9-0

ಭಾರತ: 19.4 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 150

ಅಭಿಷೇಕ್ ಸಿ ರವೂಫ್ ಬಿ ಫಹೀಮ್ 5 (6ಎ, 4x1)
ಗಿಲ್ ಸಿ ರವೂಫ್ ಬಿ ಫಹೀಮ್ 12 (10ಎ, 4x1)
ಸೂರ್ಯಕುಮಾರ್ ಸಿ ಆಘಾ ಬಿ ಶಾಹೀನ್ 1 (5ಎ)
ತಿಲಕ್ ಔಟಾಗದೇ 69 (53ಎ, 4x3, 6x4)
ಸ್ಯಾಮ್ಸನ್ ಸಿ ಫರ್ಹಾನ್ ಬಿ ಅಬ್ರಾರ್ 24 (21ಎ, 4x2, 6x1)
ದುಬೆ ಸಿ ಶಾಹೀನ್ ಬಿ ಫಹೀಮ್ 33 (22ಎ, 4x2, 6x2)
ರಿಂಕು ಸಿಂಗ್ ಔಟಾಗದೇ 4 (1ಎ, 4x1)
ಇತರೆ: 2 (ವೈಡ್ 2)
ವಿಕೆಟ್ ಪತನ: 1–7 (ಅಭಿಷೇಕ್ ಶರ್ಮಾ, 1.1), 2–10 (ಸೂರ್ಯಕುಮಾರ್ ಯಾದವ್, 2.3), 3–20 (ಶುಭಮನ್ ಗಿಲ್, 3.6), 4–77 (ಸಂಜು ಸ್ಯಾಮ್ಸನ್, 12.2), 5–137 (ಶಿವಂ ದುಬೆ, 18.6)
ಬೌಲಿಂಗ್: ಶಾಹೀನ್ ಅಫ್ರಿದಿ 4–0–20–1, ಫಹೀಮ್ ಅಶ್ರಫ್ 4–0–29–3, ಮೊಹಮ್ಮದ್ ನವಾಜ್ 1–0–6–0, ಹ್ಯಾರಿಸ್ ರವೂಫ್ 3.4–0–50–0, ಅಬ್ರಾರ್ ಅಹಮದ್ 4–0–29–1, ಸೈಮ್ ಅಯೂಬ್ 3–0–16–0

ಎಐಎಫ್‌ಎಫ್ ವಿಶೇಷ ಮಹಾಸಭೆ ಅಕ್ಟೋಬರ್ 12ಕ್ಕೆ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ನಿರ್ದೇಶನದಲ್ಲಿ ರೂಪಿಸಲಾಗಿರುವ ಕರಡು ನಿಯಮಾವಳಿಯನ್ನು ಅಂಗೀಕರಿಸಲು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಅಕ್ಟೋಬರ್ 12ರಂದು ಇಲ್ಲಿ ವಿಶೇಷ ಮಹಾಸಭೆಯನ್ನು ಕರೆದಿದೆ.

ಹೊಸ ನಿಯಮಾವಳಿಯನ್ನು ಅಕ್ಟೋಬರ್ 30ರೊಳಗೆ ಅಂಗೀಕರಿಸುವಂತೆ ಫಿಫಾ, ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ಗೆ ಗಡುವು ವಿಧಿಸಿದೆ.

'ವಿಶೇಷ ಕಾರ್ಯಸೂಚಿಗಾಗಿ ಈ ಸಭೆ ಕರೆಯಲಾಗಿದೆ. ಇದು ನಿಯಮಾವಳಿ ಯನ್ನು ಅಂಗೀಕರಿಸಲಷ್ಟೇ ಕರೆಯಲಾಗಿರುವ ಸಭೆ. ಇತರ ಕಾರ್ಯಸೂಚಿಗಳೇನೂ ಇಲ್ಲ' ಎಂದು ಎಐಎಫ್‌ಎಫ್ ಅಧಿಕಾರಿಯೊಬ್ಬರು ಭಾನುವಾರ ಪಿಟಿಐಗೆ ತಿಳಿಸಿದರು.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಲ್.ನಾಗೇಶ್ವರ ರಾವ್ ಅವರು ಈ ನಿಯಮಾವಳಿ ರೂಪಿಸಿದ್ದು, ಸುಪ್ರೀಂ ಕೋರ್ಟ್ ಇದಕ್ಕೆ ಕೆಲವು ಮಾರ್ಪಾಡುಗಳೊಂದಿಗೆ ಸಮ್ಮತಿ ನೀಡಿದೆ. ನಾಲ್ಕು ವಾರಗಳ ಒಳಗೆ ಸರ್ವಸದಸ್ಯರ ಸಭೆ ಕರೆದು ಇದನ್ನು ಅಂಗೀಕರಿಸುವಂತೆ ಎಐಎಫ್‌ಎಫ್‌ಗೆ ನಿರ್ದೇಶನವನ್ನೂ ನೀಡಿದೆ.


ಹೊಸ ನಿಯಮಾವಳಿ ಪ್ರಕಾರ, ಪದಾಧಿಕಾರಿಯೊಬ್ಬರು ನಾಲ್ಕು ವರ್ಷ ಗಳ ಸತತ ಎರಡು ಅವಧಿ ಸೇರಿದಂತೆ 12 ವರ್ಷ ಮಾತ್ರ ಅಧಿಕಾರದಲ್ಲಿರಬಹುದು. 70 ವರ್ಷ ದಾಟಿದವರು ಸದಸ್ಯರಾಗಿ ಮುಂದುವರಿಯುವಂತಿಲ್ಲ.

ಚಿಟಿಕೆ ಸುದ್ದಿ

ಇರಾನ್ ಕ್ಲಬ್ ವಿರುದ್ಧ ಪಂದ್ಯದಿಂದ ಹಿಂದೆಸರಿದ ಬಾಗನ್

ಕೋಲ್ಕತ್ತ (ಪಿಟಿಐ): ಇರಾನ್‌ನ ಸೆಪಹಾನ್ ಸ್ಪೋರ್ಟ್ಸ್ ಕ್ಲಬ್ ಎದುರು ಎಎಫ್‌ಸಿ ಚಾಂಪಿಯನ್ಸ್ ಫುಟ್‌ಬಾಲ್ ಲೀಗ್ 2ನಲ್ಲಿ ತವರಿನಾಚೆ ಆಡಬೇಕಾದ ಪಂದ್ಯದಿಂದ ಮೋಹನ್ ಬಾಗನ್ ಹಿಂದೆ ಸರಿದಿದೆ. ತಂಡದ ಆರು ಮಂದಿ ವಿದೇಶಿ ಆಟಗಾರರು ಆ ದೇಶಕ್ಕೆ ಪ್ರಯಾಣಿಸಲು ನಿರಾಕರಿಸಿದ ಕಾರಣ ಬಾಗನ್ ಈ ನಿರ್ಧಾರಕ್ಕೆ ಬಂದಿದೆ.

ಕೆಎಸ್‌ಬಿಎಗೆ ರತನಕುಮಾರ್ ಅಧ್ಯಕ್ಷ



ಬೆಂಗಳೂರು: ಕರ್ನಾಟಕ ರಾಜ್ಯ ಬಿಲಿಯರ್ಡ್ಸ್ ಸಂಸ್ಥೆಗೆ ಎಚ್.ಆರ್. ರತನಕುಮಾರ್ ಅವರು ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಭಾನುವಾರ ನಡೆದ ಸರ್ವಸದಸ್ಯರ ಸಭೆ ಯಲ್ಲಿ ಪದಾಧಿಕಾರಿಗಳು ಮತ್ತು ಆಡಳಿತ ಸಮಿತಿ ಸದಸ್ಯರ ಆಯ್ಕೆ ನಡೆಯಿತು. ಉಪಾಧ್ಯಕ್ಷರಾಗಿ ಸಿ.ಆರ್. ನಂದ ಕುಮಾರ್ ಮತ್ತು ಕಾರ್ಯದರ್ಶಿಯಾಗಿ ಎಚ್.ಇ. ಆನಂದ್ ಆಯ್ಕೆಯಾಗಿದ್ದಾರೆ.

ಆಡಳಿತ ಸಮಿತಿ: ಎಚ್.ಆರ್. ರತನಕುಮಾರ್ (ಅಧ್ಯಕ್ಷ), ಸಿ.ಆರ್. ನಂದಕುಮಾರ್ (ಉಪಾಧ್ಯಕ್ಷ), ಎಚ್.ಇ. ಆನಂದ (ಕಾರ್ಯದರ್ಶಿ), ಐ.ಎಚ್. ಮನುದೇವ್ (ಜಂಟಿ ಕಾರ್ಯದರ್ಶಿ), ಎನ್. ಗಿರೀಶ (ಖಜಾಂಚಿ), ಸದಸ್ಯರು: ಅರುಣಾನಂದ, ಎಂ.ಎಸ್. ಅರುಣ್, ಚೇತನ್ ನಂಜಪ್ಪ, ಬಿ.ಎಲ್. ಹರ್ಷದೀಪ್, ಬಿ.ಸಿ. ಕಾರ್ತಿಕ್ ರವೂಫ್ ಉರ್ ರೆಹಮಾನ್, ಸಂಜಯ್ ಎಂ. ಪಂಜಾಬಿ, ಎಸ್. ಶೇಖರ್, ವರ್ಗೀಸ್ ಪಲ್ಲತ್.

ವೆಸ್ಟ್ ಇಂಡೀಸ್‌ಗೆ ನೇಪಾಳ ಆಘಾತ

ಶಾರ್ಜಾ (ಪಿಟಿಐ): ಕ್ರಿಕೆಟ್ ಶಿಶು ನೇಪಾಳ ತಂಡವು ಎರಡು ಬಾರಿಯ ಟಿ20 ವಿಶ್ವಕಪ್ ವಿಜೇತ ವೆಸ್ಟ್ ಇಂಡೀಸ್ ತಂಡವನ್ನು 19 ರನ್‌ಗಳಿಂದ ಮಣಿಸಿತು. ಅದರೊಂದಿಗೆ ಐಸಿಸಿಯ ಪೂರ್ಣಾವಧಿ ಸದಸ್ಯ ರಾಷ್ಟ್ರವೊಂದರ ಮೇಲೆ ಚೊಚ್ಚಲ ಗೆಲುವು ಸಾಧಿಸಿ ಇತಿಹಾಸ ನಿರ್ಮಿಸಿತು.

ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ನೇಪಾಳ ತಂಡವು ನಿಗದಿತ ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 148 ರನ್ ಗಳಿಸಿತು. ವೆಸ್ಟ್ ಇಂಡೀಸ್ ತಂಡವು ನೇಪಾಳದ ಬೌಲರ್‌ಗಳ ಸಂಘಟಿತ ದಾಳಿ ಎದುರಿಸುವಲ್ಲಿ ವಿಫಲವಾಯಿತು. 20 ಓವರ್‌ಗಳ ಅಂತ್ಯಕ್ಕೆ 9 ವಿಕೆಟ್ ನಷ್ಟಕ್ಕೆ 129 ರನ್ ಗಳಿಸಲಷ್ಟೇ ಶಕ್ತವಾಯಿತು.

166 ವರ್ಷ ಹಳೆಯ ದಾಖಲೆ ಮುರಿದ ಚಾಹರ್



ಲಂಡನ್ (ಪಿಟಿಐ): ಭಾರತದ ಲೆಗ್ ಸ್ಪಿನ್ನರ್ ರಾಹುಲ್ ಚಾಹರ್ ಅವರು ಕೌಂಟಿ ಕ್ರಿಕೆಟ್‌ನಲ್ಲಿ ಪದಾರ್ಪಣೆ ಪಂದ್ಯದಲ್ಲೇ ಎಂಟು ವಿಕೆಟ್ ಪಡೆಯುವ ಮೂಲಕ 166 ವರ್ಷಗಳ ಹಳೆಯ ದಾಖಲೆಯನ್ನು ಮುರಿದಿದ್ದಾರೆ.

ಸರೆ ಕ್ರಿಕೆಟ್ ತಂಡಕ್ಕೆ ಆಡಿದ 26 ವರ್ಷದ ಚಾಹರ್, ಹ್ಯಾಂಪ್‌ಶೈರ್ ವಿರುದ್ಧದ ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ 51 ರನ್‌ಗಳಿಗೆ 8 ವಿಕೆಟ್ ಗಳಿಸಿದರು. ಇದು ಸರೆ ಪರ ಪದಾರ್ಪಣಾ ಪಂದ್ಯದಲ್ಲಿ ಆಟಗಾರನೊಬ್ಬನ ಶ್ರೇಷ್ಠ ಬೌಲಿಂಗ್ ಆಗಿದೆ. ಈತನಕ ಈ ದಾಖಲೆ ವಿಲಿಯನ್ ಮುಡಲ್ ಅವರ ಹೆಸರಿನಲ್ಲಿತ್ತು. ಅವರು 1859ರಲ್ಲಿ 61 ರನ್‌ಗಳಿಗೆ ಏಳು ವಿಕೆಟ್ ಪಡೆದಿದ್ದರು.

ಬಿಸಿಸಿಐ ಕಾರ್ಯದರ್ಶಿಯಾಗಿ ಮುಂದುವರಿದ ದೇವಜಿತ್ ಸೈಕಿಯಾ

ಮಿಥುನ್ ಅಧ್ಯಕ್ಷ, ರಘುರಾಮ್ ಖಜಾಂಚಿ

ಮುಂಬೈ (ಪಿಟಿಐ): ದೆಹಲಿ ಕ್ರಿಕೆಟ್ ತಂಡದ ಮಾಜಿ ನಾಯಕ ಮಿಥುನ್ ಮನ್ಹಾಸ್ ಅವರನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) 37ನೇ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಯಿತು. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ರಘುರಾಮ್ ಭಟ್ ಅವರು ಖಜಾಂಚಿಯಾಗಿ ಆಯ್ಕೆಯಾದರು.

ಭಾನುವಾರ ನಡೆದ 94ನೇ ವಾರ್ಷಿಕ ಸರ್ವಸದಸ್ಯರ ಸಭೆ (ಎಜಿಎಂ) ಯಲ್ಲಿ ಮಿಥುನ್ ಅವರನ್ನು ಅವಿರೋಧ ಆಯ್ಕೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಉಳಿದ ಪದಾಧಿಕಾರಿಗಳು ಮತ್ತು ಸದಸ್ಯರನ್ನು ಕೂಡ ಘೋಷಿಸಲಾಯಿತು.

ರೋಜರ್ ಬಿನ್ನಿ ಅವರು 70 ವರ್ಷ ವಯಸ್ಸಾಗಿದ್ದರಿಂದ ಹೋದ ತಿಂಗಳು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿದಿದ್ದರು. ಅವರ ಸ್ಥಾನಕ್ಕೆ ಈಗ 45 ವರ್ಷದ ಮಿಥುನ್ ಆಯ್ಕೆಯಾಗಿದ್ದಾರೆ.

ಮಂಡಳಿಯ ಅಧ್ಯಕ್ಷ ಸ್ಥಾನಕ್ಕೆ ಪ್ರಥಮ ದರ್ಜೆ ಕ್ರಿಕೆಟಿಗರೊಬ್ಬರನ್ನು ಆಯ್ಕೆ ಮಾಡುತ್ತಿರುವುದು ಇದು ಮೂರನೇ ಅವಧಿ. ಸೌರವ್ ಗಂಗೂಲಿ ಮತ್ತು ಬಿನ್ನಿ ಅವರ ನಂತರ ಮಿಥುನ್ ಈ ಗೌರವ ಪಡೆದಿದ್ದಾರೆ.

ಮಿಥುನ್ ಅವರು 1997–98ರಿಂದ 2016–17ರ ಅವಧಿಯಲ್ಲಿ 157 ಪ್ರಥಮ ದರ್ಜೆ, 130 ಲಿಸ್ಟ್ ಎ ಮತ್ತು 55 ಐಪಿಎಲ್ ಪಂದ್ಯಗಳಲ್ಲಿ ಆಡಿದ್ದಾರೆ. ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಅವರು 9714 ರನ್ ಗಳಿಸಿದ್ದು, ಅದರಲ್ಲಿ 27 ಶತಕಗಳಿವೆ.

ಸೆಪ್ಟೆಂಬರ್ 20ರಂದು ನವದೆಹಲಿ ಯಲ್ಲಿ ನಡೆದಿದ್ದ ಮಂಡಳಿಯ 'ಪ್ರಭಾವಿ' ಗಳ ಸಭೆಯಲ್ಲಿ ಮಿಥುನ್ ಅವರು ಅಚ್ಚರಿಯ ಆಯ್ಕೆಯಾಗಿ ಹೊರ ಹೊಮ್ಮಿದ್ದರು. ಮರುದಿನವೇ ಅವರು ನಾಮಪತ್ರ ಸಲ್ಲಿಸಿದ್ದರು.



ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಗೆ ಭಾನುವಾರ ಆಯ್ಕೆಯಾದ ಪದಾಧಿಕಾರಿಗಳು (ಎಡದಿಂದ), ರಘುರಾಮ್ ಭಟ್ (ಖಜಾಂಚಿ), ಪ್ರಭತೇಜ್ ಭಾಟಿಯಾ (ಜಂಟಿ ಕಾರ್ಯದರ್ಶಿ), ದೇವಜೀತ್ ಸೈಕಿಯಾ (ಕಾರ್ಯದರ್ಶಿ), ಮಿಥುನ್ ಮನ್ಹಾಸ್ (ಅಧ್ಯಕ್ಷ), ರಾಜೀವ ಶುಕ್ಲಾ (ಉಪಾಧ್ಯಕ್ಷ), ಅರುಣಸಿಂಗ್ ಧುಮಾಲ್ (ಐಪಿಎಲ್ ಆಡಳಿತ ಸಮಿತಿ ಮುಖ್ಯಸ್ಥ) ಬಿಸಿಸಿಐ ಚಿತ್ರ

ರಾಷ್ಟ್ರೀಯ ಆಯ್ಕೆ ಸಮಿತಿಗೆ ಪ್ರಗ್ಯಾನ್ ಓಜಾ, ಆರ್.ಪಿ. ಸಿಂಗ್

ಬಿಸಿಸಿಐ ರಾಷ್ಟ್ರೀಯ ಸೀನಿಯರ್ ಕ್ರಿಕೆಟ್ ತಂಡದ ಆಯ್ಕೆ ಸಮಿತಿಗೆ ಮಾಜಿ ಆಟಗಾರರಾದ ಆರ್.ಪಿ. ಸಿಂಗ್ ಮತ್ತು ಪ್ರಗ್ಯಾನ್ ಓಜಾ ಅವರನ್ನು ಸೇರ್ಪಡೆ ಮಾಡಲಾಗಿದೆ. ತಮಿಳುನಾಡಿನ ಮಾಜಿ ಆಟಗಾರ ಎಸ್. ಶರತ್ ಅವರು ಸೀನಿಯರ್ ಸಮಿತಿಯಿಂದ ಜೂನಿಯರ್ ಆಯ್ಕೆ ಸಮಿತಿಗೆ ಮರಳಿದ್ದಾರೆ. ಅಜಿತ್ ಅಗರಕರ್ ಮುಖ್ಯಸ್ಥರಾಗಿರುವ ಸೀನಿಯರ್ ಆಯ್ಕೆ ಸಮಿತಿಯಲ್ಲಿ ಈಗ ಶಿವಸುಂದರ್ ದಾಸ್, ಅಜಯ್ ರಾತ್ರಾ, ಆರ್.ಪಿ. ಸಿಂಗ್ ಮತ್ತು ಓಜಾ ಇದ್ದಾರೆ.

ಮಹಿಳೆಯರ ತಂಡದ ಆಯ್ಕೆ ಸಮಿತಿಯಲ್ಲಿ ಮಾಜಿ ಆಟಗಾರ್ತಿ ಅಮಿತಾ ಶರ್ಮಾ ಮುಖ್ಯಸ್ಥರಾಗಿದ್ದಾರೆ. ನೀತು ಡೇವಿಡ್ ಅವರು ನಿರ್ಗಮಿಸಿದ್ದಾರೆ. ಶ್ಯಾಮಾ ಡೇ, ಜಯಾ ಶರ್ಮಾ ಮತ್ತು ಶ್ರಾವಂತಿ ನಾಯ್ಡು ಸ್ಥಾನ ಪಡೆದಿದ್ದಾರೆ. ಕೇರಳ ಕ್ರಿಕೆಟ್ ಸಂಸ್ಥೆ (ಕೆಸಿಎ) ಅಧ್ಯಕ್ಷ ಜಯೇಶ್ ಜಾರ್ಜ್ ಅವರನ್ನು ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಆಡಳಿತ ಸಮಿತಿಯ ಮುಖ್ಯಸ್ಥರನ್ನಾಗಿ ನೇಮಕ ಮಾಡಲಾಗಿದೆ.

ಮೂಲಸೌಲಭ್ಯ ಅಭಿವೃದ್ಧಿ ಸಮಿತಿ ಮುಖ್ಯಸ್ಥರನ್ನಾಗಿ ಡಿಡಿಸಿಎ ಅಧ್ಯಕ್ಷ ರೋಹನ್ ಜೇಟ್ಲಿ ಅವರು ಆಯ್ಕೆಯಾಗಿದ್ದಾರೆ.

ಗಂಗೂಲಿ ಗೈರು: ಮಾಜಿ ಕ್ರಿಕೆಟಿಗ ಹರ್ಭಜನ್ ಸಿಂಗ್ ಅವರು ಈ ಸಭೆಯಲ್ಲಿ ಪಂಜಾಬ್ ಕ್ರಿಕೆಟ್ ಸಂಸ್ಥೆ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಈಚೆಗೆ ಬಂಗಾಳ ಕ್ರಿಕೆಟ್ ಸಂಸ್ಥೆ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಸೌರವ್ ಗಂಗೂಲಿ ಅವರು ಬಿಸಿಸಿಐ ಎಜಿಎಂನಲ್ಲಿ ಹಾಜರಾಗಿರಲಿಲ್ಲ.

ಮಿಥುನ್ ಅವರು ಜಮ್ಮು–ಕಾಶ್ಮೀರ ರಾಜ್ಯ ಕ್ರಿಕೆಟ್ ಸಂಸ್ಥೆ (ಜೆಕೆಸಿಎ) ಆಡಳಿತ ಸುಧಾರಣೆಗಾಗಿ ನೇಮಕ ಮಾಡಲಾಗಿದ್ದ ಅಡ್‌ಹಾಕ್ ಸಮಿತಿಯಲ್ಲಿ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು. ಅಲ್ಲದೇ ಬೇರೆ ಬೇರೆ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ ಅನುಭವ ಅವರಿಗೆ ಇದೆ.

'ವಿಶ್ವದ ಶ್ರೇಷ್ಠ ಕ್ರಿಕೆಟ್ ಮಂಡಳಿಗೆ ಅಧ್ಯಕ್ಷನಾಗಿ ನೇಮಕವಾಗಿರುವು-ದು ನನಗೆ ಸಂದಿರುವ ದೊಡ್ಡ ಗೌರವ. ಇದೊಂದು ದೊಡ್ಡ ಹೊಣೆಗಾರಿಕೆಯೂ ಹೌದು. ನನ್ನ ಸಾಮರ್ಥ್ಯವನ್ನು ಪೂರ್ಣ ಪಣಕ್ಕಿಟ್ಟು ಮಂಡಳಿಯ ಬೆಳವಣಿಗೆಗೆ ಬದ್ಧನಾಗಿರುತ್ತೇನೆ' ಎಂದು ಮಿಥುನ್ ಮಾಧ್ಯಮಗಳಿಗೆ ತಿಳಿಸಿದರು.

ಮುಂದುವರಿದ ಶುಕ್ಲಾ, ಸೈಕಿಯಾ: ಹಿರಿಯ ಆಡಳಿತಗಾರ ರಾಜೀವ್ ಶುಕ್ಲಾ ಅವರನ್ನು ಮಂಡಳಿಯ ಉಪಾಧ್ಯಕ್ಷ ಸ್ಥಾನದಲ್ಲಿ ಮತ್ತೊಂದು ಅವಧಿಗೆ ಮುಂದುವರಿಸಲಾಗಿದೆ.

ಎಂ. ಖೈರುಲ್ ಜಮಾಲ್ ಮಜುಂದಾರ್ ಅವರನ್ನು ಐಪಿಎಲ್ ಆಡಳಿತ ಸಮಿತಿಗೆ ಎರಡನೇ ಪ್ರತಿನಿಧಿಯಾಗಿ ನೇಮಕ ಮಾಡಲಾಯಿತು. ಅವರು ಅರುಣ ಸಿಂಗ್ ಧುಮಾಲ್ ಅವರೊಂದಿಗೆ ಕಾರ್ಯನಿರ್ವಹಿಸುವರು.

ಈ ಮೊದಲು ಖಜಾಂಚಿಯಾಗಿದ್ದ ಪ್ರಭತೇಜ್ ಭಾಟಿಯಾ ಅವರಿಗೆ ಜಂಟಿ ಕಾರ್ಯದರ್ಶಿ ಸ್ಥಾನ ನೀಡಲಾಯಿತು. ನಿಕಟಪೂರ್ವ ಜಂಟಿ ಕಾರ್ಯದರ್ಶಿ ರೋಹನ್ ಗೌನ್ಸ್ ದೇಸಾಯಿ ಮತ್ತು ಸೌರಾಷ್ಟ್ರ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ಜಯದೇವ್ ಶಾ ಅವರನ್ನು ಅಪೆಕ್ಸ್ ಕೌನ್ಸಿಲ್ ಸದಸ್ಯರನ್ನಾಗಿ ನೇಮಕ ಮಾಡಲಾಯಿತು.


ಕನ್ನಡಿಗನಿಗೆ ಒಲಿದ ಖಜಾಂಚಿ ಸ್ಥಾನ

ಭಾರತ ತಂಡದ ಮಾಜಿ ಆಟಗಾರ ರಘುರಾಮ್ ಭಟ್ ಅವರನ್ನು ಬಿಸಿಸಿಐ ಖಜಾಂಚಿಯಾಗಿ ಅವಿರೋಧ ಆಯ್ಕೆ ಮಾಡ ಲಾಯಿತು. ಭಾನುವಾರ ನಡೆದ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಈ ನಿರ್ಧಾರ ಪ್ರಕಟಿಸಲಾಯಿತು. ಕೆಎಸ್‌ಸಿಎ ಅಧ್ಯಕ್ಷರಾಗಿ ಅವರು ಇದೇ 30ರಂದು ಮೂರು ವರ್ಷದ ಅವಧಿ ಪೂರೈಸಲಿದ್ದಾರೆ.

67 ವರ್ಷದ ಭಟ್ ಅವರು ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನವರು. ಎಡಗೈ ಸ್ಪಿನ್ನರ್ ಆಗಿ ಕರ್ನಾಟಕ ಮತ್ತು ಭಾರತ ತಂಡವನ್ನು ಪ್ರತಿನಿಧಿಸಿದ್ದರು.

1983ರಲ್ಲಿ ಪಾಕಿಸ್ತಾನ ಮತ್ತು ವೆಸ್ಟ್ ಇಂಡೀಸ್ ವಿರುದ್ಧದ ಟೆಸ್ಟ್‌ಗಳಲ್ಲಿ ಆಡಿದ್ದರು. ಒಟ್ಟು 2 ಪಂದ್ಯಗಳಿಂದ 4 ವಿಕೆಟ್ ಗಳಿಸಿದ್ದರು. 82 ಪ್ರಥಮ ದರ್ಜೆ ಪಂದ್ಯಗಳಲ್ಲಿ ಅವರು 374 ಮತ್ತು 12 ಲಿಸ್ಟ್ ಎ ಪಂದ್ಯಗಳಲ್ಲಿ 12 ವಿಕೆಟ್ ಗಳಿಸಿದ್ದರು.

ಅನುಷ್ಕಾಗೆ ಎರಡನೇ ಚಿನ್ನ



ಕರ್ನಾಟಕದ ಅನುಷ್ಕಾ ತೋಕೂರು

ನವದೆಹಲಿ (ಪಿಟಿಐ): ಕರ್ನಾಟಕದ ಅನುಷ್ಕಾ ತೋಕೂರು ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಜೂನಿಯರ್ ಶೂಟಿಂಗ್ ವಿಶ್ವಕಪ್‌ನ 50 ಮೀ. ತ್ರೀ ಪೊಸಿಷನ್ಸ್ ಸ್ಪರ್ಧೆಯಲ್ಲಿ ಭಾನುವಾರ ಚಿನ್ನದ ಪದಕ ಗೆದ್ದುಕೊಂಡರು. ಇದು, ಈ ಟೂರ್ನಿಯಲ್ಲಿ ಅವರಿಗೆ ಎರಡನೇ ಚಿನ್ನ. ಮೊದಲ ದಿನವಾದ ಗುರುವಾರ 50 ಮೀ. ರೈಫಲ್ ಪ್ರೋನ್ ಸ್ಪರ್ಧೆಯಲ್ಲಿ ಅವರು ಸ್ವರ್ಣ ಜಯಿಸಿದ್ದರು.

ಕ್ವಾಲಿಫಿಕೇಷನ್ ಸುತ್ತಿನಲ್ಲಿ 585 ಸ್ಕೋರ್‌ಗಳೊಂದಿಗೆ ಅಗ್ರಸ್ಥಾನ ಪಡೆದಿದ್ದ ಮಂಗಳೂರಿನ ಹುಡುಗಿ, ಫೈನಲ್ ಹಣಾ ಹಣಿಯಲ್ಲೂ ಲಯ ಮುಂದುವರಿಸಿ ದರು. 461 ಸ್ಕೋರ್ ಗಳಿಸಿ ಚಿನ್ನಕ್ಕೆ ಮುತ್ತಿಕ್ಕಿದರು. ಸ್ವತಂತ್ರ ತಟಸ್ಥ ಸ್ಪರ್ಧಿಗಳಾದ (ಎಎನ್‌ಎ) ಅನಸ್ತೇಷಿಯಾ ಸೊರೊಕಿನಾ (454.9) ಹಾಗೂ ಮರಿಯಾ ಕ್ರುಗ್ಲೊವಾ (444) ಕ್ರಮವಾಗಿ ಬೆಳ್ಳಿ ಹಾಗೂ ಕಂಚಿನ ಪದಕ ತಮ್ಮದಾಗಿಸಿಕೊಂಡರು.

18 ವರ್ಷ ವಯಸ್ಸಿನ ಅನುಷ್ಕಾ ಅವರು ಕಜಾಕಸ್ತಾನದಲ್ಲಿ ಆಗಸ್ಟ್‌ನಲ್ಲಿ ನಡೆದ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನ ಜೂನಿಯರ್ ಮಹಿಳೆಯರ 50 ಮೀ. ರೈಫಲ್ ತ್ರೀ ಪೊಸಿಷನ್ಸ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದಿದ್ದರು.

ಅದ್ರಿಯಾನ್‌ಗೆ ಬೆಳ್ಳಿ: ಉದಯೋನ್ಮುಖ ಶೂಟರ್ ಅದ್ರಿಯಾನ್ ಕರ್ಮಾಕರ್ ಅವರು ಜೂನಿಯರ್ ಪುರುಷರ 50 ಮೀ. ರೈಫಲ್ ತ್ರೀ ಪೊಸಿಷನ್ಸ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕಕ್ಕೆ ಕೊರಳೊಡ್ಡಿದರು.

ಕ್ವಾಲಿಫಿಕೇಷನ್ ಸುತ್ತಿನಲ್ಲಿ 587 ಪಾಯಿಂಟ್ಸ್ ಗಳಿಸಿ ಅಗ್ರಸ್ಥಾನ ಪಡೆದ ಅದ್ರಿಯಾನ್, ಫೈನಲ್ ಸ್ಪರ್ಧೆಯಲ್ಲಿ (454.8) ಎರಡನೇ ಸ್ಥಾನ ಪಡೆದರು. 459.9 ಪಾಯಿಂಟ್ಸ್ ಪಡೆದ ಡಿಮಿತ್ರಿ ಪಿಮೆನೊವ್ (ಎಎನ್‌ಎ) ಚಿನ್ನದ ಪದಕ ತಮ್ಮದಾಗಿಸಿಕೊಂಡರು. 441 ಸ್ಕೋರ್‌ನೊಂದಿಗೆ ಕಮೀಲ್ ಎನ್. (ಎಎನ್‌ಎ) ಕಂಚು ಗೆದ್ದರು.

ಜುಬಿನ್‌ಗೆ ಗೌರವ ಸಲ್ಲಿಸಲು ನಿರ್ಧಾರ

ಗುವಾಹಟಿ (ಪಿಟಿಐ): ದುರ್ಗಾಪೂಜೆ ಸಡಗರದ ವೇಳೆಯೇ ಬಂದಿರುವ ಮಹಿಳಾ ವಿಶ್ವ ಕಪ್ ಟೂರ್ನಿ ಇಲ್ಲಿ ಉದ್ಘಾಟನೆಯಾಗುತ್ತಿರುವುದು ಈ ಭಾಗದ ಜನರಲ್ಲಿ ಸಂಭ್ರಮದ ವಾತಾವರಣಕ್ಕೆ ಕಾರಣವಾಗುತಿತ್ತು. ಆದರೆ ಈ ಬಾರಿಯ ವಾತಾವರಣ ಭಿನ್ನವಾಗಿದೆ.

ಜನಪ್ರಿಯ ಗಾಯಕ ಮತ್ತು ಈಶಾನ್ಯ ರಾಜ್ಯಗಳ ಸಾಂಸ್ಕೃತಿಕ ಐಕನ್ ಆಗಿರುವ ಜುಬಿನ್ ಗಾರ್ಗ್ (52) ಅವರ ದುರಂತ ಸಾವಿನ ಶೋಕದಿಂದ ಅಸ್ಸಾಂನ ನಗರ, ಹಳ್ಳಿಗಳು ಇನ್ನೂ ಸಂಪೂರ್ಣ ಹೊರಬಂದಿಲ್ಲ. 'ಜುಬಿನ್‌ದಾ' ಅವರಿಗೆ ಲಕ್ಷಾಂತರ ಅಭಿಮಾನಿಗಳಿದ್ದಾರೆ. ಸೆ. 19ರಂದು ಮೃತಪಟ್ಟ ಅವರು 40 ಭಾಷೆಗಳಲ್ಲಿ 38,000 ಹಾಡುಗಳನ್ನು ಹಾಡಿದ್ದಾರೆ.

ಅಸ್ಸಾಂ ಕ್ರಿಕೆಟ್ ಸಂಸ್ಥೆಯು ಈ ಗಾಯಕನಿಗೆ ಗೌರವ ಸಲ್ಲಿಸಲು ವಿಶ್ವಕಪ್‌ನ ಉದ್ಘಾಟನಾ ಸಮಾರಂಭವನ್ನು ಪುನರ್‌ವಿನ್ಯಾಸಗೊಳಿಸಿದೆ. ಬೇರಾವುದೇ ಸಾಂಸ್ಕೃತಿಕ ಸಂಭ್ರಮಗಳಿರುವುದಿಲ್ಲ ಎಂದು ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ತಿಳಿಸಿದರು.

ಗೋವಾದ ನಿತೀಶ್ ಬೇಳೂರ್‌ಕರ್ ಚಾಂಪಿಯನ್

ಪ್ರಜಾವಾಣಿ ವಾರ್ತೆ



ಮಂಗಳೂರು: ರೋಚಕ 'ನಡೆ'ಗಳಿಗೆ ಸಾಕ್ಷಿಯಾದ ಕೊನೆಯ ಸುತ್ತಿನಲ್ಲಿ ಡ್ರಾ ಸಾಧಿಸುವ ಮೂಲಕ ಗೋವಾದ ನಿತೀಶ್ ಬೇಳೂರ್‌ಕರ್ ಇಲ್ಲಿ ಭಾನುವಾರ ನಡೆದ ಗ್ರ್ಯಾಂಡ್ ಆರ್‌ಸಿಸಿ ಫಿಡೆ ರೇಟೆಡ್ ಅಂತರರಾಷ್ಟ್ರೀಯ ರ್ಯಾಪಿಡ್ ಚೆಸ್ ಟೂರ್ನಿಯ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ನಗರದ ಶಾರದಾ ಕಾಲೇಜು ಆವರಣದಲ್ಲಿ ರಾವ್ಸ್ ಚೆಸ್ ಕಾರ್ನರ್ ಆಯೋಜಿಸಿದ್ದ ಟೂರ್ನಿಯ 9 ಸುತ್ತುಗಳಲ್ಲಿ ನಿತೀಶ್ 8.5 ಪಾಯಿಂಟ್ ಕಲೆ ಹಾಕಿದರು. ಕೊನೆಯ ಸುತ್ತಿನಲ್ಲಿ ಐಎಂ ನಿತೀಶ್ ಮತ್ತು ಐಎಂ ಪಶ್ಚಿಮ ಬಂಗಾಳದ ಸಂಕೇತ್ ಚಕ್ರವರ್ತಿ ನಡುವಿನ ಹೋರಾಟ ಕುತೂಹಲ ಕೆರಳಿಸಿತ್ತು. ಪಂದ್ಯ ಡ್ರಾ ಆಗುವುದರೊಂದಿಗೆ ಸಂಕೇತ್ 8 ಪಾಯಿಂಟ್‌ಗಳಿಗೆ ಸಮಾಧಾನಪಟ್ಟು-ಕೊಂಡು ರನ್ನರ್ ಅಪ್ ಆದರು. ಐಎಂ, ಕೇರಳದ ರತ್ನಾಕರನ್, ಗ್ರ್ಯಾಂಡ್ ಮಾಸ್ಟರ್ ತಮಿಳುನಾಡಿನ ಲಕ್ಷ್ಮಣ್ ಆರ್. ಆರ್ ಮತ್ತು ಅರೆನಾ ಐಎಂ ಕೇರಳದ ಕ್ರಿಸ್ಟಿ ಜಾರ್ಜ್ ಕೂಡ 8 ಪಾಯಿಂಟ್ ಗಳಿಸಿದರು.

ಮಧ್ಯಪ್ರದೇಶಕ್ಕೆ ಇನಿಂಗ್ಸ್ ಮುನ್ನಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃತಿಕ್ ಕೃಷ್ಣ ಮತ್ತು ಮಾಧವ್ ಪಿ. ಬಜಾಜ್ ಅವರು ಅರ್ಧಶತಕ ದಾಖಲಿಸಿದರೂ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಕಾರ್ಯದರ್ಶಿ ಇಲೆವನ್ ತಂಡವು ಕ್ಯಾಪ್ಟನ್ ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಮೊದಲ ಇನಿಂಗ್ಸ್ ಮುನ್ನಡೆ ಸಾಧಿಸುವಲ್ಲಿ ವಿಫಲವಾಯಿತು. ಮಧ್ಯಪ್ರದೇಶ ತಂಡವು 20 ರನ್‌ಗಳ ಮುನ್ನಡೆ ಗಳಿಸುವಲ್ಲಿ ಯಶಸ್ವಿಯಾಯಿತು.

ಪಂದ್ಯದ ಮೂರನೇ ದಿನವಾದ ಭಾನುವಾರ ಕರ್ನಾಟಕದ ಬೌಲರ್‌ಗಳು ಮರುಹೋರಾಟ ತೋರಿದರು. ಅದರಿಂದಾಗಿ ದಿನದಾಟದ ಮುಕ್ತಾಯಕ್ಕೆ ಮಧ್ಯಪ್ರದೇಶ ತಂಡವು 35 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 96 ಗಳಿಸಿತು. ಒಟ್ಟು 116 ರನ್‌ಗಳ ಮುನ್ನಡೆ ಸಾಧಿಸಿತು. ಕರ್ನಾಟಕದ ಎಂ. ವೆಂಕಟೇಶ್ ಎರಡು ವಿಕೆಟ್ ಗಳಿಸಿದರು. ಶನಿವಾರ ದಿನದಾಟದ ಮುಕ್ತಾಯಕ್ಕೆ ಕೆಎಸ್‌ಸಿಎ ತಂಡವು 4 ವಿಕೆಟ್‌ಗಳಿಗೆ 163 ರನ್ ಗಳಿಸಿತ್ತು. ಭಾನುವಾರ ಮಾಧವ್ ಪಿ ಬಜಾಜ್ (ಔಟಾಗದೇ 64) ಮತ್ತು ಕೃತಿಕ್ ಕೃಷ್ಣ (57 ರನ್) ಅವರ ಅರ್ಧಶತಕಗಳಿಂದಾಗಿ ಕೆಎಸ್‌ಸಿಎ ತಂಡಕ್ಕೆ ದೊಡ್ಡ ಅಂತರದ ಹಿನ್ನಡೆ ತಪ್ಪಿತು.

ಪಂದ್ಯದಲ್ಲಿ ಇನ್ನೊಂದು ದಿನ ಬಾಕಿ ಇದೆ. ಕರ್ನಾಟಕ ಕಾರ್ಯದರ್ಶಿಗಳ ತಂಡವು ಪ್ರಶಸ್ತಿ ಜಯಿಸಲು ಸಣ್ಣ ಅವಕಾಶವೂ ಇದೆ. ಎದುರಾಳಿ ತಂಡವು 160–170 ರನ್‌ಗಳ ಮಿತಿಯೊಳಗೆ ಆಲೌಟ್ ಮಾಡಬೇಕು. ನಂತರ ಬ್ಯಾಟರ್‌ಗಳು ಗುರಿಯನ್ನು ಸಾಧಿಸಬೇಕು. ಆದರೆ ಮಧ್ಯಪ್ರದೇಶ ತಂಡಕ್ಕೆ ಮೊದಲ ಇನಿಂಗ್ಸ್ ಮುನ್ನಡೆ ಗಳಿಸಿರುವುದರಿಂದ ಪಂದ್ಯ ಜಯಿಸಲೇಬೇಕಾದ ಒತ್ತಡವಿಲ್ಲ. ಸೋಲದಂತೆ ಎಚ್ಚರ ವಹಿಸಿದರೂ ಸಾಕು. ಕ್ರೀಸ್‌ನಲ್ಲಿರುವ ರಿಷಭ್ ಚೌಹಾಣ್ (21; 49ಎ) ಮತ್ತು ವೆಂಕಟೇಶ್ ಅಯ್ಯರ್ (ಬ್ಯಾಟಿಂಗ್ 19) ಅವರ ಮೇಲೆ ಹೆಚ್ಚಿನ ಹೊಣೆ ಇದೆ.



ಕೆಎಸ್‌ಸಿಎ ಕಾರ್ಯದರ್ಶಿ ತಂಡದ ಮಾಧವ್ ಪಿ. ಬಜಾಜ್ ಬ್ಯಾಟಿಂಗ್ ವೈಖರಿ ಚಿತ್ರ: ಕೃಷ್ಣ ಕುಮಾರ್ ಪಿ.ಎಸ್

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಮಧ್ಯಪ್ರದೇಶ: 101.2 ಓವರ್‌ಗಳಲ್ಲಿ 338. ಕೆಎಸ್‌ಸಿಎ ಕಾರ್ಯದರ್ಶಿ ಇಲೆವನ್ 99.1 ಓವರ್‌ಗಳಲ್ಲಿ 318 (ಪಿ. ಧ್ರುವ 28, ಕೃತಿಕ್ ಕೃಷ್ಣ 57, ಮಾಧವ್ ಬಜಾಜ್ ಔಟಾಗದೇ 64, ಆರ್ಯನ್ ಪಾಂಡೆ 64ಕ್ಕೆ4, ಕುಮಾರ ಕಾರ್ತಿಕೇಯ 55ಕ್ಕೆ4) ಎರಡನೇ ಇನಿಂಗ್ಸ್: ಮಧ್ಯಪ್ರದೇಶ: 35 ಓವರ್‌ಗಳಲ್ಲಿ 4ಕ್ಕೆ96 (ಯಶ್ ದುಬೆ 23, ಹಿಮಾಂಶು ಮಂತ್ರಿ 24, ಎಂ. ವೆಂಕಟೇಶ್ 17ಕ್ಕೆ2, ಅಭಿಷೇಕ್ ಅಹ್ಲಾವತ್ 22ಕ್ಕೆ1, ಮಾಧವ್ ಪಿ ಬಜಾಜ್ 39ಕ್ಕೆ1)

ಕಾಮೇಶ್ 'ಕಂಠೀರವ', ಮಂಜುನಾಥ್ 'ಕೇಸರಿ'

ಪ್ರಜಾವಾಣಿ ವಾರ್ತೆ

ಮೈಸೂರು: ಅಖಾಡದಲ್ಲಿ ಮದಗಜಗಳಂತೆ ಹೋರಾಡಿ, ಆಕ್ರಮಣಕಾರಿ ಪಟ್ಟುಗಳಿಂದ ಪ್ರಾಬಲ್ಯ ಮೆರೆದ ಬೆಳಗಾವಿಯ ಪೈಲ್ವಾನ್ ಕಾಮೇಶ್ ಪಾಟೀಲ ಹಾಗೂ ಉತ್ತರ ಕನ್ನಡದ ಪೈಲ್ವಾನ್ ಮಂಜುನಾಥ ಕ್ರಮವಾಗಿ 'ದಸರಾ ಕಂಠೀರವ' ಹಾಗೂ 'ದಸರಾ ಕೇಸರಿ' ಪ್ರಶಸ್ತಿ ಗೆದ್ದರು.

ದೊಡ್ಡಕೆರೆ ಮೈದಾನದ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದ ಅಖಾಡದಲ್ಲಿ ಭಾನುವಾರ ನಡೆದ ದಸರಾ ಕುಸ್ತಿ ಸ್ಪರ್ಧೆಯ 86 ಕೆ.ಜಿ ವಿಭಾಗದ ಹಣಾಹಣಿಯಲ್ಲಿ ಕಾಮೇಶ್ ಅವರು ಭದ್ರಾವತಿಯ ಪೈಲ್ವಾನ್ ಕಿರಣ್ ಅವರನ್ನು 2–1ರಿಂದ ಮಣಿಸಿದರು.

ಮೊದಲ 20 ನಿಮಿಷಗಳ ಹೋರಾಟದಲ್ಲಿ ಇಬ್ಬರೂ ಸಮಬಲ ಪ್ರದರ್ಶಿಸಿದರು. ಹೆಚ್ಚುವರಿಯಾಗಿ ನೀಡಿದ 5 ನಿಮಿಷದಲ್ಲಿ ಪಾರಮ್ಯ ಮೆರೆದ ಕಾಮೇಶ್ ರೋಚಕ ಜಯ ಸಾಧಿಸಿದರು.

ದಸರಾ ಕೇಸರಿ: 74–86 ಕೆ.ಜಿ ವಿಭಾಗದಲ್ಲಿ ಉತ್ತರ ಕನ್ನಡದ ಮಂಜುನಾಥ ಅವರು ಬೆಳಗಾವಿಯ ಪರಮಾನಂದ ಅವರನ್ನು 10 ನಿಮಿಷದಲ್ಲಿ 4–2 ಅಂಕಗಳ ಅಂತರದಲ್ಲಿ ಸೋಲಿಸಿದರು.

'ಮೈಸೂರು ದಸರಾ ಕುಮಾರ' ಪ್ರಶಸ್ತಿಗೆ (86 ಕೆ.ಜಿ) ನಡೆದ 30 ನಿಮಿಷಗಳ ಹೋರಾಟದಲ್ಲಿ ಮೈಸೂರು ವಿಶ್ವವಿದ್ಯಾಲಯದ ಚೇತನ್ ಅವರು ನಗರದ ನಜರ್‌ಬಾದ್‌ನ ಚೇತನ್ ಅವರನ್ನು 22–3ರಿಂದ ಮಣಿಸಿದರು.

'ದಸರಾ ಕಿಶೋರ' ಪ್ರಶಸ್ತಿಯ 57–65 ಕೆ.ಜಿ ವಿಭಾಗದಲ್ಲಿ ದಾವಣಗೆರೆಯ ಕೊರವರ ಸಂಜೀವ ಅವರು ಬಾಗಲಕೋಟೆಯ ಕುಮಾರ ನಾಗಲೂರು ವಿರುದ್ಧ 12–0 ಪಾಯಿಂಟ್‌ಗಳಿಂದ ಗೆದ್ದರು.

ಮಹಿಳೆಯರ 57– 76 ಕೆ.ಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಬೆಳಗಾವಿ ಸ್ವಾತಿ ಪಾಟೀಲ ಅವರು ಹಳಿಯಾಳದ ಪ್ರತೀಕ್ಷಾ ಅವರನ್ನು 6–2 ಪಾಯಿಂಟ್‌ಗಳಿಂದ ಸೋಲಿಸಿ 'ದಸರಾ ಕಿಶೋರಿ' ಆದರು.

ದಾವಣಗೆರೆಯ ಆರ್.ಪ್ರಜ್ವಲ್– ದಸರಾ ಬಾಲ ಕಿಶೋರ, ಅರ್ಜುನ್ ಕೊರವರ– ಬಾಲ ಕೇಸರಿ, ಧಾರವಾಡದ ಚೇತನ್– ಬಾಲ ಕುಮಾರ್, ದಾವಣಗೆರೆಯ ಬನ್ನೂರಿನ ಜಾನ್ಹವಿ– ಬಾಲ ಕಿಶೋರಿ ಪ್ರಶಸ್ತಿ ಗೆದ್ದರು.



(ಎಡದಿಂದ) ದಸರಾ ಕುಸ್ತಿಯಲ್ಲಿ ಸ್ವಾತಿ ಪಾಟೀಲ– 'ದಸರಾ ಕಿಶೋರಿ', ಕೊರವರ ಸಂಜೀವ 'ದಸರಾ ಕಿಶೋರ', ಮಂಜುನಾಥ 'ದಸರಾ ಕೇಸರಿ' ಹಾಗೂ ಕಾಮೇಶ್ ಪಾಟೀಲ 'ದಸರಾ ಕಂಠೀರವ' ಪ್ರಶಸ್ತಿ ಪಡೆದರು ಪ್ರಜಾವಾಣಿ ಚಿತ್ರ

ಏಷ್ಯನ್ ಈಜು: ಕರ್ನಾಟಕದ ಶ್ರೀಹರಿಗೆ ಬೆಳ್ಳಿ ಡಬಲ್



ಅಹಮದಾಬಾದ್ (ಪಿಟಿಐ): ಕರ್ನಾಟಕದ ಈಜು ತಾರೆ ಶ್ರೀಹರಿ ನಟರಾಜ್ ಅವರು ಭಾನುವಾರ 11ನೇ ಏಷ್ಯನ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಮಿಂಚು ಹರಿಸಿದರು. ಪುರುಷರ 200 ಮೀಟರ್ ಫ್ರೀಸ್ಟೈಲ್ ಮತ್ತು 50 ಮೀಟರ್ ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಗಳಲ್ಲಿ ಅವರು ಬೆಳ್ಳಿ ಪದಕಗಳಿಗೆ ಕೊರಳೊಡ್ಡಿದರು.

2020ರ ಟೋಕಿಯೊ ಮತ್ತು 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದ 24 ವರ್ಷದ ಶ್ರೀಹರಿ ಅವರು 200 ಮೀ. ಫ್ರೀಸ್ಟೈಲ್ ಫೈನಲ್‌ನಲ್ಲಿ 1 ನಿಮಿಷ 48.47 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಚೀನಾದ 17 ವರ್ಷದ ಶು ಹೈಬೊ (1:46.83) ಚಿನ್ನದ ಪದಕ ಗೆದ್ದುಕೊಂಡರು. ಜಪಾನ್‌ನ ಹಿನಾಟಾ ಆಂಡೊ (1:48.73) ಕಂಚಿನ ಪದಕ ಗೆದ್ದರು.

ಈ ಸ್ಪರ್ಧೆಯ ನಂತರ ನಡೆದ 50 ಮೀ. ಬ್ಯಾಕ್‌ಸ್ಟ್ರೋಕ್ ಫೈನಲ್‌ನಲ್ಲಿ 25.46 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿ, ಎರಡನೇ ಪದಕಕ್ಕೆ ಮುತ್ತಿಕ್ಕಿದರು. ಚೀನಾದ ಗುಕೈಲೈ ವಾಂಗ್ (25.11ಸೆ) ಮತ್ತು ತೈವಾನ್‌ನ ಮು ಲುನ್ ಚುವಾಂಗ್ (25.50ಸೆ) ಕ್ರಮವಾಗಿ ಚಿನ್ನ ಮತ್ತು ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಈ ಕೂಟದಲ್ಲಿ ಭಾರತವು ಮೂರರಿಂದ ನಾಲ್ಕು ಪದಕಗಳನ್ನು ಗೆಲ್ಲುವ ವಿಶ್ವಾಸವನ್ನು ಮುಖ್ಯ ಕೋಚ್ ನಿಹಾರ್ ಅಮೀನ್ ಅವರು ಶನಿವಾರ ವ್ಯಕ್ತಪಡಿಸಿದ್ದರು. ಅದರ ಮರುದಿನವೇ ಶ್ರೀಹರಿ 'ಡಬಲ್' ಪದಕ ಸಾಧನೆ ಮೆರೆದಿದ್ದಾರೆ.

'ಭಾರತದ ಪಾಲಿಗೆ ಇದು ಉತ್ತಮ ಫಲಿತಾಂಶ. ಆರಂಭಿಕ ದಿನವೇ ಎರಡು ಪದಕ ಗೆದ್ದಿರುವುದು ಅದ್ಭುತ ಸಾಧನೆ' ಎಂದು ನಿಹಾರ್ ಪ್ರತಿಕ್ರಿಯಿಸಿದ್ದಾರೆ.

ಶ್ರೀಹರಿ ಅವರು ಈ ವರ್ಷದ ಆರಂಭದಲ್ಲಿ ಜರ್ಮನಿಯಲ್ಲಿ ನಡೆದ ಎಫ್‌ಐಎಸ್‌ಯು ಬೇಸಿಗೆ ವರ್ಲ್ಡ್ ಯುನಿವರ್ಸಿಟಿ ಗೇಮ್ಸ್‌ನಲ್ಲಿ ರಾಷ್ಟ್ರೀಯ ದಾಖಲೆ ನಿರ್ಮಿಸಿದ್ದರು.

ಅಲ್ಲದೆ, ಉತ್ತರಾಖಂಡದಲ್ಲಿ ನಡೆದ 38ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ವೈಯಕ್ತಿಕ ಮತ್ತು ರಿಲೆ ಸ್ಪರ್ಧೆಗಳಲ್ಲಿ ಒಂಬತ್ತು ಚಿನ್ನ ಮತ್ತು ಒಂದು ಬೆಳ್ಳಿ ಪದಕ ಗೆದ್ದು, ವೈಯಕ್ತಿಕ ಚಾಂಪಿಯನ್ ಆಗಿದ್ದರು.

200 ಮೀ. ಫ್ರೀಸ್ಟೈಲ್‌ನ ಹೀಟ್ 4ರಲ್ಲಿ ಸ್ಪರ್ಧಿಸಿದ್ದ ಕರ್ನಾಟಕದ ಅನೀಶ್ ಕುಮಾರ್ ಗೌಡ (1:52.62) ಫೈನಲ್‌ಗೆ ಅರ್ಹತೆ ಪಡೆಯಲು ವಿಫಲವಾದರು.